ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು: ಒಂದು ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಕನ್ನಡ ಸಾಹಿತ್ಯ ಅಧ್ಯಯನ ವಿಷಯಕ್ಕೆ ಸಂಬಂಧಿಸಿದ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಹನಗಂಡಿ ಸುರೇಶ ಭೀಮಪ್ಪ

ಮಾರ್ಗದರ್ಶಕರು
ಡಾ. ಎಸ್.ಎಸ್. ಅಂಗಡಿ
ಪ್ರಾಧ್ಯಾಪಕರು

ಭಾಷಾನಿಕಾಯ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೬

ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು: ಒಂದು ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಕನ್ನಡ ಸಾಹಿತ್ಯ ಅಧ್ಯಯನದ ವಿಷಯಕ್ಕೆ ಸಂಬಂಧಿಸಿದ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಹನಗಂಡಿ ಸುರೇಶ ಭೀಮಪ್ಪ

ಮಾರ್ಗದರ್ಶಕರು
ಡಾ. ಎಸ್.ಎಸ್. ಅಂಗಡಿ
ಪ್ರಾಧ್ಯಾಪಕರು

ಭಾಷಾನಿಕಾಯ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೬

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀ ಸುರೇಶ ಭೀಮಪ್ಪ ಹನಗಂಡಿ ಅವರು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು: ಒಂದು ಅಧ್ಯಯನ** ಎಂಬ ವಿಷಯಕ್ಕೆ ಸಂಬಂಧಿಸಿದ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ: ೦೪-೦೪-೨೦೧೬

ಸ್ಥಳ : ವಿದ್ಯಾರಣ್ಯ

(ಡಾ. ಎಸ್.ಎಸ್.ಅಂಗಡಿ)
ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸಂಶೋಧಕರ ಘೋಷಣಾ ಪತ್ರ

ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು: ಒಂದು ಅಧ್ಯಯನ ಎಂಬ ವಿಷಯಕ್ಕೆ ಸಂಬಂಧಿಸಿದ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಭಾಷಾನಿಕಾಯದ ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ **ಡಾ. ಎಸ್.ಎಸ್. ಅಂಗಡಿ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ: ೦೪-೦೪-೨೦೧೬
ಸ್ಥಳ : **ವಿದ್ಯಾರಣ್ಯ**

(ಸುರೇಶ ಭೀಮಪ್ಪ ಹನಗಂಡಿ)
ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ಸ್ವರೂಪ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ಸ್ವರೂಪ

ಮಧ್ಯಕಾಲೀನ ಕರ್ನಾಟಕದ ಸಾಂಸ್ಕೃತಿಕ ಮತ್ತು ಸಾಹಿತ್ಯಕ ಇತಿಹಾಸ ಅನೇಕ ದೃಷ್ಟಿಕೋನದಿಂದ ಮಹತ್ವಪೂರ್ಣವಾಗಿದೆ. ಆ ಕಾಲಘಟ್ಟದ ರಾಜಕೀಯ, ಧಾರ್ಮಿಕ, ಸಾಮಾಜಿಕ ಜೀವನದ ಮೇಲೆ ಹಲವು ಬಗೆಯ ಏರಿಳಿತಗಳ ಪರಿಣಾಮವಾಯಿತು. ಆ ಸಮಯದಲ್ಲಿ ಬಹುಮುಖ್ಯವಾದ ಎರಡು ಭಕ್ತಿ ಚಳುವಳಿಗಳು ಗೋಚರಿಸುತ್ತವೆ. ಒಂದು ಶಿವಶರಣರ ವಚನ ಸಾಹಿತ್ಯ ಆಂದೋಲನವು ಹನ್ನೆರಡನೆಯ ಶತಮಾನದಲ್ಲಿ ತನ್ನ ಸಮಾಜೋಧಾರ್ಮಿಕ ಚಳುವಳಿಯನ್ನು ಆರಂಭಿಸಿತು. ಇದೇ ಬಗೆಯಲ್ಲಿ ಹರಿದಾಸರ ಭಕ್ತಿಚಳುವಳಿಯು ಸಹ ಹದಿನೈದನೆಯ ಶತಮಾನದಲ್ಲಿ ಉದಯವಾಯಿತು. ಶಿವಶರಣರ ವಚನಸಾಹಿತ್ಯಕ್ಕೆ ಹಿನ್ನೆಲೆಯಾಗಿ ವೀರಶೈವ ಧರ್ಮಪ್ರಧಾನ ಭೂಮಿಕೆಯಾದರೆ, ಹರಿದಾಸರ ಭಕ್ತಿಚಳುವಳಿಗೆ ಮಧ್ವಾಚಾರ್ಯರ ದ್ವೈತಸಿದ್ಧಾಂತ ಹಿನ್ನೆಲೆಯಾಗಿದೆ. ಶಿವಶರಣರು ತಮ್ಮ ಆಂದೋಲನಕ್ಕೆ ವಚನಸಾಹಿತ್ಯವನ್ನು ರಚಿಸಿದರು. ಹಾಗೆಯೇ ಹರಿದಾಸರು ತಮ್ಮ ಭಕ್ತಿಚಳುವಳಿಗೆ ಕೀರ್ತನೆಯನ್ನು ರಚಿಸಿರುವುದು ಗಮನಾರ್ಹವಾಗಿದೆ.

ಹರಿದಾಸರು ತಮ್ಮ ಧಾರ್ಮಿಕ ತತ್ವವನ್ನು ಸಾಮಾನ್ಯ ಜನರ ನಾಲಿಗೆಯ ಮೇಲೆ ನಲಿದಾಡಲು ಸಂಗೀತಗಮ್ಯವಾದ ಕೀರ್ತನೆಯ ಸಾಹಿತ್ಯವನ್ನು ರಚಿಸಿದರು. ದಾಸರ ಮುಖ್ಯ ಉದ್ದೇಶ ಕೀರ್ತನೆಗಳನ್ನು ಸಂಗೀತದ ಮೂಲಕ ಹರಿಭಜನೆ ಮಾಡುವ ಸುಲಭವಾದ ಮಾರ್ಗವನ್ನು ಕಂಡುಕೊಂಡದ್ದಾಗಿದೆ. ಆ ನಿಟ್ಟಿನಲ್ಲಿ ದ್ವೈತಸಿದ್ಧಾಂತದ ತಳಹದಿಯ ಮೇಲೆ ಹರಿದಾಸ ಸಾಹಿತ್ಯ ನಿರ್ಮಾಣವಾಯಿತು. ಮುಂದೆ ಅದು ತನ್ನದೇಯಾದ ಸೈದ್ಧಾಂತಿಕ ನೆಲೆಯಲ್ಲಿ ಬೆಳೆಯತೊಡಗಿತು. ವಚನಕಾರರು ಹಾಗೂ ಹರಿದಾಸರು ಸಂಸ್ಕೃತ ಭಾಷೆಯಲ್ಲಿ ಕಠಿಣವಾದ ವಿಷಯವನ್ನು ತಿಳಿಗನ್ನಡದಲ್ಲಿ ಜನಸಾಮಾನ್ಯರಿಗೆ ತಿಳಿಸಿಕೊಟ್ಟರು. ಜನರಿಗೆ ಅರ್ಥವಾಗುವ ಭಾಷೆಯಲ್ಲಿ, ಕೆಲವೊಮ್ಮೆ ಆಡುನುಡಿಯ ಧಾಟಿಯಲ್ಲಿ ಜ್ಞಾನವನ್ನು ಸಂವಹನಗೊಳಿಸಿದರು. ಇದರಿಂದ ಬಹುಬೇಗನೆ ದಾಸಸಾಹಿತ್ಯ ಜನಸಾಮಾನ್ಯರಿಗೆ ಹತ್ತಿರವಾಯಿತು.

ಹರಿದಾಸರು ತಮ್ಮ ಧಾರ್ಮಿಕ ಅಸ್ತಿತ್ವವನ್ನು ಭದ್ರಪಡಿಸಲು ದ್ವೈತಸಿದ್ಧಾಂತದ ಮಾರ್ಗವನ್ನು ಅನುಸರಿಸಿದರು. ಈ ಅಸ್ತಿತ್ವದ ಫಲವಾಗಿ ಶ್ರೀ ಮಧ್ವಾಚಾರ್ಯರು ಮಧ್ವಸಿದ್ಧಾಂತವನ್ನು ಹುಟ್ಟುಹಾಕಿದರು. ಅದರ ಮುಖ್ಯ ಉದ್ದೇಶ ಹರಿಯೇ ಸರ್ವೋತ್ತಮ. ಆತನು ಜಗತ್ತಿನ ನಿತ್ಯ ಮತ್ತು ಸತ್ಯವನ್ನು ಅರಿತವನು. ಶ್ರೀಹರಿಯನ್ನು ಭಕ್ತಿಯಿಂದ ಒಲಿಸಿಕೊಂಡರೆ ಅದು ಮುಕ್ತಿಗೆ ಸಾಧ್ಯವಾಗುತ್ತದೆ ಇತ್ಯಾದಿಯಾಗಿ ಹೇಳುವ ಮಧ್ವಾಚಾರ್ಯರ ತತ್ವಗಳನ್ನು ಮುಂದೆ ಬಂದ ಹರಿದಾಸರು ಅನುಸರಿಸಲು ಪ್ರಾರಂಭಿಸಿದರು. ದಾಸರು ತಮ್ಮ ಧರ್ಮದ ತತ್ವವನ್ನು ಕೀರ್ತನೆ ಸಾಹಿತ್ಯ ರೂಪವಾಗಿ ಬೆಳೆಸಲು, ಪ್ರಚಾರ ಮಾಡಲು ಪ್ರಾರಂಭಿಸಿದ ನಿಟ್ಟಿನಲ್ಲಿ ಈ ಹರಿದಾಸ ಸಾಹಿತ್ಯ ಹುಟ್ಟಿಕೊಂಡಿತು. ರಾಗ ಮತ್ತು ತಾಳಗಳ ಸಂಯೋಜನೆಯನ್ನು ಮಾಡಿ ಕೀರ್ತನೆ ಸಾಹಿತ್ಯ ಬಹುಬೇಗನೆ ಜನಪ್ರಿಯವಾಗಲು ಹರಿದಾಸರು ಪ್ರಯತ್ನಿಸಿರುವುದು ವೈಶಿಷ್ಟ್ಯಪೂರ್ಣವಾಗಿದೆ. ದೇಸಿ ಪ್ರಕಾರಗಳಾದ ಸುಳಾದಿ, ಉಗಾಭೋಗ, ಶ್ಲೋಕ, ಕಂದ, ಕಥನಕವನ ಮಾದರಿ ಪದ್ಯ, ತ್ರಿಪದಿ, ಷಟ್ಪದಿ ಹೀಗೆ ಹಲವು ಸಾಹಿತ್ಯ ಪ್ರಕಾರವನ್ನು ದಾಸಸಾಹಿತ್ಯದಲ್ಲಿ ತರುವ ಮುಖೇನ ಅದಕ್ಕೊಂದು ಹೊಸರೂಪವನ್ನು ನೀಡಿದವರು ಹರಿದಾಸರು.

ಹರಿದಾಸರ ಭಕ್ತಿ ಚಳುವಳಿಗೆ ತನ್ನದೇ ಆದ ವೈಶಿಷ್ಟ್ಯತೆಗಳಿವೆ. ಹರಿದಾಸ ಸಾಹಿತ್ಯ ಹೆಸರೇ ಸೂಚಿಸುವಂತೆ ಹರಿಯ ಭಕ್ತರಿಂದ ರಚಿತವಾದ ಸಾಹಿತ್ಯವಾಗಿದೆ. ಭಾಗವತ ಪರಂಪರೆಯೊಂದಿಗೆ ಮಾಧ್ವಮತದ ತತ್ವಗಳ ಭದ್ರ ತಳಹದಿ ಇದಕ್ಕಿದೆ. ಹಾಗಾಗಿಯೇ ಹರಿಯೇ ಸರ್ವೋತ್ತಮ ಎಂಬುದು ಇವರ ಪ್ರಧಾನ ಆಶಯವಾಗಿದೆ. ಹರಿದಾಸರ ಕೀರ್ತನೆಗಳು ಸಾಹಿತ್ಯ ರಚನೆಯ ಉದ್ದೇಶದಿಂದ ರಚಿತವಾಗಿರದೆ, ಅವು ದಿನನಿತ್ಯದ ಮಾನವನ ಚಟುವಟಿಕೆಗೆ ಸ್ಪಂದಿಸಿದ ಪ್ರತಿಕ್ರಿಯೆಗಳಾಗಿವೆ. ಆದುದರಿಂದ ಹರಿದಾಸರ ಕೀರ್ತನೆಗಳಲ್ಲಿ ಸಮಾಜದ ಹಿತವೇ ಮುಖ್ಯವಾಗಿದೆ. ಹೀಗೆ ಭಕ್ತಿಯ ಅಂತಃಸತ್ವವನ್ನು ಮುಕ್ತಿಯ ಮಾರ್ಗವಾಗಿ ಕ್ರಮಿಸುವ, ಹರಿಯನ್ನು ಹುಡುಕುವ ದಾರಿಯನ್ನು ಕಂಡುಕೊಂಡರು. ಹರಿದಾಸರು ತಮ್ಮ ಸುತ್ತಮುತ್ತಲಿನ ಸಮಾಜ, ಸಂಸ್ಕೃತಿ ಮುಖೇನ ಸಮಾಜದ ಒಳಿತನ್ನು ಅರಿತುಕೊಂಡು ದಾಸಸಾಹಿತ್ಯದಲ್ಲಿ ತರುವಂತಹ ಪ್ರಯತ್ನವನ್ನು ಮಾಡಿದ್ದಾರೆ.

ಭಕ್ತ-ಭಗವಂತ ಇವರಿಬ್ಬರ ನಡುವಿನ ಅವಿನಾಭಾವ ಸಂಬಂಧ ದಾಸಸಾಹಿತ್ಯದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಭಗವಂತನ ಅನುಗ್ರಹವನ್ನು ಪಡೆಯಲು ನವವಿಧ ಭಕ್ತಿಯ ಮಾರ್ಗವನ್ನು ಅನುಸರಿಸಿ ಆ ದೇವನ ಪ್ರೀತಿಗೆ ಪಾತ್ರರಾಗುವುದು ಇಲ್ಲಿಯ ವೈಶಿಷ್ಟ್ಯತೆಯಾಗಿದೆ. ಅದಕ್ಕಾಗಿ ಹರಿದಾಸರು ನವವಿಧ ಭಕ್ತಿಯ ಪ್ರಿಯರಾಗಿ, ಭಗವಂತನ ಸಾಕ್ಷಾತ್ಕಾರಕ್ಕೆ ಹಂಬಲಿಸುವರು. ಇವುಗಳೊಂದಿಗೆ ಪಂಚಭಾವಗಳಾದ ದಾಸ್ಯ, ಸಖ್ಯ, ಮಧುರ, ವಾತ್ಸಲ್ಯ, ಶಾಂತಭಾವಗಳ ಮೂಲಕ ದೈವಕ್ಕೆ ಅಧೀನರಾಗುವುದಾಗಿದೆ. ಹಾಗೆಯೇ ಹೃದಯಸ್ಪರ್ಶಿಯಾದ ಆತ್ಮೀಯತೆ ಹರಿದಾಸರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಹರಿದಾಸ ಸಾಹಿತ್ಯ ನಿರ್ಮಾಣದಲ್ಲಿ ಈ ಬಗೆಯ ಭಕ್ತ-ಭಗವಂತ, ಭಕ್ತನ ಅಂತರಂಗ, ಬಹಿರಂಗ, ಹತಾಶೆ, ಕಳವಳ ಮುಂತಾದವುಗಳು

ಕಂಡುಬರುತ್ತವೆ. ಇವುಗಳನ್ನು ಭಗವಂತನಿಗೆ ಅರ್ಪಿಸುವ ಮೂಲಕ ಮುಕ್ತಿಯ ಹಾದಿಯನ್ನು ಅನುಸರಿಸುವುದರ ಜೊತೆಗೆ ಸಮಾಜದ ವಿಮರ್ಶೆ ಮಾಡುವುದು ಮುಖ್ಯವಾಗಿದೆ. ಸಮಾಜದಲ್ಲಿರುವ ಮೂಢನಂಬಿಕೆ, ಅನಾಚಾರ ಮುಂತಾದವುಗಳನ್ನು ಬಯಲಿಗೆಳೆಯುವುದು ದಾಸಸಾಹಿತ್ಯದ ಪ್ರಮುಖ ಅಂಶವಾಗಿದೆ.

ಹರಿದಾಸ ಸಾಹಿತ್ಯ ಪ್ರಕಾರವು ಪ್ರಮುಖವಾಗಿ ಎರಡು ಘಟ್ಟಗಳ ಪರಂಪರೆಯಿಂದ ಬೆಳೆದುಬಂದಿದೆ. ನರಹರಿತೀರ್ಥರು, ಶ್ರೀಪಾದರಾಜರಿಂದ ಇದರ ಆರಂಭ ಕಾಲವನ್ನು ಗುರುತಿಸಲಾಗುವುದು. ವ್ಯಾಸರಾಯರು, ಪುರಂದರದಾಸರು, ಕನಕದಾಸರು, ವಾದಿರಾಜರು, ವೈಕುಂಠದಾಸರು, ಮಹಿಪತಿದಾಸರ ಕಾಲವನ್ನು ಒಂದನೆಯ ಕಾಲಘಟ್ಟದ ಕೊನೆಯೆಂದು ಗುರುತಿಸಿಕೊಳ್ಳುತ್ತಾರೆ. ಈ ಕಾಲಘಟ್ಟವು ದಾಸಸಾಹಿತ್ಯದ ವೈಭವದ ಪೂರ್ವಕಾಲ. ಎರಡನೆಯ ಕಾಲಘಟ್ಟದಲ್ಲಿ ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು ಹಾಗೂ ಕೊನೆಯಲ್ಲಿ ಕಾಖಂಡಕಿ ಕೃಷ್ಣದಾಸರು ಪ್ರಮುಖರೆನಿಸಿಕೊಂಡಿದ್ದಾರೆ. ವೇಣುಗೋಪಾಲದಾಸರು, ಪ್ರಾಣೇಶವಿಠ್ಠಲರು, ಕೃಷ್ಣದಾಸರ ನಂತರ ದಾಸಸಾಹಿತ್ಯ ಪರಂಪರೆಯನ್ನು ಮುಂದುವರಿಸಿಕೊಂಡು ಬಂದವರು. ಈ ಹಿನ್ನೆಲೆಯಲ್ಲಿ ಕಾಖಂಡಕಿ ಕೃಷ್ಣದಾಸರು ಉತ್ತರ ಕರ್ನಾಟಕದ ವಿಜಯಪುರ ಜಿಲ್ಲೆಯ ಕಾಖಂಡಕಿಯಲ್ಲಿ ದಾಸಸಾಹಿತ್ಯ ಪರಂಪರೆಯನ್ನು ಮುಂದುವರಿಸಿ ತಮ್ಮದೆಯಾದ ದಾಸಸಾಹಿತ್ಯ ನಿರ್ಮಾಣದಿಂದ ವಿಶಿಷ್ಟರಾಗಿ ಕಂಡುಬರುತ್ತಾರೆ. ಕೃಷ್ಣದಾಸರ ಕೀರ್ತನೆಗಳ ಅಧ್ಯಯನ ಹಾಗೂ ಅವರ ಜೀವನ ವೃತ್ತಾಂತ ಕುರಿತು ಇಲ್ಲಿಯವರೆಗೆ ಯಾವ ಸ್ವತಂತ್ರ ಕೃತಿಯೂ ಸಹ ಪ್ರಕಟಣೆಗೊಂಡಿಲ್ಲ. ಕೃಷ್ಣದಾಸರ ಕುರಿತು, ಅವರ ಕೀರ್ತನ ಸಾಹಿತ್ಯ ಕುರಿತು ವಿಶೇಷ ಅಧ್ಯಯನದ ಅವಶ್ಯಕತೆಯಿದೆ ಎಂದು ಮನಗಂಡು ಪ್ರಸ್ತುತ ವಿಷಯವನ್ನು ಅಧ್ಯಯನದ ದೃಷ್ಟಿಕೋನದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

ಕಾಖಂಡಕಿ ಕೃಷ್ಣದಾಸರ ಕುರಿತು ನಡೆದ ಕೆಲ ಅಧ್ಯಯನಗಳ ಸಂಕ್ಷಿಪ್ತ ನೋಟ ಈ ರೀತಿಯಲ್ಲಿದೆ. ಸಮಗ್ರ ದಾಸಸಾಹಿತ್ಯ ಸಂಪುಟ–೧೧, ಭಾಗ–೧ ಮತ್ತು ಭಾಗ–೨ರಲ್ಲಿ ಕೃಷ್ಣದಾಸರ ಕೀರ್ತನೆಗಳನ್ನು ಒಂದೆಡೆಯಲ್ಲಿ ಪ್ರಕಟಿಸುವ ಕಾರ್ಯವನ್ನು ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿಯವರು ಮಾಡಿದ್ದಾರೆ. ಶ್ರೀ ಗುರುಮಹಿಪತಿದಾಸರ ಸಾಹಿತ್ಯ ಪ್ರಚಾರ ಸಮಿತಿ ಕಾಖಂಡಕಿಯವರಿಂದ ೧೯೮೭ರಲ್ಲಿ ಕೃಷ್ಣದಾಸರ ಸುಂದರಕಾಂಡ ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ೧೯೮೮ರಲ್ಲಿ ಕೃಷ್ಣದಾಸರ ಕನ್ನಡ ಮರಾಠಿ ಪದಗಳ ಸಂಗ್ರಹ ಎಂಬ ಎರಡು ಕೃತಿಗಳು ಪ್ರಕಟನೆಗೊಂಡಿವೆ. ಅನಂತರ ಶ್ರೀಕೃಷ್ಣಚರಿತಾಮೃತ ಕಥಾ, ಅಹಂಕಾರ ಖಂಡನೆ ಹಾಗೂ ಮನಸ್ಸಿಗೆ ಉಪದೇಶಪರ ಪದಗಳು, ಹರಿಪಾದ ಮಹಿಮಾ, ಸತ್ಸಂಗ ಪದಗಳು ಹಾಗೂ ಆನಂದಲಹರಿ, ಖಂಡಕಾವ್ಯಗಳಲ್ಲಿ ಭಾಗವತರ ಚರಿತ್ರೆಗಳು, ವಿರಹ ಬಿನ್ನಹ ಅರ್ಥಬೆಡಗಿನ ಹಾಗೂ ಇತರ ಪದಗಳು, ಕನ್ನಡ-ಮರಾಠಿ ದೇವತಾ ಸ್ತೋತ್ರ ಪದಗಳ ಸಂಗ್ರಹ, ಶ್ರೀಭಾವಾರ್ಥ ಸಪ್ತಕಾಂಡ ರಾಮಾಯಣ, ಸೇವಾತತ್ವ ಹೀಗೆ ಕಾಖಂಡಕಿ ಕೃಷ್ಣದಾಸರ ಬಿಡಿಬಿಡಿ ಕೃತಿಗಳನ್ನು ಈ ಸಂಸ್ಥೆಯವರು ಪ್ರಕಟಿಸುವ ಕಾರ್ಯ ಮಾಡಿದ್ದಾರೆ. ಶ್ರೀಗುರುಭಾಸ್ಕರ ಮಹಿಪತಿ ಜ್ಞಾನ ಗಂಗಾವಾಹಿನಿ ಎಂಬ ಕೃತಿಯನ್ನು

ಕೃಷ್ಣದಾಸರ ವಂಶಸ್ಥರಾದ ರಾಮಯ್ಯ ಹರಿದಾಸ ಅವರು ರಚಿಸಿದ್ದಾರೆ. ಈ ಕೃತಿಯಲ್ಲಿ ಕೃಷ್ಣದಾಸರ ಕುರಿತು ಕೆಲವು ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ.

ಈ ಮೇಲೆ ತಿಳಿಸಿದ ಕೃತಿಗಳನ್ನು ಹೊರತುಪಡಿಸಿ, ಕೃಷ್ಣದಾಸರ ಜೀವನ ವೃತ್ತಾಂತಕ್ಕೆ ಸಂಬಂಧಿಸಿದಂತೆ ಹಾಗೂ ಅವರ ಕೀರ್ತನ ಸಾಹಿತ್ಯ ಕುರಿತು ಇಲ್ಲಿಯವರೆಗೆ ಗಂಭೀರವಾದ ಚರ್ಚೆ ನಡೆದಿರುವುದಿಲ್ಲ. ಇವೆಲ್ಲವುಗಳನ್ನು ಮನಗಂಡು ಇವರ ಬಿಡಿ ಬಿಡಿ ಕೀರ್ತನ ಕೃತಿಗಳು ಹಾಗೂ ಸಮಗ್ರ ದಾಸಸಾಹಿತ್ಯ ಸಂಪುಟ-೧೧, ಭಾಗ-೧ ಮತ್ತು ಭಾಗ-೨ನ್ನು ಮುಖ್ಯವಾಗಿ ಇಟ್ಟುಕೊಳ್ಳಲಾಗಿದೆ. ಆ ಮೂಲಕ ಕೃಷ್ಣದಾಸರ ಕುರಿತು ವಿಶೇಷ ಅಧ್ಯಯನವನ್ನು ಮಾಡಲು ಈ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅಲಕ್ಷಕ್ಕೆ ಒಳಗಾದ ಒಬ್ಬ ಶ್ರೇಷ್ಠ ದಾಸರ ಬಗ್ಗೆ ಹೆಚ್ಚಿನ ಬೆಳಕನ್ನು ತೋರಿಸುವ ಮಹದಾಸೆ ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಹರಿದಾಸ ಸಾಹಿತ್ಯದ ಶ್ರೇಷ್ಠ ಅನುಭಾವಿ ಹರಿದಾಸರಾದ ಕಾಖಂಡಕಿಯ ಮಹಿಪತಿದಾಸರ ಎರಡನೆಯ ಮಗ ಕಾಖಂಡಕಿಯ ಕೃಷ್ಣದಾಸರು. ಮಹಿಪತಿದಾಸರ ಮೊದಲನೆಯ ಮಗ ದೇವರಾಯ ಅವರು ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಜಾಲವಾದಿಯಲ್ಲಿ ದೇಸಗತಿಯನ್ನು ಸ್ಥಾಪಿಸಿ 'ಡೋಣ ಶಿವಾಜಿ' ಎಂಬ ಬಿರುದನ್ನು ಪಡೆದಿದ್ದರು. ಕೃಷ್ಣದಾಸರು ತಮ್ಮ ತಂದೆ ಹಾಕಿಕೊಟ್ಟ ಮಾರ್ಗದಲ್ಲಿ ಸಾಗಿ ಸಾವಿರಾರು ಕೀರ್ತನೆಗಳನ್ನು ರಚಿಸಿದರು. ತಮ್ಮ ತಂದೆಯವರ ಮಾರ್ಗದರ್ಶನದಲ್ಲಿ ದಾಸಸಾಹಿತ್ಯ ಪರಂಪರೆಯನ್ನು ಸಮರ್ಥವಾಗಿ ಮುಂದುವರಿಸಿದರು. ಕೃಷ್ಣದಾಸರು ಕೀರ್ತನೆಯ ಜೊತೆಗೆ ಉಗಾಭೋಗ, ಸುಳಾದಿ, ವಚನ, ಖಂಡಕಾವ್ಯ, ಆಖ್ಯಾನ, ಸ್ತೋತ್ರ ಮುಂತಾದ ವಿಧದಲ್ಲಿ ತಮ್ಮ ದಾಸಸಾಹಿತ್ಯ ಕೃಷಿಯನ್ನು ಮಾಡಿದ್ದಾರೆ. ಅವು ಇಂದಿಗೂ ಸಹ ವಿಜಯಪುರ ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಜನಪ್ರಿಯವಾಗಿವೆ.

ಕೃಷ್ಣದಾಸರ ಕಾಲ ಕ್ರಿ.ಶ. ಸು ೧೬೭೫ರಿಂದ ೧೭೪೯ ಎಂಬುದು ವಿವಿಧ ವಿದ್ವಾಂಸರ ಅಭಿಪ್ರಾಯವಾಗಿದೆ. ಆದರೆ ಅವರ ಕಾಲದ ಬಗ್ಗೆ ಖಚಿತವಾಗಿ ಇಲ್ಲಿಯವರೆಗೆ ಯಾವ ಆಧಾರವೂ ದೊರೆತಿಲ್ಲ. ಇವರ ತಂದೆ ಮಹಿಪತಿದಾಸರ ಬಗ್ಗೆ ಅಲ್ಲಲ್ಲಿ ಕೆಲ ಚಾರಿತ್ರಿಕ ದಾಖಲೆಗಳು ಸಿಗುತ್ತವೆ. ಆದರೆ ಕೃಷ್ಣದಾಸರು ತಮ್ಮ ಬಗ್ಗೆ ಏನನ್ನೂ ಹೇಳಿಕೊಂಡಿಲ್ಲ. ಹಾಗಾಗಿ ಮೌಖಿಕ ಆಕರ ಸಾಮಗ್ರಿಯ ಮೂಲಕ ಅವರ ಚಾರಿತ್ರಿಕ ಅಂಶವನ್ನು ಗಮನಿಸಿ ಗುರುತಿಸಬೇಕಾದ ಅವಶ್ಯಕತೆಯಿದೆ.

ಕೃಷ್ಣದಾಸರ ತಂದೆ ಮತ್ತು ಗುರು ಮಹಿಪತಿದಾಸರು, ತಾಯಿ ತಿರುಮಲಾಬಾಯಿ. ಹೆಂಡತಿ ರಾಧಾಬಾಯಿ. ಕೃಷ್ಣದಾಸರಿಗೆ ಏಳು ಜನ ಗಂಡುಮಕ್ಕಳು. ಅವರೆಲ್ಲರ ಹೆಸರುಗಳು ಅವರ ವಂಶಾವಳಿಯಲ್ಲಿ ದೊರೆಯುತ್ತವೆ. ಅವರ ಮನೆತನಗಳು ಇಂದಿಗೂ ಸಹ ಜೀವಂತವಾಗಿವೆ. ಆ ಏಳು ಜನ ಮಕ್ಕಳ ವಂಶಸ್ಥರು ಕಾಖಂಡಕಿಯಲ್ಲಿ ಇವರ ವೃಂದಾವನಕ್ಕೆ ಪೂಜೆ ಪುನಸ್ಕಾರ ಹಾಗೂ ಸಪ್ತಾಹ ಮಾಡುತ್ತಾ ಬರುತ್ತಿರುವುದು ವಿಶೇಷವಾಗಿದೆ. ಕೃಷ್ಣದಾಸರು ಬಾಲಕನಿದ್ದಾಗಲೇ

ತಂದೆ ಮಹಿಪತಿದಾಸರಿಂದ ಪ್ರೇರೇಪಿತರಾಗಿ ಅಧ್ಯಾತ್ಮದ ಕಡೆಗೆ ತಮ್ಮ ಮನಸ್ಸನ್ನು ಹರಿಸಿದವರು. ಅವರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಡೆದು ಬೆಳೆದವರು. ಮುಂದೆ ತಂದೆಯ ಸ್ಥಾನವನ್ನು ಸಮರ್ಥವಾಗಿ ದಾಸಸಾಹಿತ್ಯದ ಮೂಲಕ ತುಂಬಿದವರು.

ಕೃಷ್ಣದಾಸರ ಕುರಿತು ಹಲವು ಮೌಖಿಕ ಆಕರಗಳು ಲಭಿಸುತ್ತವೆ. ಅವುಗಳಲ್ಲಿ ಕೃಷ್ಣದಾಸರ ಬಾಲ್ಯ, ಯೌವನ ಹಾಗೂ ಕೊನೆಯ ದಿನಗಳನ್ನು ಗುರುತಿಸಬಹುದಾಗಿದೆ. ಕೃಷ್ಣದಾಸರ ಕಾಲವಾದ ನಂತರ ಅವರ ದಾಸಸಾಹಿತ್ಯ ಪರಂಪರೆಯನ್ನು ಅವರ ಮಕ್ಕಳಾದ ರಾಮಚಂದ್ರ, ಯತಿರಾಯ ಅವರು ಮುಂದುವರಿಸಿಕೊಂಡು ಬಂದಿದ್ದಾರೆ. ಕೆಲವರು ಕೀರ್ತನೆಗಳನ್ನು ರಚಿಸಿ ಪ್ರಸಿದ್ಧಿಯನ್ನು ಪಡೆದುಕೊಂಡಿದ್ದಾರೆ. ಆದರೆ ಈ ಆಧುನಿಕ ಕಾಲದಲ್ಲಿ ಅವರ ವಂಶಸ್ಥರು ಕೀರ್ತನೆಯನ್ನು ರಚಿಸಿಲ್ಲ. ಇಷ್ಟೆಲ್ಲ ಪರಂಪರೆಯ ಹಿನ್ನೆಲೆಯನ್ನು ಹೊಂದಿದ ಕೀರ್ತನೆಕಾರನ ಬಗ್ಗೆ ಅವರ ಕೀರ್ತನೆಗಳ ರಚನೆಯ ಬಗ್ಗೆ ಅಧ್ಯಯನ ಮಾಡುವುದು ಮುಖ್ಯವಾಗಿದೆ.

ಕೃಷ್ಣದಾಸರ ಕೀರ್ತನೆಯ ಕೊನೆಗೆ ಹಲವು ರೀತಿಯಲ್ಲಿ ತಮ್ಮ ಕಾವ್ಯನಾಮವನ್ನು ಪ್ರಚುರಪಡಿಸಿದ್ದಾರೆ. ಅವುಗಳಲ್ಲಿ ಬಹುಮುಖ್ಯವಾದವುಗಳು ಮಹಿಪತಿಸುತ, ಮಹಿಪತಿನಂದನ, ಬಾಬಾಮಹಿಪತಿ, ತಂದೆ ಮಹಿಪತಿಕಂದ ಮುಂತಾಗಿ ೨೩ಕ್ಕೂ ಹೆಚ್ಚು ರೀತಿಯಲ್ಲಿ ಗುರುತಿಸಿಕೊಂಡಿದ್ದಾರೆ. ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಕೃಷ್ಣದಾಸರು ವಿಶೇಷ ಪ್ರತಿಭೆಯನ್ನು ಪಡೆದುಕೊಂಡವರು. ಅವರು ಆಧ್ಯಾತ್ಮಿಕ ಕೀರ್ತನೆಗಳ ಮೂಲಕ ಎಲ್ಲರನ್ನು ದಂಗುಬಡಿಸುತ್ತಾರೆ. ಗುರುವಿನ ಮೇಲಿನ ಭಕ್ತಿ ಭಾವದ್ಯೋತಕವಾಗಿ ವಿಜೃಂಭಿಸುತ್ತವೆ. ಆತ್ಮನಿವೇದನೆ ಮಾಡಿಕೊಳ್ಳುವ ಬಗೆ ಅದ್ಭುತವಾದುದು. ಭಕ್ತಿಯ ಮೂಲಕ ಮುಕ್ತಿಯನ್ನು ಕಾಣಲು ಅವರು ರಚಿಸಿದ ಕೀರ್ತನೆಗಳ ರೀತಿ ಮನೋಜ್ಞವಾಗಿದೆ. ಕೃಷ್ಣದಾಸರ ಖಂಡಕಾವ್ಯಗಳ ಮೂಲಕ ಹರಿದು ಬಂದ ಕಥಾಪ್ರಸಂಗಗಳು ಮೈನವಿರೇಳಿಸುತ್ತದೆ. ಗಜೇಂದ್ರಮೋಕ್ಷ ಕಥನಕಾವ್ಯ ಸಹೃದಯರ ಮನಸ್ಸನ್ನು ಸೂರೆ ಮಾಡುತ್ತದೆ. ಕಾಳಿಯ ವರದ ಕಥಾಪ್ರಸಂಗ, ಪ್ರಹ್ಲಾದ ಚರಿತ್ರೆ, ವಾಮನ ಚರಿತ್ರೆ, ಸುಧಾಮ ಚರಿತ್ರೆ ಮುಂತಾದವುಗಳು ಶ್ರೇಷ್ಠ ಭಕ್ತರ ಚರಿತ್ರೆಯನ್ನು ಸುಲಲಿತವಾಗಿ ಸಹೃದಯರಿಗೆ ಕಟ್ಟಿಕೊಟ್ಟಿವೆ.

ಕೃಷ್ಣದಾಸರು ದಾಸಸಾಹಿತ್ಯದಲ್ಲಿ ಹಲವು ವಿಶೇಷತೆಯಿಂದ ಗುರುತಿಸಿಕೊಂಡವರು. ದಾಸಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತಮ್ಮ ಸಾಹಿತ್ಯವನ್ನು ರಚಿಸಿದವರು. ಬಹುಭಾಷೆಯನ್ನು ಬಲ್ಲವರು. ಕನ್ನಡ ಭಾಷೆಯ ಜೊತೆಗೆ ಮರಾಠಿ, ಉರ್ದು, ಭಾಷೆಯಲ್ಲಿಯು ದಾಸಸಾಹಿತ್ಯವನ್ನು ರಚಿಸಿದ್ದಾರೆ.

''ಕನ್ನಡ ನುಡಿ ಎಂದ್ಹಳಿಯಬೇಡಿ
ಕನ್ನಡ ದರ್ಪಣವಲ್ಲವೆ ನೋಡಿ''
(ಸಮಗ್ರದಾಸ ಸಾಹಿತ್ಯ ಸಂಪುಟ ೧೧, ಭಾಗ-೧, ಪು. ೨೫)

ಎನ್ನುವ ಮೂಲಕ ಕೃಷ್ಣದಾಸರು ಭಾಷಾಭಿಮಾನವನ್ನು ಮನದುಂಬಿ ಕೊಂಡಾಡಿದ್ದಾರೆ. ಮುಂದುವರಿದು

''ಗುರು ಮಹಿಪತಿಸುತ

ಕನ್ನಡ ಭಾಷೆ ಪದರೂಪದಿ ನಿರುತಾ

ಪಾಡುವೆ ಕೇಳಿ ಸಾಧು ಜನರು''

(ಶ್ರೀ ಕೃಷ್ಣಚರಿತ್ರಾಮೃತ ಪು. ೨)

ಎನ್ನುತ ಕನ್ನಡ ಭಾಷೆಯ ಮೇಲಿಟ್ಟಿರುವ ಪ್ರೀತಿಯನ್ನು ವ್ಯಕ್ತಪಡಿಸಿದ್ದಾರೆ. ಕೃಷ್ಣದಾಸರು ಕನ್ನಡದ ಕೀರ್ತನೆಯ ಜೊತೆಗೆ ಮರಾಠಿ ಭಾಷೆಯಲ್ಲಿ ಹೆಚ್ಚಿನ ಕೀರ್ತನೆಗಳನ್ನು ರಚಿಸಿ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಅವರ ಮರಾಠಿ ಕೀರ್ತನೆ ಈ ರೀತಿಯಲ್ಲಿ ಅಭಿವ್ಯಕ್ತಗೊಂಡಿದೆ.

''ಐಸಾ ಕನ್ಹಾ ಬಾಯೀಗೆ ಮನಿಧ್ಯಾವಾ

ಪ್ರೇಮ ಭಾವೇ ಸ್ಮರುನಿ ಗೀತಿಗಾವಾ''

(ಕನ್ನಡ ಮರಾಠಿ ದೇವತಾ ಸ್ತೋತ್ರ ಪು. ೯೧)

ಎಂದು ಹೇಳುವ ಮೂಲಕ ಮರಾಠಿ ಭಾಷಿಕರಿಗೆ ಸರಳವಾಗಿ ಮತ್ತು ಸುಲಭವಾಗಿ ಅರ್ಥವಾಗುವ ಹಾಗೆ ಕೀರ್ತನೆಗಳನ್ನು ರಚಿಸಿದ್ದಾರೆ. ಕೃಷ್ಣದಾಸರ ಕಾಲದಲ್ಲಿ ಅವರ ಸುತ್ತಮುತ್ತಲಿನ ಪರಿಸರ ಮುಸ್ಲಿಂ ದೊರೆಗಳ ಆಳ್ವಿಕೆಗೆ ಒಳಪಟ್ಟಿತ್ತು. ಸಹಜವಾಗಿ ಆ ಪ್ರದೇಶಗಳಲ್ಲಿ ಮುಸ್ಲಿಂ ಸಮುದಾಯದ ಜನರು ಹೆಚ್ಚಾಗಿ ವಾಸವಾಗಿದ್ದರು. ಅವರಿಗೆ ದಾಸಸಾಹಿತ್ಯದ ಮಹತ್ವ ತಿಳಿಸಲು ಉರ್ದು ಭಾಷೆಯಲ್ಲಿ ಕೀರ್ತನೆಯನ್ನು ರಚಿಸಿದ್ದಾರೆ.

''ಅಲಖನಿರಂಜನ ಪರಂಜ್ಯೋತಿ | ಬಾಬಾ |

ವ್ಯಾಪಕ ಜೋತ್ರಿಭುವನಜೀ |

ಜಾಕಿ ಚರಣಕಿ ಸೇವಕ ಬ್ರಹ್ಮಾ |

ಶಂಕರ ಕರೆ ನಿಜಧ್ಯಾನಜೀ''

(ಶ್ರೀಗುರುಭಾಸ್ಕರ ಮಹಿಪತಿಜ್ಞಾನ ಗಂಗಾವಾಹಿನಿ ಪು. ೧೮೭)

ಕೃಷ್ಣದಾಸರು ಕನ್ನಡದ ಜೊತೆಗೆ ಬಹುಭಾಷಾ ಪ್ರೇಮವನ್ನು ಮೆರೆದಿದ್ದಾರೆ. ಒಬ್ಬ ಶ್ರೇಷ್ಠ ಕೀರ್ತನಕಾರರಾದ ಕೃಷ್ಣದಾಸರ ಕೀರ್ತನೆಗಳು ಇವೆಲ್ಲ ದೃಷ್ಟಿಯಿಂದ ಅಧ್ಯಯನಕ್ಕೆ ಉಪಯುಕ್ತವಾದವುಗಳಾಗಿವೆ. ಕೃಷ್ಣದಾಸರ ಕೀರ್ತನೆಗಳು ಉಳಿದ ದಾಸರ ಕೀರ್ತನೆಗಳಿಗಿಂತ ಹೇಗೆ ಭಿನ್ನವಾಗಿ ಕಾಣಿಸುತ್ತವೆ ಎಂಬುದನ್ನು ಗಮನಿಸಲಾಗಿದೆ, ಈ ಎಲ್ಲ ಕಾರಣದಿಂದಾಗಿ ಅವರ ಕೀರ್ತನೆಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಪ್ರಸ್ತುತ ಮಹಾಪ್ರಬಂಧ ಅಧ್ಯಯನವು ಕೃಷ್ಣದಾಸರ ಕಾಲದ ಧಾರ್ಮಿಕ, ಸಾಮಾಜಿಕ, ರಾಜಕೀಯ ಮತ್ತು ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಪರಿಸರವನ್ನು ಪರಿಚಯಿಸುವುದರ ಜೊತೆಗೆ ಅವರ ಜೀವನಚರಿತ್ರೆ ಹಾಗೂ ವ್ಯಕ್ತಿತ್ವದ ದರ್ಶನವನ್ನು ಮಾಡಿಸುವುದಾಗಿದೆ. ಮಧ್ಯಕಾಲೀನ ದಾಸಸಾಹಿತ್ಯ ಉತ್ತರ ಕರ್ನಾಟಕದಲ್ಲಿ ಹೇಗೆ ವಿಸ್ತಾರಗೊಂಡಿತು ಎಂಬುದನ್ನು ಅರಿತುಕೊಳ್ಳುವುದು ಉಪಯುಕ್ತವಾಗಿದೆ. ಕೃಷ್ಣದಾಸರ ಕೀರ್ತನೆಗಳನ್ನು ವಿಮರ್ಶಾತ್ಮಕ ಮತ್ತು ವಿಶ್ಲೇಷಣಾತ್ಮಕವಾಗಿ ಅಧ್ಯಯನವನ್ನು ಮಾಡಲಾಗಿದೆ. ಆ ಮೂಲಕ ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಕೃಷ್ಣದಾಸರ ಸ್ಥಾನವನ್ನು ಗುರುತಿಸುವುದು ಈ ಅಧ್ಯಯನದ ಬಹುಮುಖ್ಯ ಆಶಯವಾಗಿದೆ.

ಈ ಅಧ್ಯಯನವು ಒಂಬತ್ತು ಅಧ್ಯಾಯಗಳಿಂದ ರೂಪಗೊಂಡಿದೆ. ಅಧ್ಯಾಯ ಒಂದರಲ್ಲಿ ಪ್ರಸ್ತುತ ಅಧ್ಯಯನದ ಉದ್ದೇಶ ಮತ್ತು ಸ್ವರೂಪ ಕುರಿತು ಚರ್ಚಿಸಲಾಗಿದೆ. ಎರಡನೆಯ ಅಧ್ಯಾಯವು ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಕೃಷ್ಣದಾಸರ ಪಾತ್ರ ಕುರಿತು ವಿಶ್ಲೇಷಿಸಲಾಗಿದೆ.

ಮೂರನೆಯ ಅಧ್ಯಾಯವು ಕೃಷ್ಣದಾಸರ ಜೀವನಪಥ ಕುರಿತಾಗಿದೆ. ಈ ಅಧ್ಯಾಯದಲ್ಲಿ ಕೃಷ್ಣದಾಸರ ಕಾಲನಿರ್ಣಯ, ಜೀವನ, ಆ ಸಂದರ್ಭದ ರಾಜಕೀಯ ಮತ್ತು ಧಾರ್ಮಿಕ ಹಾಗೂ ಸಾಮಾಜಿಕ ಪರಿಸರ ಮುಂತಾದವುಗಳನ್ನು ಪರಿಚಯಿಸಲಾಗಿದೆ. ನಾಲ್ಕನೆಯ ಅಧ್ಯಾಯವು ಕೃಷ್ಣದಾಸರ ಕೀರ್ತನೆಗಳಲ್ಲಿ ಅಡಗಿರುವ ಪ್ರಮುಖ ಅಂಶಗಳಾದ ದೇವತಾಸ್ತುತಿ, ಗುರುಸ್ತೋತ್ರ, ಗುರುಭಕ್ತಿ, ಲೋಕ ಸಂಗ್ರಹ, ವಿರಹವೇದನೆ, ಮುಕ್ತಿಯ ಪರಿಕಲ್ಪನೆ, ಅಹಂಕಾರ ಖಂಡನೆ, ಮನಸ್ಸಿಗೆ ಉಪದೇಶ, ಪದಗಳ ಕುರಿತು ವಿಮರ್ಶಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಕೃಷ್ಣದಾಸರ ಖಂಡಕಾವ್ಯಗಳಲ್ಲಿ ಪ್ರಮುಖವಾದವುಗಳು ಸುಂದರಕಾಂಡ, ಕಾಳಿಯ ವರದ ಕಥೆ, ಗಜೇಂದ್ರಮೋಕ್ಷ, ಪ್ರಹ್ಲಾದಚರಿತ್ರೆ, ವಾಮನಚರಿತ್ರೆ, ಸುಧಾಮಚರಿತ್ರೆ, ಭಾವಾರ್ಥ ಸಪ್ತಕಾಂಡ ರಾಮಾಯಣ, ಆನಂದಲಹರಿ, ಮುಂತಾದವುಗಳ ವಸ್ತು, ವಿಷಯ, ತಂತ್ರಗಾರಿಕೆ, ವರ್ಣನೆ, ರಸಪ್ರತಿಪಾದನೆ ಹೀಗೆ ಹಲವು ವಿಷಯಗಳ ಕುರಿತು ಚರ್ಚೆಯನ್ನು ಮಾಡಲಾಗಿದೆ. ಆರನೆಯ ಅಧ್ಯಾಯದಲ್ಲಿ ಕೃಷ್ಣದಾಸರು ಬಹುಭಾಷಾ ಪಂಡಿತರಾಗಿದ್ದರೆಂಬುದನ್ನು ಅವರು ರಚಿಸಿದ ಮರಾಠಿ ಮತ್ತು ಉರ್ದು ಭಾಷೆಯ ಕೀರ್ತನೆಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಏಳನೆಯ ಅಧ್ಯಾಯವು ಕೃಷ್ಣದಾಸರ ಕೀರ್ತನೆಯ ಜೊತೆಗೆ ಅವರ ಗುರು ಹಾಗೂ ತಂದೆಯವರಾದ ಮಹಿಪತಿರಾಯರ ಕೀರ್ತನೆಗಳ ಅಂತರ್‌ಸಂಬಂಧ ಹಾಗೂ ಭಿನ್ನತೆಯನ್ನು ಗುರುತಿಸಲಾಗಿದೆ. ಎಂಟನೆಯ ಅಧ್ಯಾಯವು ಕೃಷ್ಣದಾಸರ ಕೀರ್ತನೆಯಲ್ಲಿ ಪ್ರಾದೇಶಿಕ ಶಬ್ದಚಿತ್ರಗಳನ್ನು ಒಳಗೊಂಡ ಅವರ ಕೀರ್ತನೆಯ ಭಾಷೆ ಕುರಿತು ಭಾಷಾಧ್ಯಯನದ ನೆಲೆಯಲ್ಲಿ ನೋಡಲಾಗಿದೆ. ಒಂಬತ್ತನೆಯ ಅಧ್ಯಾಯದಲ್ಲಿ ಒಟ್ಟು ಅಧ್ಯಯನದ ಫಲಿತವನ್ನು ಸಮಾರೋಪದಲ್ಲಿ ಕೊಡಲಾಗಿದೆ. ಈ ರೀತಿಯಲ್ಲಿ ಒಟ್ಟು ಅಧ್ಯಯನದ ಶಿಲ್ಪ ರೂಪಗೊಂಡಿದೆ. ಅವುಗಳ ವಿಸ್ತಾರವಾದ ವಿವೇಚನೆಯನ್ನು ಮುಂದಿನ ಅಧ್ಯಾಯದಲ್ಲಿ ವಿವೇಚಿಸಲಾಗಿದೆ.

ಅಧ್ಯಾಯ ಎರಡು

ಹರಿದಾಸ ಸಾಹಿತ್ಯ ಪರಂಪರೆ: ಕೃಷ್ಣದಾಸರು

ಅಧ್ಯಾಯ ಎರಡು

ಹರಿದಾಸ ಸಾಹಿತ್ಯ ಪರಂಪರೆ: ಕೃಷ್ಣದಾಸರು

ಭಾರತೀಯ ಅಧ್ಯಾತ್ಮ ಪರಂಪರೆಯು ಬಹು ಪುರಾತನವಾದದ್ದು. ಆ ಪರಂಪರೆಯು ಸನಾತನದಷ್ಟೇ ಹೊಸತನದಿಂದ ಕೂಡಿದೆ. ಜ್ಞಾನ-ಭಕ್ತಿ ಹಾಗೂ ಕರ್ಮಾದಿ ಮಾರ್ಗಗಳ ಮುಖೇನ ಪರಮಸತ್ಯವನ್ನು ಶೋಧಿಸುವಲ್ಲಿ ಮತ್ತು ಸತ್ಯದ ಸಾಕ್ಷಾತ್ಕಾರಕ್ಕಾಗಿ ಪ್ರತಿ ಯುಗದಲ್ಲಿ ಒಂದೊಂದು ತೆರನಾದ ಭಕ್ತಿ ಪರಂಪರೆಗಳು ಕಂಡುಬರುತ್ತವೆ. ಅಂಥ ಭಕ್ತಿ ಪರಂಪರೆಯಲ್ಲಿ ಕರ್ನಾಟಕದಲ್ಲಿ ವೀರಶೈವ ವಚನಸಾಹಿತ್ಯ ಮತ್ತು ಹರಿದಾಸರ ಕೀರ್ತನೆಸಾಹಿತ್ಯ ಬಹುಮುಖ್ಯವಾದದ್ದಾಗಿದೆ. ಶಿವಶರಣರ ವಚನಸಾಹಿತ್ಯದ ನಂತರದಲ್ಲಿ ಅನುಭಾವ ಸಾಹಿತ್ಯವನ್ನು ಮುಂದುವರಿಸಿಕೊಂಡು ಹೋದವರಲ್ಲಿ ಹರಿದಾಸರು ಪ್ರಮುಖರಾಗಿದ್ದಾರೆ.

ಹರಿದಾಸರು ಶ್ರೀಹರಿಯನ್ನು ಆರಾಧ್ಯ ದೈವವನ್ನಾಗಿಟ್ಟುಕೊಂಡು ಆತನ ಸ್ತುತಿಯೊಂದಿಗೆ ಸಮಾಜಕ್ಕೆ ಬೋಧನಾಪರವಾದ ಕೀರ್ತನ, ಸುಳಾದಿ, ಉಗಾಭೋಗಗಳನ್ನು ರಚಿಸಿದರು. ವಚನಕಾರರಂತೆ ಆತ್ಮಸಾಕ್ಷಾತ್ಕಾರ ನೀತಿಬೋಧಕಗಳು ಹರಿದಾಸರಲ್ಲಿ ಕಾಣುತ್ತೇವೆ. ಕನ್ನಡ ಸಾಹಿತ್ಯದಲ್ಲಿ ವಚನಸಾಹಿತ್ಯದ ನಂತರದ ಸ್ಥಾನ ದಾಸಸಾಹಿತ್ಯಕ್ಕೆ ಲಭಿಸಿರುವುದು. ದಾಸ ಸಾಹಿತ್ಯದಲ್ಲಿರುವ ವಿಶಿಷ್ಟತೆಯಿಂದಾಗಿದೆ. ವಿಜಯನಗರ ದೊರೆಗಳ ಆಳ್ವಿಕೆ ಕಾಲವು, ದಾಸಸಾಹಿತ್ಯದ ವಸಂತ ಕಾಲವಾಗಿದೆ. ತತ್ವವಿವೇಚನೆಗೂ ಮತ್ತು ಭಕ್ತಿಮಾರ್ಗಕ್ಕೂ ತಳಕುಹಾಕಿ ಉಪದೇಶ ಮಾಡಿದ ಮಹಾನುಭಾವರು ಹರಿದಾಸರು. ಕ್ರಿ.ಶ. ೧೨ನೇ ಶತಮಾನದಿಂದ ೧೪ನೇ ಶತಮಾನದ ಕಾಲಘಟ್ಟ ಭಕ್ತಿ ಪರಂಪರೆಯ ಅತ್ಯುನ್ನತವಾದ ಕಾಲವಾಗಿದೆ. ಬಸವಣ್ಣನವರು, ರಾಮಾನುಜರು, ಮಧ್ವಾಚಾರ್ಯರು, ತಮ್ಮ ಸಿದ್ಧಾಂತ ನಿಲುವುಗಳ ಮೂಲಕ ಭಕ್ತಿಯ ಮಹೋನ್ನತ ನೆಲೆಯನ್ನು ಕಂಡವರು. ಮಧ್ವಾಚಾರ್ಯರು, ರಾಮಾನುಜಚಾರ್ಯರ ಮೂಲ ತತ್ವಕ್ಕೆ ತಮ್ಮದೆಯಾದ ವ್ಯಾಖ್ಯಾನ ಮಾಡಿದರು. ಆ ಮೂಲಕ ವಿಶಿಷ್ಟಾದ್ವೈತ ಸಿದ್ಧಾಂತಕ್ಕೆ ಪರ್ಯಾಯವಾಗಿ ದ್ವೈತ ಸಿದ್ಧಾಂತ ಪ್ರಚುರಪಡಿಸಿದವರು. ಹಾಗಾಗಿ ಕರ್ನಾಟಕ ಹರಿದಾಸ ಪರಂಪರೆಯಲ್ಲಿ ಮಧ್ವಾಚಾರ್ಯರು ಮೂಲಪುರುಷರಾಗಿದ್ದಾರೆ. ಮಧ್ವಾಚಾರ್ಯರರು ತಮ್ಮ ಸಿದ್ಧಾಂತದ ತಾತ್ವಿಕ ನಿಲುವನ್ನು ತಮ್ಮ ಸ್ವರೂಪವನ್ನು ಕೂಲಂಕಷವಾಗಿ ಚರ್ಚಿಸಿ ನಿರೂಪಿಸಿದ್ದಾರೆ. ಇದೇ ಕಾರ್ಯವು ಮುಂದೆ

ಅನೇಕ ಹರಿದಾಸರಿಂದ ಮುಂದುವರಿಯಲ್ಪಡುತ್ತದೆ. ಮಧ್ವಾಚಾರ್ಯರ ಕಾಲಾಂತರದ ಹರಿದಾಸರೆಲ್ಲ ತಮ್ಮ ಕೀರ್ತನೆಗೆ ಮಧ್ವಮತವನ್ನು ಬಳಸಿಕೊಂಡು ನಿರೂಪಿಸಿದ್ದಾರೆ.

ಕರ್ನಾಟಕ ಹರಿದಾಸ ಪರಂಪರೆಯಲ್ಲಿ ಮಧ್ವಾಚಾರ್ಯರ ಶಿಷ್ಯರಾದ ಶ್ರೀನರಹರಿ ತೀರ್ಥರು ದ್ವೈತ ಸೈದ್ಧಾಂತಿಕ ನೆಲೆಯನ್ನು ತಮ್ಮ ಕೀರ್ತನೆಗಳಲ್ಲಿ ತರುವುದರ ಮುಖೇನ, ಕನ್ನಡ ಹರಿದಾಸ ಪರಂಪರೆಯ ಮೂಲಪುರುಷರೆನ್ನಿಸಿಕೊಂಡಿದ್ದಾರೆ. ಇವರ ಪರಂಪರೆ ನಂತರ ಬಂದ ಹರಿದಾಸರು ಈ ಸಾಹಿತ್ಯ ಮಾರ್ಗವನ್ನು ಬೆಳಸಿಕೊಂಡು ಬಂದಿದ್ದಾರೆ. ನರಹರಿತೀರ್ಥರ ನಂತರ ಶ್ರೀಪಾದರಾಜರು ಪ್ರಮುಖರಾಗಿ ಕಂಡುಬರುತ್ತಾರೆ. ಶ್ರೀಪಾದರಾಜರು ಕನ್ನಡದಲ್ಲಿ ಕೀರ್ತನೆಯನ್ನು ರಚಿಸುವುದರ ಜೊತೆಗೆ ದೇವರ ಪೂಜೆಯ ಕಾಲದಲ್ಲಿ ಹಾಡಲು ಸಂಗೀತದ ಹೊಸ ಬೆಳಕಿನ ಮೆರಗನ್ನು ನೀಡಿದವರು. ಮುಂದೆ ಇದೊಂದು ಸಂಪ್ರದಾಯವಾಗಿ ಮುಂದುವರಿಯಲು ರೂಢಿಗೆ ತಂದವರು. ದಾಸಸಾಹಿತ್ಯದ ಉಜ್ವಲ ಪರಂಪರೆಯನ್ನು ಶ್ರೀಪಾದರಾಜರ ತರುವಾಯ ಅವರ ಶಿಷ್ಯರಾದ ಶ್ರೀವ್ಯಾಸರಾಯರು ಬೆಳೆಸಿದ್ದಾರೆ. ವ್ಯಾಸರಾಯರು ಮಠಾಧಿಪತಿಗಳಾಗಿ, ವಿದ್ವಾಂಸರಾಗಿ ರಾಜಗುರುಗಳೆನಿಸಿಕೊಂಡವರು. ಧರ್ಮೋಪದೇಶಕರೂ ಆಗಿದ್ದರು. ವಿಜಯನಗರ ಸಾಮ್ರಾಜ್ಯದ ಪ್ರಖ್ಯಾತ ದೊರೆಯೆನಿಸಿದ ಕೃಷ್ಣದೇವರಾಯರು ವ್ಯಾಸರಾಯರನ್ನು ಸನ್ಮಾನಿಸಿದ್ದು ಅವರ ವಿದ್ವತ್ತು ಹಾಗೂ ನೀತಿಬೋಧಕ ಧರ್ಮಮಾರ್ಗಕ್ಕಾಗಿ ಎಂಬುದು ಮುಖ್ಯವಾಗಿದೆ. ವ್ಯಾಸರಾಯರು ತಮ್ಮ ನೇತೃತ್ವದಲ್ಲಿ ಹರಿದಾಸಪಂಥ ಹುಟ್ಟುಹಾಕಿದರು.

ಆ ಬಳಿಕ ವಾದಿರಾಜರು, ಪುರಂದರದಾಸರು ಮುಂತಾದವರು ಈ ದಾಸಕೂಟಕ್ಕೆ ಸೇರಿರುತ್ತಾರೆ. ಮೊದಮೊದಲು ದೇವತಾಸ್ತುತಿಗೆ ಹೆಚ್ಚಿನ ಮನ್ನಣೆ ನೀಡಿದ ಹರಿದಾಸರ ಕೀರ್ತನೆಗಳು, ತದನಂತರದಲ್ಲಿ ಸಮಾಜಮುಖಿ ನೀತಿಬೋಧೆಗೆ ಹೆಚ್ಚಿನ ಗಮನ ನೀಡಿದರು. ಶ್ರೀವ್ಯಾಸರಾಯರಿಂದ ಅಂಕಿತ ಪಡೆದ ಪುರಂದರದಾಸರು ನಾಲ್ಕು ಲಕ್ಷ ಎಪ್ಪತ್ತೈದು ಸಾವಿರ ಕೀರ್ತನೆಗಳನ್ನು ರಚಿಸಿ, ಹರಿದಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಹಾಗಾಗಿ ಪುರಂದರದಾಸರ ಕಾಲವನ್ನು ದಾಸಸಾಹಿತ್ಯದ ಸುವರ್ಣಯುಗವೆಂದು ಕರೆಯುತ್ತಾರೆ. ''ಕರ್ನಾಟಕ ಸಂಗೀತ ಹಾಗೂ ಸಾಹಿತ್ಯ ಸಂಗಮವಾದ ಕಾಲವಿದು. ಧಾರ್ಮಿಕ ಕ್ಷೋಭೆ, ಸಾಮಾಜಿಕ ಅಶಾಂತಿ ಪರಸ್ಪರ ವೈಷಮ್ಯ ಮುಂತಾದವುಗಳನ್ನು ಗಮನಿಸಿ, ಈ ದುಷ್ಟಶಕ್ತಿಗಳಿಂದಾಗಿ ಹಾಳಾಗಿ ಹೋಗುತ್ತಿರುವ ಅಂದಿನ ಸಮಾಜವನ್ನು ಕುರಿತು ಪುರಂದರದಾಸರು ಮಮ್ಮಲ ಮರುಗಿದ್ದಾರೆ. ಅಪೂರ್ವ ಕವಿತ್ವ ಶಕ್ತಿಯಿಂದ ಅಂದಿನ ಸಮಾಜದ ನ್ಯೂನ್ಯತೆಯನ್ನು ಚಿತ್ರಿಸಿದ್ದಾರೆ.''[೧]

ಪುರಂದರದಾಸರ ಜಾಡಿನಲ್ಲಿಯೇ ಸಾಗಿರುವ ಮತ್ತು ಮುಂದುವರಿಸಿದ ಇನ್ನೋರ್ವ ದಾಸಶ್ರೇಷ್ಠರು ಕನಕದಾಸರು. ಕಾಗಿನೆಲೆ ಆದಿಕೇಶವನನ್ನು ನಾಮಾಂಕಿತವಾಗಿಟ್ಟುಕೊಂಡವರು. ಸಂಸ್ಕಾರ ಹಾಗೂ ಅಚಲ ದೈವದ ಶ್ರದ್ಧೆಯಿಂದ ದಾಸವರೇಣ್ಯರೆಸಿಕೊಂಡರು. ಉಡುಪಿಯ ಶ್ರೀಕೃಷ್ಣನನ್ನೇ ತನ್ನತ್ತ ಸೆಳೆದುಕೊಂಡ ಅಧ್ಯಾತ್ಮ ಬೋಧಕರು. ಅಸಂಖ್ಯಾತ ಕೀರ್ತನೆ ಹಾಗೂ ಕೃತಿಗಳಲ್ಲಿ ಹರಿಭಕ್ತಿಯ ವಿಶಿಷ್ಟತೆಯನ್ನು ಸಾರಿದವರು. ಹರಿದಾಸ ಪಂಥಕ್ಕೆ ಪುಷ್ಟಿಯನ್ನು ನೀಡಿದವರು. ಹೀಗೆ ೧೬ನೇ ಶತಮಾನದ ದಾಸಸಾಹಿತ್ಯದ ಕಾಲಘಟ್ಟ ಮುಕ್ತಾಯವಾಗುತ್ತದೆ.

ಅನಂತರ ಸುಮಾರು ೮೦ ವರ್ಷಗಳ ಕಾಲ ದಾಸಸಾಹಿತ್ಯದ ಕೃಷಿಯಾಗಿಲ್ಲವೆಂದು ತಿಳಿಯಲಾಗಿತ್ತು. ಆದರೆ ಆ ಅವಧಿಯಲ್ಲಿ ವಿಜಯಪುರ ಜಿಲ್ಲೆಯ ಕಾಖಂಡಕಿಯಲ್ಲಿ ನೆಲೆಸಿದ ಮಹಿಪತಿರಾಯರು, ಅಜ್ಞಾತಕಾಲ ಇಲ್ಲವೆಂಬುದನ್ನು ತಮ್ಮ ಕೀರ್ತನೆಗಳ ಮೂಲಕ ಸಾಬೀತು ಪಡಿಸಿದ್ದಾರೆ. ಮಹಿಪತಿರಾಯರು ಕ್ರಿ.ಶ. ೧೬೧೮ರಿಂದ ೧೭೦೫ ಮಧ್ಯದ ಕಾಲದಲ್ಲಿ ಬದುಕಿ ಬಾಳಿದವರು. ಮಹಿಪತಿರಾಯರು ಉತ್ತರ ಕರ್ನಾಟಕದಲ್ಲಿ ದಾಸಸಾಹಿತ್ಯ ಪರಂಪರೆ ಮುಂದುವರಿಯಲು ಕಾರಣಕರ್ತರಾದರು.

ಇವರು ಮೂಲತಃ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಐಗಳಿ ಗ್ರಾಮದವರು. ಇವರ ತಂದೆಯವರು ಹೊಟ್ಟೆಯ ನಿರ್ವಹಣೆಗಾಗಿ ವಿಜಯಪುರಕ್ಕೆ ಬಂದು ನೆಲೆಸಿದರು. ಬಾಲಕ ಮಹಿಪತಿರಾಯರು ಬಾಲ್ಯದಲ್ಲಿಯೇ ಅನೇಕ ಶಾಸ್ತ್ರಗ್ರಂಥಗಳನ್ನು ಓದಿದರು. ಮಾತೃಭಾಷೆ ಕನ್ನಡದೊಂದಿಗೆ ಸಂಸ್ಕೃತ, ಮರಾಠಿ ಹಾಗೂ ವಿಜಯಪುರದ ಆಳರಸರ ಪರ್ಶಿಯನ್ ಮುಂತಾದ ಭಾಷೆಯಲ್ಲಿ ಪರಿಣತರಾದವರು. ಮಹಿಪತಿರಾಯರಿಗೆ ಚಿಕ್ಕಂದಿನಿಂದಲೇ ಅಧ್ಯಾತ್ಮದ ಕಡೆಗೆ ಹೆಚ್ಚಿನ ಆಸಕ್ತಿ ಇತ್ತು. ಮಾಧ್ವಸಂಪ್ರದಾಯಸ್ಥ ಮನೆತನವಾದುದ್ದರಿಂದ ನಿತ್ಯಜಪತಪ ಹರಿಕೀರ್ತನೆ ಮಾಡುತ್ತಿದ್ದರು. ಅನೇಕ ಭಾಷಾಪ್ರವೀಣರಾದ ಮಹಿಪತಿರಾಯರು ಆದಿಲ್‌ಶಾಹಿ ಸರದಾರ ಖವಾಸ್ಖಾನ್‌ನ ಹತ್ತಿರ ಕರಣಿಕ ವೃತ್ತಿಯನ್ನು ಮಾಡುತ್ತಿದ್ದರು. ಕರಣಿಕ ವೃತ್ತಿಯಲ್ಲಿ ಶ್ರದ್ಧೆ-ನಿಷ್ಠೆಯನ್ನು ಇಡುವ ಮೂಲಕ ಆತನ ಪ್ರೀತಿಗೆ ಪಾತ್ರರಾದರು. ಅನಂತರ ಖವಾಸ್ಖಾನ್ ಮುಖಾಂತರ ಬಾದಶಾಹನ ಆಸ್ಥಾನದ ಕೋಶಾಧಿಕಾರಿಗಳಾಗಿ ಬಡ್ತಿ ಪಡೆದು, ದಿನ ನಿತ್ಯ ತನ್ನ ಕರ್ಮಾದಿ ಕ್ರಿಯೆಗಳನ್ನು ನಿರ್ವಹಿಸುತ್ತಿದ್ದರು.

ಒಂದು ದಿನ ಇವರ ಲೌಕಿಕ ಮತ್ತು ಪಾರಮಾರ್ಥಿಕ ಬದುಕಿನಲ್ಲಿ ಆಶ್ಚರ್ಯವಾದ ಘಟನೆಯೊಂದು ಜರಗುತ್ತದೆ. ಬೆತ್ತಲೆ ಫಕೀರನು ಮಹಿಪತಿರಾಯರ ಉಂಗುರ ಕಸಿದುಕೊಂಡ ಪ್ರಸಂಗವದು. ಈ ಘಟನೆ ಮಹಿಪತಿರಾಯರನ್ನು ಸಂಪೂರ್ಣವಾಗಿ ಅಧ್ಯಾತ್ಮದೆಡೆಗೆ ಸೆಳೆಯುತ್ತದೆ. ಮುಂದೆ ಗುರುಭಾಸ್ಕರ ಸ್ವಾಮಿಯಿಂದ ದೀಕ್ಷೆ ಪಡೆಯುತ್ತಾರೆ. ಮುಂದೆ ಅನೇಕಾನೇಕ ಕೀರ್ತನೆಗಳನ್ನು ರಚಿಸುವುದರ ಮೂಲಕ ದಾಸಸಾಹಿತ್ಯ ಸ್ತಬ್ಧವಾದ ಕಾಲದಲ್ಲಿ ಮಹಿಪತಿರಾಯರು ಬಹುಭಾಷೆಗಳಲ್ಲಿ ಕೀರ್ತನೆಯನ್ನು ರಚಿಸಿದ್ದಾರೆ. ಇವರ ಒಟ್ಟು ಕೀರ್ತನೆಗಳು ೭೫೪ ದೊರೆತಿವೆ. ಮಹಿಪತಿರಾಯರು ೧೪ ರೀತಿಯಾಗಿ ತಮ್ಮ ಅಂಕಿತವನ್ನು ಪ್ರಚುರಪಡಿಸಿಕೊಂಡಿದ್ದಾರೆ. ಇವರ ಕೀರ್ತನೆಗಳ ವೈಶಿಷ್ಟ್ಯ ಬೇರೆ ಬೇರೆ ಭಾಷೆಗಳ ಭಕ್ತಿಸಾಹಿತ್ಯವನ್ನು ಅಭ್ಯಸಿಸಿ, ಅವುಗಳನ್ನು ಕನ್ನಡದಲ್ಲಿ ತೋರಿಸುವ ಪ್ರಯತ್ನ ಮಾಡಿದ್ದಾರೆ. "ಮಹಾರಾಷ್ಟ್ರದಲ್ಲಿಯ ಅನುಭಾವ, ಭಾಗವತ, ಅವಧೂತ ಸಂಪ್ರದಾಯಗಳು ಹಾಗೂ ಮುಸ್ಲಿಮರಿಂದ ಪ್ರಚಲಿತದಲ್ಲಿದ್ದ ಸೂಫಿ ಸಂಪ್ರದಾಯ, ಕರ್ನಾಟಕದ ವೀರಶೈವ ಶರಣ, ಸಾಹಿತ್ಯಗಳನ್ನು ಅವರು ಓದಿಕೊಂಡಿದ್ದರು. ಆದ್ದರಿಂದ ಅವರ ಅನೇಕ ಕೃತಿಗಳಲ್ಲಿ ಎಲ್ಲ ಸಂಪ್ರದಾಯದ ಪಾರಿಭಾಷಿಕ ಪದಗಳು ಕಂಡುಬರುವುದು ಸಹಜವಾಗಿದೆ."[೨]

ಮಹಿಪತಿರಾಯರ ಕೃತಿಗಳನ್ನು ಅವಲೋಕಿಸಿದಾಗ ಇವರು ಯಾವ ಸಂಪ್ರದಾಯವನ್ನು ಒಪ್ಪಿಕೊಂಡವರಲ್ಲ ಎಂಬುದು ತಿಳಿಯುತ್ತದೆ. ಇವರ ಕೀರ್ತನೆಯಲ್ಲಿ ದ್ವೈತ ಸಿದ್ಧಾಂತವೂ ಇದೆ.

ಅದ್ವೈತ ಸಿದ್ಧಾಂತವೂ ಇದೆ. ದ್ವೈತ ಮತ್ತು ಅದ್ವೈತ ಸಿದ್ಧಾಂತಗಳೆರಡನ್ನು ಕೆಲವು ಸಾರಿ ಅಲ್ಲಗಳೆಯುತ್ತಾರೆ. ಇದನ್ನು ಮಹಿಪತಿರಾಯರು ತಮ್ಮ ಕೀರ್ತನೆಯಲ್ಲಿ ಸ್ಪಷ್ಟಪಡಿಸುತ್ತಾರೆ. ''ದ್ವೈತ, ಅದ್ವೈತವೆಂದು ಹೊಡೆದಾಡದಿರೊ ಪ್ರಾಣಿ ಎಂದು ಈ ಸಮಸ್ಯೆಯನ್ನು ಬಗೆಹರಿಸಿದ್ದಾರೆ.

ಮನೆತನದಿಂದ ಮಹಿಪತಿರಾಯರು ಮಾಧ್ವವೈಷ್ಣವ ಸಂಪ್ರದಾಯಕ್ಕೆ ಸೇರಿದವರು. ವಂಶಪಾರಂಪರ್ಯವಾಗಿ ಮಧ್ವಮತ-ತತ್ವಗಳಲ್ಲಿ ನಂಬಿಕೆಯಿಟ್ಟವರು. ಆದ್ದರಿಂದ ವಾಸ್ತವದಲ್ಲಿ ಮಹಿಪತಿರಾಯರು ಕೂಡಾ ವಿಷ್ಣು ಸರ್ವೋತ್ತಮ ಲಕ್ಷ್ಮಿದೇವಿಯು ಪ್ರಕೃತಿ ನಿಯಾಮಕಳು. ಜಗತ್ತು ಪಾರಮಾರ್ಥಿಕ ಸತ್ಯಮುಕ್ತಿ-ನೈಜಸುಖಾನುಭವ ಹಾಗೂ ಮುಕ್ತಿಗೆ ನಿರ್ಮಲವಾದ ಭಕ್ತಿಯೇ ಸಾಧನೆಯ ಮುಕ್ತಿ ಎಂದು ನಂಬಿದ್ದರು.''[೩]

ಅವರ ಕೀರ್ತನೆಲ್ಲಿ ಅಲ್ಲಲ್ಲಿ ದಾಸಕೂಟ ಮತ್ತು ವ್ಯಾಸಕೂಟಗಳ ಅನೇಕ ವಿಷಯಗಳು ಚರ್ಚಿತಗೊಂಡಿವೆ. ಇನ್ನು ದ್ವಿತೀಯ ಕಾಲಘಟ್ಟದಲ್ಲಿ ಪ್ರಮುಖರಾದವರು ವಿಜಯದಾಸರು. ಪುರಂದರದಾಸರಿಂದ ಪ್ರೇರಣೆಯನ್ನು ಪಡೆದು ಹರಿಯ ಸೇವೆಗಾಗಿಯೇ ವಿರಾಗಿಗಳಾಗಿ ಈ ಶರೀರವನ್ನು ಮುಡಿಪಿಟ್ಟವರು. ಅನೇಕ ತತ್ವನಿಷ್ಠ ಕೀರ್ತನೆಗಳನ್ನು ಮತ್ತು ಸುಳಾದಿಗಳನ್ನು ರಚಿಸಿದ್ದಾರೆ. ತನ್ನ ಹಲವು ಶಿಷ್ಯ ಬಳಗಕ್ಕೆ ದೀಕ್ಷೆಯನ್ನು ನೀಡಿ ದಾಸಪರಂಪರೆಯ ಬಳಗವನ್ನು ನಿರ್ಮಿಸಿ ಸಮರ್ಥವಾಗಿ ಮುನ್ನಡಿಸಿದವರು. ಹಾಗಾಗಿ ವಿಜಯದಾಸರು ದಾಸಪರಂಪರೆಯನ್ನು ಪುನರುಜ್ಜೀವನಗೊಳಿಸಿದ ಪ್ರಮುಖ ದಾಸರೆಂದು ಗುರುತಿಸಿಕೊಂಡಿದ್ದಾರೆ. ವಿಜಯದಾಸರು ವಿಜಯವಿಠ್ಠಲವೆಂಬ ಅಂಕಿತವನ್ನಿಟ್ಟುಕೊಂಡು ದಾಸಸಾಹಿತ್ಯವನ್ನು ರಚಿಸಿದವರು. ಹಲವು ತೀರ್ಥಕ್ಷೇತ್ರಗಳನ್ನು ಸಂಚರಿಸಿ ಅಪಾರವಾದ ಲೋಕಾನುಭವಗಳನ್ನು ಹಾಗೂ ಅಧ್ಯಾತ್ಮದ ಹಸಿವನ್ನು ಇಂಗಿಸಿಕೊಂಡವರು. ಇವರ ತರುವಾಯ ದಾಸಸಾಹಿತ್ಯ ಪರಂಪರೆಯಲ್ಲಿ ಜಗನಾಥದಾಸರು ಕಂಡುಬರುತ್ತಾರೆ. ಹರಿದಾಸ ಪರಂಪರೆಯಲ್ಲಿ ಪುರಂದರದಾಸರು ಬಿಂಬೋಪಾಸನ ಮಹತ್ವವನ್ನು ಸೂಚಿಸಿದವರು. ಅದನ್ನು ವಿಸ್ತೃತವಾಗಿ ತನ್ನದೆಯಾದ ಮಾರ್ಗದಲ್ಲಿ ವಿಜಯದಾಸರು ಪ್ರತಿಪಾದಿಸಿದವರು. ಮುಂದುವರಿದು ವಿಜಯದಾಸರ ಶಿಷ್ಯರಾದ ಗೋಪಾಲದಾಸರು ಈ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

ಗೋಪಾಲದಾಸರ ಶಿಷ್ಯರಲ್ಲಿ ಪ್ರಮುಖರಾದವರು ಜಗನ್ನಾಥದಾಸರು. ಇವರ ಹರಿಕಥಾಮೃತಸಾರವು ಬಿಂಬ ಪ್ರತಿಬಿಂಬ ಸಂಧಿಯ ಬಿಂಬೋಪಾಸನೆಯು ಮಾರ್ಗದರ್ಶಿಯ ಕೈಪಿಡಿಯಾಗಿದೆ. ಹೀಗೆ ದ್ವಿತೀಯ ಕಾಲಘಟ್ಟದ ಕೊನೆಗೆ ವಿಜಯದಾಸರ ತರುವಾಯ, ಕಾಖಂಡಕಿ ಕೃಷ್ಣದಾಸರು ಪ್ರಮುಖ ದಾಸರೆನಿಸಿಕೊಂಡವರು. ಕೃಷ್ಣದಾಸರು ದಾಸಶ್ರೇಷ್ಠರಾದ ಮಹಿಪತಿರಾಯರ ಸುಪುತ್ರರು. ದಾಸಸಾಹಿತ್ಯದ ಎರಡನೇ ಕಾಲಘಟ್ಟದ ಕೊನೆಯಲ್ಲಿ ಇವರು ಕಂಡುಬರುತ್ತಾರೆ. ಇವರು ತಮ್ಮ ತಂದೆಯನ್ನು ಗುರುವಾಗಿ ಮಾಡಿಕೊಂಡು ದಾಸಸಾಹಿತ್ಯವನ್ನು ರಚನೆ ಮಾಡಿದವರು. ಕೃಷ್ಣದಾಸರು ೭೦೦ಕ್ಕೂ ಮಿಕ್ಕ ಕೀರ್ತನೆಗಳನ್ನು ರಚಿಸಿದ್ದಾರೆ. ಇವರ ಕೀರ್ತನೆಗಳಲ್ಲಿ ಉಗಾಭೋಗ-ಸುಳಾದಿ. ಖಂಡಕಾವ್ಯಗಳು, ವಚನ, ಹೀಗೆ ಅನೇಕ ಪ್ರಯೋಗಗಳನ್ನು ಮಾಡಿ ತೋರಿಸಿದ್ದಾರೆ.

ಕೃಷ್ಣದಾಸರ ಕೀರ್ತನೆಗಳು ವಿಜಯಪುರ ಜಿಲ್ಲೆಯಲ್ಲಿ ಮಾತ್ರವಲ್ಲದೆ, ಸುತ್ತಮುತ್ತಲಿನ ಪ್ರದೇಶದಲ್ಲಿ ಪ್ರಸಿದ್ಧಿಯನ್ನು ಪಡೆದಿವೆ. ಕೃಷ್ಣದಾಸರ ವೈಯಕ್ತಿಕ ವಿಚಾರ ಅಷ್ಟಾಗಿ ಯಾವ ಕೃತಿಯಲ್ಲಿ ಕಂಡುಬರುವುದಿಲ್ಲ. ಆದರೆ ಅವರ ಕೀರ್ತನೆ ಸಾಹಿತ್ಯ ಕುರಿತು ಬೆರಳೆಣಿಕೆಯಲ್ಲಿ ಚರ್ಚೆಗಳು ನಡೆದಿವೆ. ಕೃಷ್ಣದಾಸರ ಕೀರ್ತನೆಗಳಲ್ಲಿ ದೇವತಾಸ್ತುತಿ, ಗುರುಭಕ್ತಿ, ಲೋಕಸಂಗ್ರಹ, ಉಪದೇಶಪದ ಹೀಗೆ ಹತ್ತಾರು ವಿಧದಲ್ಲಿ ಕಂಡುಬರುತ್ತವೆ.

ಗುರು ಮತ್ತು ತಂದೆಯಾದ ಮಹಿಪತಿರಾಯರದ್ದು ಯೋಗಪ್ರಧಾನವಾದ ಸಾಧನವಾದರೆ. ಕೃಷ್ಣದಾಸರಲ್ಲಿ ಮಧ್ವಸಿದ್ಧಾಂತದ ಅನುಗುಣವಾಗಿ ದೇವತಾಸ್ತುತಿಯ ಕೀರ್ತನೆಗಳನ್ನು ಕಾಣುತ್ತೇವೆ. ಗುರುಭಕ್ತಿ ಗುರುವಿನ ಮೇಲಿನ ಪ್ರೀತಿಯಿಂದ ತನ್ನ ತಂದೆಯನ್ನೇ ಗುರುವನ್ನಾಗಿ ಸ್ವೀಕರಿಸಿಕೊಂಡಿರುವ ಕೃಷ್ಣದಾಸರು ಸುಮಾರು ೧೦೦ಕ್ಕೂ ಹೆಚ್ಚು ಕೀರ್ತನೆಗಳಲ್ಲಿ ಮಹಿಪತಿರಾಯರನ್ನು ನೆನೆಯುತ್ತಾರೆ. ಗುರುವಿನ ಕಾರುಣ್ಯ, ಗುರುವಿನ ಕೃಪೆ ಅಗಾಧವಾದದ್ದು ಎಂದು ಮನದುಂಬಿ ಹೇಳಿಕೊಂಡಿದ್ದಾರೆ. ತತ್ವೋಪದೇಶ ಪದಗಳಲ್ಲಿ ಮನುಷ್ಯ ಸಾವು ನೋವುಗಳ ಬಂಧವನ್ನು ಬಿಡಿಸಿಕೊಂಡು ಮೋಕ್ಷವನ್ನು ಪಡೆದುಕೊಳ್ಳುವ ಪರಿಯನ್ನು ಹೇಳುತ್ತಾರೆ. ಜೊತೆಗೆ ಆ ಕಾಲದ ಸಾಮಾಜಿಕ, ಧಾರ್ಮಿಕ, ರಾಜಕೀಯ ಏರಿಳಿತಗಳು ಇವರ ಕೀರ್ತನೆಯ ಹಿನ್ನೆಲೆಯಲ್ಲಿ ಕಾಣುತ್ತೇವೆ. ಮನುಷ್ಯನ ಜೀವನ ಸತ್ಸಂಗದಿಂದ ಕೂಡಿದರೆ ಮೋಕ್ಷ ಪ್ರಾಪ್ತವಾಗುತ್ತದೆ. ಮನುಷ್ಯನ ಸುತ್ತಮುತ್ತಲಿನ ಪರಿಸರ ಚೆನ್ನಾಗಿರಬೇಕೆಂಬುದು ಕೃಷ್ಣದಾಸರ ಅಭಿಮತವಾಗಿದೆ. ದಾಸಸಾಹಿತ್ಯ ಪರಂಪರೆಯನ್ನು ಕೃಷ್ಣದಾಸರ ಕಾಲವಾದ ನಂತರವೂ ಇವರ ಮನೆತನವು ಸಮರ್ಥವಾಗಿ ಮುಂದುವರಿಸಿಕೊಂಡು ಬಂದಿದೆ. ಈ ರೀತಿಯಲ್ಲಿ ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಕೃಷ್ಣದಾಸರು ಪ್ರಮುಖವಾಗಿ ಕಂಡುಬರುತ್ತಾರೆ.

ಕೊನೆಟಿಪ್ಪಣಿಗಳು

೧. ಮಹಿಪತಿದಾಸರ ಹಾಡುಗಳು, (ಸಂ) ಕಾವ್ಯಪ್ರೇಮಿ, ಸಮಾಜ ಪುಸ್ತಕಾಲಯ ಧಾರವಾಡ, ಪುಟ ೮.

೨. ಸಮಗ್ರ ದಾಸಸಾಹಿತ್ಯ ಸಂಪುಟ ೧೧, ಭಾಗ ೨, ಕಾಖಂಡಕಿ ಶ್ರೀಮಹಿಪತಿರಾಯರ ಕೀರ್ತನೆಗಳು, (ಸಂ) ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪುಟ ೩೮.

೩. ಅದೇ, ಪ್ರಸ್ತಾವನೆ, ಪುಟ ೩೯.

ಅಧ್ಯಾಯ ಮೂರು

ಕೃಷ್ಣದಾಸರ ಜೀವನ ಪಥ

ಅಧ್ಯಾಯ ಮೂರು

ಕೃಷ್ಣದಾಸರ ಜೀವನಪಥ

ಭಾರತ ಅನೇಕ ಶ್ರೇಷ್ಠ ತತ್ವಜ್ಞಾನಿಗಳಿಗೆ, ಭಕ್ತರಿಗೆ, ಪರಮಾರ್ಥಿಕ ಸಾಧನೆಯನ್ನು ಮಾಡಿದ ಸಿದ್ಧಿಪುರುಷರಿಗೆ ಜನ್ಮವೆತ್ತಿದ ನೆಲೆಯಾಗಿದೆ. ಈ ದೃಷ್ಟಿಯಲ್ಲಿ ದಕ್ಷಿಣ ಭಾರತವು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಶಂಕರಾಚಾರ್ಯರು, ಮಧ್ವಾಚಾರ್ಯರು, ಬಸವಣ್ಣ, ಮುಂತಾದ ಭಕ್ತಿ ಚಳುವಳಿಯ ಮೇಧಾವಿಗಳು ತಮ್ಮದೆಯಾದ ತತ್ವಸಿದ್ಧಾಂತಗಳನ್ನು ಜನಸಾಮಾನ್ಯರಲ್ಲಿ ಮೂಡಿಸುವುದರ ಮೂಲಕ ಜನರಲ್ಲಿ ಧಾರ್ಮಿಕ ಜಾಗೃತಿಯನ್ನು ಉಂಟುಮಾಡಿದರು. ಆ ನಿಟ್ಟಿನಲ್ಲಿ ಪುರಂದರದಾಸರು, ಕನಕದಾಸರು, ಪ್ರಸನ್ನವೆಂಕಟದಾಸರು, ಕಾಖಂಡಕಿ ಮಹಿಪತಿರಾಯರು, ಮೊದಲಾದ ದಾಸಶ್ರೇಷ್ಠರು ದಾಸಪಂಥವನ್ನು ಬೆಳೆಸಿ ಮುನ್ನಡೆಸಿದವರು. ಆ ದಾಸಸಾಹಿತ್ಯ ಪರಂಪರೆಯನ್ನು ಸಮರ್ಥವಾಗಿ ಉತ್ತರ ಕರ್ನಾಟಕದಲ್ಲಿ ಮಹಿಪತಿರಾಯರ ನಂತರ ಮುನ್ನಡೆಸಿಕೊಂಡು ಬಂದವರು ಕೃಷ್ಣದಾಸರು. ಕೃಷ್ಣದಾಸರು ತಮ್ಮ ಕಾಲಘಟ್ಟದ ಅವಧಿಯಲ್ಲಿ ಪ್ರಚಾರ ಮಾಡಿದ ಆಧ್ಯಾತ್ಮಿಕ ಮತ್ತು ಧಾರ್ಮಿಕ ಜೀವನ ಹಾಗೂ ಆದಿಲ್‌ಶಾಹಿಗಳ ಅಧಿಕಾರಾವಧಿಯಲ್ಲಿ ಈ ಪಂಥವನ್ನು ಮುನ್ನಡೆಸಿದ ಮಾರ್ಗ ಬಹು ವಿಶಿಷ್ಟವಾದುದು. ಹಾಗಾಗಿ ಕೃಷ್ಣದಾಸರ ಮನೆತನದ ಹಿನ್ನೆಲೆ ಅವರ ಕಾಲ ನಿರ್ಣಯ, ಜೀವನ ವೃತ್ತಾಂತ, ಅವರು ನಂಬಿದ ದೈವ ಮುಂತಾದವುಗಳನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಮನೆತನದ ಹಿನ್ನೆಲೆ

ಕೃಷ್ಣದಾಸರ ತಂದೆಯವರಾದ ಮಹಿಪತಿರಾಯರು ಮೂಲತಃ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಐಗಳಿ ಗ್ರಾಮದವರು. ಮಹಿಪತಿರಾಯರ ತಂದೆ ಕೋನೇರಿರಾಯರು. ಅಂದಿನ ಕಾಲದ ಆದಿಲ್‌ಶಾಹಿಗಳ ರಾಜಧಾನಿಯಾದ ವಿಜಯಪುರಕ್ಕೆ ಹೊಟ್ಟೆಪಾಡಿಗಾಗಿ ಬಂದು ನೆಲೆಸಿದವರು. ಕೋನೇರಿರಾಯರು ಐಗಳಿ ವೆಂಕಟೇಶ ದೇವರ ಅರ್ಚಕರಾಗಿ ತಮ್ಮ ವೃತ್ತಿಜೀವನವನ್ನು ಸಾಗಿಸುತ್ತಿದ್ದವರು. ಅನೇಕ ಶಾಸ್ತ್ರಗಳನ್ನು ಕರಗತ ಮಾಡಿಕೊಂಡವರು. ಸಂಗೀತ ಕುರಿತು ಆಸಕ್ತಿ ಇಟ್ಟುಕೊಂಡವರು. ಆದರೆ ವೆಂಕಟೇಶ ದೇವರ ಅರ್ಚನೆಯೊಂದಿಗೆ ಜೀವನ ನಿರ್ವಹಣೆ ಮಾಡುವುದು ಕಠಿಣವಾಗಿತ್ತು. ಹಾಗಾಗಿ ತಮ್ಮ ಮೂಲ ಗ್ರಾಮ ಐಗಳಿಯನ್ನು

ಬಿಟ್ಟು ವಿಜಯಪುರವನ್ನು ವಾಸಸ್ಥಾನವಾಗಿ ಆಯ್ಕೆ ಮಾಡಿಕೊಂಡರು. ಕೊನೇರಿರಾಯರಿಗೆ ಇಬ್ಬರು ಮಕ್ಕಳು. ಮೊದಲನೆಯವರು ವೆಂಕಟೇಶ, ಎರಡನೆಯವರು ಮಹಿಪತಿರಾಯರು. ಕೊನೇರಿರಾಯರು ಮಕ್ಕಳ ವಿದ್ಯಾಭ್ಯಾಸ ಮತ್ತು ಉದರ ನಿರ್ವಹಣೆ ಅಸಾಧ್ಯವಾದಾಗ, ಐಗಳಿ ಗ್ರಾಮವನ್ನು ಬಿಟ್ಟು ವಿಜಯಪುರಕ್ಕೆ ಆಗಮಿಸುತ್ತಾರೆ. ಐಗಳಿ ಗ್ರಾಮದಿಂದ ವಿಜಯಪುರ ನಗರವು ೫೫ ಕಿ.ಮೀ. ಅಂತರದಲ್ಲಿದೆ. ವಿಜಯಪುರವು ಆ ಕಾಲದಲ್ಲಿ ಆದಿಲ್‌ಶಾಹಿ ಅರಸರ ಪ್ರಮುಖ ಕೇಂದ್ರ ನೆಲೆಯಾಗಿತ್ತು.

ಹಲವು ಮಹಾನಗರಗಳಲ್ಲಿ ವಿಜಯಪುರವು ಒಂದಾಗಿತ್ತು. ಜನನಿಬಿಡ ರಾಜಧಾನಿಯಾಗಿತ್ತು. ಹಿಂದೂ-ಮುಸ್ಲಿಂ ಸಾಮರಸ್ಯ ಆ ನಗರದಲ್ಲಿತ್ತು. ಆದಿಲ್‌ಶಾಹಿಗಳ ಆಸ್ಥಾನದಲ್ಲಿ ಅನೇಕ ಹಿಂದೂ ವಿದ್ವಾಂಸರು, ಪಂಡಿತರು, ಯೋಧರು, ಕಾರ್ಯಗೈಯುತ್ತಿದ್ದರು. ಈ ಹಿನ್ನೆಲೆಯಲ್ಲಿ ವಿಜಯಪುರ "ಆದಿಲ್‌ಷಾಹಿಗಳ ಕಾಲದ ಹಿಂದೂಧರ್ಮದಲ್ಲಿನ ಒಂದು ಪ್ರಮುಖ ಬೆಳವಣಿಗೆಯನ್ನು ಗುರುತಿಸಬಹುದು. ಅದೇ ದಾಸಪರಂಪರೆಯ ಏಳಿಗೆ ಅವರಲ್ಲಿ ರುಕ್ಮಾಂಗದ ಪಂಡಿತ, ಮಹಿಪತಿರಾಯರು ಪ್ರಮುಖರು. ರುಕ್ಮಾಂಗದ ಒಬ್ಬ ಸಮಾಜ ಸುಧಾರಕರು ಶ್ರೇಷ್ಠ ಸಂಗೀತಗಾರರು, ವೈದ್ಯರು ಮತ್ತು ಯೋಗಿಗಳು. ಇಬ್ರಾಹಿಂ ಆದಿಲ್‌ಶಾಹನು ಇವರಿಂದ ಸರಸ್ವತಿ ದೀಕ್ಷೆ ಪಡೆದಿದ್ದನು. ರುಕ್ಮಾಂಗದರು ವಿಠ್ಠಲನ ಭಕ್ತನಾಗಿದ್ದರು. ಕೀರ್ತನೆ, ಹರಿಕಥೆಗಳನ್ನು ಮಧುರವಾಗಿ ಹಾಡುತ್ತಿದ್ದರು. ಮಹಿಪತಿರಾಯರು ಐಗಳಿ ಗ್ರಾಮದ ಕುಲಕರ್ಣಿ ಮನೆತನಕ್ಕೆ ಸೇರಿದವರು. ಸುಮಾರು ೭೦೦ ಕೀರ್ತನೆಗಳನ್ನು ಸೇರಿಸಿ ಹಾಡಿದ್ದಾರೆ. ಇವರಲ್ಲದೆ ಕೃಷ್ಣದಾಸ, ಪ್ರಸನ್ನ ವೆಂಕಟದಾಸ, ಗಲಗಲಿ ಅವ್ವನವರು, ಸಿಂದಗಿಯ ಭೀಮಾಶಂಕರರು, ಅವರ ಮಗ ಜಕ್ಕಪ್ಪಯ್ಯ"[೧] ಮುಂತಾದವರು. ಹಿಂದೂ ಧರ್ಮದ ಆಶ್ರಯತಾಣವಾಗಿದ್ದ ಅಂದಿನ ವಿಜಯಪುರದ ಸುಲ್ತಾನರ ಕಾಲಘಟ್ಟವು ದಾಸಪರಂಪರೆಯಲ್ಲಿ ತನ್ನದೇ ಆದ ಮಹತ್ವವನ್ನು ಪಡೆದಿದೆ. ಕೊನೇರಿ ರಾಯರು ವಿಜಯಪುರಕ್ಕೆ ಆಗಮಿಸುವ ಕಾಲದಲ್ಲಿ ಮಹ್ಮದ್ ಆದಿಲ್‌ಶಾಹನು ಈ ಪ್ರದೇಶವನ್ನು ಆಳುತ್ತಿದ್ದನು. ಆದಿಲ್‌ಶಾಹನ ಆಸ್ಥಾನದಲ್ಲಿ ಹಿಂದೂಗಳೇ ಪ್ರಭಾವಿ ಅಧಿಕಾರಿಗಳಾದ್ದರು. ಸಹಜವೆಂಬಂತೆ ಬ್ರಾಹ್ಮಣ ವಿದ್ವಾಂಸರಿಗೂ ಆದರಣೀಯವಾದ ಸ್ಥಾನವಿತ್ತು. ಕೊನೇರಿರಾಯರು ವಿಜಯಪುರಕ್ಕೆ ಬಂದು ಕೆಲ ತಿಂಗಳಲ್ಲಿ ಸ್ನೇಹಪರವಾದ ನಡತೆಯಿಂದ ಸುತ್ತಮುತ್ತಲಿನ ಜನರೊಂದಿಗೆ ಆಪ್ತರಾಗಿ ಬೆಳೆದುಕೊಂಡರು. ಕುಟುಂಬ ನಿರ್ವಹಣೆ ಸರಾಗವಾಗಿ ಮುನ್ನಡೆಯಿತು. ತಮ್ಮಿಬ್ಬರ ಮಕ್ಕಳಾದ, ವೆಂಕಟೇಶ ಮತ್ತು ಗುರುರಾಯ ಇಬ್ಬರಿಗೂ ಒಳ್ಳೆಯ ವಿದ್ಯಾಭ್ಯಾಸ ಕಲ್ಪಿಸಿದರು.

ಹಿರಿಯ ಮಗನಾದ ವೆಂಕಟೇಶನು ತಮ್ಮ ಮೂಲವೃತ್ತಿ ವೆಂಕಟೇಶ್ವರ ದೇವರ ಪೂಜೆ ನಿರ್ವಹಿಸಿಕೊಂಡು ಹೋಗಲು ಐಗಳಿ ಗ್ರಾಮಕ್ಕೆ ಬಂದು ನೆಲೆಸಿದನು. ಕಿರಿಯ ಮಗ ಮಹಿಪತಿ ರಾಯನು ತನ್ನ ತಂದೆ ತಾಯಿಯ ಜೊತೆ ವಿಜಯಪುರದಲ್ಲಿ ಉಳಿಯುತ್ತಾರೆ. ಮುಂದೆ ಮಹಿಪತಿರಾಯರಿಗೆ ಕಲ್ಬುರ್ಗಿಯ ದೇಶಮುಖ ಮನೆತನದ ತಿಮ್ಮವ್ವರೊಂದಿಗೆ ವಿವಾಹವಾಗುತ್ತದೆ.

ಮಹಿಪತಿರಾಯರಿಗೆ ರಾಮಾಯಣ, ಮಹಾಭಾರತ, ಭಾಗವತ ಪುರಾಣಗಳ ಅಧ್ಯಯನದ ಜೊತೆಗೆ ಸಾಹಿತ್ಯ ನಿರ್ಮಾಣದಲ್ಲಿಯು ಆಸಕ್ತಿ ಬೆಳೆಯುತ್ತದೆ. ಕೊನೇರಿರಾಯನ ಹಾಗೆ ಮಗನೂ ಸಹ ಪುರಾಣ, ಹರಿಕಥೆ ಹೇಳುವುದರಲ್ಲಿ ಸಿದ್ಧಹಸ್ತನಾಗುತ್ತಾನೆ.

ಕೇವಲ ಪುರಾಣ-ಪ್ರವಚನದಿಂದ ಉಪಜೀವನ ನಡೆಸುವುದು ಕಷ್ಟಕರವಾದುದನ್ನು ಅರಿತು ಮಹಿಪತಿರಾಯರು ಲೌಕಿಕ ಬದುಕಿನ ಕರ್ತವ್ಯಕ್ಕೆ ಬೇಕಾದ ಓದು, ಬರೆಹ ಕಲಿತುಕೊಳ್ಳುತ್ತಾರೆ. ಕನ್ನಡ, ಸಂಸ್ಕೃತ, ಪರ್ಶಿಯನ್, ಅರೇಬಿಕ್, ಮುಂತಾದ ಭಾಷೆಯಲ್ಲಿ ನುರಿತವರಾಗಿದ್ದರು. ಲೆಕ್ಕಪತ್ರ ವ್ಯವಹಾರದ ಜ್ಞಾನ ಹೆಚ್ಚುತ್ತಾ ಹೋಗುತ್ತದೆ. ಆಳರಸರ ಆಸ್ಥಾನದಲ್ಲಿ ನೌಕರಿಗೆ ಸೇರಬೇಕೆಂಬ ಇಚ್ಛೆ ಬಲವಾಗಿ ಆಗುತ್ತದೆ. ತಮ್ಮ ಪರಿಚಿತರ ಮುಖಾಂತರ ಖವಾಸ್ಕಾನ್ ಎಂಬ ಆದಿಲ್‌ಶಾಹಿ ಸರದಾರನ ಹತ್ತಿರ ಕರಣಿಕ ವೃತ್ತಿಗೆ ಸೇರುತ್ತಾರೆ. ಅಂದಿನ ದಿನಗಳಲ್ಲಿ ಖವಾಸ್ಕಾನ್‌ನ ಆಡಳಿತ ಪ್ರಭಾವ ರಾಜ್ಯದ ತುಂಬಾ ಬೀರುತ್ತದೆ. ಆ ಸಮಯದಲ್ಲಿ ಆದಿಲ್‌ಶಾಹಿ ರಾಜ ಮಹ್ಮದ್ ಆದಿಲ್‌ಶಾಹಿ ಕೊನೆಯುಸಿರೆಳೆಯುತ್ತಾನೆ. ನಂತರ ಆತನ ಎರಡನೆಯ ಮಗ ಅಲಿ ಆದಿಲ್‌ಶಾಹನು ರಾಜ್ಯದ ಆಡಳಿತದ ಚುಕ್ಕಾಣಿಯನ್ನು ಹಿಡಿಯುತ್ತಾನೆ.

ಮಹಿಪತಿರಾಯರು ತನ್ನ ವೃದ್ಧ ತಂದೆ-ತಾಯಿ ಉಪಚಾರದ ಜೊತೆಗೆ ತನ್ನ ಮಾಲೀಕನಾದ ಖವಾಸ್ಕಾನನ ಪ್ರೀತಿಯನ್ನು ಗೆಲ್ಲುತ್ತಾರೆ. ಕೆಲ ದಿನಗಳಲ್ಲಿ ಖವಾಸ್ಕಾನನ ಆಪ್ತಸಹಾಯಕರಲ್ಲಿ ಇವರೂ ಒಬ್ಬರಾಗುತ್ತಾರೆ. ಮಹಿಪತಿರಾಯರು ಬಾಲ್ಯದಿಂದಲೂ ಅಧ್ಯಾತ್ಮದ ಕಡೆಗೆ ಹೆಚ್ಚಿನ ಒಲವು ನೀಡುತ್ತಿದ್ದರು. ತಮ್ಮ ಮನೆತನದ ಸಂಪ್ರದಾಯದಂತೆ ಪಾರಾಯಣ, ಜಪತಪ, ಪೂಜೆ, ಇವೆಲ್ಲ ಕಾರ್ಯವನ್ನು ನಿಯಮಿತವಾಗಿ ಮಾಡುತ್ತಿದ್ದರು. ಹೀಗೆ ಮಹಿಪತಿರಾಯರ ಬದುಕಿನ ಬಂಡಿ ಮುಂದುವರಿಯುತ್ತದೆ. ಮನೆಯಲ್ಲಿ ಹೆಂಡತಿ ತಿಮ್ಮವ್ವಳಿಗೆ ಮಕ್ಕಳಿಲ್ಲದ ಚಿಂತೆ ಕಾಡತೊಡಗುತ್ತದೆ. ಮಕ್ಕಳನ್ನು ಪಡೆಯುವ ಹಂಬಲ ಹೆಚ್ಚಾಗುತ್ತದೆ. ಬಿಡುವಿಲ್ಲದ ಕಾರ್ಯದ ನಡುವೆ ಮಹಿಪತಿರಾಯರಿಗೆ ತನ್ನ ಹೆಂಡತಿಯ ಅಭಿಲಾಷೆಯನ್ನು ಪೂರೈಸಲು ಅಷ್ಟಾಗಿ ಆಗದೆ ಹೋಗುತ್ತದೆ. ಆದರೆ ತಿಮ್ಮವ್ವಳ ದೇವರ ಮೇಲಿನ ಶ್ರದ್ಧೆ-ಭಕ್ತಿ ಎಂಬಂತೆ ಮಹಿಪತಿರಾಯರ ಅಂತಸ್ತು, ಐಶ್ವರ್ಯ ಹೆಚ್ಚುತ್ತಾ ಹೋಗುತ್ತದೆ.

"ಒಂದು ದಿನ ಮಹಿಪತಿರಾಯರು ಕೆಲಸಕ್ಕೆ ಬಂದಾಗ ಯಜಮಾನ ಖವಾಸ್ಕಾನನ ಮುಖವು ಕಳೆಗುಂದಿತ್ತು. ಅನ್ಯಮನಸ್ಕನಾಗಿದ್ದುದನ್ನು ಕಂಡರು. ಆ ಹೊತ್ತಿಗೆ ಯಜಮಾನನೊಂದಿಗೆ ಕಾರಣ ಕೇಳುವ ಸಲುಗೆಯು ಬೆಳೆದಿತ್ತು. ಬಾದಶಹನಿಗೂ ಖವಾಸ್ಕಾನನಿಗೂ ಲೆಕ್ಕಪತ್ರದ ವಿಷಯದಲ್ಲಿ ತಕರಾರು ಬಂದಿತ್ತು. ಬಾದಶಹನಿಗೆ ತೃಪ್ತಿಯಾಗುವಂತೆ ವಿಷಯವನ್ನು ತಿಳಿಸಿ ಹೇಳುವುದರಲ್ಲಿ, ಖವಾಸ್ಕಾನನನ್ನು ಸಫಲನಾಗಲಿಲ್ಲ. ಆದ್ದರಿಂದಾಗಿ ಬಾದಶಹನಿಗೆ ಖವಾಸ್ಕಾನನ ಬಗ್ಗೆ ಸಂಶಯ ಬಂದಿತ್ತು. ಭ್ರಷ್ಟತೆಯ ಬೀಜ ಬಿತ್ತಿತ್ತು. ಮನಸ್ಸು ಕೆಟ್ಟಿತ್ತು. ಆದ್ದರಿಂದ ಕೆಲಸವನ್ನು ಕಳೆದುಕೊಳ್ಳುವುದಷ್ಟೆ ಅಲ್ಲ ತಲೆದಂಡ ಕೊಡುವ ಪ್ರಸಂಗ ಎದುರಾಗಿತ್ತು."[೨] ಆ ಸಮಯದಲ್ಲಿ ಮಹಿಪತಿರಾಯರನ್ನು ನೋಡಿ ಖವಾಸ್ಕಾನನು ಈ ವಿಷಯ ಕುರಿತು ಸವಿವರವಾಗಿ ಹೇಳಿ

ಬಾದಶಹಾನ ಒಲುಮೆಯನ್ನು ಗಳಿಸಿಕೊಳ್ಳಲು ಬಿನ್ನಯಿಸಿಕೊಳ್ಳುತ್ತಾನೆ. ಮಾಲಕನ ದಯನೀಯ ಸ್ಥಿತಿಯನ್ನರಿತ ಮಹಿಪತಿರಾಯರು ಬಾದಶಹನನ್ನು ಕಂಡು ಲೆಕ್ಕಪತ್ರ ವ್ಯವಹಾರದ ವಿಷಯವನ್ನು ಸ್ವವಿವರವಾಗಿ ರಾಜನಿಗೆ ಹೇಳಿ ಸಂಶಯನ್ನು ದೂರ ಮಾಡುತ್ತಾನೆ. ಮಹಿಪತಿರಾಯರ ಲೆಕ್ಕಪತ್ರ ವಿವರಣೆಯಿಂದ ಬಾದಶಹನಿಗೆ ತೃಪ್ತಿಯಾಗುತ್ತದೆ. ಬಾದಶಹನಿಗೆ ಇವರ ವ್ಯಕ್ತಿತ್ವ ಆಕರ್ಷಣೆಯಾಗುತ್ತದೆ. ಹೀಗೆ ಖವಾಸ್ಖಾನನಿಗೆ ಬಂದ ಆಪತ್ತನ್ನು ಮಹಿಪತಿರಾಯರು ದೂರು ಮಾಡುತ್ತಾರೆ. ಇದರಿಂದ ಸಂತೃಪ್ತನಾದ ಖವಾಸ್ಖಾನನು ಮಹಿಪತಿರಾಯರ ವೇತನವನ್ನು ಹೆಚ್ಚಿಸುತ್ತಾನೆ.

ಮುಂದೆ ಖವಾಸ್ಖಾನನು ಬಾದಹಹನ ಅರಮನೆಗೆ ಹೋದಾಗ ರಾಜನು ಮಹಿಪತಿರಾಯರ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸುತ್ತಾರೆ. ಖವಾಸ್ಖಾನನಿಗೆ ಬಾದಶಹನು ಮಹಿಪತಿರಾಯರನ್ನು ಕುರಿತು ಅದೊಂದು ರತ್ನವಿದೆ. ಆ ರತ್ನ ಅರಮನೆಯಲ್ಲಿ ಶೋಭಿಸಬೇಕಾಗಿದೆ. ಅವರನ್ನು ಅರಮನೆಗೆ ಕರೆಯಿಸಿಕೊಳ್ಳಲು ತಿಳಿಸುತ್ತಾನೆ. ಖವಾಸ್ಖಾನನು ಸಂತೋಷಗೊಂಡು ಮಹಿಪತಿರಾಯನಿಗೆ ಈ ವಿಷಯವನ್ನು ತಿಳಿಸಿ, ಅರಮನೆಗೆ ಕರೆದುಕೊಂಡು ಹೋಗುತ್ತಾನೆ. "ಆಂದಿನಿಂದ ಗುರುರಾಯರ ಸೇವೆ ರಾಜ್ಯದರ್ಬಾರ ಪ್ರಾರಂಭವಾಯಿತು. ಬಾದಶಹನು ಅವರನ್ನು ಅಖತ್ಯಾರ" ಎಂದು ನೇಮಿಸಿದನು. ಅಖತ್ಯಾರ ಎಂದರೆ ಮುಖ್ಯಸ್ಥ ಎಂದರ್ಥ. ರಾಜಹಸ್ತದಿಂದ ವಸ್ತ್ರಾಲಂಕಾರ ಸನ್ಮಾನಿತರಾಗಿ ಅಂದಿನಿಂದ ಕರಣಿಕ ಗುರುರಾಯರು ಅಖತ್ಯಾರ ಗುರುರಾವ್ ಆದರು. ಅವರನ್ನು ಖಜಾನೆಯ ಮುಖ್ಯಸ್ಥರನ್ನಾಗಿ ಮಾಡಿದರು. ಅವರು ಕೋಶಾಧಿಕಾರಿಗಳಾಗಿ ತಮ್ಮ ಕಾರ್ಯವನ್ನು ಪ್ರಾರಂಭಿಸಿದರು. ಅವರ ಸತ್ಯಧರ್ಮದ ನಡತೆಯಿಂದ ಕೆಲವು ದಿನಗಳಲ್ಲಿ ಗುರುರಾಯರು ಬಾದಶಹನ ಅತಿ ಪ್ರೀತಿಗೆ ಪಾತ್ರರಾದರು."[೩] ಹೀಗೆ ಮಹಿಪತಿರಾಯರ ಜೀವನ ಲೌಕಿಕ ಸುಖ ಭೋಗದ ಪಥವಾಗಿ ಮುಂದುವರೆಯುತ್ತದೆ. ಮುಂದೆ ಮಹಿಪತಿರಾಯರಿಗೆ ಸೂಫಿ ಫಕೀರನಿಂದ ಅಧ್ಯಾತ್ಮದ ಹಂಬಲ ಹೆಚ್ಚುತ್ತದೆ. ಆ ಘಟನೆಯು ಮಹಿಪತಿರಾಯರ ಜೀವನ ಅಧ್ಯಾತ್ಮದ ತಿರುವಿಗೆ ಮಹತ್ವದಾಗಿದೆ.

ಮಹಿಪತಿರಾಯರು ಎಂದಿನಂತೆ ರಾಜ್ಯ ದರ್ಬಾರಕ್ಕೆ ಬರುತ್ತಿರುವಾಗ, ದಾರಿಯಲ್ಲಿ ಒಬ್ಬ ಬೆತ್ತಲೆ ಫಕೀರ ಕರೆಯುತ್ತಾನೆ. ಆ ಫಕೀರನ ಹೆಸರು ನಂಗಾಶಾಹಾ. ಆತ ಸೂಫಿಪಂಥದ ಫಕೀರ. ಬೆತ್ತಲೆಯಾಗಿ ತಿರುಗುತ್ತಿರುವುದರಿಂದ ಆತನನ್ನು ಬೆತ್ತಲೆ ಫಕೀರನೆಂದು ಕರೆಯುತ್ತಿದ್ದರು. ಮಹಿಪತಿರಾಯರನ್ನು ಕರೆದು ಕುಳಿತುಕೊಳ್ಳಲು ಹೇಳುತ್ತಾರೆ. ಇದರಿಂದ ರಾಯರಿಗೆ ಉಭಯ ಸಂಕಷ್ಟವುಂಟಾಗುತ್ತದೆ. ಒಂದು ವೇಳೆ ಆ ಫಕೀರನ ಮಾತು ತಿರಸ್ಕರಿಸಿ ಹೋದರೆ ಏನಾದರೂ ಆಡಿದರೆ ತಪ್ಪಾದೀತು ಎಂಬ ಭಯ ರಾಯರಿಗೆ ಕಾಡುತ್ತಿತ್ತು. ಆಗ ಫಕೀರ ಬಾರಯ್ಯ ಅಷ್ಟೇಕೆ ಚಿಂತೆ ಮಾಡ್ತೀಯಾ ಎಂದು ಮಹಿಪತಿರಾಯರನ್ನು ತೀಕ್ಷ್ಣವಾಗಿ ದಿಟ್ಟಿಸಿ ನೋಡುತ್ತಾನೆ. ಆ ನಂತರ ರಾಯರ ಬೆರಳಲ್ಲಿದ್ದ ರಾಜಮೊಹರಿನ ಉಂಗುರವನ್ನು ಕಿತ್ತುಕೊಳ್ಳುತ್ತಾನೆ. ತದನಂತರ ಇದು ವಿಷಯ ಸ್ತೋತ್ರ ಎನ್ನುತ್ತ ಆ ಫಕೀರ ಕಂದಕಕ್ಕೆ ಆ ಉಂಗುರವನ್ನು ಎಸೆಯುತ್ತಾನೆ.

ಇದರಿಂದ ಕಸಿವಿಸಿಗೊಂಡ ರಾಯರು ಫಕೀರನನ್ನು ನೋಡುತ್ತ ಈ ಉಂಗುರವಿಲ್ಲದೆ ರಾಜ್ಯದರ್ಬಾರ ನಡೆಯುವುದು ಹೇಗೆ ಎಂಬ ದುಗುಡದಲ್ಲಿದ್ದುಬಿಡುತ್ತಾರೆ.

ಫಕೀರ ಮಹಿಪತಿರಾಯರ ಸ್ಥಿತಿ ಕಂಡು ನಗುತ್ತ ಆ ಉಂಗುರದ ಮೇಲೆ ಇನ್ನು ನಿನಗೆ ಮೋಹವೇ ಎಂದು ಕೇಳುತ್ತಾನೆ. ಮತ್ತೆ ಆ ಕಂದಕದಲ್ಲಿ ಜಿಗಿದು ತನ್ನ ಮುಷ್ಟಿಯಲ್ಲಿ ಅನೇಕ ಉಂಗುರಗಳನ್ನು ತಂದು ರಾಯರ ಎದುರಿಗೆ ಇಡುತ್ತಾನೆ. ನಿನ್ನ ನಿಜವಾದ ಉಂಗುರವನ್ನು ಆಯ್ದುಕೊಳ್ಳು ಎಂದು ಮಹಿಪತಿರಾಯರಿಗೆ ತಿಳಿಸುತ್ತಾನೆ. ಆದರೆ ಎಲ್ಲಾ ಉಂಗುರಗಳು ಒಂದೇ ರೀತಿಯಾಗಿರುವುದರಿಂದ ಮಹಿಪತಿರಾಯರಿಗೆ ಗುರುತಿಸುವುದು ಕಠಿಣವಾಗುತ್ತದೆ. ಈ ಘಟನೆಯಿಂದ ರಾಯರ ಅಜ್ಞಾನವು ಅಳಿದು ಹೋಗಿ ಸುಜ್ಞಾನದ ಮೊಳಕೆ ಒಡೆಯುತ್ತದೆ. ಮುಂದೆ ಫಕೀರನಿಗೆ ನಮಸ್ಕರಿಸಲು ಹೋದಾಗ ಫಕೀರ ಈ ರೀತಿ ಹೇಳುತ್ತಾನೆ.

"ಛೇ ನನ್ನ ಕಾಲ ಹಿಡಿಯಬೇಡ. ನಾನು ಯವನು, ನೀನು ಶುದ್ಧ ಬ್ರಾಹ್ಮಣ. ನಿನ್ನಿಂದಲೇ ನನಗೆ ನಮಸ್ಕಾರ ಮಾಡಿಸಿಕೊಳ್ಳುವುದು ಯೋಗ್ಯವಲ್ಲ. ನಿನ್ನ ಮನದ ಬಾಗಿಲು ತೆರೆದಿದೆ. ನಿನಗೊಬ್ಬ ಯೋಗ್ಯ ಗುರುವಿನ ಅವಶ್ಯಕತೆ ಇದೆ, ಸಾರವಾಡಕ್ಕೆ ಹೋಗು. ಅಲ್ಲಿ ಭಾಸ್ಕರಸ್ವಾಮಿಗಳು ಇದ್ದಾರೆ. ಅವರು ನಿನಗೆ ಯೋಗ್ಯ ಗುರುವೆಂದು ಹೇಳಿದನು."[೪] ಮುಂದೆ ಆ ಫಕೀರನಿಂದ ನಿಜವಾದ ಉಂಗುರವನ್ನು ಪಡೆದು ಮನೆಗೆ ಮರಳುತ್ತಾರೆ. ಮನೆಗೆ ಮರಳಿದಾಗ ಹೆಂಡತಿ ತಿಮ್ಮವ್ವ ಮನೆಯಲ್ಲಿರುವಗದಿಲ್ಲ. ರಾಯರು ಮನೆಗೆ ಬಂದಿರುವುದನ್ನು ಅನಂತರ ಗಮನಿಸಿದ ತಿಮ್ಮವ್ವ ಗಾಬರಿಯಾಗುತ್ತಾಳೆ. ಆದರೆ ರಾಯರು ರಾಜದರ್ಬಾರಕ್ಕೆ ಹೋಗದೆ ಅಂದು ನಡೆದ ಘಟನೆಯನ್ನು ತಿಮ್ಮವ್ವಳಿಗೆ ಹೇಳುತ್ತಾರೆ. ಇದರಿಂದ ಒಂದು ಕ್ಷಣ ತಿಮ್ಮವ್ವ ಸಂತೋಷಗೊಂಡು ಕೆಲವು ಹೊತ್ತು ಸುಮ್ಮನೆ ನಿಂತುಬಿಡುತ್ತಾಳೆ. ಆದರೆ ತಿಮ್ಮವ್ವ ಸಾರವಾಡ ಭಾಸ್ಕರಸ್ವಾಮಿಯ ಹತ್ತಿರ ಆರು ತಿಂಗಳಿಂದ ಹೋಗಿ ಬರುತ್ತಿದ್ದಳು. ಮಕ್ಕಳಿಗೋಸ್ಕರ ಹರಕೆಯ ಹೊತ್ತು ಭಾಸ್ಕರ ಸ್ವಾಮಿಗಳಿಂದ ಆಶೀರ್ವಾದ ಪಡೆದುಕೊಂಡಿರುತ್ತಾಳೆ. ಅದೇ ದಿನವೇ ಭಾಸ್ಕರ ಸ್ವಾಮಿಗಳ ದರ್ಶನ ತಿಮ್ಮವ್ವಳಿಗಾಗುತ್ತದೆ. ಆಗ ಭಾಸ್ಕರಸ್ವಾಮಿಗಳು ಸತಿಪತಿಗಳು ಒಂದಾಗಿ ಬನ್ನಿ ಎಂಬ ಮಾತನ್ನು ಹೇಳುತ್ತಾರೆ. ಹೀಗೆ ಮರುದಿನ ಹೇಗಾದರೂ ಮಾಡಿ ಮಹಿಪತಿರಾಯರನ್ನು ಒಪ್ಪಿಸಿ ಕರೆದುಕೊಂಡು ಹೋಗಬೇಕೆಂಬ ಆಸೆಯಿಂದ, ಮರಳಿ ಮನೆಗೆ ಬಂದಾಗ ತಿಮ್ಮವ್ವಳಿಗೂ ಆ ದಿನ ನಡೆದ ಘಟನೆ ಅರಿವಾಗುತ್ತದೆ.

ಮರುದಿನ ಭಾಸ್ಕರಸ್ವಾಮಿಗಳ ದರ್ಶನವನ್ನು ಪಡೆಯುತ್ತಾರೆ. ಕೆಲವು ದಿನ ಆ ಸ್ವಾಮಿಗಳ ಮಠದಲ್ಲಿಯೇ ವಾಸ್ತವ್ಯಮಾಡಿ ತಮ್ಮ ಭವಬಾಧೆಯನ್ನು ತೊಳೆದುಕೊಳ್ಳಲು ಗುರುವಿನ ಅನುಗ್ರಹಕ್ಕೆ ಹಾತೊರೆಯುತ್ತಾರೆ. ಗುರುಗಳಿಂದ ಆಶೀರ್ವಾದವನ್ನು ಪಡೆಯುತ್ತಾರೆ. ತನ್ನ ದೊರೆ ಬಾದಶಹನ ಸೇವೆಯನ್ನು ತ್ಯಜಿಸಿ ತನ್ನೆಲ್ಲ ಸಂಪತ್ತನ್ನು ದಾನ ಮಾಡಿ, ಸಾರವಾಡ ಗ್ರಾಮದಲ್ಲಿ ಯೋಗ ನಿರತರಾಗಿ ಬಿಡುತ್ತಾರೆ. ಎಷ್ಟೋ ವರ್ಷಗಳವರೆಗೆ ಮುಗಿಯದ ಯೋಗ ಸಾಧನೆಯನ್ನು ಕೆಲವೇ ತಿಂಗಳಲ್ಲಿ ಮುಗಿಸಿ, ಸಿದ್ಧಿಯನ್ನು ಪಡೆದುಕೊಳ್ಳುತ್ತಾರೆ. ಶಿಷ್ಯನ ದಿವ್ಯಜ್ಞಾನ ಸಿದ್ಧಿಯನ್ನರಿತ

ಗುರುಭಾಸ್ಕರಸ್ವಾಮಿಗಳು ಮಹಿಪತಿರಾಯರಿಗೆ ತಮ್ಮಿಂದ ಜಗದೋದ್ಧಾರದ ಕಾರ್ಯವಾಗಬೇಕಾಗಿದೆ. ಹಾಗಾಗಿ ಸಾರವಾಡ ಗ್ರಾಮದಿಂದ ಹೋಗಲು ಅನುಮತಿ ನೀಡುತ್ತಾರೆ.

ಭಾಸ್ಕರಸ್ವಾಮಿಗಳ ಅನುಗ್ರಹದಿಂದ ಮಹಿಪತಿರಾಯರು ಮತ್ತೆ ವಿಜಯಪುರಕ್ಕೆ ಬಂದು ನೆಲೆಸುತ್ತಾರೆ. ಕೆಲ ತಿಂಗಳು ಕಳೆದ ಮೇಲೆ ಪುತ್ರಸಂತಾನವಾಗುತ್ತದೆ. ಮಹಿಪತಿರಾಯರ ಹೆಂಡತಿ ತಿಮ್ಮವ್ವ ಅವಳಿ ಮಕ್ಕಳಿಗೆ ಜನ್ಮ ನೀಡುತ್ತಾಳೆ. ಒಬ್ಬನಿಗೆ ದೇವರಾಯನೆಂದು ಇನ್ನೊಬ್ಬನಿಗೆ ಕೃಷ್ಣರಾಯವೆಂದು ಹೆಸರಿಡುತ್ತಾರೆ. ಮುಂದೆ ''ವಿಜಯಪುರದಲ್ಲಿ ರಾಜಕೀಯ ಅಸ್ಥಿರತೆ ಸಂಭವಿಸುವವರೆಗೂ ಮಹಿಪತಿರಾಯರು ನಗರದಲ್ಲಿಯೇ ಉಳಿದಿರಬೇಕು. ತಮ್ಮ ಸಾಧನೆಯಲ್ಲಿ ನಿರತರಾಗಿದ್ದರಿಂದ ರಾಜಕಾರಣದ ಸಂಬಂಧವನ್ನು ಅವರು ಆ ಮೊದಲೇ ಕಳಚಿಕೊಂಡಿದ್ದರು. ಜಾತಿ, ಮತ, ಪಂಥಗಳ ಭೇದವಿಲ್ಲದೆ ಪರಮಾತ್ಮನ ಕುರಿತು ಚಿಂತಿಸುವವರೆಲ್ಲ ಒಂದೇ ಜಾತಿಯವರು. ಮನುಷ್ಯಕುಲ ಒಂದು ಎಂಬ ಭಾವನೆಯಿಂದ ಅವರು ಎಲ್ಲರೊಡನೆ ಹೊಂದಿಕೊಂಡಿದ್ದರು.''[೫]

ಮಹಿಪತಿರಾಯರು ಹೀಗೆ ಅಧ್ಯಾತ್ಮದ ಸಾಧನೆಯ ಬೆನ್ನು ಹತ್ತಿದವರು. ಇವರ ಜೊತೆಗೆ ಅನೇಕ ಧರ್ಮದ ಮುಖಂಡರು ಬಂದು ಚರ್ಚಿಸುತ್ತಿದ್ದರು. ಅನೇಕ ಭಾಷೆಯನ್ನು ಬಲ್ಲಿದ್ದರಿಂದ ಹಲವು ಧರ್ಮದ ಗ್ರಂಥಗಳನ್ನು ಅಭ್ಯಸಿಸಿದ್ದರು. ಅಧ್ಯಾತ್ಮದ ಉತ್ತುಂಗಕ್ಕೆ ಏರಬಯಸಿದ್ದರು. ''ಕ್ರಿ.ಶ. ಸುಮಾರು ೧೬೮೬ರಲ್ಲಿ ಔರಂಗಜೇಬನು ವಿಜಯಪುರವನ್ನು ವಶಪಡಿಸಿಕೊಂಡು ದೆಹಲಿಯ ಮೊಗಲಂ ರಾಜ್ಯಕ್ಕೆ ಸೇರಿಸಿದನು. ಅದರ ಬೆನ್ನು ಹಿಂದೆಯೇ ಬಂದ ಮೂರು ವರ್ಷಗಳ ಬರಗಾಲ, ಪ್ಲೇಗ್ ಬೇನೆಗಳಿಂದ ನಗರವು ತತ್ತರಿಸಿತ್ತು. ಆ ದಿನಗಳಲ್ಲಿ ಮಹಿಪತಿರಾಯರು ಕಲ್ಬುರ್ಗಿ ಜಿಲ್ಲೆಯ ಶಹಾಪೂರಕ್ಕೆ ಹೋಗಿ ನೆಲೆಸಿದರು. ಮೂರು ವರ್ಷಗಳ ನಂತರ ಅವರು ತಿರುಗಿ ವಿಜಯಪುರಕ್ಕೆ ಬಂದಾಗ, ಕಾಖಂಡಕಿ ಗ್ರಾಮದ ಜನರು ತಮ್ಮ ಊರಲ್ಲಿರಲು ಆಮಂತ್ರಣ ನೀಡಿದರು. ಗ್ರಾಮದ ಪಟೇಲರು ಊರ ಮುಂದಿನ ತಮ್ಮ ತೋಟವನ್ನು ಕೊಟ್ಟರು. ಅಲ್ಲಿಯೇ ಉಳಿದು ಶಮಿವೃಕ್ಷದ ಅಡಿ ಭಾಗವನ್ನು ತಮ್ಮ ಅನುಷ್ಠಾನಕ್ಕಾಗಿ ಗೊತ್ತುಪಡಿಸಿ ದಿನದ ಬಹುಭಾಗವನ್ನು ಅಲ್ಲಿಯೇ ಕಳೆಯಹತ್ತಿದ್ದರು.''[೬]

ಹೀಗೆ ಮಹಿಪತಿರಾಯರು ವಿಜಯಪುರ, ಸಾರವಾಡ ಅನಂತರ ಕಾಖಂಡಕಿ ಗ್ರಾಮಕ್ಕೆ ಬಂದು ತಮ್ಮ ಜೀವನವನ್ನು ಸಾಗಿಸಲು ಪ್ರಾರಂಭಿಸಿದರು. ಮಹಿಪತಿರಾಯರು ತಮ್ಮಿಬ್ಬರು ಮಕ್ಕಳಿಗೆ ಅವರವರ ಅಭಿರುಚಿಗೆ ಅನುಗುಣವಾಗಿ ಅಭ್ಯಾಸ ಮಾಡಿಸಿದರು. ಸದಾ ಸಾಧನೆಯ ಜಪವನ್ನು ಹಿಡಿದು ಯೋಗ ಸಾಧನೆಯಲ್ಲಿ ಆಮೂಲಾಗ್ರ ಅಧ್ಯಾತ್ಮ ಸಂಗ್ರಹವನ್ನು ಮಾಡಿಕೊಂಡರು. ಇವರ ಸಿದ್ಧಿ ಸಾಧನೆಯಿಂದಾಗಿ ಮಹಿಪತಿ ಸಂಸ್ಥಾನವಾಗಿ ಇವರ ಸಾಧನೆಯು ಹಬ್ಬಿತು. ಹಲವು ಗ್ರಾಮದ ಜನರು ತಮ್ಮ ಭೂಮಿಯನ್ನು ಈ ಸಂಸ್ಥಾನಕ್ಕೆ ದಾನವಾಗಿ ನೀಡಿದರು. ಹೀಗೆ ಸರಿಸುಮಾರು ಅರವತ್ತೈದು ವರ್ಷಗಳ ಅಖಂಡ ಬಾಳ್ವೆಯನ್ನು ಪೂರೈಯಿಸಿ ಕೊನೆಗೆ ಮಹಿಪತಿರಾಯರು ''ಕೊಲ್ಹಾರದ ಕೃಷ್ಣೆಯ ದಡದಲ್ಲಿ ಕಾರ್ತಿಕ ಮಾಸದ ಅಮಾವಾಸ್ಯೆಯೆಂದು ದೇಹತ್ಯಾಗ ಮಾಡಿದರು. ಅವರ ಇಚ್ಛೆಯಂತೆ ಕಾಖಂಡಕಿಯಲ್ಲಿ ಅವರ ಸ್ಮರಣಾರ್ಥವಾಗಿ

ಬೃಂದಾವನವನ್ನು ನಿರ್ಮಿಸಲಾಯಿತು. ಅವರ ದೇಹ ಬಿಟ್ಟ ಕೃಷ್ಣೆಯ ದಡದಲ್ಲೂ ಒಂದು ಬೃಂದಾವನ ಇದೆ."[೨] ಹೀಗೆ ಕೃಷ್ಣದಾಸರ ಮನೆತನವೂ ಅಧ್ಯಾತ್ಮದ ಬಂಧನದಲ್ಲಿ ದೇವರ ಪೂಜೆ, ಪುನಸ್ಕಾರ, ಧ್ಯಾನ ಜಪ, ತಪ ಮುಂತಾದವುಗಳ ಜೊತೆಗೆ ಜನರಿಗೆ ಧಾರ್ಮಿಕತೆಯ ಬೋಧೆಯನ್ನು ತಿಳಿಸುವುದರ ಜೊತೆಗೆ ದಾಸಸಾಹಿತ್ಯ ಪರಂಪರೆಯನ್ನು ಮುಂದುವರಿಸಿಕೊಂಡು ಬಂದ ಹೆಗ್ಗಳಿಕೆಯ ಮನೆತನವಾಗಿದೆ.

ಕೃಷ್ಣದಾಸರ ಜೀವನವೃತ್ತಾಂತ

ಹರಿದಾಸ ಸಾಹಿತ್ಯದ ಶ್ರೇಷ್ಠ ಅನುಭಾವಿ ಕವಿಗಳು ಹಾಗೂ ಅಪರೋಕ್ಷ ಜ್ಞಾನಿಗಳಾದ ಕೃಷ್ಣದಾಸರು, ತಮ್ಮ ತಂದೆ ಮತ್ತು ಗುರುವಾದ ಮಹಿಪತಿದಾಸರಿಂದ ದೀಕ್ಷೆಯನ್ನು ಪಡೆದವರು. ಕೃಷ್ಣದಾಸರು "ಕ್ರಿ.ಶ. ಸುಮಾರು ೧೬೭೩ರಿಂದ ೧೭೫೯"[೮]ರ ಕಾಲಾವಧಿಯಲ್ಲಿ ಬಾಳಿ ಬದುಕಿದವರು. ಕೃಷ್ಣದಾಸರ ಕಾಲದ ಕುರಿತು ಖಚಿತವಾಗಿ ಇಲ್ಲಿಯವರೆಗೆ ಯಾವ ದಾಖಲೆಗಳು ದೊರೆಯುವುದಿಲ್ಲ. ಮಹಿಪತಿದಾಸರ ಕುರಿತು ಕೆಲವು ಚಾರಿತ್ರಿಕ ದಾಖಲೆಗಳು ಸಿಗುತ್ತವೆ. ಆದರೆ ಕೃಷ್ಣದಾಸರ ಕುರಿತು ಯಾವುದೇ ಚಾರಿತ್ರಿಕ ದಾಖಲೆಯು ದೊರೆಯುವುದಿಲ್ಲ. ಹಾಗಾಗಿ ಮೌಖಿಕ ಹೇಳಿಕೆಯ ಆಕರ ಸಾಮಗ್ರಿ ಮೂಲಕ ಅವರ ಚಾರಿತ್ರಿಕ ಅಂಶವನ್ನು ಗುರುತಿಸಬೇಕಾಗಿದೆ. ಕೃಷ್ಣದಾಸರನ್ನು ಕುರಿತು ಪಾರಂಪರಿಕವಾಗಿ ಅವರ ಮನೆತನದವರು ಹೇಳಿಕೊಂಡು ಬಂದ ಚರಿತ್ರೆಯಂತೆ, ಕೃಷ್ಣದಾಸರು ಮತ್ತು ದೇವರಾಯ ಈ ಇಬ್ಬರು ಗೋಕುಲಾಷ್ಟಮಿ ದಿನ ಅವಳಿ ಜವಳಿಯಾಗಿ ಜನ್ಮವನ್ನು ಪಡೆದವರು. ಗೋಕುಲಾಷ್ಟಮಿಯಂದು ಜನಿಸಿದ್ದರಿಂದ ಒಬ್ಬನಿಗೆ ಕೃಷ್ಣನೆಂದು ಇನ್ನೊಬ್ಬನಿಗೆ ದೇವನೆಂದು ಹೆಸರಿಟ್ಟಿದ್ದಾರೆ. ಹೀಗೆ ಕೃಷ್ಣದಾಸರ ಜನನ ಮತ್ತು ಕಾಲದ ಕುರಿತು ಪರಂಪರೆಂಯಿಂದ ಕೇಳಿ ಬಂದ ಮಾಹಿತಿ ದೊರೆಯುತ್ತದೆ.

ಇಬ್ಬರು ಮಕ್ಕಳಿಗೆ ಕೆಲವು ದಿನಗಳು ಸಾಗಿದ ನಂತರ ಮಹಿಪತಿರಾಯರು ಚೌಲಕರ್ಮ, ಮುಂಜಿ ಕಾರ್ಯಕ್ರಮಗಳನ್ನು ಮಾಡಿಸುತ್ತಾರೆ. ಸುಖದಿಂದ ಈ ಸಂಸಾರ ಕೂಡಿರುವಾಗ ಕೃಷ್ಣದಾಸರ ತಾಯಿ ತಿಮ್ಮವ್ವ ಆಕಸ್ಮಿಕವಾಗಿ ಸಾವನ್ನಪ್ಪುತ್ತಾಳೆ. ಇದರಿಂದ ಮಹಿಪತಿರಾಯರು ವಿಚಲಿತರಾಗುತ್ತಾರೆ. ಮುಂದೆ ತುಕ್ಕವ್ವನವರು ಎರಡು ಮಕ್ಕಳನ್ನು ಸಾಕುವ ಜವಾಬ್ದಾರಿ ಹೊರುತ್ತಾಳೆ. ಆ ಎರಡು ಮಕ್ಕಳು ದೊಡ್ಡಮ್ಮ ತುಕ್ಕವ್ವನವರ ಪಾಲನೆ ಪೋಷಣೆಯಲ್ಲಿ ಬೆಳೆಯತೊಡಗುತ್ತವೆ. ಆದರೆ ಮಹಿಪತಿರಾಯರು ಸ್ಥಿತಪ್ರಜ್ಞರಾಗಿ, ಜ್ಞಾನಸ್ಥರಾಗಿ ಸಮಯವನ್ನು ಕಳೆಯತೊಡಗುತ್ತಾರೆ. ಈ ಇಬ್ಬರ ಮಕ್ಕಳ ತುಂಟಾಟ ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಹೋಗುತ್ತದೆ. ಜನರಿಂದ ನಿಂದೆ ಅಪವಾದಗಳು ಬರತೊಡಗುತ್ತವೆ. ಇದರಿಂದ ಗಾಬರಿಯಾದ ತುಕ್ಕವ್ವ ಮಹಿಪತಿರಾಯರಿಗೆ ಈ ವಿಷಯವನ್ನು ತಿಳಿಸುತ್ತಾರೆ. ಮರುದಿನ ಇಬ್ಬರನ್ನು ತಮ್ಮ ಬಳಿ ಕರೆದುಕೊಂಡು ಬರಲು ತಿಳಿಸುತ್ತಾರೆ. ಮಹಿಪತಿರಾಯರು ಎರಡು ಮಕ್ಕಳ ತಲೆಯ ಮೇಲೆ ತಮ್ಮ ಹಸ್ತವನ್ನು ಇಡುತ್ತಾರೆ. ಕೂಡಲೇ ಆ ಮಕ್ಕಳಿಬ್ಬರು ರೋಮಾಂಚನಗೊಳ್ಳುತ್ತಾರೆ. ಈ ಲೋಕದ ಪರಿವೆಯೇ ಇಲ್ಲದಾಗಿ ಬ್ರಹ್ಮಾನಂದದ ಅನುಭವವನ್ನು ಪಡೆಯುತ್ತಾರೆ.

ಮಹಿಪತಿರಾಯರು ಹಸ್ತವನ್ನು ತೆಗೆದಾಗ ಇಬ್ಬರು ನಿಜಸ್ಥಿತಿಗೆ ಬರುತ್ತಾರೆ. ತಮ್ಮ ತಂದೆಯ ಹಸ್ತದ ಸ್ಪರ್ಶದಲ್ಲಿ ಎಂಥ ಅಗಾಧ ಶಕ್ತಿಯಿದೆ, ಎಂದು ಅವರು ಊಹಿಸಿಕೊಳ್ಳುತ್ತಾರೆ. ತಂದೆಯ ಪಾದಸ್ಪರ್ಶಕ್ಕೆ ಎರಗಿ ಆಶೀರ್ವಾದ ಪಡೆದುಕೊಳ್ಳುತ್ತಾರೆ. ಮಹಿಪತಿರಾಯರು ಇಬ್ಬರು ಮಕ್ಕಳನ್ನು ಆಶೀರ್ವದಿಸಿ ನೀವೀಗ ದೊಡ್ಡವರಾಗುತ್ತಿದ್ದೀರಿ. ಸಮಯಕ್ಕೆ ಸರಿಯಾಗಿ ಸ್ನಾನ, ಸಂಧ್ಯಾವಂದನೆ ನಿಯಮಿತವಾಗಿ ನಡೆಸಿಕೊಂಡು ಹೋಗಲು ತಿಳಿಸುತ್ತಾರೆ. ಮುಂದೆ ಇಬ್ಬರು ಮಕ್ಕಳು ತುಂಟಾಟದ ಕಡೆಗೆ ಗಮನ ನೀಡದೆ ಅಭ್ಯಾಸ, ಜಪ, ತಪ ಕಡೆಗೆ ತಮ್ಮ ಜ್ಞಾನವನ್ನು ಕೇಂದ್ರೀಕರಿಸಿಕೊಳ್ಳುತ್ತಾರೆ.

ಈ ರೀತಿಯಲ್ಲಿ ಕೆಲವು ದಿನಗಳು ಕಳೆಯಲು ಕಲ್ಬುರ್ಗಿ ದೇಶಮುಖರು ಒಮ್ಮೆ ತಮ್ಮ ಮೊಮ್ಮಕ್ಕಳ ಭೇಟಿಗಾಗಿ ಕಾಖಂಡಕಿಗೆ ಬರುತ್ತಾರೆ. ನಾಲ್ಕು ದಿವಸ ಅಲ್ಲಿದ್ದು ಮರಳಿ ಹೋಗುವಾಗ ತಮ್ಮ ಸಂಗಡ ದೇವರಾಯನನ್ನು ಕರೆದುಕೊಂಡು ಹೋಗುವ ಬಯಕೆಯನ್ನು ಮಹಿಪತಿರಾಯರಿಗೆ ತಿಳಿಸುತ್ತಾರೆ. ಆಗ ಮಹಿಪತಿರಾಯರು ತಮ್ಮ ದಿವ್ಯದೃಷ್ಟಿಯಿಂದ ನೋಡಿ ಮತ್ತು ಗುರು ಭಾಸ್ಕರ ಸ್ವಾಮಿಗಳ ಮಾತನ್ನು ನೆನಪಿಸಿಕೊಂಡು ''ಆಹಾ! ಇವನ ಕಾರ್ಯಕ್ಷೇತ್ರ ಬೇರೆಯಿದೆ. ಇವನ ಭೋಗಜೀವನ ಇನ್ನು ಮುಗಿದಿಲ್ಲ. ಇವನ ಧೈರ್ಯ, ಸಾಹಸಗಳು ಲೋಕದಲ್ಲಿ ಪ್ರಕಟವಾಗಬೇಕಿದೆ. ಎಂದು ಮನಸ್ಸಿನಲ್ಲಿ ವಿಚಾರ ಮಾಡಿ ದೇವರಾಯನನ್ನು ಕಲ್ಬುರ್ಗಿಗೆ ಕರೆದುಕೊಂಡು ಹೋಗಲು ಅಪ್ಪಣೆಯನ್ನು ಕೊಟ್ಟರು.''[೯]

ದೇವರಾಯನ ಆಗಲಿಕೆಯನ್ನು ಕೃಷ್ಣದಾಸರು ಬಹುಬೇಗನೆ ಮರೆಯಲು ಸಾಧ್ಯವಾಗುವುದಿಲ್ಲ. ಮುಂದೆ ದೇವರಾಯ ತಮ್ಮ ಕ್ಷಾತ್ರವೃತ್ತಿಯಿಂದ ಜಾಲವಾದಿಯ ದೇಶಗತಿಯನ್ನು ಸಂಪಾದಿಸುತ್ತಾರೆ. ಇತ್ತ ಕೃಷ್ಣದಾಸರು ತಮ್ಮ ತಂದೆಯ ಮಾರ್ಗದರ್ಶನದಲ್ಲಿ ತಾಳ, ತಾಂಬೂರಿಯನ್ನು ಹಿಡಿದು ಜಪ, ತಪದ ಒಲುಮೆಯನ್ನು ಹೆಚ್ಚಿಸಿಕೊಳ್ಳುತ್ತಾರೆ. ಕೃಷ್ಣದಾಸರಿಗಿದ್ದ ಅಧ್ಯಾತ್ಮದ ಒಲವನ್ನು ಕಂಡ ಮಹಿಪತಿರಾಯರು ಕೃಷ್ಣದಾಸರನ್ನು ಕರೆದು ಕಿವಿಯಲ್ಲಿ ಬೀಜಾಕ್ಷರ ಮಂತ್ರವನ್ನು ಉಪದೇಶಿಸುತ್ತಾರೆ. ಕೃಷ್ಣದಾಸರು ತನ್ನ ಗುರು ಮತ್ತು ತಂದೆಯಾದ ಮಹಿಪತಿರಾಯರ ಆದೇಶದಂತೆ ಶ್ರೀಹರಿಯನ್ನು ಸ್ತೋತ್ರದ ಮೂಲಕ ನೆನೆಯುತ್ತಾ, ಅಧ್ಯಾತ್ಮದ ಆನಂದಸಾಗರವನ್ನು ಅನುಭವಿಸುತ್ತಾರೆ. ತನ್ನ ತಂದೆಯ ಮಹಿಮೆಯನ್ನು ನೆನೆಯುತ್ತ ಒಂದೆಡೆಯಲ್ಲಿ ಹೀಗೆ ಹೇಳುತ್ತಾರೆ.

''ಹುಚ್ಚಾದೇನಣ್ಣಾ | ಮುಚ್ಚುಗೊಂಡು ನಾನು ||

ಕರವಿಟ್ಟ ಸಿರಸದಲಿ | ಅರುಹಿದ ಕಿವಿಯಲ್ಲಿ |
ಮರಳು ಬೀಜಾಕ್ಷರನು ||

ಮನದ ಮತಿಯಾ ಕೆಟ್ಟು | ಜನದ ಲಜ್ಜೆಯಾ ಬಿಟ್ಟು |
ಕುಣಿದು ಕೂಗುವೆ ಹರಿನಾಮವನು''[೧೦]

ಗುರುವಿನ ಅನುಗ್ರಹದ ಭಕ್ತಿಯ ಹುಚ್ಚನ್ನು ತಮ್ಮ ಕೀರ್ತನೆಯಲ್ಲಿ ಕೃಷ್ಣದಾಸರು ಹೇಳಿಕೊಂಡಿದ್ದಾರೆ. ದೇಹ ಮನಸ್ಸುಗಳ ಚಂಚಲತೆಯನ್ನು ಬಿಟ್ಟು ಸದಾ ನವವಿಧ ಭಕ್ತಿ ಶ್ರವಣ, ಕೀರ್ತನೆ, ಮೊದಲಾದವುಗಳ ಕಡೆಗೆ ತಮ್ಮ ಮನಸ್ಸನ್ನು ಬಿಗಿಯಾಗಿ ನಿಲ್ಲಿಸುತ್ತಾರೆ. ಕೃಷ್ಣದಾಸರು ತಮ್ಮ ತಂದೆಯನ್ನು ಗುರುವನ್ನಾಗಿ ಪಡೆದು ಅವರ ಮೇಲಿನ ಗುರುಭಕ್ತಿಯಿಂದ ನೂರಾರು ಕೀರ್ತನೆಗಳನ್ನು ರಚಿಸಿದ್ದಾರೆ. ದಾಸರು ಯೌವನಕ್ಕೆ ಕಾಲಿಟ್ಟಾಗ ಮಹಿಪತಿರಾಯರು ಮಗನ ರಹಸ್ಯಜೀವನವನ್ನು ಅರಿತುಕೊಳ್ಳುತ್ತಾರೆ. ಆತನನ್ನು ಕರೆದು ಬ್ರಹ್ಮಚರ್ಯ ಪಾಲನೆ ಮಾಡಿ ಸಾಧನೆಯನ್ನು ಯಶಸ್ವಿಯಾಗಿ ಪೂರೈಸಿರುವೆ. ನಿನ್ನ ಗೃಹಸ್ಥ ಜೀವನ ಕುರಿತು ವಿಚಾರ ಮಾಡಬೇಕಾಗಿದೆ. ಇದಕ್ಕೆ ಕೃಷ್ಣದಾಸರು ಕೆಲವು ಹೊತ್ತು ಸುಮ್ಮನೆ ಇದ್ದು ತಂದೆಯ ಅನುಗ್ರಹಕ್ಕೆ ಕಾಯುತ್ತಾರೆ. ಕೆಲವು ದಿನಗಳು ಗತಿಸಿದ ನಂತರ ಹೊನವಾಡ ಗ್ರಾಮದ ಪ್ರಸಿದ್ಧ ಮನೆತನದ ಕುಲಕರ್ಣಿ ದಂಪತಿಗಳ ಸುಪುತ್ರಿ ಗುಣವತಿಯಾದ ರಾಧಾಬಾಯಿಯೊಂದಿಗೆ ಎಲ್ಲ ಬಂದು ಬಾಂಧವರೊಡನೆ ಒಡಗೂಡಿ ವಿಜೃಂಭಣೆಯಿಂದ ಕಾಖಂಡಕಿಯಲ್ಲಿ ಕೃಷ್ಣದಾಸರ ವಿವಾಹ ಮಾಡಿಸುತ್ತಾರೆ.

ಮದುವೆಯಾದ ಕೆಲ ದಿನಗಳಲ್ಲಿ ರಾಧಾಬಾಯಿಯು ತವರುಮನೆಯಿಂದ ಗಂಡನ ಮನೆಗೆ ಬರುತ್ತಾಳೆ. ಅಲ್ಲಿಂದ ಕೃಷ್ಣರಾಯರ ಸಂಸಾರ ಪ್ರಾರಂಭವಾಗುತ್ತದೆ. ರಾಧಾಬಾಯಿಯವರು ಗುರುಹಿರಿಯರ ಸೇವೆ ಮಾಡುತ್ತಾ, ಕೆಲವು ದಿನಗಳು ಕಳೆದ ಮೇಲೆ ಗಂಡುಮಗುವಿಗೆ ಜನ್ಮ ನೀಡುತ್ತಾಳೆ. ಎಲ್ಲ ಕುಟುಂಬಸ್ಥರು ಸಂತೋಷಗೊಂಡು ಮಗುವಿಗೆ ರಾಮಚಂದ್ರನೆಂದು ಹೆಸರಿಡುತ್ತಾರೆ. ಕೃಷ್ಣರಾಯನ ಸಂಸಾರ ಉತ್ತರೋತ್ತರವಾಗಿ ಅಭಿವೃದ್ಧಿಯಾಗಿ ಸಾಗುತ್ತಿರುವಾಗ ಮಕ್ಕಳ ಸಂತತಿ ಹೆಚ್ಚುತ್ತಾ ಹೋಗುತ್ತದೆ. ದಿನವೂ ಭಕ್ತಜನರು ಮಹಿಪತಿರಾಯರ ದರ್ಶನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವುದು ನಡೆಯುತ್ತದೆ. ಬಂದ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮುಂದುವರಿಯುತ್ತಾ ಹೋಗುತ್ತದೆ. ಹೀಗೆ ಕೆಲವು ದಿನಗಳು ನಿರಾಯಾಸವಾಗಿ ಕಳೆಯುತ್ತಿರುವಾಗ ಮಹಿಪತಿರಾಯರಿಗೆ ದೇಹದ ಬಳಲಿಕೆ ಹೆಚ್ಚಾಗಿ ತಮ್ಮ ಆರೋಗ್ಯ ಕ್ಷೀಣಿಸತೊಡಗುತ್ತದೆ. ತಮ್ಮಿಬ್ಬರ ಮಕ್ಕಳೊಂದಿಗೆ ಕೊಲ್ಹಾರಕ್ಕೆ ಹೋಗಿ ಕೃಷ್ಣಾ ನದಿಯ ದಂಡೆಯ ಮೇಲೆ ಕುಳಿತು ಏಳು ದಿನಗಳ ಪರ್ಯಂತರ ಜ್ಞಾನದಲ್ಲಿ ನಿರತರಾಗಿ ತಮ್ಮ ಇಹಲೋಕದ ಯಾತ್ರೆಯನ್ನು ಮುಗಿಸುತ್ತಾರೆ.

ಈ ಕಡೆ ಕೃಷ್ಣದಾಸರು ತನ್ನ ಗುರು ಮತ್ತು ತಂದೆಯಾದ ಮಹಿಪತಿರಾಯರ ಅಗಲಿಕೆಯ ದುಃಖ ಕ್ರಮೇಣ ಮಾಯವಾಗಿ ತಮ್ಮ ಸಾಧನೆಯ ಮೂಲಕ ದಾಸಸಾಹಿತ್ಯ ನಿರ್ಮಾಣದಲ್ಲಿ ಹೆಚ್ಚಿನ ಕಾಳಜಿಯನ್ನು ವಹಿಸಿಕೊಳ್ಳುತ್ತಾರೆ. ಕೃಷ್ಣರಾಯರಿಗೆ ಒಟ್ಟು ಏಳು ಜನ ಮಕ್ಕಳು. ಆ ಎಲ್ಲ ಮನೆತನಗಳು ಇವತ್ತಿಗೂ ಸಹ ಕಂಡುಬರುತ್ತವೆ. ಕೃಷ್ಣದಾಸರು ದೊಡ್ಡ ಸಂಸಾರ ಹೊತ್ತುಕೊಂಡು ತೃಪ್ತಿಕರವಾಗಿ ಲೌಕಿಕ ಮತ್ತು ಪಾರಮಾರ್ಥಿಕ ಜೀವನವನ್ನು ಸಾಗಿಸುತ್ತಾರೆ. ಈ ಕಡೆ ಮಹಿಪತಿದಾಸರ ವೃಂದಾವನದ ದರ್ಶನಕ್ಕೆ ದಿನವೂ ನೂರಾರು ಜನ ಭಕ್ತರು

ಬರುತ್ತಿರುತ್ತಾರೆ. ತುಂಬಿದ ಸಂಸಾರದ ಮನೆಯ ಜವಾಬ್ದಾರಿಯ ಜೊತೆಗೆ ಬಂದಂತಹ ಭಕ್ತರಿಗೆ ಪ್ರಸಾದದ ಯಾವುದೇ ತೊಂದರೆಯಾಗದಂತೆ ರಾಧಾಬಾಯಿಯವರು ಮತ್ತು ಕೃಷ್ಣದಾಸರು ನೋಡಿಕೊಳ್ಳುತ್ತಾರೆ. ಎಲ್ಲವೂ ಶ್ರೀಹರಿಯ ಇಚ್ಛೆ ಆತ ನಡೆಸಿದಂತೆ ನಾವು ನಡೆಯಬೇಕೆಂಬ ಹಂಬಲವನ್ನು ಕೃಷ್ಣದಾಸರು ಇಟ್ಟುಕೊಂಡಿದ್ದರು. ತನ್ನೆಲ್ಲ ಮಕ್ಕಳ ವಿದ್ಯಾಭ್ಯಾಸ ಸರಳವಾಗಿ ಮುಂದುವರಿಯುತ್ತದೆ. ವಂಶಪಾರಂಪರ್ಯವಾಗಿ ಬಂದ ಗುರುಭಕ್ತಿ, ಜ್ಞಾನ-ಜಪ ತಪ ಹಾಗೇ ಮುಂದುವರಿಯುತ್ತಾ ಹೋಗುತ್ತದೆ. ಕೃಷ್ಣದಾಸರ ಹಿರಿಯ ಮಗ ರಾಮಚಂದ್ರ ಮತ್ತು ನಾಲ್ಕನೆಯವರಾದ ಯತಿರಾಯರು ತಮ್ಮ ಅಜ್ಜ ಮಹಿಪತಿರಾಯ ಮತ್ತು ತಮ್ಮ ತಂದೆಯಾದ ಕೃಷ್ಣದಾಸರಂತೆ ಬಹುಬೇಗನೆ ಅಧ್ಯಾತ್ಮದ ಹಾದಿ ತುಳಿಯುತ್ತಾರೆ. ತಮ್ಮ ತಂದೆಯನ್ನೇ ಗುರುವಾಗಿ ಸ್ವೀಕರಿಸಿಕೊಳ್ಳುತ್ತಾರೆ. ಮುಂದೆ ಇಬ್ಬರು ಮಕ್ಕಳಿಗೂ ಕೃಷ್ಣದಾಸರು ಗುರುಬೋಧವನ್ನು ನೀಡಿ ಅವರ ಮಸ್ತಕದ ಮೇಲೆ ತಮ್ಮ ಹಸ್ತವನ್ನು ಇಟ್ಟು ಅನುಗ್ರಹಿಸುತ್ತಾರೆ.

ತಂದೆಯಿಂದಲೇ ಗುರುಬೋಧನೆ ಪಡೆದು ಇಬ್ಬರು ತಮ್ಮ ಹಿರಿಯರ ಪರಂಪರೆಯಂತೆ ತಾಳ, ತಾಂಬೂರಿ ಹಿಡಿದು ಆಧ್ಯಾತ್ಮಿಕ ಸಾಹಿತ್ಯವನ್ನು ರಚನೆ ಮಾಡಿದ್ದು ಕಂಡುಬರುತ್ತದೆ. ಕೃಷ್ಣದಾಸರು ತಮ್ಮ ಮನೆತನದ ಪರಂಪರೆಯಂತೆ ದಾಸಸಾಹಿತ್ಯ ರಚನೆ ಮಾಡುತ್ತಾ ತನ್ನ ತುಂಬ ಸಂಸಾರವನ್ನು ಸಾಕುತ್ತಾರೆ. ತಮ್ಮ ತಂದೆಯ ಸನ್ನಿಧಾನಕ್ಕೆ ಆಗಮಿಸುತ್ತಿರುವ ಭಕ್ತರನ್ನು ಸಲುಹುತ್ತಾ ಅಲ್ಲಿನ ಸುತ್ತಮುತ್ತಲಿನ ಪ್ರದೇಶದ ಜನರಲ್ಲಿ ಅಧ್ಯಾತ್ಮದ ಹಸಿವನ್ನು ಹೆಚ್ಚಿಸುತ್ತಾರೆ. ಮಹಿಪತಿರಾಯರ ಕಾಲವಾದ ನಂತರ ಕೃಷ್ಣದಾಸರು ತಮ್ಮ ತಂದೆಯ ನೆನಪಿಗಾಗಿ ವೃಂದಾವನವನ್ನು ಸ್ಥಾಪಿಸಿ, ತಂದೆ ಉಪಯೋಗಿಸುತ್ತಿದ್ದ ಯೋಗದಂಡ, ಪಾದುಕೆಗಳನ್ನು ದಿನವೂ, ಭಕ್ತಿಯಿಂದ ಪೂಜಿಸುತ್ತ, ತಂದೆಯವರು ಹೇಳಿಕೊಟ್ಟ ಮಾರ್ಗದಲ್ಲಿ ಕೃಷ್ಣದಾಸರು ಮತ್ತು ಅವರ ಧರ್ಮಪತ್ನಿ ರಾಧಾಬಾಯಿ ನಡೆದುಕೊಳ್ಳುತ್ತಾರೆ. ಕೃಷ್ಣದಾಸರು ಆಗಾಗ ತೀರ್ಥಕ್ಷೇತ್ರದ ಯಾತ್ರೆಗಳನ್ನು ಮಾಡುತ್ತಿದ್ದರು. ತಿರುಪತಿ ಕ್ಷೇತ್ರದರ್ಶನಮಾಡಿ ಅಲ್ಲಿ ವೆಂಕಟೇಶನ ಕೀರ್ತನೆ ರಚನೆ ಮಾಡಿದ್ದಾರೆ. ಯಲಗೂರು ಕ್ಷೇತ್ರಕ್ಕೆ ಹೋದಾಗ ಶ್ರೀ ಆಂಜನೆಯನ ಸಾಧನೆಯನ್ನು ಕೊಂಡಾಡಿದ್ದಾರೆ. ಜಮಖಂಡಿ ಹತ್ತಿರ ವಿರುವಸೂರಪಾಲೆ ಕ್ಷೇತ್ರಕ್ಕೆ ಹೋಗಿ ಕೃಷ್ಣಾನದಿ ದಂಡೆಯ ಮೇಲೆ ನೆಲೆಸಿರುವ ಶ್ರೀಲಕ್ಷ್ಮಿನರಸಿಂಹ ದೇವರ ದರ್ಶನದ ಮಹಿಮೆಯನ್ನು ಕೀರ್ತನೆಯಲ್ಲಿ ಹೇಳಿದ್ದಾರೆ. ಉತ್ತರೇಶ್ವರ ಮಹಾರುದ್ರ ದೇವರ ದರ್ಶನ, ಅನೇಕಾನೇಕ ತೀರ್ಥಕ್ಷೇತ್ರಗಳ ಸಂಚಾರಮಾಡಿ ಅವುಗಳನ್ನು ತಮ್ಮ ಕೀರ್ತನೆಗಳಲ್ಲಿ ಬಿಂಬಿಸಿದ್ದಾರೆ. ಆ ಸ್ಥಳದ ಮಹಿಮೆ, ಮಹತ್ವ ಆದರಿಂದಾಗುವ ಪುಣ್ಯದ ಫಲವನ್ನು ಕೃಷ್ಣದಾಸರು ಸೊಗಸಾಗಿ ಹೇಳಿದ್ದಾರೆ. ಮಹಿಪತಿರಾಯರ ಕಾಲವಾದ ಮೇಲೆ ಕೃಷ್ಣದಾಸರು ತಂದೆಯವರು ಕೊಟ್ಟ ದೇವರ ಪೆಟ್ಟಿಗೆ ಮತ್ತು ಪಾದುಕೆಗಳನ್ನು ಹೆಗಲ ಮೇಲೆ ಹೊತ್ತುಕೊಂಡು ತಲೆಯ ಮೇಲೆ ಇಟ್ಟುಕೊಂಡು ಈ ಎಲ್ಲ ತೀರ್ಥಕ್ಷೇತ್ರಗಳ ಯಾತ್ರೆ ಮಾಡುತ್ತಾರೆ. ಹರಿಯ ಸೇವೆ ಗುರುಪೂಜೆಯಲ್ಲಿ ನಿರತರಾಗಿ ಲೋಕದ ಜನರಿಗೆ ಅಧ್ಯಾತ್ಮದ ಬೋಧೆ ನೀಡುತ್ತಾರೆ. ಸಮಾಜದ ಉದ್ಧಾರಕ್ಕೆ, ಧರ್ಮದ ಸ್ಥಾಪನೆಗೆ, ತನ್ನ ಗುರುವಿನ ಅಣತಿಯಂತೆ ಮುನ್ನಡೆಯುತ್ತಾರೆ.

ಕೃಷ್ಣರಾಯರು ತನ್ನ ಏಳು ಜನ ಮಕ್ಕಳ ಪಾಲನೆ ಪೋಷಣೆಯನ್ನು ಮಾಡುತ್ತ ಸಂಸ್ಕಾರಯುತವಾದ ಶಿಕ್ಷಣ ಹಾಗೂ ಅಧ್ಯಾತ್ಮದಲ್ಲಿ ತೊಡಗಿಸಿಕೊಳ್ಳುತ್ತಾರೆ. ತನ್ನ ದಾಸಸಾಹಿತ್ಯ ಪರಂಪರೆಯ ವಾರಸುದಾರಿಕೆಯನ್ನು ಗಟ್ಟಿಗೊಳಿಸುತ್ತ ಮುನ್ನಡೆಯುತ್ತಾರೆ. ಕೃಷ್ಣದಾಸರು ವಯಸ್ಸಿಗೆ ಬಂದ ತನ್ನ ಹಿರಿಯ ಮಗ ರಾಮಚಂದ್ರನ ವಿವಾಹವನ್ನು ವಿಜೃಂಭಣೆಯಿಂದ ಮಾಡುತ್ತಾರೆ. ಸಂಸಾರದ ಜವಾಬ್ದಾರಿಯನ್ನು ರಾಮಚಂದ್ರನಿಗೆ ಒಪ್ಪಿಸಿ ತಮ್ಮ ಮುಂದಿನ ಅಧ್ಯಾತ್ಮ ಸಾಧನೆಗೆ ಹಾಗೂ ಸಾಹಿತ್ಯ ರಚನೆಗೆ ಅಣಿಯಾಗುತ್ತಾರೆ. ಕೃಷ್ಣದಾಸರು ಅಧ್ಯಾತ್ಮದ ಬೆನ್ನು ಹತ್ತಿ ಸುತ್ತಮುತ್ತಲಿನ ತೀರ್ಥಕ್ಷೇತ್ರವನ್ನು ಸಂದರ್ಶಿಸಿ, ಧ್ಯಾನ ಜಪ-ತಪಗಳಲ್ಲಿ ಮೌನಿಯಾಗುತ್ತಾರೆ. ಆಧ್ಯಾತ್ಮಿಕ ಸುಖದಲ್ಲಿ ಇರುವಾಗ ಧರ್ಮಪತ್ನಿ ರಾಧಾಬಾಯಿಯವರ ಸಾವು ದುಃಖವನ್ನು ಉಂಟುಮಾಡುತ್ತದೆ. ಕೃಷ್ಣದಾಸರು ಹೆಂಡತಿಯ ಕ್ರಿಯಾಕರ್ಮಗಳನ್ನು ಮುಗಿಸಿ ತನ್ನೆಲ್ಲ ಮಕ್ಕಳಿಗೆ ಸಾಧನೆಯ ಹಾದಿಯನ್ನು ತಿಳಿಸುತ್ತಾರೆ. ಈಗಿರುವ ಕಾಖಂಡಕಿಯ ವೃಂದಾವನದ ಪಕ್ಕದಲ್ಲಿ ಬಾವಿಯನ್ನು ತೋಡಿಸಲು ಪ್ರಾರಂಭಿಸಿದಾಗ ಪ್ರಾಚೀನ ಅವಶೇಷಗಳು ಸಿಗುತ್ತವೆ. ಅಲ್ಲಿ ಸಿಕ್ಕ ಲಿಂಗವನ್ನು ಪ್ರತಿಷ್ಠಾಪಿಸಿ ರಾಮೇಶ್ವರನೆಂದು ಸಂಬೋಧಿಸುತ್ತಾರೆ. ಆ ಲಿಂಗಕ್ಕೆ ಗುಡಿಯನ್ನು ಕಟ್ಟಿಸುತ್ತಾರೆ. ಅದರ ಪಕ್ಕದಲ್ಲಿಯೇ ಯಲ್ಲಮ್ಮ ಗುಡಿಯನ್ನು ಕಟ್ಟಿಸುತ್ತಾರೆ. ಹೀಗೆ ಬಹುಕಾಲದವರೆಗೆ ಕೃಷ್ಣದಾಸರು ತಂದೆ ಮಹಿಪತಿರಾಯರು ಹಾಕಿಕೊಟ್ಟ ದಾಸಪರಂಪರೆಯನ್ನು ಮುಂದುವರಿಸುತ್ತ ತಮ್ಮ ಬಹುಕಾಲದ ಜೀವನವನ್ನು ಹಿರಿಯರ ಸೇವೆಗಾಗಿಯೇ ಮೀಸಲಿಡುತ್ತಾರೆ.

ಕೃಷ್ಣದಾಸರು ತಾವು ಅಂದುಕೊಂಡ ಸಾಧನೆಯನ್ನು ಪೂರೈಸಿ ಇನ್ನು ತಮ್ಮ ಅವಸಾನದ ಕಾಲ ಸಮೀಪಿಸುತ್ತಿದೆ ಎಂದು ಅಂದುಕೊಳ್ಳುತ್ತಾರೆ. ತಮ್ಮ ಮನದಲ್ಲಿಯೇ ತಮ್ಮ ಸಾವಿನ ಸೂಚನೆಯನ್ನರಿತುಕೊಳ್ಳುತ್ತಾರೆ. ''ಒಂದು ದಿನ ಕೃಷ್ಣರಾಯರು ತಮ್ಮೆಲ್ಲ ಮಕ್ಕಳನ್ನು ಕರೆದು ಮುಂದೆ ಕೂರಿಸಿಕೊಂಡು, ಮಕ್ಕಳೇ ನಾನು ಈ ಭೂಮಿಗೆ ಬಂದ ಕಾರ್ಯ ಮುಗಿಯುತ್ತಿದೆ. ಇಲ್ಲಿಂದ ಹೊರಡಲು ಪರಮಾತ್ಮನ ಆಜ್ಞೆ ಆಗಲಿದೆ, ನೀವೆಲ್ಲ ಬುದ್ಧಿವಂತರಾಗಿದ್ದೀರಿ. ಈಗಾಗಲೇ ಹಿರಿಯ ರಾಮಚಂದ್ರ, ಯತಿರಾಯ ಇಬ್ಬರೂ ಅಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿ ಜ್ಞಾನ ಸಂಪನ್ನರಾಗಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಉಳಿದ ನೀವೆಲ್ಲರೂ ಪ್ರಯತ್ನಶೀಲರಾಗಿ ಈ ಮನೆತನದ ಪರಂಪರೆಯನ್ನು ಮುಂದುವರಿಸಿರಿ.''[೧೧] ಎಂದು ತನ್ನೆಲ್ಲ ಮಕ್ಕಳನ್ನು ಕರೆದು ತಮ್ಮ ಪರಂಪರೆಯ ಮುಂದುವರಿಕೆಯನ್ನು ತಿಳಿಸುತ್ತಾರೆ.

ಗುರುಮಹಿಪತಿಯ ಸಂಸ್ಥಾನವು ಈ ನಾಡಿನ ತುಂಬೆಲ್ಲ ಬೆಳೆದು ನಿಲ್ಲಲಿ. ಸಮರ್ಥವಾಗಿ ಈ ಸಂಸ್ಥಾನದ ಜವಾಬ್ದಾರಿಯನ್ನು ನಿರ್ವಹಿಸಬೇಕೆಂದು ಹಾಗೂ ಬಂದ ಅತಿಥಿಗಳಿಗೆ ಕೊರತೆಯಾಗದಂತೆ ನೋಡಿಕೊಳ್ಳಬೇಕೆಂಬ ಮಾತುಗಳನ್ನಾಡುತ್ತಾರೆ. ಮುಂದೆ ತಮ್ಮ ಭೌತಿಕ ದೇಹ ತ್ಯಜಿಸಲು ಸನ್ನದ್ಧರಾಗಿ ತಮ್ಮ ತಂದೆಯವರ ವೃಂದಾವನದ ಪಕ್ಕದಲ್ಲಿಯೇ ಸಮಿವೃಕ್ಷದ ಕೆಳಗೆ ಶ್ರೀಹರಿಯ ಧ್ಯಾನದಲ್ಲಿ ಕುಳಿತುಕೊಳ್ಳಲು ವೇದಿಕೆಯನ್ನು ಸಿದ್ಧಪಡಿಸುತ್ತಾರೆ. ಮೂರು ದಿನಗಳ ಪರ್ಯಂತರದ ಶ್ರೀಹರಿಯ ಧ್ಯಾನದಲ್ಲಿ ಮೌನಿಯಾಗಿದ್ದು, ಮೂರನೆಯ ದಿವಸ ತಮ್ಮ ಭೌತಿಕ ಶರೀರವನ್ನು ತ್ಯಜಿಸಿ ಪರಮಾತ್ಮನ ಸಾನ್ನಿಧ್ಯಕ್ಕೆ ತೆರಳುತ್ತಾರೆ.

ಕೃಷ್ಣದಾಸರ ಕಾಲವಾದ ಕೆಲವು ದಿನಗಳ ನಂತರ ಅವರ ಅಣತಿಯಂತೆ ಅವರು ತೋಡಿಸಿದ ಭಾವಿಯ ದಂಡೆಯ ಮೇಲೆ ಸಮಿವೃಕ್ಷದ ಕೆಳಗೆ ತಮ್ಮ ತಂದೆಯವರ ವೃಂದಾವನದ ಸಮೀಪದಲ್ಲಿ ಕೃಷ್ಣದಾಸರ ಮಕ್ಕಳು ವೃಂದಾವನವನ್ನು ಸ್ಥಾಪಿಸುತ್ತಾರೆ. ಈಗಲೂ ಈ ವೃಂದಾವನವು ಸಾವಿರಾರು ಜನಭಕ್ತರ ಭಕ್ತಿ ಭಾವದ್ಯೋತಕವಾಗಿ ದಿನಂಪ್ರತಿ ಪೂಜೆಪುನಸ್ಕಾರಗಳಿಂದ ತನ್ನದೆಯಾದ ಆಧ್ಯಾತ್ಮಿಕ ಶಕ್ತಿಯ ಪೀಠವಾಗಿ ಕಂಗೊಳಿಸುತ್ತಿದೆ. ಕೃಷ್ಣದಾಸರ ವೃಂದಾವನವು ಪೂರ್ವ ದಿಕ್ಕಿಗೆ ಮುಖಮಾಡಿದೆ. ವೃಂದಾವನದ ಮಧ್ಯದಲ್ಲಿ ಚೌಕಾಕಾರದ ಮಾಡು ಇದೆ. ಆ ಮಾಡಿನಲ್ಲಿ ಒಂದು ಚೌಕ ಶಿಲೆಯು ಇದೆ. ಪ್ರತಿ ವರ್ಷ ಕಾರ್ತಿಕ ಶುದ್ಧ ದ್ವಾದಶ ದಿವಸ ಸಾಯಂಕಾಲ ಕೃಷ್ಣದಾಸರ ವಂಶಸ್ಥರು, ಭಕ್ತರು ತುಳಿಸಿ ವಿವಾಹವನ್ನು ಮಾಡುತ್ತಾರೆ. ಕೃಷ್ಣದಾಸರ ಆರಾಧನೆಯನ್ನು ಪ್ರತಿವರ್ಷ ಭೀಮದ್ವಾದಶದಂದು ಆಚರಿಸುತ್ತಾರೆ. ಕೃಷ್ಣದಾಸರ ವೃಂದಾವನ ಮೊದಲು ಚಿಕ್ಕಮಣ್ಣಿನ ಗೋಡೆಯಿಂದ ಕೂಡಿದ್ದಾಗಿತ್ತು. ಅವರ ವಂಶಸ್ಥರು ಒಂದು ನೂರು ವರ್ಷಗಳ ಹಿಂದೆ ಅದಕ್ಕೊಂದು ಛತ್ತನ್ನು ಹಾಕಿಸಿದರು. ಆ ನಂತರ ಅದು ಜೀರ್ಣಾವಸ್ಥೆಗೆ ಬಂದಾಗ ೨೦೦೩ರಲ್ಲಿ ವೃಂದಾವನಕ್ಕೆ ಸಂಪ್ರೋಕ್ಷಣೆಯನ್ನು ಕೃಷ್ಣದಾಸರ ವಂಶಸ್ಥರು ಮಾಡಿಸಿದ್ದಾರೆ. ೨೦೦೪ರಲ್ಲಿ ಈ ವೃಂದಾವನಕ್ಕೆ ಬೆಳ್ಳಿಯ ಕವಚವನ್ನು ಕೃಷ್ಣದಾಸರ ಭಕ್ತರು ಮಾಡಿಸಿಕೊಟ್ಟಿದ್ದಾರೆ. ಹೀಗೆ ಕೃಷ್ಣದಾಸರ ಮನೆತನದ ಹಿನ್ನೆಲೆ, ಅವರ ದಾಸಪರಂಪರೆ ಹಿನ್ನೆಲೆ ಅವರ ಜೀವನ ವೃತ್ತಾಂತ ಅರಿಯಬಹುದು. ಕೃಷ್ಣದಾಸರ ಕಾಲವಾದ ನಂತರ ಅವರ ಮಕ್ಕಳು ದಾಸಸಾಹಿತ್ಯ ಪರಂಪರೆಯನ್ನು ಮುಂದುವರಿಸಿಕೊಂಡ ಬಂದ ಪರಿಯನ್ನು ಈ ಅಧ್ಯಾಯದಲ್ಲಿ ನೋಡಲಾಗಿದೆ.

ಒಟ್ಟಾರೆಯಾಗಿ, ಕೃಷ್ಣದಾಸರ ಜೀವನ ವಿಚಾರದ ಹಿನ್ನೆಲೆಯಲ್ಲಿ ವಿಜಯಪುರ ಪ್ರದೇಶದ ರಾಜಕೀಯ ಬೆಳವಣಿಗೆ ಹಾಗೂ ಸಮನ್ವತೆಯ ಆಶ್ರಯ ತಾಣವಾಗಿದ್ದ ಸುಲ್ತಾನರ ಕಾಲಘಟ್ಟದ ಹಿನ್ನೆಲೆಯನ್ನು, ಸೌಹಾರ್ದತೆಯನ್ನು ಗಮನಿಸಲಾಗಿದೆ. ಒಬ್ಬ ಶ್ರೇಷ್ಠ ದಾಸಸಾಹಿತ್ಯದ ರಚನೆಕಾರಾದ ಮಹಿಪತಿದಾಸರ ಪರಂಪರೆಯನ್ನು ಮುಂದುವರಿಸಿದ ಕೀರ್ತಿ ಕೃಷ್ಣದಾಸರಿಗೆ ಸಲ್ಲುತ್ತದೆ. ತಂದೆಯ ಆಸೆಯನ್ನು ತನ್ನ ಮುಂದಿನ ಜನಾಂಗಕ್ಕೂ ಜೀವಂತವಾಗಿ ನಡೆಸಿಕೊಂಡು ಹೋಗುವ ಮಾರ್ಗವನ್ನು ತೋರಿಸಿದ ಅಪರೂಪ ಜ್ಞಾನಿ ಕೃಷ್ಣದಾಸರು.

ಕೊನೆಟಿಪ್ಪಣಿಗಳು

೧. ಹೊಸತು ಮಾಸಪತ್ರಿಕೆ, ರಾಜೇಶ್ ಹೆಚ್.ಜಿ. ಅವರ ಲೇಖನ, ಮೇ ೨೦೧೪, ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪುಟ ೩೩.

೨. ಕಾಖಂಡಕಿಯ ಶ್ರೀಮಹಿಪತಿರಾಯರ ಚರಿತ್ರೆ, ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ, ಶ್ರೀಮಹಿಪತಿದಾಸ ಸಾಹಿತ್ಯ ಪ್ರಚಾರ ಸಮಿತಿ, ಕಾಖಂಡಕಿ(ತಾಲೂಕು ಜಿಲ್ಲೆ ವಿಜಾಪೂರ) ೨೦೦೭, ಮೇ, ಪುಟ ೯-೧೦.

೩. ಅದೇ ಪುಟ ೧೧ ಮತ್ತು ೧೨.

೪. ಸಮಗ್ರ ದಾಸಸಾಹಿತ್ಯ ಸಂಪುಟ–೬, ಭಾಗ–೨, ಕಾಖಂಡಕಿಯ ಶ್ರೀಮಹಿಪತಿರಾಯರ ಕೀರ್ತನೆಗಳು, (ಸಂ) ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪ್ರಸ್ತಾವನೆ, ಪುಟ ೩೦.

೫. ಅದೇ, ಪುಟ ೩೪.

೬. ಅದೇ, ಪುಟ ೩೫.

೭. ಅದೇ, ಪುಟ ೩೬.

೮. ಸಮಗ್ರ ದಾಸಸಾಹಿತ್ಯ ಸಂಪುಟ–೧೧, ಭಾಗ–೧, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು, (ಸಂ) ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪ್ರಸ್ತಾವನೆ, ಪುಟ ೨೩.

೯. ಶ್ರೀಗುರುಭಾಸ್ಕರ ಮಹಿಪತಿ ಜ್ಞಾನಗಂಗಾವಾಹಿನಿ, ರಾಮಯ್ಯ ಗುರಪ್ಪಯ್ಯ ಹರಿದಾಸ ಕಾಖಂಡಕಿ ಪ್ರಕಾಶಕರು, ರಾಮಯ್ಯ ಗು.ಹರಿದಾಸ ಕಾಖಂಡಕಿ, ೨೦೦೯, ಫೆಬ್ರವರಿ, ಪುಟ ೧೦೬ ಮತ್ತು ೧೦೭.

೧೦. ಸಮಗ್ರ ದಾಸಸಾಹಿತ್ಯ ಸಂಪುಟ ೧೧, ಭಾಗ ೨, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು, (ಸಂ) ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ವರ್ಷ ೨೦೦೩, ಪುಟ ೫೯.

೧೧. ಅದೇ, ಪುಟ ೨೦೨.

ಅಧ್ಯಾಯ ನಾಲ್ಕು

ಕೃಷ್ಣದಾಸರ ಕೀರ್ತನೆಗಳು: ವಿವೇಚನೆ

ಅಧ್ಯಾಯ ನಾಲ್ಕು

ಕೃಷ್ಣದಾಸರ ಕೀರ್ತನೆಗಳು: ವಿವೇಚನೆ

ಕನ್ನಡ ಸಾಹಿತ್ಯದಲ್ಲಿ ಕೀರ್ತನೆ ಸಾಹಿತ್ಯವು ವಿಶಿಷ್ಟ ಪ್ರಕಾರವಾಗಿ ಗೋಚರಿಸುತ್ತದೆ. ಕೀರ್ತನೆಯು ಪಾರಮಾರ್ಥಿಕ ಅಂಶವನ್ನೆ ಪ್ರಧಾನವಾಗಿಟ್ಟುಕೊಂಡು ಹುಟ್ಟಿಕೊಂಡಿರುವಂತಹದ್ದು. ಇಲ್ಲಿ ಭಕ್ತ ಮತ್ತು ಭಗವಂತನನ್ನು ಹಾಡಿಹೊಗಳುವುದು ಕೀರ್ತನೆಯ ಹಿಂದಿರುವ ಸ್ಥಿತಿಗತಿ. ಭಕ್ತನು ತನ್ನ ಪ್ರಾಪಂಚಿಕ ಸುಖಗಳಿಂದ ವಿಮುಖನಾಗುವ, ಭವಬಂಧನದಿಂದ ಬದುಕನ್ನು ಸರಳೀಕರಿಸಿಕೊಂಡು ಬಿಡಿಸಿಕೊಳ್ಳುವ ಒಂದು ಪಾಡು ಈ ಕೀರ್ತನೆಯದ್ದಾಗಿದೆ. ಇಂತಹ ಭಕ್ತರ ಮನೋಭಿಲಾಷೆಯೇ ಭಗವಂತನ ಹಾಡಾಗಿ ಕೀರ್ತನೆಯ ರೂಪದಲ್ಲಿ ಅರಳಿ ನಿಲ್ಲುತ್ತದೆ.

ಕನ್ನಡ ಸಾಹಿತ್ಯದಲ್ಲಿ ಕೀರ್ತನೆ ಮತ್ತು ಪದ ಎಂಬ ಶಬ್ದವು ಹೊಸದೇನಲ್ಲ. ಕನ್ನಡದ ಮಟ್ಟಿಗೆ ಪಾಡು, ಮೆಲ್ವಾಡು, ಬಾಜನೆಗಬ್ಬಗಳಿದ್ದವು. ತದನಂತರ ಶಿವಶರಣರು ಸ್ವರವಚನ ಪದಗಳನ್ನು ರಚನೆ ಮಾಡಿದರು. ಮುಂದುವರಿದು ಅದು ಹರಿದಾಸರ ಬಾಯಲ್ಲಿ ಕೀರ್ತನೆಯಾಗಿ ಒಡಮೂಡಿತು. ಕೀರ್ತನೆ ಎಂದರೆ ಹರಿಯನ್ನು ಸ್ತುತಿ ಮಾಡುವ ಪದ. ಇದಕ್ಕೆ ಸಂಗೀತ ಪ್ರಮಾಣ ಸೇರಿಕೊಂಡು ಕೀರ್ತನೆಯ ವೈವಿಧ್ಯತೆ ಹೆಚ್ಚಾಯಿತು.

ಹರಿದಾಸರು ಹಾಡುವ ಪದಗಳು ಸರಳವಾದವುಗಳು. ಇಲ್ಲಿಯ ಭಾಷೆಯು ಆಡು ನುಡಿಯಿಂದ ಕೂಡಿರುವಂತಹದ್ದು. ಹರಿದಾಸರು ತಮ್ಮ ವೈಯಕ್ತಿಕ ನೋವಿನೊಂದಿಗೆ ಸಾಮಾಜಿಕ ಎಚ್ಚರದ ಪ್ರಜ್ಞೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಕೀರ್ತನೆಯಲ್ಲಿ ತಮ್ಮದೆಯಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶಿವದಾಸರಾಗಲಿ ಮತ್ತು ಹರಿದಾಸರಾಗಲಿ ಇವರು ರಚಿಸಿರುವ ಸಾಹಿತ್ಯ ಸಂಗೀತದ ಜೊತೆಗೆ ಮೇಳೈಸಿಕೊಂಡು ಕೀರ್ತನೆಗೊಂಡದ್ದು ವೈಶಿಷ್ಟ್ಯವಾಗಿದೆ.

ಭಕ್ತಿಪ್ರಧಾನವಾದ ಈ ಹಾಡುಗಳಿಗೆ ನಿರಂತರವಾಗಿ ಮಿಡಿಯುವ ಆಧ್ಯಾತ್ಮಿಕ ಶಕ್ತಿ ಅಡಗಿದೆ. ಹರಿದಾಸರು ತಮ್ಮ ಧರ್ಮಪ್ರಚಾರದ ಜೊತೆಗೆ ಸಮಾಜ ಸುಧಾರಣೆ, ನವವಿಧ ಭಕ್ತಿ, ಮುಂತಾದವುಗಳನ್ನು ಕನ್ನಡ ಭಾಷೆಯಲ್ಲಿ ಸಮರ್ಥವಾಗಿ ಅಭಿವ್ಯಕ್ತಿಸಿದ್ದಾರೆ. ಹರಿದಾಸರು

ರಚಿಸಿದ ಕೀರ್ತನೆಗಳ ಮುಖ್ಯ ಉದ್ದೇಶ ಸಮಾಜಕ್ಕೆ ಹಿತವನ್ನು ಉಂಟುಮಾಡುವುದಾಗಿದೆ. ಮಾನವ ತನ್ನ ಜೀವಿತದ ಅವಧಿಯಲ್ಲಿ ಈ ಜನ್ಮವನ್ನು ಹಿತವಾಗಿ ಮಿತವಾಗಿ ಬಳಸಿಕೊಂಡು ಹರಿಯನ್ನು ಸ್ಮರಿಸುವುದು ಈ ಕೀರ್ತನೆಗಳ ಮುಖ್ಯ ವಸ್ತುವಾಗಿದೆ.

ಹರಿದಾಸರು ತಮ್ಮ ಕೀರ್ತನೆಯಲ್ಲಿ ಒಳಗೊಂಡಿರುವ ದಾಸ್ಯ, ಮಧುರ, ವಾತ್ಸಲ್ಯ ಈ ನಾಲ್ಕು ಭಾವಗಳು ಪರಸ್ಪರ ಮನುಷ್ಯ ಮತ್ತು ದೇವರ ನಡುವಿನ ಸಂಬಂಧವನ್ನು ಕುರಿತು ವಿವರಿಸುವಂತವುಗಳು. ಹಾಗಾಗಿ ಈ ನಾಲ್ಕು ಸಂಬಂಧಗಳಿಂದ ದೂರ ನಿಂತು ಹರಿದಾಸರು ಕೇವಲ ಭಕ್ತನಾಗಿ ಭಗವಂತನ ರೂಪ, ಗುಣ, ವಿನೋದಾದಿಗಳನ್ನು ವರ್ಣಿಸುವ ರೀತಿ ಇನ್ನೊಂದು ತೆರನಾಗಿರುವಂತಹದ್ದು. ಹೀಗೆ ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು ಇವುಗಳಿಗಿಂತ ಹೊರತಾದುವಲ್ಲ. ಕೃಷ್ಣದಾಸರು ಭಕ್ತರಾದರೂ ಯಾವ ಭಾವೋದ್ವೇಗಕ್ಕೆ ಒಳಗಾಗದೆ ಸಮಾಧಾನ ಚಿತ್ತದಿಂದ ಶ್ರೀಹರಿಯ ವಿಶಿಷ್ಟ ಶಕ್ತಿಸ್ವರೂಪಗಳನ್ನು, ಸಾಮರ್ಥ್ಯಗಳನ್ನು, ಗುಣರೂಪಾದಿಗಳನ್ನು ಹಾಡಿ ಕೊಂಡಾಡಿ ಸಂಭ್ರಮಿಸಿದ್ದಾರೆ. ಎಲ್ಲ ದಾಸರೂ ಸಹ ಶ್ರೀಹರಿಯೇ ಸರ್ವೋತ್ತಮ ಸರ್ವ ವ್ಯಾಪಕ ಎಂಬುದನ್ನು ನಿರೂಪಿಸಿದ್ದಾರೆ. ಕೃಷ್ಣದಾಸರು ತಮ್ಮ ವೈಯಕ್ತಿಕ ಭಕ್ತಿ ಸಾಧನೆಯ ವಿವಿಧ ಹಂತಗಳಲ್ಲಿ ಪಂಚಭಾವಗಳನ್ನು ತೋರ್ಪಡಿಸಿದ್ದಾರೆ. ಶ್ರೀಹರಿಯ ಎದುರಿನಲ್ಲಿ ಸರ್ವಸಮರ್ಪಣಾ ಭಾವದಿಂದ ಮಣಿದು ನೀನೆ ಗತಿ, ನನ್ನ ಜೀವನಕ್ಕೆ ಮತಿ ಎಂದು ಶ್ರೀಹರಿಗೆ ಸಂಪೂರ್ಣವಾಗಿ ತಮ್ಮನ್ನು ತಾನು ಶರಣಾಗತಿ ಮಾಡಿಕೊಂಡಿರುವುದು ಕೃಷ್ಣದಾಸರ ಕೀರ್ತನೆಗಳಲ್ಲಿ ಎದ್ದು ಕಾಣುತ್ತದೆ.

ಕೃಷ್ಣದಾಸರ ಕೀರ್ತನೆಯ ಒಳಹೂರಣ ಹತ್ತು ಹಲವು ವೈವಿಧ್ಯತೆಯಿಂದ ಕೂಡಿರುವುದಾಗಿದೆ. ಅವುಗಳಲ್ಲಿ ಶ್ರೀಹರಿಯ ಜೊತೆಗೆ ಬಗೆಬಗೆಯ ಸಂಬಂಧವನ್ನು ಕಲ್ಪಿಸಿಕೊಂಡು ಭಕ್ತಿಯ ಸಾಧನೆಯನ್ನು ಮಾಡಿರುವುದಾಗಿದೆ. ಹರಿಯನ್ನು ತನ್ನ ಅಂತರಂಗದಲ್ಲಿ ನೆಲೆಗೊಳಿಸಿ ಧನ್ಯತೆಯನ್ನು ತಂದುಕೊಂಡಿರುವುದಾಗಿದೆ. ತನ್ನ ಮನೋಮಂದಿರದಲ್ಲಿ ನೆಲೆ ನಿಂತ ಭಗವಂತನ ರೂಪ ಸಾಕ್ಷಾತ್ಕಾರ, ಲಾವಣ್ಯ ಮುಂತಾದವಗಳನ್ನು ಒಳಗಣ್ಣಿನಿಂದ ನೋಡಿ ಆನಂದಿಸಿ ವರ್ಣಿಸಿದ್ದಾರೆ. ಇವೆಲ್ಲದರ ಜೊತೆಗೆ ತನ್ನ ಗುರುಭಕ್ತಿ ಹಾಗೂ ತನ್ನಿಷ್ಟದೈವ ಇವುಗಳನ್ನು ಅಲ್ಲಗಳೆಯದೆ ಶ್ರೀಹರಿಯ ಜೊತೆಗೆ ಇವುಗಳಿಗೆ ಸಹ ಪ್ರಾಧಾನ್ಯತೆ ನೀಡಿರುವುದು ಕೃಷ್ಣದಾಸರ ಕೀರ್ತನೆಯ ವೈಶಿಷ್ಟ್ಯವಾಗಿದೆ.

ಕೃಷ್ಣದಾಸರು ತಮ್ಮ ವೈಯಕ್ತಿಕ ಭಕ್ತಿಯ ನೆಲೆಯಲ್ಲಿ ಹರಿಯನ್ನು ಕಾಣುವ ಹಂಬಲದಿಂದ ಪರಿತಪಿಸಿ ಭಗವಂತನ ಸಾಕ್ಷಾತ್ಕಾರಕ್ಕೆ ಮಿಡಿಯುವುದು, ಇವು. ಕೃಷ್ಣದಾಸರ ಅನುಭವ ನೆಲೆಯಿಂದ ಅನುಭಾವದ ಉತ್ತುಂಗಕ್ಕೆ ಹೋಗುವಂತಹದ್ದಾಗಿದೆ. ಇವು ಭಕ್ತಿ ಸಾಧಕರಾಗಿ ಸಿದ್ಧಿಯನ್ನು ಪಡೆದ ಕೃಷ್ಣದಾಸರ ವ್ಯಕ್ತಿತ್ವದ ಭಕ್ತಿ ಸಾಧನೆಯ ಹಂತಗಳಲ್ಲಿ ಕಂಡುಬರುತ್ತವೆ. ಅಪರೋಕ್ಷಾನುಭವ, ಅಪರೋಕ್ಷಾನುಭೂತಿ ಮತ್ತು ದೈವ ಸಾಕ್ಷಾತ್ಕಾರ ಈ ವಿಧದಲ್ಲಿ ಕೃಷ್ಣದಾಸರ ಕೀರ್ತನೆಗಳು ಮುನ್ನಡೆದಿವೆ.

ಕೃಷ್ಣದಾಸರ ಈ ಬಗೆಯ ಭಕ್ತಿಸಾಧನೆಯ ವಿವಿಧ ಹಂತಗಳಲ್ಲಿ ನೂರಾರು ಕೀರ್ತನೆಗಳನ್ನು ಅಪರೋಕ್ಷಾನುಭೂತಿಯ ವಸ್ತುವಾಗಿಟ್ಟುಕೊಂಡು ರಚಿಸಿದ್ದಾರೆ. ಮುಖ್ಯವಾಗಿ ಇವರ ಕೀರ್ತನೆಗಳಲ್ಲಿ ಪ್ರಸ್ತಾಪವಾಗಿರುವ ದಾಸ್ಯ, ಸಾಖ್ಯ, ಮಧುರ, ವಾತ್ಸಲ್ಯ ಭಾವಗಳು ದಿನನಿತ್ಯದ ಬದುಕಿನಲ್ಲಿ ನಾವೆಲ್ಲರೂ ಅನುಭವಿಸುವಂತವುಗಳೇ ಆಗಿವೆ.

ಕೃಷ್ಣದಾಸರಲ್ಲಿರುವ ಸೇವಕನ ರುಚಿ, ಸ್ನೇಹದ ಸವಿ, ಪ್ರೀತಿ, ಪ್ರಣಯಗಳ ಮಾಧುರ್ಯ ಮುಂತಾದವುಗಳು ಕೀರ್ತನೆಯಲ್ಲಿ ಹದುಳಗಟ್ಟಿ ನಿಂತಿವೆ. ಹಾಗಾಗಿ ಇಂತಹ ಕೀರ್ತನೆಗಳನ್ನು ಕೇಳಿದಾಕ್ಷಣ, ಓದಿದಾಕ್ಷಣ, ನೇರವಾಗಿ ನಮಗೆ ಅರ್ಥವಾಗುವುದರ ಜೊತೆಗೆ ತಮ್ಮ ಅನುಭವವನ್ನು ಹಂಚಿಕೊಳ್ಳುವ ಆಪ್ತಮಾರ್ಗವಾಗಿ ಬಿಡುತ್ತವೆ. ದೈವ ಸಾಕ್ಷಾತ್ಕಾರದ ಕೀರ್ತನೆಗಳು ಕುಂತಲ್ಲಿ ಮತ್ತು ನಿಂತಲ್ಲಿ ದೇವರ ರೂಪವನ್ನು ದರ್ಶಿಸುತ್ತವೆ. ಕಂಡಲ್ಲಿ ನೆನೆದಲ್ಲಿ, ಶ್ರೀಹರಿಯ ದರ್ಶನ ಪ್ರಾಪ್ತವಾಗುತ್ತದೆ. ಕೃಷ್ಣದಾಸರು ಮಾಡಿದ್ದೆಲ್ಲ ಹರಿಸೇವೆಯೇ. ಹಾಡಿದ್ದೆಲ್ಲ ಹರಿಸಂಕೀರ್ತನೆಯಾಗಿದೆ. ಜೀವನವು ವ್ಯರ್ಥವಾಗಿ ಹೋಯಿತೆಂದು ಪರಿತಪಿಸುತ್ತಿದ್ದ ಅವರು ಭಕ್ತಿಯ ಅವಲಂಬನೆಯು ನೂರಾನೆ ಬಲ ತಂದಂತೆ ಕಂಡುಬರುತ್ತದೆ.

ಇಂತಹ ಮನೋಬಲವನ್ನು ಪಡೆದ ಕೃಷ್ಣದಾಸರು ಸಮಾಜದಲ್ಲಿಯ ಸಾಮಾನ್ಯ ಜನರ ಬದುಕನ್ನು ಉತ್ತಮಪಡಿಸಬೇಕೆನ್ನುವ ಕಾಳಜಿಯನ್ನು ಹೊಂದಿದ್ದರು. ನೈತಿಕ ಮೌಲ್ಯ ಮತ್ತು ಅವರ ಸಾರ್ವಕಾಲಿಕ ವಿಚಾರಗಳ ಚಿಂತನೆಯು ಚಿರಂತನ ಸತ್ಯವನ್ನು ಸಹೃದಯರಿಗೆ ಕಟ್ಟಿಕೊಡುತ್ತಾರೆ. ಕೃಷ್ಣದಾಸರು ತಮ್ಮ ಹರಿಭಕ್ತಿ ಸಾಧನೆಯ ಮೂಲಕ ಶ್ರೀಹರಿಯನ್ನು ಸ್ತುತಿಸುವುದು, ತನ್ನ ಗುರುಗಳನ್ನು ನೆನೆಯುವುದು, ಕ್ಷೇತ್ರಮೂರ್ತಿಗಳನ್ನು ವರ್ಣಿಸುವ ನೂರಾರು ಕೀರ್ತನೆಗಳನ್ನು ರಚಿಸಿದ್ದಾರೆ. ಇವುಗಳ ಜೊತೆಗೆ ಸಾಮಾನ್ಯ ಜನರಿಗೆ ಬದುಕಿನ ಮೌಲ್ಯವನ್ನು ಪರಿಚಯಿಸುವ, ಒಳಿತು ಕೆಡಕುಗಳನ್ನು ತಿಳಿಸಿಕೊಡುವ ನೀತಿಬೋಧಕ ಕೀರ್ತನೆಗಳು ಹೆಚ್ಚಾಗಿವೆ. ಉಪದೇಶಾತ್ಮಕ ಕೀರ್ತನೆಗಳು ನೂರಾರು ಸಂಖ್ಯೆಯಲ್ಲಿ ದೊರೆಯುತ್ತವೆ. ಕೃಷ್ಣದಾಸರು ತಮ್ಮ ಭಕ್ತಿಸಾಧನೆಯ ಸಿದ್ಧಿಯಲ್ಲಿ ಶ್ರೀಹರಿಯನ್ನು ಕಣ್ಣಾರೆ ಕಂಡು ಅಪರೋಕ್ಷಾನುಭವ ಅನುಭವಿಸಿದವರು. ಅನಂತರ ತನ್ನ ಗುರು ಆತನ ಆಧ್ಯಾತ್ಮಿಕ ಕಾರ್ಯ, ವ್ಯಕ್ತಿತ್ವ ಮುಂತಾದವುಗಳನ್ನು ನೆನೆಯುತ್ತಾರೆ. ಜನಸಾಮಾನ್ಯರನ್ನು ಮೌಢ್ಯದಿಂದ ಮೇಲೆತ್ತುವ ಹಾಗೂ ಬದುಕಿನಲ್ಲಿಯ ಆಸೆ, ದುರಾಸೆ, ನಿರಾಸೆಗಳನ್ನು ಅಲ್ಲಗಳೆಯುವುದಾಗಿದೆ. ಮನುಷ್ಯನಾದವನು ಇವುಗಳಿಗೆ ಪಡುವ ಕಷ್ಟವನ್ನು ತಮ್ಮ ಕೀರ್ತನೆಯ ಮೂಲಕ ಹೊರಹಾಕಿದ್ದಾರೆ.

ಕೃಷ್ಣದಾಸರು ಹಲವು ಕೀರ್ತನೆಗಳನ್ನು ರಚಿಸಿದ್ದಾರೆ. ಅವುಗಳನ್ನು ಅಧ್ಯಯನದ ದೃಷ್ಟಿಯಿಂದ ಏಳು ವಿಧದಲ್ಲಿ ವಿಂಗಡಿಸಲಾಗಿದೆ. ಕೃಷ್ಣದಾಸರ ಕೀರ್ತನೆಗಳು ಹಾಗೆ ನೋಡಿದರೆ ಮನುಷ್ಯನ ಬದುಕಿನ ಎಲ್ಲ ವಿಷಯ ವಸ್ತುವನ್ನು ಇಟ್ಟುಕೊಂಡಿರುವಂತವುಗಳು. ಹಾಗಾಗಿ ಬಹುಮುಖ್ಯವಾದ ಈ ಏಳು ವಿಧಗಳಲ್ಲಿ ಅವರ ಕೀರ್ತನೆಗಳ ಅಂತರ್ಗತ ಮನೋಭಾವನೆಯನ್ನು ಅರ್ಥೈಸಿಕೊಳ್ಳುವ ದೃಷ್ಟಿಯಿಂದ ಈ ವಿಧಗಳಲ್ಲಿ ಗಮನಿಸಲಾಗಿದೆ.

೧. ದೇವತಾಸ್ತುತಿ

ಕೃಷ್ಣದಾಸರ ಕೀರ್ತನೆಯು ಪ್ರಧಾನವಾಗಿ ಭಕ್ತಿಪರವಶವಾದದ್ದು. ಭಕ್ತ ತನ್ನ ಆತ್ಮ ಶೋಧನೆಯನ್ನು ಮಾಡಿಕೊಳ್ಳಲು ಭಗವಂತನ ಅನುಗ್ರಹಕ್ಕಾಗಿ ಹಂಬಲಿಸುವುದು ಮುಖ್ಯವಾಗಿ ಕಂಡುಬರುತ್ತವೆ. ಇಷ್ಟಾರ್ಥಸಿದ್ಧಿ ದಿವ್ಯಾನುಭವ ಇವುಗಳನ್ನು ಅರಿತುಕೊಂಡು ಸರ್ವರನ್ನು ಸಮಷ್ಟಿ ದೃಷ್ಟಿಯಿಂದ ಹರಿದಾಸರು ಭಕ್ತಿಯೆಡೆಗೆ ಒಯ್ಯುವಂತದ್ದಾಗಿದೆ. ಕೃಷ್ಣದಾಸರ ಕೀರ್ತನೆಯಲ್ಲಿ ಮುಖ್ಯವಾಗಿ ಆತ್ಮಶೋಧನೆ, ಆತ್ಮನಿವೇದನೆ ಇವು ಹೆಚ್ಚು ಅಭಿವ್ಯಕ್ತಿಯನ್ನು ಕಂಡಿವೆ. ಇವುಗಳಲ್ಲಿ ಭಗವಂತನ ಸ್ತುತಿಯನ್ನು ವಿವಿಧ ರೀತಿಯಲ್ಲಿ ಭಕ್ತಪರವಶದಿಂದ ಮಾಡಿರುವುದು ಈ ಕೀರ್ತನಕಾರನ ವೈಶಿಷ್ಟ್ಯ. ಹರಿ, ನಾರಾಯಣ, ರಾಮ, ಕೃಷ್ಣ ಹಾಗೂ ಭಗವಂತನ ಸಮೂಹ ಅತ್ಯಂತ ಪ್ರೀತಿಯಿಂದ ಧ್ಯಾನಿಸುವ ಆರಾಧಿಸುವ ಗೀತಸ್ತುತಿ ಭಗವಂತನ ನಾಮಸ್ಮರಣೆಯಲ್ಲಿ ಅರಳಿವೆ. ಹಲವು ವಿಧದಲ್ಲಿ ಪದೇ ಪದೇ ನೆನೆಯುತ್ತ ಧನ್ಯರಾಗುವ ಭಾವ ಇಲ್ಲಿಯ ಕೀರ್ತನೆಯಲ್ಲಿ ತುಂಬಿದೆ. ದರ್ಶನ, ಕನಸು, ಸಮರ್ಪಣಾಭಾವ ಇವರ ಕೀರ್ತನೆಯ ದೇವತಾಸ್ತುತಿಯಲ್ಲಿ ಎದ್ದುಕಾಣುತ್ತದೆ. ಜೀವನ ಮೋಕ್ಷಸಾಧನೆಗೆ ಶ್ರವಣ, ಮನನ, ನಿಧಿಧ್ಯಾಸನ, ಧ್ಯಾನ, ತಪಸ್ಸು ಇತ್ಯಾದಿ ಹಲವು ಮಾರ್ಗಗಳನ್ನು ಕೃಷ್ಣದಾಸರು ತಮ್ಮ ಕೀರ್ತನೆಯಲ್ಲಿ ಅಭಿವ್ಯಕ್ತಪಡಿಸಿದ್ದಾರೆ. ಜೀವಾತ್ಮನಿಗೆ ಪಾರಮಾರ್ಥಿಕ ಸಾಧನೆಯಲ್ಲಿರುವ ಭಕ್ತಿ, ಜ್ಞಾನ ಕರ್ಮಮಾರ್ಗಗಳಲ್ಲಿ ಮುಖ್ಯವಾಗಿ ಭಕ್ತಿಮಾರ್ಗವನ್ನು ಅನುಸರಿಸಿದ್ದಾರೆ.

ಭಕ್ತಿಯಿಂದಲೇ ಉಳಿದೆಲ್ಲ ಮಾರ್ಗಗಳು ಸಾಧನೆಯನ್ನು ಮುಟ್ಟುತ್ತವೆ ಎಂಬ ಭಾವ ಕೃಷ್ಣದಾಸರದು. ಭಕ್ತಿಯಿಂದಲೇ ಮುಕ್ತಿ ಎಂಬ ನಿಲುವು ಇವರದು. ಉಳಿದೆಲ್ಲ ಸಾಧನಗಳು ಭಕ್ತಿಯ ವೃದ್ಧಿಗಾಗಿ ತಾನು ಕೇವಲ ಅಲ್ಪಶಕ್ತಿಯವನೆಂಬ ಅರಿವಿನಿಂದ ಮೂಡಿಬಂದು ಪ್ರಧಾನವಾದ ಭಕ್ತಿಯ ಭೂಮಿಕೆಯಲ್ಲಿ ನಿಲ್ಲುವುದಾಗಿದೆ. ''ಮೂಲತಃ ಮಾಧ್ವರಾದ ಕೃಷ್ಣದಾಸರು ಮಧ್ವಸಿದ್ಧಾಂತದ ಅನುಗುಣವಾಗಿ ದೇವತಾ ತಾರತಮ್ಯದ ಸ್ತುತಿಪರ ಕೀರ್ತನೆಗಳನ್ನು ರಚಿಸಿದ್ದಾರೆ. ತಂದೆ ಮಹಿಪತಿರಾಯರದು ಯೋಗಪ್ರಧಾನದ ಸಾಧನೆಯಾಗಿತ್ತು. ಅಲ್ಲಿ ಕಾಣದ ಸಾಹಿತ್ಯ ಮಗನಲ್ಲಿ ವಿಪುಲವಾಗಿ ರಚಿತವಾಗಿದೆ.

ಹರಿಸರ್ವೊತ್ತಮತ್ವವನ್ನು ಪ್ರತಿಪಾದಿಸುವಾಗ, ಶ್ರೀಹರಿಯ ಗುಣಗಾನವನ್ನು ಮಾಡುವಾಗ, ಆತನ ಹತ್ತು ಅವತಾರಗಳಿಗೆ ವಿಶೇಷ ಪ್ರಾಧ್ಯಾನ್ಯವನ್ನು ಕೊಟ್ಟಿದ್ದಾರೆ. ಉಳಿದ ಹರಿದಾಸರಂತೆ ರಾಮಾಯಣ, ಭಾಗವತಗಳ ಕಥಾನಕಗಳು, ಹರಿಭಕ್ತರ ಉಲ್ಲೇಖಗಳು ಹೇರಳವಾಗಿ ಕಂಡುಬರುತ್ತವೆ. ಪರಮಾತ್ಮನಲ್ಲಿ ಅನನ್ಯವಾದ ಭಕ್ತಿ ಸರ್ವಸಮರ್ಪಣಾ ಭಾವ, ಆತನ ದರ್ಶನ ಕುತೂಹಲ, ಆರ್ತಭಾವ, ವಾತ್ಸಲ್ಯ ಅವರ ಕೃತಿಗಳಲ್ಲಿ ಉಕ್ಕಿ ಹರಿದಿದೆ.''[೧] ಕೃಷ್ಣದಾಸರು ಮಾಧ್ವ ಪರಂಪರೆಗೆ ಸೇರಿದರೂ ಸಹ, ಅನೇಕ ಕೀರ್ತನೆಗಳಲ್ಲಿ ತುಳಸಿ, ಕೃಷ್ಣವೇಣಿ, ಭಾಗೀರಥಿ, ಗಣಪತಿ, ಪಾರ್ವತಿ, ಶಿವ, ಹನುಮಂತ, ಶಾರದೆ, ಲಕ್ಷ್ಮೀ ಮುಂತಾದ ದೇವಾನುದೇವತೆಗಳನ್ನು ಸ್ತುತಿಸಿದ್ದಾರೆ.

ಕೃಷ್ಣದಾಸರು ಕೇವಲ ಒಂದೇ ಪರಂಪರೆಗೆ ಸೀಮಿತವಾಗಿರದೆ ಅದರಿಂದ ಹೊರಗೆ ಬಂದು ಇನ್ನುಳಿದ ಪರಂಪರೆಯನ್ನು ಸಹ ನೆನೆಯುತ್ತಾ ಸಾಗಿರುವುದು ಇಲ್ಲಿರುವ ವಿಶೇಷತೆಯಾಗಿದೆ. ವೇದವ್ಯಾಸರು ಮತ್ತು ಭಗವದ್ಗೀತೆ ಕುರಿತು ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಹೆಚ್ಚಿನ ಪಾಲು ಶಿವನ ಸ್ತುತಿಗೆ ಮೀಸಲಾಗಿರುವಂತವುಗಳಾಗಿವೆ. ತಮ್ಮ ಸಮಕಾಲಿನ ಉತ್ತರಾದಿ ಮಠದ ಯತಿಗಳಾದ ಶ್ರೀಸತ್ಯಾಪೂರ್ಣರ ಕುರಿತು ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ.

ಇವರ ಕೀರ್ತನೆಯಲ್ಲಿ ತಮ್ಮ ಪರಂಪರೆಗೆ ಸೇರಿದ ಯಾವ ಮಾಧ್ವ ಯತಿಯನ್ನು ಮತ್ತು ಹರಿದಾಸ ಪರಂಪರೆಯ ತಮ್ಮ ಹಿಂದಿನ ಯಾವ ಹರಿದಾಸರನ್ನು ಸ್ಮರಿಸದಿರುವುದು ಬಹು ವಿಶೇಷವಾಗಿದೆ. ಪುರಂದರದಾಸ, ಕನಕದಾಸರ ಆದಿಯಾಗಿ ಯಾವ ಹರಿದಾಸರನ್ನು ಸ್ಮರಿಸುವುದಿಲ್ಲ. ಹಾಗಾಗಿ ಇವರ ಕೀರ್ತನೆಗೆ ಈ ಹಿಂದಿನ ಪರಂಪರೆಯ ಪರಿಚಯವೇ ಇಲ್ಲವೆ ಎಂಬರ್ಥವಲ್ಲ. ಆ ಎಲ್ಲ ಪರಂಪರೆಯ ಕೀರ್ತನೆಯ ಹಿಂದಿನ ರಚನೆಯ ಭಾವ ಇವರ ಕೀರ್ತನೆಯಲ್ಲಿವೆ. ಆದರೂ ಸಹ ಬೇರೊಬ್ಬ ದಾಸರನ್ನ ನೆನೆಯದಿರುವುದು ಬಹುಶಃ ಕೃಷ್ಣದಾಸರ ಕಾಲಕ್ಕೆ ಬೇರೆ ಬೇರೆ ಪಂಥಗಳಾಗಿ ಕವಲೊಡೆದ ಸಂದೇಹಗಳಿರಲು ಸಾಧ್ಯವಿದೆ. ಇನ್ನು ಕೃಷ್ಣದಾಸರಿಗೆ ಶಿವಶರಣರ ವಚನಗಳ ಗಾಢವಾದ ಪರಿಚಯ ಇರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಕೃಷ್ಣದಾಸರು ಅನೇಕ ಕೀರ್ತನೆಗಳ ಜೊತೆಗೆ ವಚನಗಳನ್ನು ಸಹ ರಚನೆ ಮಾಡಿದ್ದಾರೆ. ಇವರ ಮೇಲೆ ವಚನ ಪ್ರಭಾವ ಮತ್ತು ಪ್ರೇರಣೆಯನ್ನುಂಟಾಗಲು ಅವರು ಬಾಳಿ ಬದುಕಿದ ಪರಿಸರ ಮುಖ್ಯವಾಗಿ ಕಾರಣವಾಗುತ್ತದೆ. ''ಕೃಷ್ಣದಾಸರ ಕೀರ್ತನೆಗಳ ದೇವತಾಸ್ತುತಿಗಳ ವೈಶಿಷ್ಟ್ಯವೆಂದರೆ ಪ್ರಾಸ, ಅನುಪ್ರಾಸ ಹಾಗೂ ಪೌರಾಣಿಕ ಕಥೆಗಳ ಗಾಢಪ್ರಭಾವ, ಭಾರತ, ಭಾಗವತ ಹಾಗೂ ರಾಮಾಯಣಗಳ ಅತಿಸಣ್ಣ ಪಾತ್ರವು ಅವರ ತುದಿನಾಲಿಗೆ ಮೇಲೆ ಇರಬೇಕು''[೨] ಎಂಬುದಕ್ಕೆ ಶಿವನನ್ನು ಕುರಿತು ರಚಿಸುವ ಈ ಒಂದು ಪದ್ಯ ಮುಖ್ಯವಾಗಿದೆ.

''ನಕ್ಷತ್ರ ರಮಣ ನಯ್ಯನಿಗೊಲಿದು ಶರವನ್ನಿತ್ತೆ |
ನಕ್ಷತ್ರ ದೊಲ್ಲಭನ ತಮ್ಮನ ಸುತನ ಸುಟ್ಟೆ |
ನಕ್ಷತ್ರ ಇಲ್ಲದವನ ವೈರಿಗಮನನ ತಾತ |
ನಕ್ಷತ್ರ ಕಾಂತಧರನೇ ||

ನಕ್ಷತ್ರ ಜಾತ - ನಗ್ರಜನ ಮಸ್ತಕವ ತರಿದೇ |
ನಕ್ಷತ್ರ ಸಹಸ್ರ ಉಳ್ಳವನ ದ್ವಾರವನು ಕಾಯ್ದೆ |
ನಕ್ಷತ್ರ ನೀನೇ ಇಂದ್ರಾದಿ ದೇವತೆಗಳಿಗೆ ಗುರು ಮಹಿಪತಿಸ್ವಾಮಿ |
ನಕ್ಷತ್ರ ಭೂಷಸಲಹೋ''[೩]

ಈ ಪದ್ಯವು ಶಿವನ ಎಂಟು ಕಥೆಗಳನ್ನು ನಿರೂಪಿಸುತ್ತದೆ. ಪ್ರತಿಯೊಂದು ಸಾಲಿನಲ್ಲಿಯೂ ನಕ್ಷತ್ರವೆಂಬ ಪದ ಹೊಸ ಕಥೆಯ ಉಗಮಕ್ಕೆ ಕಾರಣವಾಗಿದೆ. ಇಪ್ಪತ್ತೇಳು ನಕ್ಷತ್ರಗಳಲ್ಲಿ ಒಂದೊಂದಾಗಿ ಭಾರತ ಭಾಗವತಾದಿಗಳಲ್ಲಿರುವ ಉಪಕಥೆಗಳನ್ನು ಕೃಷ್ಣದಾಸರು ಈ ಪದ್ಯದಲ್ಲಿ ನೆನಪಿಸುತ್ತಾರೆ. ''ನಕ್ಷತ್ರ ರಮಣಯ್ಯನಿಗೆ ಒಲಿದು ಶರವನಿತ್ತೆ ಎಂದಾಗ ಉತ್ತರೆ(ನಕ್ಷತ್ರ)ಯ ಗಂಡ ಅಭಿಮನ್ಯುವಿನ ತಂದೆ ಅರ್ಜುನ ಒಲಿದು ಪಾಶುಪತಾಸ್ತ್ರವನ್ನಿತ್ತವನು ಎಂದು ಶಿವನೆಂದಾಗುತ್ತದೆ. ಇದು ಮಹಾಭಾರತದಲ್ಲಿ ಬರುವ ಕಥೆ.

ಎರಡನೆಯ ಸಾಲು ನಕ್ಷತ್ರದೊಲ್ಲಭನ ತಮ್ಮನ ಸುತನ ಸುಟ್ಟೆ ಎನ್ನುವಾಗ ರೇವತಿ (ನಕ್ಷತ್ರ)ಯ ಗಂಡ ಬಲರಾಮನ ತಮ್ಮ ಕೃಷ್ಣನ ಮಗ ಮನ್ಮಥನನ್ನು ಸುಟ್ಟ ಶಿವ ಎಂದಾಗುತ್ತದೆ. ಮೂರನೆಯ ಸಾಲು ನಕ್ಷತ್ರ ಇಲ್ಲದವನ ವೈರಿಗಿ ಮನನ ತಾತಾ ಎನ್ನುವಾಗ ಶ್ರವಣ(ನಕ್ಷತ್ರ) ಕಿವಿಯಿಲ್ಲದ= ಹಾವಿನ ವೈರಿ ನವಿಲಿನ ಮೇಲೆ ಹೋಗುವ ಷಣ್ಮುಖನ ಅಪ್ಪ ಶಿವ ಎಂದಾಯಿತು.''[೪] ನಾಲ್ಕನೆಯ ಸಾಲು ನಕ್ಷತ್ರಕಾಂತಾವರ ಅಂದರೆ ಚಂದ್ರಧರ. ಚಂದ್ರನನ್ನು ತನ್ನ ತಲೆಯ ಮೇಲೆ ಇಟ್ಟುಕೊಂಡವ ಶಿವನು ಎಂದಾಗುತ್ತದೆ. ಐದನೆಯ ಸಾಲು ನಕ್ಷತ್ರಜನ=ಚಿತ್ರಾನಕ್ಷತ್ರಜ=ಮನ್ಮಥ, ಅಣ್ಣ= ಬ್ರಹ್ಮ ಮಸ್ತಕ ತರಿದವ=ಶಿವ. ಆರನೆಯ ಸಾಲು ನಕ್ಷತ್ರ ಎಂದರೆ ಹಸ್ತ(ಕೈ) ಸಾವಿರ ಕೈಗಳುಳ್ಳ ಬಾಣಾಸುರನ ಬಾಗಿಲ ಕಾಯ್ದವ ಶಿವ ಎಂದಾಗುತ್ತದೆ. ಏಳನೆಯ ಸಾಲು ನಕ್ಷತ್ರ ನೀನೇ ಇಂದ್ರಾದಿ ದೇವತೆಗಳಿಗೆ ಗುರು ಎಂದರೆ ಇಂದ್ರಾದಿ ದೇವತೆಗಳಿಗೆ ಜ್ಯೇಷ್ಠನಾದವನು ಶಿವ ಎಂದಾಗುತ್ತದೆ. ಎಂಟನೆಯ ಸಾಲು ನಕ್ಷತ್ರ ಭೂಷಣ(ಆಶ್ಲೇಷ) (ಸರ್ಪ)= ಸರ್ಪಭೂಷಣವಾದವ ಶಿವ ಎಂದಾಗುತ್ತದೆ. ಹೀಗೆ ಕೃಷ್ಣದಾಸರ ಕೀರ್ತನೆಯಲ್ಲಿ ಕಥೆ, ಉಪಕಥೆ, ಅಡ್ಡ ಕಥೆಗಳನ್ನು ಹೆಣೆಯುವುದರ ಮೂಲಕ ಶಿವನ ವ್ಯಕ್ತಿತ್ವದ ದರ್ಶನವನ್ನು ಮಾಡಿಸುತ್ತಾರೆ. ಶಿವನ ಕುರಿತು ಇನ್ನೂ ಅನೇಕ ಕೀರ್ತನೆಗಳನ್ನು ರಚನೆ ಮಾಡಿದ್ದಾರೆ. ಇವುಗಳಲ್ಲಿ ಈ ಕೀರ್ತನೆಯು ಮಹತ್ವದಾಗಿದೆ.

''ಪಾಹಿಮಾಂ ಪಾಹಿ| ಶಿವಹರ ಮೃಡ ಶಂಭೋ |

ಅದ್ರಿಧರ ಪ್ರಿಯ ಅದ್ರಿ ಕೃತಾಲಯ |
ಅದ್ರಿಜಾಮಾತ್ರಾದ್ರಿ ರಿಪುನುತ |
ಅದ್ರಿಜೆ ಪತಿ ಪಾಪದ್ರಿ ಕುಲಿಶಕನ |
ಕಾದ್ರಿಶರಾಸನ ಮುದ್ರಿತ ಪಾಣೇ''[೫]

ಕೃಷ್ಣದಾಸರು ಈ ಕೀರ್ತನೆಯಲ್ಲಿ ಶಿವನ ಇನ್ನುಳಿದ ಅವತಾರಗಳನ್ನು ದರ್ಶಿಸುತ್ತಾರೆ. ಕೃಷ್ಣನಿಗೆ ಪ್ರಿಯವಾದವ ಶಿವನೆನ್ನುತ್ತ ಅದ್ರೀಕೃತಾಲಯ ಪರ್ವತವನ್ನೇ ಮನೆ ಮಾಡಿಕೊಂಡವ ಶಿವ. ಪರ್ವತ ರಾಜನ ಅಳಿಯನಾಗಿ ದೇವಾನುದೇವತೆಗಳಿಗೆ ಶ್ರೇಷ್ಠನಾದ ಇಂದ್ರನಿಂದ ಸ್ತುತಿಸಿಕೊಳ್ಳುವನು. ಶಿವ ಅದ್ರಿಜೆ ಪತಿ ಅಂದರೆ ಪಾರ್ವತಿಯ ಪತಿಯಾದ ಶಿವನನ್ನು ಕುರಿತು

ಬಹುಸುಂದರವಾಗಿ ಈ ಕೀರ್ತನೆಯಲ್ಲಿ ಬಣ್ಣಿಸಿದ್ದಾರೆ. ಶಿವನ ವಿವಿಧ ಮುಖಗಳ ಅನಾವರಣವನ್ನು ಕೃಷ್ಣದಾಸರು ಈ ಪದ್ಯದಲ್ಲಿ ಮಾಡಿದ್ದಾರೆ. ಹೀಗೆ ಉಪಕಥೆಗಳನ್ನು ಹೆಣೆಯುತ್ತಾ ಕೃಷ್ಣದಾಸರು ಶಿವನನ್ನು ಕುರಿತು ಈ ರೀತಿಯಲ್ಲಿ ಕೊಂಡಾಡಿದ್ದಾರೆ.

''ನೋಡುವ ಬನ್ನಿ ಪೂಜೆ ಮಾಡುವ ಬನ್ನಿ |
ಪಾಡಿ ನಲಿದಾಡುತಲಿ ಎನ್ನೊಡೆಯ ಲಿಂಗಗ

ದೇಹ ದೇವಾಲಯದಲ್ಲಿ ಹೃದಯ ಜಲ ಹರಿಯಲಿ |
ಊಹಿಸಿ ನೆಲೆಯಾಗಿ ಹೊಳೆವ ಆತ್ಮಾಲಿಂಗಗ''[೬]

ಎನ್ನುತ್ತಾ ಕೃಷ್ಣದಾಸರು ಅಪ್ಪಟ ಶಿವಶರಣನಾಗಿ ಶಿವನನ್ನು ಹಾಡಿಕೊಂಡಿರುವುದು ವಿಶೇಷವಾಗಿದೆ. ಮುಖ್ಯವಾಗಿ ಎಲ್ಲ ದಾಸರಂತೆ ತಮ್ಮ ಪರಂಪರೆಗೆ ಕಟ್ಟುಬೀಳದೆ ಕೃಷ್ಣದಾಸರು ಶಿವನ ಒಲುಮೆಗೆ ಪಾತ್ರರಾಗಲು ಈ ಒಂದು ಪದ್ಯ ಸಾಕು. ಹೀಗೆ ಶಿವನನ್ನು ಕುರಿತು ನಾಲ್ವತ್ತಕ್ಕೂ ಹೆಚ್ಚು ಕೀರ್ತನೆಗಳನ್ನು ಕೃಷ್ಣದಾಸರು ರಚಿಸಿದ್ದಾರೆ. ಅವು ಎಲ್ಲವುಗಳಲ್ಲಿ ಶಿವನ ಸಾಕ್ಷಾತ್ಕಾರ, ಆತನ ಅಂತರ್ಮುಖಿಯ ದರ್ಶನ ಮುಂತಾದವುಗಳು ಎದ್ದು ಕಾಣುತ್ತವೆ. ಕೃಷ್ಣದಾಸರು ಶಿವಸ್ತುತಿಗೆ ಮಿಸಲಾಗಿಟ್ಟ ಕೀರ್ತನೆಗಳಲ್ಲಿ ಈ ಭಾವ ಎದ್ದು ಕಾಣುತ್ತದೆ.

''ಮಾಧ್ವರ ಮೋಕ್ಷಕ್ಕೆ ದಾರಿ ತೋರುವವನು ಹನುಮಂತ. ಆತ ಮುಖ್ಯ ಪ್ರಾಣ ದೇವರು ಹೌದು. ಅವನನ್ನು ಸ್ತುತಿಸುವ ಶರಣೆಂಬೆ ಗುರುರಾಯಂಬ ಕೀರ್ತನೆಯಲ್ಲಿ ಶ್ರೀ ಮಧ್ವಾಚಾರ್ಯರ ಮಹಾಭಾರತ ತಾತ್ಪರ್ಯ ನಿರ್ಣಯ ಗ್ರಂಥದ ಸಾರವನ್ನೇ ಸಾಂಕೇತಿಕವಾಗಿ ಹೇಳಿದ್ದು ದಾಸರ ಪಾಂಡಿತ್ಯಕ್ಕೆ ಉದಾಹರಣೆಯಾಗಿದೆ.''[೭] ಈ ಪದ್ಯದಲ್ಲಿ ಹಣಮಂತನ ಸಾಹಸಗಾಥೆಯನ್ನು ಹಾಗೂ ಭಕ್ತರ ರಕ್ಷಕನಾದ ಪರಿಯನ್ನು ಹದುಳವಾಗಿ ಕೃಷ್ಣದಾಸರು ಚಿತ್ರಿಸಿದ್ದಾರೆ.

''ಶರಣೆಂಬೆ ತನುಮನದಿಂದ ಗಣರಾಯಾ
ಕರುಣಿಸೆನಗ ನರಮೃಗ ಕಾಯಾ

ಸುರಾಸುರರ ಕೈಯ್ಯ ಸೇವೆ ಕೊಳುವ ಚರಣವನು
ಮೊರೆಯ ಹೊಕ್ಕೆನು ಕೇಳಿ ಕೀರುತಿಯಾ

ಕೊಂಡಾಡುವಂತೆ ಪದ ಪದ್ಯದಿ ನಿನ್ನ ಚರಿಯಾ
ಶುಂಡಾಲ ಶುಭ ಮುಖ ಕೊಡುಮತಿಯನಾ

ಎಂದೆಂದು ನೋಡಲು ಅಪರಾಧಿನಾ ಮೊದಲು
ಕುಂದನಾರಿ-ಸದೇ ನೋಡೆನ್ನ ಮ್ಯಾಲಿನ್ನಾ

ಅಗಜ ನಂದನ ಗುರು ಮಹಿಪತಿ ಸುತ ಸ್ವಾಮಿ
ಭಕುತ ರಕ್ಷಕ ಮುನಿಜನ ಪ್ರೇಮೀ"[೮]

ದಾಸರು ಹನುಮಂತನನ್ನು ಕುರಿತು ಅನೇಕ ಕೀರ್ತನೆಗಳಲ್ಲಿ ಹನುಮದೇವನ ಸಾಧನೆಯ ಮಾರ್ಗವನ್ನು ನೆನೆಯುತ್ತಾರೆ. ಆತನ ದಿವ್ಯದರ್ಶನವನ್ನು ಇಂತಹ ಪದ್ಯಗಳ ಮೂಲಕ ಕೊಂಡಾಡಿರುವುದು ಅವರ ಕೀರ್ತನೆಯ ವಿದ್ವತ್ತಿಗೆ ಹಿಡಿದ ಕನ್ನಡಿಯಾಗಿದೆ. ಶಿವ ಹನುಮಂತನಂತೆಯೇ ಲಕ್ಷ್ಮೀದೇವಿಯನ್ನು ಸ್ತುತಿಸುವ ಅನೇಕ ಕೀರ್ತನೆಗಳು ಕೃಷ್ಣದಾಸರ ಸಾಹಿತ್ಯದಲ್ಲಿ ಎದ್ದು ಕಾಣುತ್ತದೆ.

"ಎದ್ದಳೀಗಿದಕೋ ಶ್ರೀರಮಣಿ|| ಎದ್ದಳೀಗಿದಕೋ

ಮುದ್ದು ಶ್ರೀಹರಿಯಾ ತೋಳ ತೆಕ್ಕೆಯಾನುಸಳಿ
ಶುದ್ಧ ರಾತ್ರಿಲಿ ಹರಿ ರತಿಯೊಳು ಮಲಗಿ

ಸರಸಿಜ ಸಖನ ಮುಂಬೆಳಗವ ಹರಿಯಲು |
ಭರದಲಿ ಹಕ್ಕಿಯು ಕಲಕಲವೆನಲು

ನಾರದ ತುಂಬುರ ಮಾಡುವ ಪ್ರಾತಃ |
ಸ್ಮರಣೆಯ ಗಾಯನ ಧ್ವನಿಯನು ಕೇಳಿ

ಕರತಳದಲಿಯವಿಗಳನು-ವರೆಸುತಲಿ |
ತೆರೆವುತ ಮುಚ್ಚುತ ಅರೆಗಣ್ಣ ನೋಟದಿ

ಬಾಯೊಳಗಿನ ತಂಬುಲವ ನುಗುಳುತ
ಬಾಹ್ಯ ಅಧರ ವಕಂಪವ ನಡಗಿಸುತ"[೯]

ಕೃಷ್ಣದಾಸರು ಲಕ್ಷ್ಮೀದೇವಿಯ ರೂಪ, ಲಾವಣ್ಯವನ್ನು ಶ್ರೀಹರಿಯ ಮುಖೇನ ಹೇಳಿಕೊಂಡಿದ್ದಾರೆ. ಈ ಪದ್ಯವು ವಾದಿರಾಜರ ಊರುಟಾನಿ ಎಂಬ ಪದ್ಯವನ್ನು ನೆನೆಪಿಸುವಂತಿದೆ. ಲಕ್ಷ್ಮೀದೇವಿಯ ಒಯ್ಯಾರ, ಶ್ರೀಹರಿಯನ ಜೊತೆಗಿರುವ ಗಾಢವಾದ ಪ್ರೀತಿ, ನಾರದಮುನಿಯ ಇಂಪಾದ ಹಾಡು ಸುಂದರವಾಗಿದೆ. ಅವಳ ಅರೆಗಣ್ಣ ನೋಟದ ತಾಂಬೂಲ ವದನ ಸೇವನೆ, ಅವಳ ಬೈತಲೆ ಕೊರಳಾಭರಣ, ಕೈ ಆಭರಣ, ತುಂಬಿದ ಎದೆ ಆಕರ್ಷಣೆಯವಾಗಿ ಬಿಂಬಿಸಿದ್ದಾರೆ. ತನ್ನ ನಂಬಿದ ಬಾಲರ ಹೊರೆಯಲೂದಯ ಬೀರುತ್ತ ಬರುವ ಲಕ್ಷ್ಮಿಯ ದಿವ್ಯದರ್ಶನವನ್ನು ಕೃಷ್ಣದಾಸರು ಮನದುಂಬಿ ಕೊಂಡಾಡಿದ್ದಾರೆ. ಈ ಕೀರ್ತನೆಯಲ್ಲಿ ಲಕ್ಷ್ಮಿಯ ದಿವ್ಯ ತೇಜಸ್ಸು, ರೂಪ ಕಣ್ಮುಂದೆ ಕಟ್ಟುವಂತೆ ಚಿತ್ರಿಸಿದ ರೀತಿ ಆಪ್ಯಾಯಮಾನವಾಗಿದೆ. ಕೃಷ್ಣದಾಸರ ಈ

ಕೀರ್ತನೆಯು ಶೃಂಗಾರ ಕಲ್ಪನೆಗೆ ಹೆಸರಾದದ್ದು. ಲಕ್ಷ್ಮಿಯ ಹಿಂದಿನ ರಾತ್ರಿ ಪರಮಾತ್ಮನ ಜೊತೆಗೆ ಆಡಿದ ರತಿಕ್ರೀಡೆಯನ್ನು ನವಿರಾಗಿ ಹೇಳುತ್ತಾರೆ. ದಾಸರು ಕೊನೆಗೆ ತನ್ನನ್ನು ನಂಬಿದ ಬಾಲಕರನ್ನು ಸಲುಹಲು ಜಗತ್ತಿಗೆ ಜೀವನವನ್ನು ನೀಡಿದ ಜನನಿ ಆಗಮನವನ್ನು ಬಣ್ಣಿಸಿದ ರೀತಿ ಮೆಚ್ಚುವಂತದ್ದು. ಹೀಗೆ ಅನೇಕ ಕೀರ್ತನೆಯಲ್ಲಿ ಲಕ್ಷ್ಮಿದೇವಿಯ ವಿವಿಧ ಮುಖದರ್ಶನವನ್ನು ಮಾಡಿದ್ದಾರೆ.

ಶ್ರೀಹರಿಯನ್ನು ಸ್ತುತಿಸಲು ಕೃಷ್ಣದಾಸರಿಗೆ ಶಬ್ದಗಳೇ ಸಾಲವು. ಪರಮಾತ್ಮನ ದರ್ಶನದ ಆಗಮನವನ್ನು ಕುತೂಹಲದಿಂದ ಕಾಣುತ್ತಾರೆ. ಬಾಲಲೀಲೆ ಮುಖೇನ ಶ್ರೀಹರಿಯ ಸ್ತುತಿಯನ್ನು ಮಾಡಿದ್ದಾರೆ. ಶ್ರೀಹರಿಯ ದಶಾವತಾರ ಸ್ತುತಿಯನ್ನು ಮಾಡುವಾಗ ಕೃಷ್ಣದಾಸರು ಅಧ್ಯಾತ್ಮಲೋಕದಲ್ಲಿ ತಲ್ಲೀನರಾಗಿ ಭವಬಂಧನವನ್ನು ಬಿಡಿಸಿಕೊಳ್ಳುವ ನಿಟ್ಟಿನಲ್ಲಿ ತನ್ಮಯರಾಗಿಬಿಡುತ್ತಾರೆ. ಶ್ರೀಹರಿಯ ಮೇಲಿರುವ ಪ್ರೀತಿ, ವಾತ್ಸಲ್ಯ, ಸಖ್ಯ ಭಾವನೆಗಳು ವಿರಹದಿಂದ ತುಂಬಿ ತುಳುಕುತ್ತವೆ. ಮತ್ತೆ ಮತ್ತೆ ಕೃಷ್ಣದಾಸರ ಕೀರ್ತನೆಯಲ್ಲಿ ಶ್ರೀಹರಿಯ ದರ್ಶನ ವಿವಿಧ ವಸ್ತುಗಳ ಹಿನ್ನೆಲೆಯಲ್ಲಿ ವರ್ಣಾಲಂಕೃತಗೊಂಡ ರೀತಿ ಅದ್ಭುತವಾಗಿದೆ. ಆ ಒಂದು ಕೀರ್ತನೆಯ ಪದ್ಯ ಈ ರೀತಿಯಲ್ಲಿದೆ.

''ಭಕುತರ ರಿಣಕಂಜಿ ಅಡಗಿದರೇ |
ಅಖಿಳದಿ ಬಿಡುವರೇ ಪ್ರಕಟಿಸಿ ಬಾ ರಂಗಯ್ಯಾ

ಕತ್ತಲೆಯೊಳು ಹೆಜ್ಜೆ ದೋರದೇ ತಿರುಗುತಾ |
ಮತ್ತೆ ದೊಡ್ಡ ಬೆಟ್ಟದಾ ಮರಿಲ್ಯಾಡುತಾ |
ಅತ್ತಿತ್ತ ನೋಡಿದೆವೆ ಝುಡಪಿನೊಳಗ ಹೊಕ್ಕು |
ಉತ್ತಮ ನರಮೃಗದಂತಡವಿಯ ಸೇರಿ |

ಬಡತನ ದೋರಲೆಂದು ಯಾಚಕನಾದರೇನು |
ಕಡಲ ಬೊರಿಯಾ ಮನೆ ಮಾಡಿರಲೇನು |
ಜಡೆಗಟ್ಟ ನಾರ ಸೀರೆನುಟ್ಟು ಉಪವಾಸ ಮಾಡಿ
ಗಿಡವೇರಿ ಮಡುಹೊಕ್ಕು ಕಳವಿಲಿ ತಿರುಗುತಾ

ಮುನಿಯಂತೆ ದಿಗಂಬರ ರೂಪನ ತಾಳಲೇನು |
ಜನದ ಕಲಕೀ ಮಾತು ಕಡೆಗಾಣುದೇ |
ಘನಗುರು ಮಹಿಪತಿ ಸುತ ಪ್ರಭು ನಿನ್ನೊಳಿದ್ದಾ |
ಅನುವದೋರಿ ಸಂತೈಸಿ ಶರಣರ ರಕ್ಷಿಸಯ್ಯಾ''[೧೦]

ಎಂದು ಪ್ರಾರಂಭವಾಗುವ ಕೀರ್ತನೆಯು ಶ್ರೀಹರಿಯ ದಶಾವತಾರದ ಬಹುಮುಖ್ಯವಾದ ಸ್ಮರಣೆಯಾಗಿದೆ. ಕತ್ತಲೆಯೊಳು ಹೆಜ್ಜೆದೋರದೆ ತಿರುಗುತ್ತ ಎನ್ನುವಲ್ಲಿ ಮತ್ಸ್ಯ, ಮತ್ತೆ ದೊಡ್ಡ ಬೆಟ್ಟದ ಮರೆಯಲ್ಲಾಡುತ್ತ ಎನ್ನುವಲ್ಲಿ ಕೂರ್ಮವಿದೆ. ಅತ್ತಿತ್ತ ನೋಡಿದೆವೆ ಝುಡಪಿನೊಳು ಹೊಕ್ಕು ಎನ್ನುವಲ್ಲಿ ವರಾಹ, ಉತ್ತಮ ನರಮೃಗದಂತಡವಿಯ ಸೇರಿ ಎನ್ನುವಲ್ಲಿ ನರಸಿಂಹ ದರ್ಶನವನ್ನು ಮಾಡಿಸಿದ್ದಾರೆ. ಹೀಗೆ ಶ್ರೀಹರಿಯ ದಶಾವತಾರವನ್ನು ಈ ಪದ್ಯ ಕಣ್ಮುಂದೆ ಕಟ್ಟುವ ಹಾಗೆ ಶ್ರೀಹರಿಯನ್ನು ಕೃಷ್ಣದಾಸರು ಸ್ಮರಿಸುತ್ತಾರೆ.

ಅನೇಕ ಕೀರ್ತನೆಗಳಲ್ಲಿ ಶ್ರೀರಾಮನ ಮೇಲಿರುವ ಪ್ರೀತಿ ವಾತ್ಸಲ್ಯವನ್ನು ಗುಣಗಾನ ಮಾಡಿದ್ದಾರೆ. ಶ್ರೀರಾಮನು ಸಕಲ ಗುಣಧಾಮನಾದ ಪರಿಯನ್ನು ಹೇಳಿದ್ದಾರೆ. ರಾಮನಾಥ ದೀನನಾಥನಾದ ಪ್ರಸಂಗವನ್ನು ಈ ಕೆಳಗಿನ ಕೀರ್ತನೆಗಳಲ್ಲಿ ಅಭಿವ್ಯಕ್ತಗೊಂಡಿದೆ.

''ರಾಮ ಬಂದನೇನೆ | ಶ್ರೀರಘು
ರಾಮ ಬಂದನೇನೆ ||
ಪ್ರೇಮಿಕ ಜನರನು ಪೊರೆಯಲಾಗಿ | ಶ್ರೀರಘು

ಜಾನಕಿ ಸಹಿತ ಲಕ್ಷ್ಮಣರೊಡಗೂಡಿ |
ಸ್ವಾನಂದದಿ ದಿಗ್ವಿಜಯಮಾಡಿ |

ಈರೇಳು ವರುಷಕೆ ಬರುವೆನೆಂದು ಮುನ್ನ |
ಸಾರಿದ ನುಡಿ ಸತ್ಯಮಾಡಿ ದೋರಲು

ಹಾರೈಸಿ ನೋಡಲು ಕಣ್ಣಿಗೆ ಹಬ್ಬ |
ದೋರಲು ಮೋಹದ ಮದ್ದು ಮೊಗದಾ

ಅವಧಿಯ ಮೀರಲು ಅಸುವ ತೊರೆವೆಸಿಂದು |
ತವಕದಿ ಭರತನ ಪಾಲಿಸಲಿಕ್ಕೆ

ಸಾಕೇತ ಪುರಪತಿ ಸಾಮ್ರಾಜ್ಯಲೋಲನಾಗಿ |
ಸಾಕುವ ಜಗಗುರು ಮಹಿಪತಿ ಪ್ರಭು''[೧೧]

ಶ್ರೀರಾಮನ ದಿಗ್ವಿಜಯ, ಸೀತಾಮಾತೆ ಹಾಗೂ ಲಕ್ಷ್ಮಣರು ಒಂದುಗೂಡುವ ಪರಿಯನ್ನು ಈ ಕೀರ್ತನೆಯಲ್ಲಿ ಕಾಣುತ್ತೇವೆ. ವನವಾಸವನ್ನು ಪೂರ್ಣಗೊಳಿಸಿ ತವಕದಿಂದ ಭರತನ ಹತ್ತಿರಕ್ಕೆ ಬರುವ ಸಂದರ್ಭ ವಿಶಿಷ್ಟವಾಗಿ ಈ ಕೀರ್ತನೆಯಲ್ಲಿ ಮೂಡಿಬಂದಿದೆ. ಇಲ್ಲಿಯ

ಪುರದ ಜನರ ಪ್ರೇಮಕ್ಕೆ ಮನಸೋಲುವ ರೀತಿ ಅದ್ಭುತವಾಗಿದೆ. ಅವರ ಕಷ್ಟಕಾರ್ಪಣ್ಯಕ್ಕೆ ಸ್ಪಂದಿಸುವ ಸಲುವಾಗಿ ಕಾಡಿನಿಂದ ನಾಡಿಗೆ ಆಗಮಿಸಿದ ರಾಮನ ದಿವ್ಯದರ್ಶನದ ಸ್ವಾಗತ ಈ ಪದ್ಯದಲ್ಲಿ ಎದ್ದುಕಾಣುತ್ತದೆ. ಹಾಗೆ ರಾಮನನ್ನು ಕುರಿತು ಅವನ ಸಾಧನೆಯ ಕಾರ್ಯವನ್ನು ಕುರಿತು ಅನೇಕ ಪದ್ಯಗಳು ಕೃಷ್ಣದಾಸರಿಂದ ರಚಿತಗೊಂಡಿವೆ. ಇತ ಸೀತನಾತನೆ ವಾತಾಜಾತ ಪ್ರೀತನೆ ಧಾತುಮಾತು ರಹಿತಖ್ಯಾತ ಭೂತವೃತಧಾತನೆ ಎನ್ನುವಲ್ಲಿ ದಾಸರು ಶ್ರೀರಾಮನು ಸುಗ್ರೀವನಿಗೆ ಅಭಯ ಹಸ್ತವನ್ನು ನೀಡಿದ ಪ್ರಸಂಗ ಹೇಳಿದ್ದಾರೆ. ಇವುಗಳ ಜೊತೆಗೆ ರಘುರಾಮನ ಚರಣ ಕಮಲಗಳಿಗೆ ಶಿರಬಾಗುವ ಕೃಷ್ಣದಾಸರ ಕೀರ್ತನೆಯ ರೀತಿ ಅದ್ಭುತವಾಗಿದೆ. ಶ್ರೀರಾಮನ ನೆನೆಯುತ ಕೃಷ್ಣದಾಸರು ಸೀತಾದೇವಿ, ಲಕ್ಷ್ಮಣ, ಹನುಮಂತ ಮುಂತಾದ ದೇವತೆಗಳ ಚರಿತ್ರೆಯನ್ನು ಅಲ್ಲಲ್ಲಿ ಬಿಂಬಿಸಿದ್ದಾರೆ. ಆ ಮೂಲಕ ಶ್ರೀರಾಮನ ಸಮೂಹವನ್ನು ನೆನೆಯುವ ಪರಿಯನ್ನು ಕೃಷ್ಣದಾಸರು ಮಾಡಿದ್ದಾರೆ.

> "ನಿನ್ನ ಕಥೆಯ ಶ್ರವಣಮಾಡಿ ನಿನ್ನ ನೋಡಿ ಕೂಡಿ ಪಾಡಿ
> ನಿನ್ನ ನಿರ್ಮಾಲ್ಯ ಘ್ರಾಣಿಸುತಲಿ ನಿನ್ನದಾಸ ನೆನಿಸಿ
> ಧನ್ಯಗತಿಯ ಪಡೆವ ತೆರದಲ್ಲಿ ನಿಲಿಸಬೇಕು
> ಎನ್ನ ಮನವ ಕರುಣದಿಂದಲಿ ಮಹಿಪತಿಸುತನ್ನ
> ಸ್ವಾಮಿ ಸಲುಹು ಜಗದಲಿ"[೨]

ಶ್ರೀರಾಮನ ಚರಿತ್ರೆಯನ್ನು ಕೇಳಿ ಆನಂದಿಸಿ, ಅಂತಃಕರಣದಲ್ಲಿ ಕೂಡಿ ನೋಡಿ ಪಾಡಿ ಧನ್ಯತೆಯಿಂದ ರಚಿಸಿದ್ದಾರೆ. ಮನ ಪಾವನವಾಗುವುದು ಎನ್ನುವಲ್ಲಿ ಕೃಷ್ಣದಾಸರು ಶ್ರೀರಾಮನ ಮೇಲಿಟ್ಟಿರುವ ಭವ ಭಕ್ತಿಯು ಶ್ರೇಷ್ಠವಾದುದಾಗಿದೆ. ಕೃಷ್ಣದಾಸರು ಶಿವ, ಪಾರ್ವತಿ, ಶ್ರೀರಾಮ, ಲಕ್ಷ್ಮಿಯನ್ನು ಕೊಂಡಾಡಿರುವ ನೂರಾರು ಕೀರ್ತನೆಗಳು ನಮಗೆ ದೊರೆಯುತ್ತವೆ. ಶ್ರೀಕೃಷ್ಣನು ಮಥುರಾ ನಗರವನ್ನು ಪ್ರವೇಶ ಮಾಡುವಾಗ ವೃಂದಾವನದಿಂದ ಆ ಕ್ರೂರನೊಡನೆ ಹೋಗುವಾಗ ಕೃಷ್ಣನ ಅಗಲುವಿಕೆಯ ಚಿತ್ರ ಎದ್ದುಕಾಣುತ್ತದೆ. ಮಥುರಾ ನಗರಕ್ಕೆ ಆಗಮಿಸುವ ಮೊದಲೇ ಅಲ್ಲಿಯ ಜನರು ಶ್ರೀಕೃಷ್ಣನನ್ನು ಬರಮಾಡಿಕೊಳ್ಳುವ ನಿಟ್ಟಿನಲ್ಲಿ ಆತನ ಮಹಿಮೆಯನ್ನು ಕೃಷ್ಣದಾಸರು ಸುಂದರವಾಗಿ ಹೆಣೆದಿದ್ದಾರೆ.

> ನಮ್ಮರಂಗ ಮಥುರೆಗೆ ನಡೆತರಲು
>
> ಮಥುರೆಗೆ ನಡೆತರಲು ಅತಿ | ಹರುಷದಲಿ ಅಕ್ರೂರನೊಡನೆ
> ರಥದಲಿ ಕುಳಿತು ಫಡ ಫಡ ಫಡಲೆಂದು |
> ಪಥದಲಿ ನಡಸ್ಯಾಡುತಲಿ

ಬಿಲ್ಲಹಬ್ಬದ ನೆವದಲಿ | ಫುಲ್ಲಲೋಚನ ಮೋಹನ ಕೃಷ್ಣ |
ಇಲ್ಲಿಗೆ ಬಂದನು ಎನುತಲಿ ಕೇಳಲು |ಎಲ್ಲರು ನಡೆದರು ನೋಡಲಾಗಿ

ಆಲಯದೊಳಗೆ ನಿಲ್ಲದೇ | ಬಾಲಕಿಯರು ತಮತಮ್ಮ |
ಚಾಲವರುತಿಹಾ ತೊಟ್ಟಿಲೊಳಗಿನಾ | ಬಾಲಕರಿಗೆ ಮೊಲೆಗುಡದೆ

ಒಬ್ಬಳು ಅರೆಯಣ್ಣೆತಲೆಯಲಿ| ಒಬ್ಬಳು ತಿಗರವ ಹಚ್ಚಿದ ಮೈಯಲಿ
ಒಬ್ಬಳು ಪುಟಬಿಟ್ಟ ಕುಪ್ಪಸನೋಡದೆ | ಉಬ್ಬುಬ್ಬಿ ನಡೆದರು ಸಂಭ್ರಮದಿಂದ

ಅಚ್ಚಮೈಯಲಿ ಕುಳಿತಿರೆ ಒಬ್ಬಳು | ಬಚ್ಚಲೊಳಗೆ ಮಜ್ಜಕನಾಗಿ
ಅಚ್ಚುತನಾತುರದಿಂದಲಿ ಒಬ್ಬಳು ಎಚ್ಚರ ದೇಹದ ಬಿಟ್ಟು ನಡೆದಳು

ಎಲೆಯ ಶಿಶುವೆಂದು ಬಗಲಲಿ | ಅಳತೆಯ ಮಾನವನಿರಿಸಿಕೊಂಡು |
ನೆಲೆನೊಡದೇ ನಡೆದಳೊಬ್ಬಳು | ಚೆಲುವ ಕೃಷ್ಣನ ನೋಡಲಾಗಿ

ಕದವನು ಒತ್ತಿಮುಂದಕ | ಒದಗದಿ ಕೆಲವರು ಮಾಳಿಗೆ ಏರಿ |
ಸದಮಲಾನಂದಗ ತಲೆಯನು | ಬಾಗಿ ಪದುಮಕರವ ಮುಗಿದು

ದಣ್ಣನೆ ನೋಡೀ ನೋಡುತಾ | ಕಣ್ಣುಪಾರಣೆ ಮಾಡಿಕೊಂಡು |
ಮುನ್ನಿನ ದೋಷವ ಕರಗುವ ಪರಿಯಲಿ | ಪುಣ್ಯ ಸಾಮಗ್ರಿಯ ಮಾಡಿದರಂದು

ಗುರು ಮಹಿಪತಿ ಪ್ರಾಣನಾ | ಹೊರಗೆ ಕಂಡಾ ಪರಿಯ ರೂಪವಾ |
ಧರಿಸಿಕೊಂಡು ಅಂತರಂಗದಲಿ | ತ್ವರಿತದಿಂದಲಿ ಧ್ಯಾನಿಸುತಾ''[೧೩]

ಕೃಷ್ಣದಾಸರು ಈ ಕೀರ್ತನೆಯಲ್ಲಿ ಶ್ರೀಕೃಷ್ಣನನ್ನು ಕಾಣುವ ಹಾಗೂ ಆತನನ್ನು ಸ್ವಾಗತಿಸಲು ಶ್ರೀಸಾಮಾನ್ಯರು ತಮ್ಮ ದೈನಂದಿನ ಕಾರ್ಯವನ್ನು ಬದಿಗಿಟ್ಟು ಬಂದ ರೀತಿ ವಿಶಿಷ್ಟವಾಗಿದೆ. ಆತನ ಮನೋಭಾವನೆಯಿಂದ ತಮಗೆ ಅರಿವಿಲ್ಲದ ಹಾಗೆ ಓಡಿ ಬರುವ ರೀತಿ ಕೃಷ್ಣದಾಸರ ಕವಿತ್ವಕ್ಕೊಂದು ಮೆರುಗನ್ನು ಉಂಟುಮಾಡುತ್ತದೆ. ಮೋಹನ ಕೃಷ್ಣನನ್ನು ಕಾಣಲು ಒಬ್ಬಳು ಅಳುವ ಕಂದನಿಗೆ ಮೊಲೆ ಹಾಲನ್ನು ಉಣಿಸದೆ ಓಡೋಡಿ ಬರುತ್ತಾಳೆ. ಮತ್ತೊಬ್ಬಳು ತಲೆಗೆ ಎಣ್ಣೆ ಹಚ್ಚಿಕೊಳ್ಳುತ್ತಿರುವಾಗ ಅರ್ಧದಲ್ಲಿಯೇ ಬಿಟ್ಟು ಬಂದಳಂತೆ. ಇನ್ನೊಬ್ಬಳು ತಾನು ಹಾಕಿಕೊಂಡ ಕುಪ್ಪಸದ ಗುಂಡಿಯನ್ನು ಬಿಚ್ಚಿದ ಪರಿವೆಯಿಲ್ಲದೆ ಬಂದಳಂತೆ. ಮಗದೊಬ್ಬಳು ಗಡಿಬಿಡಿಯಲ್ಲಿ ತನ್ನ ಮಗುವೆಂದು ಅಳತೆಯ ಮಾಪನವನ್ನು ಬಗಲಲ್ಲಿ ಇರಿಸಿಕೊಂಡು ಬಂದು ತನ್ನ ಭ್ರಮೆಯನ್ನು ಒರೆಗೆ ಹಚ್ಚಿಸಿಕೊಂಡಳಂತೆ. ಹೀಗೆ ಶ್ರೀಸಾಮಾನ್ಯರು ತಮ್ಮೆಲ್ಲಾ ದೋಷಗಳನ್ನು

ಪರಿಹರಿಸಿಕೊಳ್ಳಲು ಶ್ರೀಕೃಷ್ಣ ಪರಮಾತ್ಮನ ಕಾಣಲು ಹಾತೊರೆಯುವ ಸಂದರ್ಭ ಪುಣ್ಯಸಂಗ್ರಹಣೆ ಮಾಡಿಕೊಳ್ಳುವ ಭಕ್ತಿ, ಪ್ರೇಮ ಇವುಗಳು ಈ ಕೀರ್ತನೆಯಲ್ಲಿ ವಿಶಿಷ್ಟ ರೀತಿಯಲ್ಲಿ ಕಂಗೊಳಿಸಿವೆ. ಕೃಷ್ಣದಾಸರು ಶ್ರೀಕೃಷ್ಣನ ಮೇಲಿರುವ ಭಕ್ತಿ ಇಷ್ಟಕ್ಕೇ ನಿಲ್ಲದೆ ಮತ್ತೆ ಮತ್ತೆ ಕೃಷ್ಣನ ಗುಣಗಾನ ಮಾಡುತ್ತಾರೆ. ಭಕ್ತನ ಮೇಲಿರುವ ಕೃಷ್ಣನ ಪ್ರೀತಿ ಮತ್ತು ಶ್ರೀಕೃಷ್ಣನ ವೈಭವ, ಪ್ರೀತಿ, ಪ್ರೇಮ ಕರ್ಮಾದಿಗಳನ್ನು ಕೃಷ್ಣದಾಸರು ಹಲವು ಕೀರ್ತನೆಗಳಲ್ಲಿ ಪುನಃ ಪುನಃ ನೆನಪಿಸುತ್ತ ಸಾಗಿದ್ದಾರೆ. ಇದಕ್ಕೆ ಉದಾಹರಣೆ ಎಂಬಂತೆ ಕೃಷ್ಣನ ಸಾಧನೆಯ ಪ್ರತಿಮೆಯನ್ನು ಈ ರೀತಿಯಲ್ಲಿ ವರ್ಣಿಸಿದ್ದಾರೆ.

''ಶ್ರೀಕೃಷ್ಣನಾ ಚರಣಾ ನಂಬಿ ಭಜಿಸುವುದು ಬಲು ಲೇಸು

ಭಾವನೆ ದೇವಕಿ ಉದರದಿ ಬಂದಾ |
ದೇವ ಹೃದಯ ಗೋಕುಲದಲಿ ಬೆಳೆದಾ |
ಅವಿದ್ಯ ಪೂತನಿಯನು ಕೊಂದಾ

ಭವರೂಪದ ಸಗಟಾಸೂರನೊದೆದಾ |
ಅವಗುಣಿಬಕ ಕೇಶಾದ್ಯರ ತರಿದಾ |
ಅವಿವೇಕಿ ಕಾಳಿಂಗನ ತುಳಿದಾ

ಭಕ್ತಿಯ ಗೋರಸ ಕಳವಿಲಿ ಸುರಿದಾ |
ಮುಕ್ತಾಂಗದ ಗೋಪೀಜನ ನೆರೆದಾ |
ಸಕ್ತಿಯ ಗೋವರೋಳು ನಲಿದಾ

ಭ್ರಾಂತಿಯ ಹಮ್ಮಿನ ಕಂಪನ ಬಡಿದಾ |
ಸ್ವಾಂತ ಸುಖ ದ್ವಾರಕೆಯಲಿ ನಿಂದಾ
ಶಾಂತಿಯ ರುಕ್ಮಿಣಿ ಕೈವಿಡಿದಾ

ತಂದೆ ಮಹಿಪತಿ ಗುರುವಾದಾ |
ಕಂದುದ್ಧವನನು ತೋರಿಸಿ ಹೊರೆದಾ |
ಛಂದದಿ ಪಾದುಕವಿತ್ತನು ಪದದಾ''[೧೪]

ಕೃಷ್ಣದಾಸರು ಈ ಕೀರ್ತನೆಯ ಮೂಲಕ ಕೃಷ್ಣನಿಗೆ ಶರಣಾಗತಿ ಮಾಡಿಕೊಂಡಿದ್ದಾರೆ. ಆತನನ್ನು ಭಜಿಸಿ ಭಕ್ತಿಯ ಮೂಲಕ ಅತ್ಯುತ್ತಮವಾದ ಕಾರ್ಯಗಳನ್ನು ಕೊಂಡಾಡಿದ್ದಾರೆ. ಕಾಳಿಂಗ ಸರ್ಪವನ್ನು ಬಂಧಿಸಿದ್ದು ಚಿತ್ರಿಸಿದ್ದಾರೆ. ಗೋಬಾಲಕರ ಹಾಗೂ ಗೋವುಗಳನ್ನು ರಕ್ಷಿಸಿದ್ದು ಶ್ರೀಕೃಷ್ಣನ ಲೀಲೆಯಲ್ಲಿ ಅರಳಿದೆ. ಮಾವ ಕಂಸನನ್ನು ಸದೆ ಬಡಿದು ದ್ವಾರಕೆಯಲ್ಲಿ

ಕಾಣಿಸಿಕೊಂಡಿದ್ದು ಶ್ರೀಕೃಷ್ಣನ ಮಹತ್ ಸಾಧನೆಯಲ್ಲಿ ಒಂದಾಗಿದೆ. ರುಕ್ಮಿಣಿದೇವಿಯ ಕೈಹಿಡಿದ ಪರಿಯನ್ನು ಕೃಷ್ಣದಾಸರು ಹಾಡುತ್ತಾ ಕೃಷ್ಣನ ಚರಿತೆಯ ಕಥೆಗಳನ್ನು ಸಹೃದಯನಿಗೆ ಕಟ್ಟಿಕೊಡುವ ಕಾರ್ಯ ಇಲ್ಲಿ ಮಾಡಿದ್ದಾರೆ.

''ಈ ಪರಿಯ ಸೊಬಗಿನ್ನಾವ ದೇವರಲಿ ಕಾಣೆ' ಎಂದು ಪುರಂದರದಾಸರು ಹೇಳಿದರು. ಆದರೆ ಸೊಬಗು ಮಾತ್ರದಿಂದಲ್ಲ! ಎಂದೆಂದು ಆತನ ಜನ ಬಂಧು ಧೀನನಾಥ ತಂದೆ ಮಹಿಪತಿ ಸ್ವಾಮಿಯೆಂದರೇನು ಮಂದಮತಿ ಕುಂದು ಘನವಂದು ನೋಡದೆ, ಇಂದು ನಂದನನಿಗೆ ಸೇವೆ ಪದದಲಿಡದಿದ್ದರೆ ಆರು ನಿನಂಘ್ರ ಭಜಿಸುವರಯ್ಯಾ ಎಂದು ಪರಮಾತ್ಮನನ್ನು ಕೇಳುತ್ತಾರೆ. ಆತ ಕಮಲಭವ ಇಂದ್ರವಂದ್ಯನಾಗಿರಬೇಕು. ರಮೆಧರಾದೇವಿಯ ರಮಣನಾಗಿರಬೇಕು. ಜಗದುತ್ಪತ್ತಿ ಸ್ಥಿತಿಯ ಕರ್ತನಾಗಿರಬೇಕು. ಆದರೆ ಯಮದೂತರೊಳಾಗಾದ ಅಜಮಿಳ, ಸುಗುಣ ಪ್ರಹ್ಲಾದ, ಅಂಬರೀಷ, ಕರಿವರ ಧ್ರುವಾದಿಗಳನುದ್ಧರಿಸಿ ಕಾಯದಿದ್ದರೆ ಯಾರು ಆತನ ಅಂಘ್ರಿಗಳನ್ನು ಭಜಿಸುತ್ತಿದ್ದರು? ಆತನು ಸಾರ ಹೃದಯ ಸುರ ಮುನಿಜನ ಪ್ರಿಯನಾಗಿದ್ದರಿಂದಲೇ ಆತನ ಮಹಿಮೆ ತಾನೆ? ಎನ್ನುತ್ತಾರೆ.''[೧೫] ಕೃಷ್ಣದಾಸರ ಈ ಭಕ್ತಿಯು ಶ್ರೀಕೃಷ್ಣನ ಮಹೋನ್ನತೆಯನ್ನು ಧ್ವನಿಸುತ್ತಿವೆ.

೨. ಗುರುಸ್ತೋತ್ರ ಮತ್ತು ಗುರುಭಕ್ತಿ

ಕೃಷ್ಣದಾಸರು ತಮ್ಮ ಕೀರ್ತನೆಯಲ್ಲಿ ದೇವತಾಸ್ತೋತ್ರದ ನಂತರ ಬಹುಪಾಲು ಹೆಚ್ಚು ಕೀರ್ತನೆಗಳು ಗುರುಸ್ತೋತ್ರ ಮತ್ತು ಗುರುಭಕ್ತಿಗೆ ಮೀಸಲಾಗಿವೆ. ತಮ್ಮ ಗುರು ಹಾಗೂ ತಂದೆಯವರಾದ ಮಹಿಪತಿರಾಯರ ಕುರಿತು ೧೫೦ಕ್ಕೂ ಹೆಚ್ಚು ಕೀರ್ತನೆಗಳನ್ನು ರಚನೆ ಮಾಡಿದ್ದಾರೆ. ಕೃಷ್ಣದಾಸರು ಮಹಿಪತಿರಾಯರಿಂದ ಉಪದೇಶವನ್ನು ಪಡೆದವರು. ಗುರುಗಳ ಸಾನಿಧ್ಯದಲ್ಲಿ ಅವರ ನೆರೆಯಲ್ಲಿಯೇ ಕಠೋರ ತಪಸ್ಸು ಸಾಧನೆಯನ್ನು ಮಾಡಿ ಗುರುವಿನ ಒಲುಮೆಯನ್ನು ಪಡೆದುಕೊಂಡವರು. ಸದ್ಗುರು ಮಹಿಪತಿರಾಯರು ಮಾಡಿದ ಮಹದುಪಕಾರವನ್ನು ಅನ್ಯೋನ್ಯತೆ ಭಾವನೆಯಲ್ಲಿ ಸ್ಮರಿಸುತ್ತಾ ಭಕ್ತಿಪೂರ್ವಕವಾಗಿ ಅವರ ವ್ಯಕ್ತಿತ್ವದ ದರ್ಶನ ಮಾಡಿದ್ದಾರೆ.

ಕೃಷ್ಣದಾಸರು ತಮ್ಮ ಗುರುಗಳಾದ ಮಹಿಪತಿರಾಯರ ಅದ್ಭುತವಾದ ದೈವೀಶಕ್ತಿ ಪಡೆದರು. ಕರುಣೆಯಿಂದ ತಮಗೆ ಅಭಯಹಸ್ತವನ್ನಿಟ್ಟ ಪರಿ, ಅವರ ಮಾನವೀಯತೆ, ಪ್ರೀತಿ, ವಾತ್ಸಲ್ಯಗಳನ್ನು ಹೇಳುವಾಗ ಕೃಷ್ಣದಾಸರು ಗುರುಭಕ್ತಿಯ ಪರಾಕಾಷ್ಠೆಯಲ್ಲಿ ಮುಳುಗುತ್ತಾರೆ. ''ಗುರುವಿನ ಕರುಣೆ ಅಗಾಧವಾದದ್ದು ಎನ್ನುತ್ತಾರೆ. ತುಂಬಿದ ಭವ ಮಹಾಶರಧಿಯಲ್ಲಿ ಒಂಬತ್ತು ಛಿದ್ರದ ನಾವಿಯಲ್ಲಿ ನಂಬಿದ ಶರಣನನ್ನು ದಾಟಿಸುವ ಅಂಬಿಗನಾಗಿದ್ದಾನೆ. ಹರಿಯಲ್ಲರೊಳೆಂಬುದನ್ನು ಸಾರುತ ಹರಿಭಕ್ತ ಕೀಲವನ್ನು ತೋರಿಸಿ ಜನನ ಮರಣದ ದಾರಿಯನ್ನು ಹರಿಸಿದ್ದಾರೆ. ಗುರುಮಹಿಪತಿ ಸ್ವಾಮಿಗಳ ಕರುಣೆ ಅಗಾಧವಾಗಿದೆ. ಅವರು ಪರಮ ಉದಾರಿಗಳು ಎನ್ನುತ್ತಾರೆ.''[೧೬] ಕೃಷ್ಣದಾಸರ ಗುರುಭಕ್ತಿಗೆ ಈ ಕೆಳಗಿನ ಅವರ ಕೀರ್ತನೆಯೊಂದನ್ನು ಉದಾಹರಿಸಬಹುದು.

''ಗುರು ಗುರು ಎಂದು ಗುರುವಿನ ಬಾಗಿಲಲ್ಲಿ |
ಇರುತಿಹೆ ನಿಜಶ್ವಾನನಾಗಿ ಸದ್ಭಾವದಲ್ಲಿ |
ಗುರುವಿನೆಂಜಲನುಂಡು ಚಿತ್ಸುಖಾ ನೋಡ ಹೋದ |
ಗುರುಪದ ಘನಧೂಳಿ ಸೋಕಲು ಧನ್ಯನಾದ''[೧೭]

ಕೃಷ್ಣದಾಸರು ಗುರುವಿನ ಮೇಲಿರುವ ಅಗಾಧ ಪ್ರೇಮದಿಂದ, ಸದ್ಗುರುವಿನ ಬಾಗಿಲಲ್ಲಿ ನಿಂತು ನಾಯಿಯಾಗಿ ಆತ ನೀಡಿದ ಎಂಜಲವನುಂಡು ಮಹತ್ಸಾಧನೆ ಮಾಡಲು ತವಕಿಸುತ್ತಾರೆ. ಗುರುವನ್ನು ಕಾಣದೆ ಪ್ರಗತಿ ದೊರೆಯದೆಂದು ನಂಬಿಕೊಂಡಿದ್ದಾರೆ. ವೇದಶಾಸ್ತ್ರವನ್ನೋದಿಕೊಂಡು ವಾದದಿಂದ ಜಗತ್ತನ್ನು ಗೆದ್ದರೂ ಸಹ ಗುರುವಿನ ಕೃಪೆಯಿಲ್ಲದೆ ಏನನ್ನೂ ಸಾಧಿಸಲಾಗದು. ಎಂಬುದನ್ನು ಗುರುಭಕ್ತಿಯಲ್ಲಿ ಕೃಷ್ಣದಾಸರು ತೋರ್ಪಡಿಸುತ್ತಾರೆ.

ಏನೆಂದು ಬಣ್ಣಿಸಲಿ ಗುರುರಾಯನಾ |
ತಾ ನೆನೆದವರ ಧನ್ಯಗೈಸುವನಾ ಮಹಿಮೆ

ಧರಿಯೊಳಜ್ಞಾನ ತಮಹರಣ ಭಾಸ್ಕರ ನೆನಿಪ |
ವರ ಮುನಿಯ ಕರ ಕಮಲದಲ್ಲಿ ಜನಿಸೀ |
ವರಮೂಲ ಮಂತ್ರವನೆ ಗುರು ಮಹಿಪತಿಯಂಬಾ |
ನಿರುತ ಖ್ಯಾತಿಯ ನಾಮ ಧರಿಸಿ ಬಂದನ ಮಹಿಮೆ

ಅಧ್ಯಾತ್ಮ ಘನಸಾರ ವಿದ್ಯದಾಕಾರವೋ |
ಶುದ್ಧಜ್ಞಾನ ಕಲ್ಪ ದ್ರುಮವಿನಾ |
ಮುದ್ದು ಫಲವೋಯನಲು ಸಿದ್ಧ ಸಾಧಕರ ನಡು |
ಗದ್ದುಗೆಯೊಳೆಸೆವ ಗುಣ ನದ್ವಿತೀಯನ ಮಹಿಮೆ''[೧೮]

ಎಂದು ಸಾರುವ ಐದು ನುಡಿ ಈ ಪದ್ಯದಲ್ಲಿ ಹಿಂದಿನ ಜನ್ಮದಲ್ಲಿ ಯಾವ ಪುಣ್ಯವನ್ನು ಮಾಡಿದ್ದೆನೋ ಗುರುವನ್ನು ಪಡೆದುಕೊಂಡಿದ್ದೇನೆ ಎಂದು ಧನ್ಯರಾದ್ದಾರೆ.

ಶ್ರೀಕೃಷ್ಣಪರಮಾತ್ಮನು ಅರ್ಜುನನಿಗೆ ಗುರೋಪದೇಶವನ್ನು ಬೋಧಿಸಿದಂತೆ, ತಂದೆ ಮಹಿಪತಿರಾಯರು ಕೃಷ್ಣದಾಸರಿಗೆ ಬೋಧಿಸಿದ ಸಾಧನೆಯ ಮಾರ್ಗವನ್ನು ಈ ಪದ್ಯದಲ್ಲಿ ನೆನಪಿಸಿಕೊಳ್ಳುತ್ತಾರೆ. ಮಂದಮತಿಯಾದ ನಾನು ಗುರುವಿನ ಅಭಯಹಸ್ತದಿಂದ ಕಿವಿಯಲ್ಲಿ ಬೋಧಿಸಿದ ಸುಜ್ಞಾನದ ಮಂತ್ರದಿಂದ ಶ್ರೀಹರಿ ಕರುಣೆಗೆ ಪಾತ್ರನಾಗಲು ಗುರು ಮಹಿಪತಿಯ ಮಹಿಮೆಯೇ ಕಾರಣವೆಂದು ಬಣ್ಣಿಸುತ್ತಾರೆ. ಕೃಷ್ಣದಾಸರು ಮಹಿಪತಿರಾಯರನ್ನು ಕುರಿತು ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗವು ನೀನು ಎಲ್ಲವೂ ನೀನಾಗಿರುವಾಗ ನಾನೇಕೆ ಪರದೇಶಿಯಾಗಲಿ ಎಂದು ಅಭಿವ್ಯಕ್ತಿಸುತ್ತಾರೆ.

''ಸುಖದಕ್ಕಿತೇ | ಸುಖದಕ್ಕಿತು ಗುರುದಯ ಲೆಕ್ಕಾ

ಕಂಡವರ ಮಾತಿಗೆ ಮನವಿಟ್ಟು ಜಗದೊಳು |
ಹಿಂಡದೈವಕ ಬಾಯಿದೆರುತ್ತಿದ್ದೇನೆ |
ಮಂಡಿಯ ಮ್ಯಾಲೆನ್ನಾ ಕರವಿಟ್ಟು ಹೊಳೆವಾ
ಪಿಂಡಾಂಡದಿ ಗಂಡನ ತೋರಿದನಕ್ಕ

ಇಲ್ಲೆಂಬ ಸಂಶಯ ಹೋಯಿತು ಒಳಹೊರ |
ಗೆಲ್ಲೆಲ್ಲಿ ನೋಡಲು ತಾನಾದನೇ |
ಫುಲ್ಲನಾಭನ ಕೂಡಿ ತನುಭಾವ ಮರದು |
ಕೈವಲ್ಯ ಮಂದಿರ ಸಾರಿದೆನಕ್ಕಾ

ಏನ ಹೇಳಲಿ ಆಡು ತಾಡುತಾ ಯಡಹಿನಿ |
ಧಾನವ ಕಂಡಂತಾಯಿತೇ |
ಮಾನುಭಾವರಸಾದ ತಂದೆ ಮಹಿಪತಿ |
ತಾನೊಲಿದೆನ್ನನುದ್ಧರಿಸಿದನಕ್ಕಾ''[೧೯]

ಕೃಷ್ಣದಾಸರು ಈ ಕೀರ್ತನೆಯಲ್ಲಿ ತಮ್ಮ ಬಾಲ್ಯದ ಅನುಭವವನ್ನು ತಿಳಿಸಿಕೊಡುತ್ತ, ಬದಲಾದ ಪರಿಯನ್ನು ಈ ಪದ್ಯದಲ್ಲಿ ವ್ಯಕ್ತಪಡಿಸಿದ್ದಾರೆ. ಶ್ರೀಗುರುವಿನ ಕರುಣೆಯಿಂದ ಪರಮ ಸುಖ ಪ್ರಾಪ್ತಿಯಾಯಿತು. ತಿಳಿಗೇಡಿಯಾದ ನಾನು ಕಂಡಕಂಡವರ ಮಾತುಗಳಿಗೆ ಓಗೊಟ್ಟು ಹಲವು ದೇವತೆಗಳಲ್ಲಿ ನಾನು ಬೇಡಿಕೊಳ್ಳುತ್ತಿದ್ದೆ. ಪರಮ ಗುರುಗಳು ನನ್ನ ತಲೆಯ ಮೇಲೆ ಹಸ್ತವನ್ನಿಟ್ಟಾಗ ನಿಜದ ಗಂಡನನ್ನು ತೋರಿಸಿದರು. ಇದಕ್ಕಿಂತ ಮುಂಚೆ ಪರಮಾತ್ಮನನ್ನು ಕುರಿತು ಸಂಶಯವನ್ನು ವ್ಯಕ್ತಪಡಿಸಿ ಇಲ್ಲ ಎಂಬ ವಾದವನ್ನು ನಂಬಿದವರು ಕೃಷ್ಣದಾಸರು. ಗುರುವಿನ ಹಸ್ತದ ಸ್ಪರ್ಶದಿಂದ ಮನವೆಂಬ ಅಜ್ಞಾನವನ್ನು ಹೋಗಲಾಡಿಸಿದವನು ನೀನು. ಕಮಲನಾಭನಾದ ಶ್ರೀಹರಿಯನ್ನು ಸ್ಮರಿಸುತ್ತಾ ಮೈ ಮರೆತು ಕೈವಲ್ಯ ಮಂದಿರಕ್ಕೆ ಸಾಗಿದ ಪರಿಯನ್ನು ಏನು ಹೇಳಲಿ ಎಂತೆಂದು ತನ್ನ ಗುರುವಿನ ಮಹತ್ವವನ್ನು ದಾಖಲಿಸಿದ್ದಾರೆ. ಇಂತಹ ಸೌಭಾಗ್ಯವನ್ನು ಪಡೆದ ಕೃಷ್ಣದಾಸರು ತನ್ನ ಗುರುವಿನ ಮಹತ್ವವನ್ನು ಈ ಕೀರ್ತನೆಯಲ್ಲಿ ಪ್ರತಿಬಿಂಬಿಸಿದ್ದಾರೆ.

''ಸುಖಿಯಾದೆನು ಶ್ರೀ ಪಾದ ಹೊಂದಿ ಗುರುವಿನಾ

ಪರಸಕೆ ಕಬ್ಬಿಣ ಸಾರನೆರೆದಂತೆ |
ಸರಿತ ಮಹಾನದಿಯೊಳು ಬೆರೆತಂತೆ |
ನೆರೆ ಕೀಟಕ ಭೃಂಗಿ ಬೆರೆಸಿದಂತೆ

ಬಡವಗ ನಿಧಾನವ ದೊರೆತಂತೆ |
ಪೊಡವಿ ಬೆಳೆಗೆ ಘನ ಮಳೆಗರೆದಂತೇ
ಜಡ ಮತಿಗೆ ಶಾರದೆ ಒಲಿದಂತೆ

ತಂದೆ ಮಹಿಪತಿ ಕಂದಗ ಒಲಿದು |
ಛಂದದಿ ಭಕುತಿಯ ದಾರಿಗೆ ತಂದು |
ಬಂದದ ಸಾರ್ಥಕ ಮಾಡಿದೆ ನಿಂದು"[೨೦]

ಹೀಗೆ ಹೇಳುವ ಈ ಮೂರು ನುಡಿಯ ಪದ್ಯದಲ್ಲಿ ಗುರುವಿನ ಶುಭಪಾದಗಳಿಗೆ ಶರಣು ಹೊಕ್ಕು ಪರಮಸುಖಿಯಾದ ಬಗೆಯನ್ನು ವ್ಯಕ್ತಪಡಿಸುತ್ತಾರೆ. ಸ್ಪರ್ಶಮುನಿ ಮುಟ್ಟಿದ ಕಬ್ಬಿಣ ಚಿನ್ನವಾದಂತೆ, ಸಣ್ಣ ನದಿ ಮಹಾನದಿಯಲ್ಲಿ ಬೆರೆತಂತೆ ಆಯಿತು ನನ್ನ ಮನ. ಬೇರೆ ಕೀಟವೂ ಭೃಂಗಿಯ ಆಶ್ರಯ ಪಡೆದಂತೆ ಆನಂದವಾಯಿತು. ಬಡವನಿಗೆ ನಿಧಿಯು ದೊರೆತಂತೆ, ಕಾಡು ಬೆಳೆಗೆ ಮಳೆಗರೆದಂತೆ, ಮೂಢನಾದ ನಾನು ಇವೆಲ್ಲವುಗಳಿಂದ ಶಾರದೆ ಒಲಿದಿದ್ದಾಳೆಂದು ಕೃಷ್ಣದಾಸರು ಅಭಿಮಾನದಿಂದ ಹೇಳಿಕೊಂಡಿದ್ದಾರೆ. ಇವೆಲ್ಲವೂ ನನ್ನ ತಂದೆ ಹಾಗೂ ಗುರುಗಳಾದ ಮಹಿಪತಿರಾಯರ ಕೃಪೆಯಿಂದಲೇ ದೊರೆತದ್ದು. ಭಕ್ತಿಯ ಸರಿ ದಾರಿಗೆ ತಂದ ಮಹಿಪತಿರಾಯರನ್ನು ಕುರಿತು ಮತ್ತೆ ಈ ರೀತಿ ಹೇಳುತ್ತಾರೆ.

"ಏನು ಹೇಳಲಿ ಕೌತುಕವಾ | ಮಹಾ |
ದಾನಿ ಸದ್ಗುರು ಕೊಟ್ಟಾ ಸ್ವಾನಂದ ಸುಖವಾ

ಧರೆಯೊಳು ತನ್ನ ತಾಮರದಾ | ಪಾಮರನ |
ಕರೆದು ಘನದಯ ಮಳೆಗರೆದಾ |
ಸಿರದಿ ನೀಡಿದಾಭಯಕರದಾ | ಬೀಜಾ |
ಕ್ಷರವ ನುಡಿದು ಯನ್ನ ಕಿವಿಯೊಳುಸುರಿದಾ"[೨೧]

ಮಹಾದಾನಿಯಾದ ಸದ್ಗುರು ಸುಖವನ್ನು ನೀಡಿದ ಆ ಸೋಜಿಗದ ವಿಷಯವನ್ನು ಏನಂತ ವರ್ಣಿಸಲಿ ನಾನು ಎಂದು ಬಗೆಬಗೆಯಾಗಿ ಅಭಿವ್ಯಕ್ತಿಸುತ್ತಾರೆ. ಕೃಷ್ಣದಾಸರು ಪಾಮರನಾಗಿ ತಿರುಗಾಡುವ ಸಮಯದಲ್ಲಿ ತಮ್ಮನು ಕರೆದು ಕರುಣೆಯ ಮಳೆಯನ್ನು ಸುರಿಸಿ, ತಮ್ಮ ಅಭಯ ಹಸ್ತವನ್ನು ಶಿರದ ಮೇಲಿಟ್ಟಿದ್ದಾರೆ. ಕಿವಿಯಲ್ಲಿ ಬೀಜಾಕ್ಷರ ಮಂತ್ರ ಬೋಧಿಸಿದ ಸಮಯದಿಂದ ಕೃಷ್ಣದಾಸರಲ್ಲಿ ಒಂದು ಬಗೆಯ ಪರಮಾತ್ಮನ ಭಕ್ತಿ ಹೆಚ್ಚುತ್ತ ಹೋಗುತ್ತದೆ. ಇದರಿಂದ ದಾಸರು ಈ ಜಗತ್ತಿನ ಪ್ರತಿಯೊಂದು ವಸ್ತುವಿನಲ್ಲಿ ಪರಮಾತ್ಮನ ರೂಪವನ್ನು ನೋಡುವಂತಾಗುತ್ತದೆ.

ತಮ್ಮ ತಂದೆ ಮಹಿಪತಿರಾಯರು ನೀಡಿದ ಬೋಧೆ ಕೃಷ್ಣದಾಸರ ಹುಚ್ಚು ಕಲ್ಪನೆಯನ್ನು ದೂರು ಮಾಡುತ್ತದೆ. ಸದ್ಭಕ್ತಿ ಸದ್ವಿಚಾರ, ಗುರುವಿನ ಕಾರುಣ್ಯ, ಸದಾ ಇರುವ ಹಾಗೆ ಮಾಡಿದೆ. ಮಹಿಪತಿರಾಯರು ಮಾಡಿದ ಅನುಗ್ರಹದ ಸಂದರ್ಭವನ್ನು ಕೃಷ್ಣದಾಸರು ಮತ್ತೆ ಮತ್ತೆ ಆಡಿಕೊಳ್ಳುತ್ತಾರೆ. ಮುಂದುವರಿದು ತನ್ನ ಸದ್ಗುರು ದಯಾನಿಧಿಯಾಗಿದ್ದಾನೆ. ಯಾವಾಗಲೂ ಪರಮಾತ್ಮನ ಭಕ್ತಿಯ ರಸದಲ್ಲಿಯೇ ವಿರಮಿಸುವಂತೆ ಮಾಡಿದ್ದಾನೆ. ಕೃಷ್ಣದಾಸರು ವರ್ಣಿಸಲಾಗದಷ್ಟು ಸುಖವನ್ನು ಮಹಿಪತಿದಾಸರಿಂದ ಪಡೆದುಕೊಂಡ ಬಗೆಯನ್ನು ಸಾರಸಂಗ್ರಹ ರೂಪದಲ್ಲಿ ತಮ್ಮ ಕೀರ್ತನೆಯಲ್ಲಿ ಅಭಿವ್ಯಕ್ತಿಸಿದ್ದಾರೆ.

ಗುರುರಾಯರಂತಹ ಕರುಣಾಳನ್ನು ಕಾಣದೆ ನಾನು ಈ ಜಗದೊಳಗೆ ಏನು ಅರಿಯದ ಮೂಢನಾದೆ. ಗುರುದರ್ಶನದ ಫಲದಿಂದ ಜ್ಞಾನ ಮತ್ತು ಭಕ್ತಿಯ ಸಂಪತ್ತನ್ನು ಗಳಿಸಿಕೊಂಡವರು. ಈ ದಿವ್ಯಾನುಭವದ ಗುಟ್ಟನ್ನು ಹಲವಾರು ಪದ್ಯಗಳಲ್ಲಿ ಪುನಃ ಪುನಃ ಅಭಿವ್ಯಕ್ತಿಸಿದ್ದಾರೆ. ಮುಂದುವರಿದು ತಮ್ಮ ಗುರುಗಳಾದ ಮಹಿಪತಿರಾಯರು ಈ ಪೊಡವಿಗೆ ಬಂದ ಉದ್ದೇಶವನ್ನು ಈ ಕೆಳಗಿನ ಕೀರ್ತನೆಯಲ್ಲಿ ಸ್ಪಷ್ಟಪಡಿಸುತ್ತಾರೆ.

''ಪೊಡವಿಗೆ ನಡೆತಂದನು | ನಮ್ಮ ಗುರುರಾಯನು |
ಪೊಡವಿಗೆ ನಡೆತಂದನು ಗುರುರಾಯನು |
ಎಡಬಲದಲಿ ಭಾಗವತರ ಮೇಳದಿ |
ಒಡನೆ ಸುಜ್ಞಾನದ ಪರಿಪರಿ ಆಟವ |
ಆಡುತ ಪಾಡುತ ನಲಿದಾಡುತಲಿ ||

ಗುರುರಾಯನು ಅನೇಕ ಭಕ್ತರ ಮೇಳದೊಂದಿಗೆ ಈ ಪೊಡವಿಗೆ ಬಂದು ಸುಜ್ಞಾನವನ್ನು ಎಲ್ಲರಿಗೂ ಬೀರಿದ್ದಾನೆ. ತಾನು ಸಂತೋಷ ಪಟ್ಟು ನಲಿದಾಡಿದ್ದಾನೆ. ಸಂಸಾರದಲ್ಲಿ ಸಿಲುಕಿ ಭವರೋಗಗ್ರಸ್ತರಾದ ಜನರನ್ನು ತ್ವರಿತವಾಗಿ ಬನ್ನಿರೆಂದು ಕರೆದಿದ್ದಾನೆ. ಶ್ರೀಹರಿಯ ನಾಮದ ಮಹಿಮೆಯನ್ನು ಘಂಟಾಘೋಷವಾಗಿ ತಿಳಿಸುತ್ತ ಅವರಿಗೆ ತತ್ವೋಪದೇಶವೆಂಬ ದಿವ್ಯವಾದ ಔಷಧವನ್ನು ನೀಡಿದನು. ತಮ್ಮ ಬಳಿಗೆ ಬಂದು ಬೇಡುವ ಜನರಿಗೆ ಬೇಡಿದ್ದನ್ನು ಕೊಡುತ್ತ ಅಜ್ಞಾನಿಗಳಲ್ಲಿಯ ದುರ್ಗುಣಗಳನ್ನು ಹೋಗಲಾಡಿಸಿದನು. ನನ್ನ ತಂದೆ ಗುರುಮಹಿಪತಿಯು ನನ್ನನ್ನು ಸನ್ಮಾರ್ಗದಲ್ಲಿ ನಡೆಸಿ ತಮ್ಮನ್ನು ಮೊರೆ ಹೊಕ್ಕವರನ್ನು ಉದ್ಧರಿಸಿದನು ಎಂದು ಹೇಳುತ್ತಾರೆ.''[೨೨]

ಮಾನವ ಸನ್ಮಾರ್ಗದತ್ತ ನಡೆದುಕೊಂಡು ಸುಜ್ಞಾನವನ್ನು ಪಡೆದುಕೊಳ್ಳಲು ಗುರುವಿನ ಕೃಪೆ ಮುಖ್ಯವಾಗಿ ಇರಬೇಕಾಗುತ್ತದೆ. ಆತನ ಅನುಗ್ರಹವಿಲ್ಲದೆ ಯಾವ ಸಾಧನೆಯನ್ನು ಮಾಡಲು ಸಾಧ್ಯವಾಗುವುದಿಲ್ಲ. ಹಲವು ಶಾಸ್ತ್ರಗಳನ್ನು ಓದಿದರೂ ತಪ್ಪಿಸಿ ಹಲವು ಪುರಾಣಗಳನ್ನು ಪಠಿಸಿದರೂ ಗುರುವನ್ನು ಮೀರಿಸಲು ಆಗುವುದಿಲ್ಲ. ಮಾನವ ಜನ್ಮ ವ್ಯರ್ಥವಾಗಿ ಹೋಗುವುದನ್ನು

ಗುರು ಆದವನು ಸನ್ಮಾರ್ಗದತ್ತ ತರುತ್ತಾನೆ. ಆತನ ಸ್ಪರ್ಶ, ಸದ್ಗುರುವಿನ ದರ್ಶನ ಇವೆಲ್ಲ ಗುರುಭಕ್ತನು ಅಂತಿಮ ಗುರಿ ಮುಟ್ಟಲು ಅಥವಾ ಮೋಕ್ಷಕ್ಕೆ ದಾರಿಯಾಗಲು ಸಹಕಾರಿಯಾಗಿವೆ. ಗುರುವಿನ ಗುಲಾಮನಾಗಿ ಆತನ ಸಾನ್ನಿಧ್ಯದ ಶ್ವಾನನಾಗಿ ಗುರ್‍ರ ಗುರ್‍ರ ಎಂಬ ಶಬ್ದವನ್ನು ಆಡುತ್ತ ಗುರುವಿನ ಹತ್ತಿರದಲ್ಲಿ ಇರಬೇಕೆಂಬ ನಿಲುವು ಕೃಷ್ಣದಾಸರದು. ಗುರುವಿನ ಕೃಪೆಯಿಲ್ಲದೆ ಮೋಕ್ಷ ಎನ್ನುವುದು ಸಾಧ್ಯವಿಲ್ಲ. ಎನ್ನುವ ಮಾತುಗಳು ಈ ಪದ್ಯದ ಸಾಲಿನಲ್ಲಿ ಕಾಣಿಸಿಕೊಳ್ಳುತ್ತವೆ.

''ಮೋಕ್ಷವಿಲ್ಲಾ| ಗುರು ಕೃಪೆ ವಿನಾ

ಮಾನ್ಯ ಸ್ವದೇಶದಿ ಧನ್ಯ ವಿದೇಶದ |
ಉನ್ನತ ಕುಲದುತ್ಪನ್ನ ನೋಡಲು |
ಸನ್ನುತ ಕರ್ಮಗಳನ್ನಸುವ ಸಂ |
ಪನ್ನನು ಗುಣದಲಿ ಮುನ್ನಾಗೇನು

ಪುಸ್ತಕ ಹಿಡಿಯಲು ವಸ್ತು ಬೃಹಸ್ಪತಿ |
ವಿಸ್ತರಿಸ್ಹೇಳುವ ಶಾಸ್ತ್ರದರ್ಥವ |
ದುಸ್ತರ ಯೋಗದ ನಿಸ್ತರಿಸುವ ಘನ |
ಪ್ರಸ್ತುತ ತಪಸಭ್ಯಸ್ತಾಗೇನು

ಸುಂದರಿ ಮಾನಿನಿಗೊಂದೇ ಮಂಗಳ |
ಹೊಂದದೇ ಆಭರಣೆಂದೇನು ಫಲ |
ಇಂದಿರೆ ಪತಿ-ವಲುವಂದದಿ ಭಾವದಿ |
ತಂದೆ ಮಹಿಪತಿಗೊಂದಿಸದನಕಾ''[೨೩]

ಕೃಷ್ಣದಾಸರು ಗುರುಕೃಪೆಯಿಲ್ಲದೆ ಎಂಥ ಸಾಧನೆಯ ಶಿಖರವನ್ನು ಮುಟ್ಟಿದರೂ ಸಹ ಮೋಕ್ಷ ಎಂಬುದು ಸಿಗಲಾರದು ಎನ್ನುತ್ತಾರೆ. ಸ್ವದೇಶದಲ್ಲಿರಬಹುದು ಅಥವಾ ವಿದೇಶದಲ್ಲಿ ಇರಬಹುದು ಆತ ಎಷ್ಟೇ ಪ್ರಸಿದ್ಧಿಗೆ ಪಾತ್ರನಾಗಿರಬಹುದು ಶ್ರೇಷ್ಠ ಕುಲದಲ್ಲಿ ಹುಟ್ಟಿದರು ಸಹ, ಮೋಕ್ಷ ಎನ್ನವುದನ್ನು ಪಡೆಯಲು ಗುರು ಬೇಕೇ ಬೇಕು ಎಂಬ ನಿಲುವು ಕೃಷ್ಣದಾಸರದು. ಪುಣ್ಯಕರ್ಮಗಳನ್ನೇ ಮಾಡಲಿ ಧರ್ಮನಿಷ್ಠೆ ಗುಣಸಂಪನ್ನ ಸದಾಚಾರದಿಂದ ಕೂಡಿದ ಮನುಷ್ಯನಾದರೂ ಮೋಕ್ಷೆ ಲಭಿಸಲಾರದು. ಬೃಹಸ್ಪತಿ ಅಂತಹ ಪಂಡಿತನಾದರೂ ಸಹ, ಎಲ್ಲ ಶಾಸ್ತ್ರಗಳನ್ನು ಅಭ್ಯಸಿಸಿದರೂ ಮೋಕ್ಷ ಎನ್ನುವುದು ಗುರುವಿನಿಂದಲೇ ಮಾತ್ರ ಸಾಧ್ಯ ಎನ್ನುತ್ತಾರೆ. ಅಸಾಧ್ಯವಾದುದನ್ನು ಸಾಧ್ಯವೆಂದು ತೋರಿಸಿದರೂ ಸಹ, ಯೋಗಾಭ್ಯಾಸ ಮಾಡಿ ಯೋಗಿಯಾದರೂ ಇಂಥವರಿಗೆ ಮೋಕ್ಷ ಪ್ರಾಪ್ತಿಯಾಗಲಾರದು. ಹಾಗೆಯೇ ಸುಂದರವಾದ ಸ್ತ್ರೀಗೆ ಎಷ್ಟೇ ಆಭರಣ

ತೊಡಿಸಿದರೂ ಮಾಂಗಲ್ಯಾಭರಣ ಎನ್ನುವುದು ಆ ಎಲ್ಲ ಸ್ತ್ರೀಯ ಕುಲಕ್ಕೆ ಮೋಕ್ಷ ಎಂಬುವುದಾಗಿದೆ. ಇಂದಿರಾ ಪತಿಯಾದ ಶ್ರೀಹರಿಯನ್ನು ಒಲಿಸಿಕೊಳ್ಳಲು ಎಲ್ಲ ಅಂಶಗಳು ಸಾಧನೆಗಳಾಗಿವೆ. ಗುರುಮಹಿಪತಿಗೆ ವಂದಿಸಿ ಅವನ ಸದ್ಗುರು ಕೃಪೆ ಪಡೆದರೆ ಮಾತ್ರ ಮೋಕ್ಷ ಸಿಗುತ್ತದೆಂಬುದನ್ನು ಕೃಷ್ಣದಾಸರು ಒತ್ತಿ ಹೇಳುತ್ತಾರೆ. ಭಕ್ತಿಯಿಂದಲೇ ಮುಕ್ತಿಯೆಂಬ ಮಾತಿನಲ್ಲಿ ಸದ್ಗುರುವಿನ ಕಟಾಕ್ಷ ಪ್ರತಿಯೊಬ್ಬ ಮಾನವನಿಗೆ ಅವಶ್ಯವಾಗಿರಬೇಕೆಂಬ ಅಂಶವು ಈ ಮೇಲಿನ ಕೀರ್ತನೆಯಲ್ಲಿ ಅಭಿವ್ಯಕ್ತಿಗೊಂಡಿದೆ.

ಸದ್ಗುರುವಿನ ದಯೆಯಿಲ್ಲದೆ ಸದ್ಗತಿ ಕಾಣದು. ಗುರುವಿನ ಮಾರ್ಗದರ್ಶನ ನಿಜಬ್ರಹ್ಮ ಜ್ಞಾನವಾಗುತ್ತದೆ. ಬಾಣದ ಹಿಂದಿನ ಗರಿಗಳು ಇಲ್ಲದಿದ್ದರೆ ಬಿಟ್ಟ ಬಾಣವು ತನ್ನ ನಿಜ ಗುರಿಯನ್ನು ಮುಟ್ಟಲಾರದು. ಹಾಗಾಗಿ ದುರಭಿಮಾನ, ದುರಹಂಕಾರ, ಗರ್ವ ಮುಂತಾದವುಗಳನ್ನು ಬಿಟ್ಟು ಗುರುವಿನ ದಯೆಯನ್ನು ಪಡೆದರೆ ಮಾತ್ರ ಮುಕ್ತಿ ಸಾಧ್ಯ. ಸಾಧಕನಾದವನಿಗೆ ನಿಜವಾದ ಆನಂದ ಸಿಗುವುದು ಮುಕ್ತಿಯಲ್ಲಿ. ಸದ್ಗುರುವಿನ ಪದಗಳಲ್ಲಿ ಶ್ರದ್ಧೆ, ನಿಷ್ಠೆಗಳನ್ನಿಟ್ಟು ಶ್ರಮಿಸಿದರೆ ಮಾತ್ರ ಗುರುಭಕ್ತಿ ಪ್ರಾಪ್ತವಾಗಿ ನಿಜಮುಕ್ತಿ ಸಿಗುವುದು. ಮಹಿಪತಿರಾಯರು ಸದ್ಗುರುವಾಗಿ ಸಿಕ್ಕ ಸಂದರ್ಭವನ್ನು ಕೃಷ್ಣದಾಸರು ಈ ಕೀರ್ತನೆಯಲ್ಲಿ ಮಾರ್ಮಿಕವಾಗಿ ಕೊಂಡಾಡಿದ್ದಾರೆ.

''ಧನ್ಯ ಧನ್ಯವಾಯಿತು ಜನುಮಾ |
ಆವ ಪುಣ್ಯವೋ ಅರಿಯೇ ನಮ್ಮಾ

ನಾನು ಜನ್ಮದ ಬಲಿಯನೆ ಗೆದ್ದು ಸಲೆ |
ಮನುಷ ದೇಹದಲಿಂದು |
ಮಾನುಭಾವರ ವಂಶದಿ ಬಂದು | ಅವರ |
ಸಾನಿಧ್ಯ ಸೇವೆಯ ಪಡೆದು

ಗುರುಕ್ಷೇತ್ರವೇ ಯನಗಿದೇ ಕೌಶೀ | ಗಂಗೆ |
ಮೆರೆವುದು ಗುರುತೀರ್ಥವೆನಿಸಿ |
ಗುರು ವಿಶ್ವೇಶ್ವರ ನೆನೆವಾಸೀ | ಕಂಡು |
ಪೂರಿತಾಯಿತು ಮನದಾಸಿ

ಛಂದ ದೋರಿಸಿ ಭಕ್ತಿಯಮರ್ಮ | ಭವ |
ಬಂಧಗಳಿಸಿದ ಕರ್ಮ |
ತಂದೆ ಮಹಿಪತಿ ಶ್ರೀ ಪಾದ ಧರ್ಮಾ | ನಿಜ |
ನಂದನ ಗಾನಂದೋಬ್ರಹ್ಮ''[೨೪]

ಕೃಷ್ಣದಾಸರು ತಮ್ಮ ಗುರುವಿನ ದಯದಿಂದ ಪಾವನವಾದ ಬಗೆಯನ್ನು ಸ್ಪಷ್ಟಪಡಿಸುತ್ತಾರೆ. ಪಶು, ಪಕ್ಷಿ ಅನೇಕ ಜನ್ಮಗಳನ್ನು ಕಳೆದುಕೊಂಡಿದ್ದೇನೆ. ಈ ಪುಣ್ಯಪಾವನ ಸತ್ಪುರುಷನ ವಂಶದಲ್ಲಿ ಹುಟ್ಟಿ ಆತನ ಸೇವೆ ಮಾಡುವ ಭಾಗ್ಯ ದೊರೆತಿದ್ದು ನನ್ನ ಪೂರ್ವ ಜನ್ಮದ ಪುಣ್ಯವೇ ಆಗಿದೆ. ಸದ್ಗುರು ನೆಲೆ ನಿಂತ ಸ್ಥಳವೇ ಪುಣ್ಯಭೂಮಿ ಕಾಶಿಕ್ಷೇತ್ರವಾಗಿದೆ. ಗುರುವಿನ ಹತ್ತಿರ ಇದ್ದಷ್ಟು ಪುಣ್ಯ ಹೆಚ್ಚು ಎನ್ನುವರು ಕೃಷ್ಣದಾಸರು. ಸದ್ಗುರುವೇ ನನ್ನ ಪಾಪಗಳ ತೊಳೆಯುವ ಪುಣ್ಯ ಗಂಗೆಯಾಗಿದ್ದಾರೆ. ಈ ಗುರುವಿನಿಂದಲೇ ಎನಗೆ ಸರ್ವವ್ಯಾಪಿಯಾದ ಶ್ರೀಹರಿಯನ್ನು ಕಾಣುವ ಭಾಗ್ಯ ಪ್ರಾಪ್ತವಾಯಿತು. ಸ್ವಾಮಿ ಮಹಿಪತಿಯಿಂದಲೇ ನಿಜ ಭಕ್ತಿಯ ಮರ್ಮ ತಿಳಿಯಿತು. ಬ್ರಹ್ಮಾನಂದವನ್ನು ಪಡೆದ ಕೃಷ್ಣದಾಸರು ಧನ್ಯತೆಯಿಂದ ಈ ಕೀರ್ತನೆಯಲ್ಲಿ ಚಿತ್ರಿಸಿದ್ದಾರೆ. ಬಗೆಯನ್ನು ಅವರ ಭವದ ಚಿಂತೆಗಳು ದೂರಾದ ಬಗೆಯನ್ನು ಈ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ.

''ಯಾತರ ಚಿಂತೆಗಳು | ನಮಗಿನ್ಯಾತರ ಚಿಂತೆಗಳು |
ವಿಮಲ ಸದ್ಗುರುವಿನ ದಯದೊಲವಿರಲು ||ಪ||

ದುಮಣಿಯ ಪ್ರಭೆಯೊಳಗೆ ಇದ್ದವಗೆ |
ತಮದುಳ್ಳುಕಿನ ಬಳಲಿಕೆ ಯಾಕೆ |
ಸುಮನ ತರುವೆ ನೆಳಲ್ಹಾದವಗೆ |
ಭ್ರಮಿಸುವುದರ ಕಳವಳ ಯಾಕೆ''[೨೫]

ಸದ್ಗುರುವಿನ ದಯೆ ಇರುವವರಿಗೆ ನಮಗ್ಯಾಕೆ ಚಿಂತೆ ಎನ್ನುತ್ತಾರೆ. ಸೂರ್ಯನ ಬೆಳಕಿನಲ್ಲಿರುವವರಿಗೆ ಕತ್ತಲೆಯ ಅಂಜಿಕೆ ಇರುವದು ಬೇಡ. ನಿರ್ಮಲ ಚಿತ್ತವೆಂಬ ಗಿಡದ ನೆರಳಿನಲ್ಲಿ ದುರ್ವಿಚಾರದ ಭ್ರಾಂತಿ ಇರುವುದಿಲ್ಲ. ಪೂರ್ಣಚಂದ್ರನ ಬೆಳದಿಂಗಳಲ್ಲಿ ತಿರುಗಾಡುವನಿಗೆ ಬೆವರಿನ ಬಾಧೆ ಏಕೆ ಎನ್ನುತ್ತಾರೆ. ಈ ಭವದ ಚಿಂತೆಗಳನ್ನು ಸದ್ಗುರು ಮಹಿಪತಿಸ್ವಾಮಿ ದೂರ ಮಾಡಿದ ಬಗೆಯನ್ನು ಕೃಷ್ಣದಾಸರು ವಿಸ್ತರಿಸುತ್ತಾರೆ. ಬೆಂಕಿಯ ಸಮೀಪ ಕುಳಿತವನಿಗೆ ಹಿಮದ ಬಾಧೆಯಾಗದು. ಕೇಳಿದಾಕ್ಷಣ ಕೇಳಿದ್ದನ್ನು ಕೊಡುವ ಚಿಂತಾಮಣಿಯಾದ ಸದ್ಗುರು ಮಹಿಪತಿ ಸ್ವಾಮಿ ಹತ್ತಿರವಿರುವಾಗ ನನಗಿನ್ಯಾತರ ಭಯ ಎಂಬ ಮಾತುಗಳು ಗುರುಭಕ್ತಿಯ ಕೀರ್ತನೆಯಲ್ಲಿ ಧ್ವನಿಸುತ್ತವೆ. ಕೃಷ್ಣದಾಸರು ತಮ್ಮ ಗುರುವಿನ ಉಪಕಾರದ ಸ್ಮರಣೆಯನ್ನು ಮುಂದುವರಿಸಿ ಅಭಿವ್ಯಕ್ತಗೊಳಿಸಿದ್ದಾರೆ. ಈ ತರಹದ ಅಭಿವ್ಯಕ್ತಿಯನ್ನು ನೋಡಿದರೆ ಶ್ರೀಹರಿಯೇ ಗುರುವಿನ ರೂಪದಲ್ಲಿ ಧರೆಗೆ ಬಂದು ಅಭಯಹಸ್ತವನ್ನು ನೀಡಿದ ಬಗೆಯನ್ನು ವ್ಯಕ್ತಪಡಿಸುತ್ತಾರೆ. ಸಂಸಾರದ ಸಾಗರ ದಡ ಮುಟ್ಟಲು ನಿನ್ನ ಈ ಮಾರ್ಗದರ್ಶನ ಉಪಯುಕ್ತವಾಯಿತು. ಧ್ಯಾನ, ನಿಯಮ, ಭಕ್ತಿ ಇವುಗಳನ್ನು ಸಂಸಾರದಲ್ಲಿ ಸಿಲುಕಿ ಮಾಡಲಾರದ ಅಪರಾಧವನ್ನು ಮಾಡಿದೆ ಅವೆಲ್ಲವನ್ನು ಕ್ಷಮಿಸಬೇಕು. ಎನ್ನ ಈ ಹೃದಯದ ಕಾರ್ಗತ್ತಲೆಯನ್ನು ಪರಿಹರಿಸೋ ಸ್ವಾಮಿ ಮಹಿಪತಿರಾಯಾ ಎಂದು ಕೃಷ್ಣದಾಸರು ಅಂಗಲಾಚಿ ಬೇಡಿಕೊಳ್ಳುತ್ತಾರೆ.

"ದಾಸಿಯಾಗುವೆನೇ ಗುರುವಿನ ಮನೆಯಾ | ನಿ |
ರ್ದೋಷ ಪದವಿ ಈವ ನಿಜ ದೊರೆಯಾ

ಮನೋಮಂಟಪದೊಳಗೆ ಅನುಮಾನ ಕಸನೀಗಿ |
ಅನುದಿನ ನಿಶ್ಚಲದ ತಳಿಯಾ ಬಿಂಬಿಸಿ |
ಮುನಿಯ ಸೇವೆ ಹಾರೈಸುವೆ ಬಿನುಗು ಶಬ್ದಜ್ಞಾನಿಗಳ |
ಮನಿಲಿ ನಿಂತು ಹೊತ್ತಂಗಳಿಯೆ ನೆನವಿಲಿರುತಾ

ವಿವೇಕದ ಕೊಡದೊಳು ಭಾವವೆಂಬ ಜಲವ ತುಂಬಿ |
ಸಾವಧಾನ ಸಿಂಬಿಲಿರಿಸಿಕೊಂಡು ಬರುತಾ |
ದೇವ ಗುರುರಾಯ ನಡಿದಾವರೆಯ ಊಳಿಗಕ |
ಆವಾಗ ತಂದೆರೆವೆನು ಹರುಷದಲಿ

ಅರಹು ಎಂಬ ಸೀರೆಯುಟ್ಟು ಕುರುಹುವೆಂಬ ಕುಪ್ಪಸದಲಿ |
ಗುರುಕೊಟ್ಟ ಬೋಧ ಪಡಿಯದನ್ನ ಉಣುತಾ |
ವರದ ತಂದೆ ಮಹಿಪತಿ ಚರಣವ ನೋಲೈಸಿ ಇಹಪರ |
ವೆರಡು ಗೆಲಿದು ನಿಜಗತಿ ಪಡೆವೆನೋ"[೨೬]

ಭಾವಪೂರ್ಣವಾಗಿ ಶ್ರೀಹರಿಯ ಕುರಿತು ಜಗದ್ಗುರುವಾದ ಪರಮಾತ್ಮನೇ ನೀನೆಯಾಗಿರುವೆ ಎಂದು ಹರಿದಾಸರು ಹೇಳಿಕೊಂಡಿದ್ದಾರೆ. ನಿನ್ನ ಸೇವೆ ಮಾಡುತ್ತ ನಾನು ಜನ್ಮಾಂತರಗಳಲ್ಲಿ ಮಾಡಿದ ಎಲ್ಲ ಪಾಪಕರ್ಮಗಳನ್ನು ತೊಳೆದುಕೊಳ್ಳಲು ನಿನ್ನ ಮನೆಯ ದಾಸನಾಗುವೆ. ಮನದೊಳಗೆ ತುಂಬಿರುವ ಅರಿಷಡ್ವರ್ಗಗಳನ್ನು ಸ್ವಚ್ಛಗೊಳಿಸಿ ದೃಢಭಕ್ತಿಯೆಂಬ ನೀರನ್ನು ಧಾರೆಯೆರೆದವನು. ನನ್ನ ಮನೋಮಂಟಪದಲ್ಲಿ ನೆಲೆಸಲು ಸದ್ಗುರುವೆ ನಿನ್ನಲ್ಲಿ ವಿಜ್ಞಾಪಿಸಿ ಕೊಳ್ಳುತ್ತೇನೆಂದು ಪರಿಪರಿಯಾಗಿ ಬೇಡಿಕೊಂಡಿದ್ದಾರೆ. ನಾನಾ ವಿಧವಾದ ಸೇವೆಯನ್ನು ಮಾಡುತ್ತ ಧರ್ಮಬೋಧನೆಗೆ ಕಿವಿಗೊಡದೆ ಹೋದೆ. ಅದಕ್ಕಾಗಿ ನಿನ್ನ ನಿಜ ನಾಮಸ್ಮರಣೆಯಲ್ಲಿ ಕಾಲ ಕಳೆಯುವೆ ಎಂದು ಪ್ರತಿಜ್ಞೆ ಮಾಡುತ್ತಾರೆ. ಈ ಕೀರ್ತನೆಯು ವಿವೇಕವೆಂಬ ಕೊಡದಲ್ಲಿ ಸದ್ಭಾವ ಎಂಬ ಜಲವನ್ನು ತುಂಬಿಕೊಳ್ಳಬೇಕು. ಹೊಯ್ದಾಡದಂತೆ ದೃಢತೆಯ ಸಿಂಬೆಯ ಮೇಲೆ ನನ್ನಿ ಮನೋಮಂದಿರದಲ್ಲಿ ಆಸೀನಗೊಳಿಸುತ್ತೇನೆ. ಸದ್ಗುರುವೆ ನಿನ್ನ ಪಾದಕಮಲಗಳನ್ನು ಹರುಷದಿ ತೊಳೆಯುವನು. ಸುಜ್ಞಾನವೆಂಬ ಸೀರೆಯುಟ್ಟು ಶರಣತ್ವವೆಂಬ ಕುಪ್ಪಸ ತೊಟ್ಟುಕೊಂಡಿರುವೆ. ಸದ್ಗುರು ಕೊಟ್ಟ ಸತ್ಯಬೋಧಸಾರವೆನ್ನುತ ಗುರು ಮಹಿಪತಿಸ್ವಾಮಿ ಹಾಗೂ ಶ್ರೀಹರಿಯ ಚರಣ ಕಮಲಗಳನ್ನು ನಂಬಿರುವೆನು. ಇಹಲೋಕ ಇಹಪರಗಳೆರಡರಲ್ಲಿಯೂ ಜಯವಂತನಾಗಿ ಮುಕ್ತಿಯನ್ನು

ಪಡೆಯುವೆನು. ಕೃಷ್ಣದಾಸರು ನೂರಾರು ಕೀರ್ತನೆಗಳಲ್ಲಿ ಗುರು ಸ್ತೋತ್ರ, ಗುರುಭಕ್ತಿ ಗುರುವಿನ ಒಲುಮೆ, ಗುರುವಿನ ಕಾರುಣ್ಯ ಮುಂತಾದವುಗಳನ್ನು ಹಾಡಿಕೊಳ್ಳುತ್ತ ಗುರುವಿನ ಅಭಯಹಸ್ತ, ಪ್ರೀತಿ, ಮಮಕಾರ, ಈ ಜೀವಿತ ಇರುವರೆಗೂ ಇರಲೆಂಬುದು ಕೃಷ್ಣದಾಸರ ಆಶಯವಾಗಿದೆ.

೩. ಲೋಕಸಂಗ್ರಹ

ಕೃಷ್ಣದಾಸರು ಅಪರೋಕ್ಷ ಜ್ಞಾನಿಗಳು. ತಮ್ಮ ತಂದೆ ಹಾಗೂ ಗುರುವಾದ ಮಹಿಪತಿರಾಯರಿಂದ ಅಪಾರವಾದ ಜ್ಞಾನ ಹಾಗೂ ಮಾರ್ಗದರ್ಶನದಲ್ಲಿ ನಡೆದು ಲೋಕದ ಮತ್ತು ಬದುಕಿನ ಹಲವು ವಿಷಯಗಳನ್ನು ಗರ್ಭೀಕರಿಸಿಕೊಂಡವರು. ಗುರುವಿನಂತೆ ಅಪಾರವಾದ ಕವಿತ್ವ ಶಕ್ತಿ ಪಡೆದು, ಅಮೋಘವಾದ ಅನುಭವದ ಸಾಹಿತ್ಯವನ್ನು ಈ ಲೋಕಕ್ಕೆ ನೀಡಿದವರು. ''ಸಂತರು, ದಾಸರು ಮಹಾತ್ಮರು ತಮ್ಮ ಸಾಧನೆಯಿಂದ ಜನನ ಮರಣಗಳನ್ನು ಹರಿದು ಮೋಕ್ಷವನ್ನು ಸಾಧಿಸುವುದರೊಂದಿಗೆ ಸುತ್ತಲಿನ ಸಮಾಜವನ್ನು ಉದ್ಧರಿಸುವುದು ಅವರ ಪರಮ ಕಾರ್ಯಗಳಲ್ಲಿ ಒಂದು. ತಮ್ಮ ಅನುಭವಗಳ ಮೊಸೆಯಲ್ಲಿ ಜಗದ ವ್ಯಾಪಾರವನ್ನು ತಿಕ್ಕಿ ತಿಕ್ಕಿ ನೋಡುತ್ತ, ಈ ಬದುಕನ್ನು ಕುರಿತು ಹಲವಾರು ವಿಷಯಗಳನ್ನು ತಿಳಿಸಿ ಹೇಳುತ್ತಾರೆ. ಅವುಗಳನ್ನೇ ಕೆಲವರು ಬೋಧಪ್ರದ ಎಂದು ಉಪದೇಶವೆಂದು ಇಲ್ಲವೇ ಲೋಕಸಂಗ್ರಹವೆಂದು ಕರೆಯುತ್ತಾರೆ.''[೨೭]

ಕೃಷ್ಣದಾಸರು ಇಂಥ ಅನೇಕ ಕೀರ್ತನೆಗಳಲ್ಲಿ ಆ ಕಾಲಘಟ್ಟದ ಸಾಮಾಜಿಕ ಚಿತ್ರಣ ಒಡಮೂಡಿ ಬಂದಿದೆ. ಅವರ ಲೋಕಸಂಗ್ರಹ ಕೀರ್ತನೆಗಳು ಒಂದು ಸಮುದಾಯಕ್ಕೆ ಸಿಮೀತವಾಗದೆ, ಇಡೀ ಮಾನವಕುಲಕ್ಕೆ ಸಂಬಂಧಿಸಿದ ಕೀರ್ತನೆಗಳಾಗಿವೆ. ಅವರ ಕೀರ್ತನೆಗಳಲ್ಲಿ ಒಳಗೊಂಡಿರುವ ಲೋಕದರ್ಶನವನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಮಾನವ ಜೀವನ ಸಾರ್ಥಕವಾಗಬೇಕಾದರೆ ಆತನ ಒಡನಾಟ ಚೆನ್ನಾಗಿರಬೇಕು. ಇಲ್ಲದಿದ್ದರೆ ಆತ ಏನನ್ನೂ ಸಾಧಿಸಲಾರ. ಮನುಷ್ಯನ ಜೀವನ ಸತ್ಸಂಗದಿಂದ ಕೂಡಿದರೆ ಏನೆಲ್ಲ ಸಾಧಿಸಬಹುದೆಂಬುದಕ್ಕೆ ಈ ಕೀರ್ತನೆಯು ಉದಾಹರಿಸಬಹುದು.

''ಇದ್ದರಿರಬೇಕು ಅನುದಿನಾ | ಒಳ್ಳೆವರ ಸಹವಾಸಾ

ಅಂಗಸಂಗಗಳಿಂದ | ಮಂಗಳೋತ್ಸಾಹವಾಗಿ |
ಕಂಗಳಿಗಿದಿರಿಡುವದು ಉಲ್ಹಾಸಾ

ಸಾರಿ ಬೀರಿ ಬೋಧವಾ | ದಾರಿದೋರಿ ಭಕ್ತಿಯಾ |
ದೂರ ಮಾಡುವರು| ಭವಭವ ಕ್ಲೇಶಾ

ಗುರುವರ ಮಹಿಪತಿಸುತ ಪ್ರಭು ಸ್ಮರಣೆಯಾ |
ಮರಹು ಮರೆಸುವರದರುದ್ದೇಶಾ''[೨೮]

ಸತ್ಸಂಗದಿಂದ ದೊರೆಯುವ ಪದವನ್ನು ಕೃಷ್ಣದಾಸರು ಸುಂದರವಾಗಿ ಕಟ್ಟಿಕೊಟ್ಟಿದ್ದಾರೆ. ಇದು ಯಾತರ ಜ್ಞಾನ ವೇದವನ್ನೋದಿ ವಿವಾದವನ್ನು ಮಾಡುವವನು ಏನನ್ನು ಸಾಧಿಸಿದೆವೆಂಬುದು ಅಭಿಮಾನ ಪಡುವ ಮನುಷ್ಯನಿಗೆ ದಾಸರು ಸುಂದರವಾಗಿ ಹೇಳುತ್ತಾರೆ. ಬೆಟ್ಟವನ್ನು ಅಗೆದು ಶೋಧಿಸಿದ ಕಷ್ಟದ ಇಲಿಯ ನೆಟ್ಟನೆ ತೆಗೆದಂತಾಯಿತು. ಎಂಬ ಮಾತುಗಳು ಮಾನವನ ವಿವೇಕಪ್ರಜ್ಞೆಗೆ ಸಾಕ್ಷೀಕರಿಸುತ್ತವೆ. ಸತ್ಸಂಗದಿಂದ ಮತ್ಸರಗಳು ದೂರಾಗಿ ಬೆಲ್ಲದೊಳೊಗಿನ ಕಲ್ಲಿನಂತಿರುವ ಕಪಟ ಗುಣಗಳು ದೂರು ಮಾಡಿಕೊಳ್ಳಲು ಮನುಷ್ಯನಿಗೆ ಸತ್ಸಂಗ ಮುಖ್ಯವಾಗಿ ಇರಬೇಕು. ಸಾಧಕನಾದವನ ವೃತ್ತಿಗಳು ಆತನ ಅಬಾಧಕ ಯುಕ್ತಿಗಳನ್ನು ನೆನೆದು ಕೃಷ್ಣದಾಸರು ಈ ರೀತಿಯಲ್ಲಿ ಹೇಳುತ್ತಾರೆ. ಮನುಷ್ಯ ಶರೀರವು ಸಾಧನಾ ಶರೀರದಿಂದ ಕೂಡಿರಬೇಕು. ಇದು ಪರಮಾತ್ಮನ ವಿಶೇಷ ಕೃಪೆಗೆ ಪಾತ್ರರಾದರೆ ಮಾತ್ರ ಸಾಧ್ಯ. ಇದನ್ನು ಮಾನವ ಸಾರ್ಥಕ ಮಾಡಿಕೊಳ್ಳಲು ಸದಾಚಾರ ಸದ್ಭಕ್ತಿ ಸದ್ಗುಣಗಳನ್ನು ಇಂದ್ರಿಯಾದಿಗಳಿಂದ ಸರ್ವೋತ್ತಮನಾದ ಶ್ರೀಹರಿಯ ಸೇವೆಗೆ ತಮ್ಮನು ತಾವು ಸಮರ್ಪಣಾ ಭಾವದಿಂದ ಅರ್ಪಿಸಿಕೊಳ್ಳುವುದು ವಿಹಿತವಾದ ಮಾರ್ಗವಾಗಿದೆ. ಆದರೆ ದೇಹವೇ ನಾನೆಂಬ ಅಹಂಕಾರದಿಂದ ಈ ಶರೀರವನ್ನು ಹಾಳುಮಾಡಿಕೊಳ್ಳುತ್ತ ನಡೆದ ಈ ಪ್ರಪಂಚದ ಜನರನ್ನು ಕಂಡು ಕೃಷ್ಣದಾಸರು ಬಹುಸುಂದವಾಗಿ ತಮ್ಮ ಕೀರ್ತನೆಯಲ್ಲಿ ಬಿತ್ತರಿಸಿದ್ದಾರೆ.

‘‘ಇದುವೇ ಸಾಧಕ ವೃತ್ತಿಗಳು |
ಇದೇ ಅಬಾಧಕ ಯುಕ್ತಿಗಳು
ಸದ್ಗುರು ಪಾದಕ ಸದ್ಭಾವದಿ ನಂಬಿ |
ಹೃದ್ಗತ ಗುಜವನು ಪಡೆದಿಹನು |
ಸದ್ಗತಿಕಾಂಕ್ಷಿತ ಹರಿ ಕೀರ್ತನೆಗಳ |
ಉದ್ಗಾರ ಪ್ರೇಮದ ಮಾಡುವನು

ಬಲ್ಲವನು ಕಂಡೆರಗಿ ಸಿದ್ಧಾಂತದಾ |
ಉಳ್ಳಸದ್ಬೋಧವ ಕೇಳುವನು |
ಮೆಲ್ಲನೆ ಮನನದಿ ಧ್ಯಾಸವು ಬಲಿಯುತ |
ಕ್ಷುಲ್ಲರ ಮಾತಿಗೆ ಮನ ವಿದನು

ಅನ್ಯರ ಸದ್ಗುಣ ವಾರಿಸಿ ಕೊಳುತಲಿ |
ತನ್ನವಗುಣಗಳ ಜರಿಸಿದವನು |
ಸನ್ನುಡಿ ಬಿರುನುಡಿಗಳಕದೆ ಕುಜನರ |
ಮನ್ನಿಸಿ ಶಾಂತಿಯನು ಜಡಿದಿಹನು’’[೨೫]

ಕೃಷ್ಣದಾಸರು ಸತ್ಸಂಗ ಪರಿಧಿಯನ್ನು ಉಚ್ಚರಿಸುತ್ತ ಮುನ್ನಡೆಯುತ್ತಾರೆ. ಸಾಧು ಜನರ ಸಂಗವ ಮಾಡಿ ಜ್ಞಾನಸಾಧನೆಗಳನ್ನು ತನ್ನಿಂದಲೇ ಪಡೆಯುವ, ಮನುಷ್ಯರಾಗಿ ಬಾಳನ್ನು ಸವೆಸಲು ಆಜ್ಞಾಪಿಸುತ್ತಾರೆ. ತನುವಿಟ್ಟು ಧನವಿಟ್ಟು ಚರಣಕ್ಕೆ ಮನಕೊಟ್ಟು ಅನುಭಾಗಿ ತಿಳಿಯಬೇಕು. ಮದ, ಗರ್ವಗಳನ್ನು ಬಿಟ್ಟು ತನ್ನನ್ನು ತಾನು ಮೊದಲು ತಿಳಿದುಕೊಂಡು ಮುನ್ನಡೆಯಬೇಕೆಂದು ಬೋಧಿಸುತ್ತಾರೆ. ಸಾಧು ಸಂತರ ಜ್ಞಾನಿಗಳ ಸಂಗವನ್ನು ಮಾಡಿ ಸದ್ಭವವನ್ನು ಶ್ರವಣ ಮಾಡಲು ನಿನ್ನ ಮನದಲ್ಲಿಯೇ ಶ್ರೀಹರಿಯು ನೆಲೆಗೊಳ್ಳುತ್ತಾನೆ. ಸಂತರ ಸಂಗವನ್ನು ತೊರೆದು ವೈರಾಗ್ಯವಾಗಿ ನಡೆಸುತ್ತಾ ಪ್ರಪಂಚವನ್ನು ತಿರುಗಿದರೆ ಸದ್ಭಕ್ತಿ ದೊರೆಯುವುದೇ ಎಂದು ಕೇಳುತ್ತಾರೆ. ಸಾಧು ಸಂಗದಿಂದ ಆಗುವ ಫಲಗಳನ್ನು ಈ ತೆರನಾಗಿ ಹೇಳುತ್ತಾರೆ.

''ಸಾಧುರ ಸಂಗವ ಮಾಡೋ ಪ್ರಾಣಿ |
ಸಾಧುರ ಸಂಗಾ ಮಾಡಲು ಯೋಗಾ |
ಸಾಧಿಸಿ ಬಾಹುದು ನೋಡೋ ಪ್ರಾಣಿ

ಅತಿ ಬಳಲಿಸುವ ತಾಪತ್ರಯದೊಳಗ |
ಮತಿಗಾಣದೆ ನೋಯ ಬ್ಯಾಡೋ ಪ್ರಾಣೀ |
ಮತಿಯುತನಾಗಿ ಭವಖೋರೆ ದಾಟುವ |
ಪಥವಾನರಿತು ಬ್ಯಾಗ ಕೂಡೋ ಪ್ರಾಣೀ

ಕ್ಷೀರ ನೀರ ವಿಭೇದವ ಮಾಡುವ ಮುಕ್ತಾ |
ಹಾರನ ಗುಣ ಭರಣೀ ಮಾಡೋ ಪ್ರಾಣೀ |
ಚಾರು ವಿವೇಕದಿ ಸೇವಿಸಿ ಸಾರಾವ |
ಸಾರಾ ತ್ಯಜಿಸಿ ನಲಿದಾಡೋ ಪ್ರಾಣಿ

ವನಜದಲಿಯು ನೀರೊಳಿಹ ಪರಿ ಜನದಲಿ |
ಮನವನು ಸಂಸಾರಲಿಡೋ ಪ್ರಾಣೀ |
ತನುಧನ ಬೆರಿಯದೆ ಮಹಿಪತಿಸುತ ಪ್ರಭು |
ಏನ ಸ್ತುತಿ ಸ್ತವನವ ಪಾಡೋ ಪ್ರಾಣಿ''[೩೦]

ಎನ್ನುವ ಪದ್ಯದ ಸಾಲುಗಳು ಭಗವಂತನ ಒಲಿಸಿಕೊಳ್ಳುವ ಪರಿಯಲ್ಲಿ ಸಾಗಿವೆ. ಅನೇಕ ತೀರ್ಥಯಾತ್ರೆ ಯಜ್ಞಯಾಗಾದಿಗಳನ್ನು ಜಪ, ತಪ ಮಾಡಿದರೆ ಶ್ರೀಹರಿಯು ಲಭಿಸುವುದಿಲ್ಲ. ಸತ್ಯನಿಷ್ಠರಾದ ಸಾಧು ಸಂತರ ನಿರಂತರವಾದ ಸತ್ಸಂಗದಿಂದ ಮಾತ್ರ ಸಿಗಬಲ್ಲನು. ಸಂತರೆಂದರೆ

ಭೂಮಿಯ ಮೇಲೆ ನಡೆದಾಡುವ ದೇವರುಗಳು. ಅವರೇ ಅಚಲವಾದ ದೇವತಾ ಪ್ರತಿಮೆಗಳಾಗಿದ್ದಾರೆ. ಭಕ್ತಿಭಾವದಿಂದ ಅವರನ್ನು ಪೂಜಿಸಿದರೆ ಭಗವಂತನು ಸಾಕ್ಷಾತ್ಕರಿಸುತ್ತಾನೆ. ಈ ಸಾಧು ಸಂತರ ಮಹಿಮೆ ಯಾರಿಗೂ ತಿಳಿಯದು ಎಂದು ಕೃಷ್ಣದಾಸರು ಸಾಧು ಸಂತರ ಮಹಿಮೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಇವೆಲ್ಲ ಕೀರ್ತನೆಗಳಲ್ಲಿ ಒಡಮೂಡಿ ಬಂದಿವೆ. ಕೆಲವರು ದುರ್ಜನರ ಸಂಗದಲ್ಲಿ ಬೆರೆತು ದುರ್ಬುದ್ಧಿಗಳಾಗಿ ಸಾಮಾಜಿಕ ಕಂಟಕರಾಗಿ ಬಾಳುತ್ತಿರುತ್ತಾರೆ. ಈ ತರಹದ ಮನುಷ್ಯ ಪ್ರಾಣಿಗಳಿಗೆ ಈ ಕೀರ್ತನೆ ಸರಿದಾರಿಗೆ ತರುವ ಪ್ರಯತ್ನ ಮಾಡುತ್ತದೆ. ಸಂತರ ಚರಣಕ್ಕೆ ಶಿರಬಾಗಿ ಮಣಿಯೆಂದು ಹೇಳಿ ಸತ್ಸಂಗವೇ ಸುಮರ್ಥವೆಂದು ಸಾರಿದ್ದಾರೆ ಕೃಷ್ಣದಾಸರು.

"ಹೊತ್ತು ವ್ಯರ್ಥಾ ಹೋಗುತಿದಕೋ ಮುತ್ತಿನಂಥಾ

ಹೋಗುತಿದೆ ಮುತ್ತಿನಂಥಾ ದಿನದೊಳು |
ಚಿತ್ತ ಸ್ವಸ್ಥ ಮಾಡಿ ಪುರುಷೋತ್ತಮನ್ನ ನೆನೆಯಿರೋ
ಉತ್ತಮರ ಸಂಗಡದಲ್ಲಿ
ನಿತ್ಯ ಶ್ರಾವಣಮನನ ಮಾಡಿ |
ಅತ್ತಲಿತ್ತಲಾಗದೆ | ಸು |
ವೃತಿಯೊಳು ಬೆರಿಯಿರೋ

ಪಗಡಿ ಪಂಚಿಯಾಡಿ ಪರರಾ |
ಬಗಲಿ ಕಳೆದು ಕಳೆವದೇನು |
ಯುಗುತಿ ಹೀನರಾಗದೆ |
ಭಕುತಿ ಪಥ ಪಡಿಯಿರೋ"[೩೧]

ಮನುಷ್ಯನ ಬದುಕಿನಲ್ಲಿ ಯಾವ ಯಾವ ಸಂಗತಿಗಳನ್ನು ಪಾಲಿಸಿದರೆ ಮೋಕ್ಷದ ಗುರಿಯನ್ನು ಪಡೆದುಕೊಳ್ಳಲು ಸಾಧ್ಯವೆಂಬುದನ್ನು ಈ ಕೀರ್ತನೆಯು ತಿಳಿಸುತ್ತದೆ. ಮುಕ್ತಿ ಬಯಸುವವನಿಗೆ ಭಕ್ತಿ ಬೇಕೆಂಬುದು ದಾಸರ ಮಾತಿನಲ್ಲಿದೆ. ಹಾಗೆಯೇ ಹರಿನಾಮ ಮಹಿಮೆ ಗುರು ಸೇವೆ ಹರಿಭಜನೆ ಇವೆಲ್ಲ ಮುಕ್ತಿಗೆ ಪ್ರೇರಿತವಾದ ಅಂಶಗಳಾಗಿವೆ. ಮನುಷ್ಯನ ಪ್ರಯತ್ನ ಇಲ್ಲದೆ ಭಗವಂತನು ಎಲ್ಲರಿಗೂ ಮುಕ್ತಿಯನ್ನು ನೀಡಬಲ್ಲನು. ಆದರೆ ಆತ ಮಾನವರು ಕ್ರಿಯಾಶೀಲರಾಗಬೇಕೆಂದು ಅವರಿಂದಲೇ ಮುಕ್ತಿ ಸಾಧನೆಗೆ ಮೊದಲು ಪ್ರಯತ್ನವಾಗಬೇಕೆಂದು ನಿರೀಕ್ಷಿಸುತ್ತಾನೆ. ಇಲ್ಲಿ ದೇವರ ದೃಷ್ಟಿಕೋನ ಎಲ್ಲರನ್ನು ಕ್ರಿಯಾರಹಿತರನ್ನಾಗಿಸುವುದಿಲ್ಲ. ಹಾಗೆಯೇ ತಾನಾಗಿಯೇ ಲಭ್ಯವಾಗುವ ಸುಖದಿಂದ ಮಾನವ ಪ್ರಾಣಿ ಅದರ ಬೆಲೆಯನ್ನು ತಿಳಿಯದವನಾಗುತ್ತಾನೆ. ಸೋಮಾರಿಯಾಗುತ್ತಾನೆ. ಆದ್ದರಿಂದ ಮನುಷ್ಯನ ಪ್ರಯತ್ನವೇ ಮುಕ್ತಿಗೆ ಮುಖ್ಯವಾಗಿದೆ. ಇಂತಹ ಪ್ರಯತ್ನದಿಂದಲೇ ಮನುಷ್ಯ ಉನ್ನತಿಯನ್ನು ಸಾಧಿಸಬಹುದು.

''ಶರೀರ ಜರಿಯಬೇಡಾ | ಬೆರಿಯಬೇಡಾ |
ಸ್ಥಿರವಿದ್ಧ ಕೈಯಲಿ ಗುರು ಶರಣವ ಹೊಕ್ಕು |
ತಾರಿಸೋ ಭವದಿಂದ ನೀ ಮರಳು ಜೀವವೇ

ಲೋಕದೊಳು ವಾರಿಜೋದ್ಭವ ನಿನ್ನ ಜನ್ಮಕೊಟ್ಟು |
ನೂಕಲಾಗ ತಾಯಿ ಗರ್ಭದೊಳಾವರಿಸಿ ತಾನು ಧರಿಸಿ |
ರೇಖೆ ರೂಪ ಲಾವಣ್ಯ ಅವಯವಂಗಳಿಂದ |
ಸಾಕಾರವಾಗಿ ಸುಂದರೆನಿಸಿ ವರನೆನಿಸಿ |
ಬೇಕಾದ ವಿದ್ಯವನು ಸರ್ವ ಸಂಪಾದಿಸಲು |
ತಾ ಕಾರ್ಯವಾಗಿ ಅಭ್ಯಾಸದಿಂದಾ ಧ್ಯಾಸದಿಂದಾ |
ವಾಕ್ಪಟುದಲಿ ಸಮರ್ಥನೆಂಬ ನಾಮ ಪಡೆದು |
ಪ್ರಖ್ಯಾತವಾದೆ ಈ ಕಾಯದಿಂದ''[೨]

ಕೃಷ್ಣದಾಸರು ಈ ಕೀರ್ತನೆಯಲ್ಲಿ ಮನುಷ್ಯ ತನ್ನ ಶರೀರದಿಂದಲೇ ಏನೆಲ್ಲವನ್ನು ಸಾಧಿಸುತ್ತಾನೆ ಎಂಬುದನ್ನು ಬಹುಸುಂದರವಾಗಿ ಪ್ರಸ್ತಾಪಿಸಿದ್ದಾರೆ. ಜನ್ಮಜನ್ಮಾಂತರಗಳಲ್ಲಿ ನಾವು ಮಾಡಿದ ಕರ್ಮ ಸವೆದು ಕೊನೆಗೆ ಮುಕ್ತಿಗೆ ಸಾಧನವಾಗುತ್ತದೆ. ಮನುಷ್ಯ ವಿವೇಚನಾ ಶಕ್ತಿಯ ಮೂಲಕ ಇತರ ಪ್ರಾಣಿಗಳಿಗಿಂತ ಭಿನ್ನವಾಗಿ ನಿಲ್ಲುತ್ತಾನೆ. ಆದ್ದರಿಂದ ಮನುಷ್ಯ ಪ್ರಾಣಿಯಾದ ಮಾನವ ಎಲ್ಲಿಯೂ ನಿಲ್ಲದೆ ದೇಹ ಅಶಾಶ್ವತವೆಂಬುದನ್ನು ಅರಿತುಕೊಳ್ಳಬೇಕು. ಸದ್ಭಕ್ತ ವಿಚಾರವನ್ನು ಪಡೆದು ದೈವಭಕ್ತರಾಗಿ ಆತ್ಮಾನಂದವನ್ನು ಪಡೆಯಬೇಕೆನ್ನುತ್ತಾರೆ ಕೃಷ್ಣದಾಸರು. ಮನುಷ್ಯ ಚಂಚಲತೆ, ವ್ಯಾಮೋಹ, ಭ್ರಮೆ, ಮೊದಲಾದ ದೌರ್ಬಲ್ಯಗಳನ್ನು ಗುರುತಿಸುತ್ತಾರೆ. ನಶ್ವರ ವಸ್ತುಗಳ ಮೇಲಿನ ಗೀಳನ್ನು ಬಿಟ್ಟು ಕ್ಷಣಿಕವಾದ ಈ ಬದುಕಿನಲ್ಲಿ ಸದ್ಭಕ್ತಿಯ ಮೌಲ್ಯವನ್ನು ಸತ್ಸಂಗದಿಂದ ಹೆಚ್ಚಿಸಿಕೊಳ್ಳಬೇಕು ಎಂದು ಹೇಳುತ್ತಾರೆ.

ಮಾನವನು ಪಾರಮಾರ್ಥಿಕ ಸಾಧನೆಯಲ್ಲಿ ತೊಡಗಲು ಅವನ ಮನಸ್ಸು ಶುಚಿತ್ವದಿಂದ ಕೂಡಿರಬೇಕು. ಆ ಶುಚಿತ್ವ ಮಾನವನಲ್ಲಿ ಎಲ್ಲಿಯವರೆಗೆ ನೆಲೆ ನಿಲ್ಲುವುದಿಲ್ಲವೂ ಅಲ್ಲಿಯವರೆಗೆ ಏನನ್ನೂ ಸಾಧಿಸಲಾರ. ಆ ನಿಟ್ಟಿನಲ್ಲಿ ಮಾನವಧರ್ಮ ಶ್ರೇಷ್ಠ ಎಂದು ಕೃಷ್ಣದಾಸರು ಸಾರಿ ಹೇಳುತ್ತಾರೆ. ''ಶರಣಾರ್ಥಿ ಶಿವ ಶರಣಾರ್ಥಿ'' ಎಂಬ ಪದ್ಯದಲ್ಲಿ ಕೃಷ್ಣದಾಸರು ಹರಿಹರರ ಅಬೇಧ್ಯವನ್ನು ಕಾಣಿಸುತ್ತಾರೆ. ಹಲವು ಕೀರ್ತನೆಗಳಲ್ಲಿ ಲೋಕಕಲ್ಯಾಣಕ್ಕೆ ಬೋಧಪ್ರಧಾನವಾದ ಉಪದೇಶವನ್ನು ನೀಡುವ ನಿಟ್ಟಿನಲ್ಲಿ ಅನೇಕ ಕೀರ್ತನೆಗಳನ್ನು ರಚಿಸಿರುವುದು ಕಂಡುಬರುತ್ತದೆ.

೪. ಆತ್ಮನಿವೇದನೆ

ಕೃಷ್ಣದಾಸರು ತಮ್ಮ ರಕ್ಷಣೆಯ ಜವಾಬ್ದಾರಿಯನ್ನು ಶ್ರೀಹರಿಯ ಮೇಲೆ ಹಾಕುತ್ತಾರೆ. ಈ ಭಾವವು ಅವರ ಅನೇಕ ಕೀರ್ತನೆಗಳಲ್ಲಿ ಎದ್ದುಕಾಣುತ್ತದೆ. ಭಕ್ತನ ಮನಸ್ಸು ಪರಿಪಕ್ವಗೊಂಡಾಗ

ಭಕ್ತಿಮಾರ್ಗದಲ್ಲಿ ಮುನ್ನಡೆದು ದೈವಸಾಕ್ಷಾತ್ಕಾರದಲ್ಲಿ ನೆಲೆ ನಿಲ್ಲುತ್ತದೆ. ಭಕ್ತಶ್ರೇಷ್ಠರಾದ ದಾಸರು ತಮ್ಮ ಕೀರ್ತನೆಯಲ್ಲಿ ಕೇವಲ ಬೌದ್ಧಿಕ ಮತ್ತು ಸಾಹಿತ್ಯಕ ಅಭಿವ್ಯಕ್ತಿಗೆ ಮಾತ್ರವಲ್ಲದೆ, ಆತ್ಮಾನುಭವದ ಅಪೂರ್ವ ಸಂಗತಿಗಳನ್ನು ಹೊರಹಾಕುತ್ತಾರೆ. ತಮ್ಮ ಗುರು ಹಾಗೂ ತಂದೆಯಾದ ಮಹಿಪತಿರಾಯರ ಅನುಗ್ರಹದ ಹಸ್ತ ಶಿರದ ಮೇಲೆ ಇಟ್ಟಾಗ ಪಾರಮಾರ್ಥದ ಅನುಭವವನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಸಾಗುತ್ತಾರೆ.

ಈ ಘಟನೆಗಿಂತ ಮೊದಲು ಕೃಷ್ಣದಾಸರು ತಮ್ಮ ಜೀವನದಲ್ಲಿ ಕಳೆದ ವೇಳೆಯನ್ನು ನೆನಪಿಸಿಕೊಳ್ಳುತ್ತಾರೆ. ಭಕ್ತಿಯಲ್ಲಿ ನಿಲ್ಲದ ಸಂದರ್ಭವನ್ನು ನೆನೆದು ತನ್ನ ತಪ್ಪುಗಳನ್ನು ಎತ್ತಿಹಿಡಿದು ಚಂಚಲತೆಯ ಮನಸ್ಸನ್ನು ನಿಂದಿಸಿಕೊಳ್ಳುತ್ತಾರೆ. ಧನ್ಯತೆಯಿಂದ ಪರಮಾತ್ಮನಲ್ಲಿ ಮೊರೆ ಹೋಗುತ್ತಾರೆ. ತಮ್ಮ ದೌರ್ಬಲ್ಯವನ್ನು, ತಾಪತ್ರಯಗಳನ್ನು ದೂರ ಮಾಡಲು ಶ್ರೀಹರಿಯೊಬ್ಬನೇ ಸಮರ್ಥನೆಂದು ಭಾವಿಸಿ ಆತನಲ್ಲಿ ಶರಣಾಗತನಾಗುತ್ತಾರೆ. ಭಗವಂತನ ಕೃಪೆಯಿಲ್ಲದೆ ತಾನೊಬ್ಬನೇ ಗುರಿಯನ್ನು ಮುಟ್ಟಲಾರೆನೆಂಬ ತಿಳುವಳಿಕೆಯನ್ನು ಅರಿತು ಪರಮಾತ್ಮನಲ್ಲಿ ಬೇಡಿಕೊಳ್ಳುತ್ತಾರೆ.

ಇನ್ನಾರ ಭಜಿಸಲಯ್ಯಾ | ಯನ್ನ ಗತಿ
ಮುಕುತಿದಾಯಕ ರಂಗ ನೀನಿರಲು

ಸ್ನಾನಪಾನಕಬಪ್ಪ ಸುರನದಿಯನೇ ತ್ಯಜಿಸಿ
ಹೀನ ಸರಿತೆಗಳಲ್ಲಿ ಮುಣುಗುವರೇ
ಏನ ಬೇಡಿದ ನೀವ ಸುರ ಭೂಜ ಇದಿರಿಡಲು
ಕಾನನದ ಶಾಲ್ಮಲಿಯ ಫಲವ ನರಸುವಂತೆ''[೩೩]

ಭಗವಂತನ ಭಜನೆಯೊಂದೇ ಮುಖ್ಯ ಹೊರತು ಇನ್ನಾರನ್ನು ಭಜಿಸಲಿ. ಶ್ರೀಹರಿಯ ಅನುಗ್ರಹವು ಬೇಡಿದವರಿಗೆ ಬೇಡಿದ್ದನ್ನು ನೀಡುವ ಶ್ರೀನಿಧಿಯು ಆಗಿರುವೆ. ನೀನಿರುವಾಗ ಹೀನ ಮನುಷ್ಯನಾದ ನಾನು ನನ್ನಲ್ಲಿರುವ ದುರ್ಬುಧ್ಧಿಗಳನ್ನು ಹೋಗಲಾಡಿಸಿ ಸದ್ಭಕ್ತಿ ನೀಡು ದೇವಾ ಎಂದು ಕೇಳಿಕೊಳ್ಳುತ್ತಾರೆ. ನಿನ್ನ ದರ್ಶನಕ್ಕಾಗಿ ಹಗಲಿರುಳು ಜಪಿಸುತ್ತಲ್ಲಿದ್ದೇನೆ. ಇನ್ನು ನನ್ನಿಂದ ಕಾಯಲಾಗದು. ಹತ್ತು ಜನ್ಮದಲ್ಲಿ ಮರುಹುಟ್ಟು ಪಡೆದ ಭಕ್ತ ಅಂಬರೀಷನ ಶಾಪ ವಿಮೋಚನ ಮಾಡಿದ ದೇವಾ ದರ್ಶನಭಾಗ್ಯ ಕೊಡದೆ ಏಕೆ ನನ್ನನ್ನು ಕಾಯಿಸುತ್ತಿರುವಿ. ಎಂದು ಭಗವಂತನಲ್ಲಿ ಕೃಷ್ಣದಾಸರು ಆತ್ಮನಿವೇದನೆ ಮಾಡಿಕೊಳ್ಳುತ್ತಾರೆ. ಮುಂದುವರಿದು ಅಜಮೇಳ, ಶಬರಿ, ಮುಂತಾದವರಿಗೆ ಬಂದ ಸಂಕಷ್ಟವನ್ನು ದೂರ ಮಾಡಿದ ಶ್ರೀಹರಿ ಎನ್ನನು ಉದ್ಧರಿಸು ಎಂದು ಕೇಳಿಕೊಳ್ಳುತ್ತಾರೆ.

''ಎನ್ನ ಪಾಲಿಸೋ ಕರುಣಾಕರಾ
ಪನ್ನಗಶಯನ ಗದಾಧರಾ''[೩೪]

ಆತ್ಮಾನುಭವದ ಭಕ್ತಿಯನ್ನು ಈ ವಿಧದಲ್ಲಿ ತೋರ್ಪಡಿಸಿಕೊಳ್ಳುತ್ತಾರೆ. ಕೃಷ್ಣದಾಸರು ಎನ್ನ ಸಲುಹು ನೀನೆ ದಯಾಂಬುಧಿ ದೀನೋದ್ಧಾರಕ. ದುರಿತನಿವಾರಕ ಸದ್ಗುರು ಶ್ರೀಹರಿಯೇ ಎನ್ನ ಸಲುಹು. ಇಲ್ಲಿ ಹಲವು ವಿಧದಲ್ಲಿ ಭಕ್ತಿಯ ಸಿಂಚನವನ್ನು, ಶ್ರೀಹರಿಯ ಮೇಲಿನ ನಿಷ್ಠತೆಯನ್ನು ಇವರ ಕೀರ್ತನೆಯು ಧ್ವನಿಸುತ್ತದೆ.

''ಎನ್ನ ಸಲಹೋ ರಂಗಾ ಎನ್ನ ಸಲಹು |
ನಿನ್ನ ಚರಣ ಕಮಲದೋರಿ |
ಚಿನ್ನ ಕಿಂಕರ ದಾಸ ನಾನು | ಪನ್ನಗಾರಿ ಗಮನ ರಂಗಾ

ನಷ್ಟ ಪರಮ ಪತಿತ ಗತಿಯ | ಗೆಟ್ಟು ಅಜಮಿಳ ತನ್ನ |
ಕಷ್ಟ ಪಡುವ ಕಾಲದಲ್ಲಿ ಸುತನ ಪೆಸರನು |
ಮುಟ್ಟಿ ಕರಿಯೇ ತೃಪ್ತನಾಗಿ | ಅಷ್ಟರಿಂದ ಅವಗ ನಿನ್ನ |
ಪಟ್ಟಣಕ ನೀ ಅಟ್ಟಿ ಗತಿಯ | ಕೊಟ್ಟು ಸಲುಹಿದೆ ರಂಗಾ''[೩೫]

ಕೃಷ್ಣದಾಸರು ಭಕ್ತರ ಭಕ್ತಿಯ ಸಾಧನೆಯನ್ನು ಶ್ರೀಹರಿಯನ್ನು ನೆನಪಿಸುವ ಪ್ರಕ್ರಿಯೆಯನ್ನು ಮಾಡುತ್ತಾರೆ. ಭಕ್ತನ ಆತ್ಮನಿವೇದನೆಯನ್ನು ಭಗವಂತನ ಮುಂದಿಡುತ್ತಾರೆ. ದಾಸರು ತಮ್ಮ ಅನೇಕ ಕೀರ್ತನೆಗಳಲ್ಲಿ ಶರಣಾಗತಿ ತತ್ವದ ಲಕ್ಷಣವಾದ ಆತ್ಮಶೋಧನೆ, ಧನ್ಯತೆ, ಆತ್ಮಸಮರ್ಪಣೆ ಮಾಡಿಕೊಳ್ಳುತ್ತಾರೆ. ಇವೆಲ್ಲ ಗುರು ಮತ್ತು ಶ್ರೀಹರಿಯ ಪಾದ ಸೇವನೆಯ ಭಾವದಿಂದ ತುಂಬಿಕೊಂಡಿವೆ. ಈ ಶರಣಾಗತಿಯು ಭಕ್ತಿಯ ಮೂಲಕವೇ ದೈವ ಸಾಕ್ಷಾತ್ಕಾರಕ್ಕೆ ದೈವ ಸಾನ್ನಿಧ್ಯಗೆ ಸೇರಿರುವ ಪುರಾಣ ಪುರುಷರನ್ನು ನೆನೆಯುತ್ತಾರೆ. ಭಾಗವತ ಭಕ್ತರ ಪ್ರತಿಮೆಗಳನ್ನು ವಿವಿಧ ಆಯಾಮಗಳಲ್ಲಿ ಹೋಲಿಸಿಕೊಂಡು ಹರಿಧ್ಯಾನದ ಮೂಲಕ ಭಗವಂತನಿಗೆ ದಾಸನಾಗುವ ಪರಿಯನ್ನು ಆಡಿಕೊಳ್ಳುತ್ತಾರೆ. ಲೋಕದ ಆಸಕ್ತಿಯನ್ನು ತ್ಯಜಿಸಬೇಕು. ಜೀವಸುಖದ ಹಂಗನ್ನು ತೊರೆಯಬೇಕು. ಪುರ್ನಜನ್ಮವಿಲ್ಲದ ಈ ದೇಹಕ್ಕೆ ಶಾಶ್ವತವಾದ ಮಾರ್ಗವನ್ನು ಆತ್ಮ ಸಮರ್ಪಣೆಯ ಮೂಲಕ ಅಭಿವ್ಯಕ್ತಪಡಿಸಿದ್ದಾರೆ. ಈ ತತ್ವವನ್ನು ಈ ಕೆಳಗಿನ ಕೀರ್ತನೆಯಲ್ಲಿ ಗುರುತಿಸಲಾಗಿದೆ.

''ಏನಾದರೇನು ಗುರುದಯ ಪಡದನಕಾ |
ತಾನೊಲಿಯನು ಹರಿ ಕಾವನ ಜನಕಾ

ಪರಿ ಪರಿ ಸಾಧನದಲಿ ಬಳಲುವರೇ |
ಪರಸ ಮುಟ್ಟದ ಲೋಹವಾಗುವದೇ ಕನಕಾ

ಪತೀತೋದ್ಧರ ಗುರು ಸ್ವಸುಖದಾನಿ |
ವ್ರತ ತಪದಿ ಸಿದ್ಧಿಯ ಬಹ ಸುಖ ಕ್ಷಣಿಕಾ''[೩೬]

ಜೀವನದಲ್ಲಿ ಸಿರಿಯು ಬರಬಹುದು. ಮಡದಿ ಮಕ್ಕಳು ಬರಬಹುದು. ಏನನ್ನಾದರೂ ಪಡೆಯಬಹುದು. ಆದರೆ ಗುರು ದಯೆ ಇಲ್ಲದೆ ಮುಕ್ತಿಯನ್ನು ಪಡೆಯಲು ಸಾಧ್ಯವಿಲ್ಲ. ಅನೇಕಾನೇಕ ಸಾಧನೆಯಲ್ಲಿ ತೊಡಗಿದವರಿಗೆ ಸ್ಪರ್ಶದಿಂದ ಮುಟ್ಟಿದ ಲೋಹ ಎಂದಾದರೂ ಚಿನ್ನವಾಗಬಹುದೆ. ಭಗವಂತನ ಅನುಗ್ರಹ ಭಕ್ತನಾದವನ ಸಾಧನೆಯ ಹಿಂದೆ ಇರಬೇಕೆಂಬ ಭಾವ ಕೃಷ್ಣದಾಸರದು. ಆ ಕಾರ್ಯಕ್ಕಾಗಿ ಭಗವಂತನ ಅನುಗ್ರಹಕ್ಕಾಗಿ ದಾಸರು ಪರಿಪರಿಯಾಗಿ ಪರಿತಪ್ಪಿಸುತ್ತಾರೆ. ಘೋರ ಸಂಸಾರದ ತಾಪತ್ರಯದಲ್ಲಿ ನೊಂದು, ಅವುಗಳನ್ನು ತನ್ನ ಭಾವಾನುಭವದ ಮೂಲಕ ಪರಿಹರಿಸಿಕೊಳ್ಳುವ ನಿಟ್ಟಿನಲ್ಲಿ ಈ ಕೀರ್ತನೆಯನ್ನು ಪ್ರಸ್ತುತಪಡಿಸಿದ್ದಾರೆ.

''ಕಾಯೋ ಕರುಣಾನಿಧಿ | ಶ್ರೀಹರಿ |

ಖಗವರ ಗಮನಾ

ಘೋರ ಸಂಸಾರದ ತಾಪದಿ ನೊಂದೆ |

ವಾರಿ ಭವ ಭಯ ಅಘಕುಲ ಶಮನಾ

ಜ್ಞಾನ ಧ್ಯಾನದ ನಿಜ ಸಾಧನವರಿಯೆ |

ನೀನೆ ಗತಿಯೆನುತ ಮಾಡುವೆ ನಮನಾ''[೩೭]

ಲೌಕಿಕ ಜೀವನದಲ್ಲಿ ಬಿದ್ದು ಶ್ರೀಹರಿಯನ್ನು ಸ್ತುತಿಸದೆ ಈ ಜೀವನವನ್ನು ವ್ಯರ್ಥ ಮಾಡಿಕೊಂಡಿರುವೆ. ಆ ತಪ್ಪುಗಳನ್ನು ಭಗವಂತನ ಪಾದಗಳಿಗೆ ಅರ್ಪಿಸಿ ಕ್ಷಮಾಪಣೆಯನ್ನು ಕೇಳುವ ದಾಸರ ರೀತಿ ಸುಂದರವಾಗಿ ಮೂಡಿಬಂದಿದೆ. ಕೊನೆಗೆ ನೀನೆ ಗತಿ ಎನ್ನುತ ಮಾಡುವೆ ನಮನ ಎನ್ನುವಲ್ಲಿ ಭಗವಂತನ ಸಾಮೀಪ್ಯ ಆತನ ದಾಸತ್ವ ಸ್ವೀಕರಿಸಿಕೊಂಡ ಬಗೆ ಎದ್ದು ಕಾಣುತ್ತದೆ. ಕೃಷ್ಣದಾಸರು ಶ್ರೀಹರಿಯಲ್ಲಿ ಈ ಜೀವನದ ಜಂಜಾಟದ ಹಾದಿಯನ್ನು ಬಿಡಿಸಿ ನಿನ್ನ ಸಾಮೀಪ್ಯಕ್ಕೆ ಎನ್ನನ್ನು ಕರೆದುಕೊಳ್ಳು ಎನ್ನುತ್ತಾರೆ. ತನ್ನ ಆತ್ಮನಿವೇದನೆಯನ್ನು ಆ ದೇವನ ಪಾದಗಳಿಗೆ ಅರ್ಪಿಸುತ್ತಾರೆ. ಈ ತೆರನಾಗಿ ತಾನು ಮಾಡಿದ ತಪ್ಪುಗಳನ್ನು ತಿದ್ದಿಕೊಳ್ಳುವ ನಿಟ್ಟಿನಲ್ಲಿ ಪ್ರಮುಖವಾಗಿ ಈ ಕೀರ್ತನೆಯು ಬಿಂಬಿಸುತ್ತದೆ. ಶರಣಾಗತರಾಗಲು ಸನ್ನದ್ಧರಾದ ದಾಸರ ಪರಿ ಇಲ್ಲಿ ಮಾರ್ದ್ವನಿಸುತ್ತದೆ.

"ತಪ್ಪುಗಳೆಣಿಸದೆ ಸಿದ್ದೇಶಾ ಯನ್ನಪ್ಪ ಶ್ರೀನಿವಾಸ

ಕಾಯೋ ಸಿದ್ದೇಶಾ

ಸಕ್ತನಾಗಿ ವಿಷಯದಿ ಸಿದ್ದೇಶಾ ಜ್ಞಾನ

ಯುಕ್ತಿಮತಿ ಹೊಂದಲಿಲ್ಲಾ

ಭಕ್ತಿಯ ಗುಣಂಗಳಿಲ್ಲಾ ವಿರಕ್ತಿಯ ಅಂಕುಶವಿಲ್ಲಾ

ಸಾಧು ಜನಸಂಗ ಮಾಡೀ ನಿಜ ಬೋಧಾಮೃತ ಸವಿಯಲಿಲ್ಲಾ

ವಾದ ಗುಣ ಹಿಂಗಲಿಲ್ಲಾ ಕಾಮ, ಕ್ರೋಧ, ಸುಳಿಯಲಿ ಬಿದ್ದೆ''[೩೮]

ಈ ಕೀರ್ತನೆಯಲ್ಲಿ ದಾಸರು ತನ್ನತನದ ತಪ್ಪುಗಳ ಹುಡುಕಾಟವನ್ನು ಮುಂದುವರಿಸಿದ್ದಾರೆ. ಸಾಧು ಜನಸಂಘ ಮಾಡದೆ ಅವರಲ್ಲಿರುವ ನಿಜ ಬೋಧಾಮೃತವನ್ನು ಸವಿಯದೆ, ವ್ಯರ್ಥ ಜೀವನ ನಡೆಸಿದೆನೆಂಬ ಭಾವ ಎದ್ದು ಕಾಣುತ್ತದೆ. ಕಾಮ, ಕ್ರೋಧ, ಮೋಹ ಇವುಗಳ ಸುಳಿಯಲ್ಲಿ ಬಿದ್ದು ಶ್ರೀಗುರುವಿನ ವಿಷಯದ ಬೋಧೆಯನ್ನು ತಿಳಿಯದೆ ಸಮಯವನ್ನು ವ್ಯರ್ಥಮಾಡಿಕೊಂಡೆ. ಆ ಬಗೆಯನ್ನು ಎಣಿಸದಿರು ಎನ್ನುತ ಕೃಷ್ಣದಾಸರು ಈ ಸಂಸಾರದ ಭವ ಬಂಧನದಿಂದ ವಿಮುಕ್ತಿಗೊಳಿಸುವ ಕಾರ್ಯವನ್ನು ಪರಮಾತ್ಮನ ಮೇಲೆ ಹಾಕುತ್ತಾರೆ. ಹಾಗೆಯೇ ತಾನು ಮಾಡಿದ ಅಸಂಖ್ಯಾತ ತಪ್ಪುಗಳನ್ನು ನೆನೆದು ಕ್ಷಮಾಪಣೆಯನ್ನು ಮಾಡಿಕೊಳ್ಳುವ ರೀತಿ ಇಲ್ಲಿಯ ಕೀರ್ತನೆಗಳಲ್ಲಿ ಪುನಃ ಪುನಃ ಎದ್ದುಕಾಣುತ್ತದೆ.

''ತಪ್ಪು ಕ್ಷಮೆ ಮಾಡೋ ಕೃಪೆಯಿಂದ ನೋಡೋ

ನೀನೆ ದಯಾನಿಧಿ ನಾನು ಅಪರಾಧಿ

ಖೂನದೋರೋ ಹಾದಿ ಸ್ಥಾನ ನಿಜಾನಾದಿ

ಅನಾಥನೆಂದು ನೋಡಿ ಸನಾಥನೆನ್ನಮಾಡಿ

ಸ್ವಾನಂದ ಸುಖನೀಡಿ ಮನ್ನಾಥ ನಿಜಗೂಡಿ

ಹೇಳಲಾರೆ ಬಹಳಾ ಕೇಳೋನೀದಯಾಳಾ

ತಾಳಿಯನ್ನ ತೋಲಾಬಾಲವಿಶ್ವಪಾಲಾ

ಸೇವಿ ಇದೇನಮ್ಮ ಭಾವಿಸುದು ನಿಮ್ಮ

ಪಾವನ್ನಗೈಸು ವರ್ಮಾ ಸುನಿತ್ಯ ಪರಬ್ರಹ್ಮಾ''[೩೯]

ನಾನು ಅಪರಾಧಿ. ಎನ್ನ ಅರಿವಿಗೆ ಬಾರದೆ ಅನೇಕ ತಪ್ಪುಗಳು ಜರುಗಿವೆ. ನನ್ನನ್ನು ಅನಾಥನೆಂದು ಭಾವಿಸದೆ, ಸನಾತನನಾಗಿ ಮಾಡು. ಹೆಚ್ಚೇನು ಹೇಳಲಾರೆ ಬೇರೇನು ಕೇಳಲಾರೆ. ನಿನ್ನ ಅನುಗ್ರಹ ಒಂದೇ ಸಾಕೆನಗೆ. ಎನ್ನುತ ತಮ್ಮ ಆತ್ಮವಿವೇಚನೆಯನ್ನು ಶ್ರೀಹರಿಯ ಮುಂದಿಡುತ್ತಾ ಕ್ಷಮಾಪಣೆಯನ್ನು ಮಾಡಲು ಕೇಳಿಕೊಳ್ಳುತ್ತಾರೆ. ಜಗದ ಅಂತರ್‌ಗಾಮಿಯಾದ ಶ್ರೀಹರಿಯು ನಿನ್ನ ಜ್ಞಾನ ಒಂದೆ ನನಗೆ ಸಾಕು. ಇಲ್ಲಿಯ ಕೀರ್ತನೆಗಳು ಸಮರ್ಪಣಾ ಭಾವದಿಂದ ಸಾರ್ಥಕತೆಯನ್ನು ಪಡೆದಿವೆ. ''ಅದು ಗರುಡ, ಹನುಮಂತ, ಲಕ್ಷ್ಮಣರಂತೆ ಕಷ್ಟಗಳನ್ನು ಸಂತೋಷವಾಗಿ ಅನುಭವಿಸುತ್ತ ವಿರಾಮವಿಲ್ಲದೆ ಸೇವೆಗೈಯುತ್ತಾ ಆನಂದಿಸಬಹುದು.

ಕೌಸಲ್ಯ, ದೇವಕಿ, ಯಶೋದೆ, ಪೆರಿಯಾಳ್ವಾರರಂತೆ ದೇವರನ್ನು ಮಗುವಾಗಿ ಭಾವಿಸಿ, ಪ್ರೀತಿಸಿ, ಮಾತೃವಾತ್ಸಲ್ಯದ ಆರೈಕೆ ಮಾಡಬಹುದು. ಆಂಡಾಳ್, ರಾಧೆ, ನಮ್ಮಾಳ್ವಾರರಂತೆ ಭಗವಂತನನ್ನು ಪತಿ ಎಂದು ಭಾವಿಸಿ ಸತಿ-ಪತಿ ಭಾವದ ಪ್ರೇಮ ವಿರಹದಲ್ಲಿ ಮುಳುಗಬಹುದು. ಬಲಿ ತಿರುಪ್ಪಾಣಾಳ್ವಾರ್, ತೊಂಡರಡಿಪ್ಪಡಿಯಾಳ್ವಾರರಂತೆ ಸರ್ವಸ್ವವನ್ನು ಸಮರ್ಪಿಸಿ ಅಡಿಯಾಳಾಗಬಹುದು. ಅಂಬರೀಷ, ವಿಭೀಷಣ, ಸುಗ್ರೀವರಂತೆ ಶರಣಾಗತಿ ಮಾಡಬಹುದು. ಅರ್ಜುನನಂತೆ ಸುಖವಾಗಿರಬಹುದು. ಪ್ರಹ್ಲಾದ, ಶುಕ, ಧ್ರುವ, ಜನಕರಂತೆ ಏಕಚಿತ್ತದಿಂದ ಸ್ತುತಿಸಿ ಕಾರುಣ್ಯ ಸಂಪಾದಿಸಬಹುದು. ಅಜಾಮಿಳ, ವಾಲ್ಮೀಕಿ, ಗಜೇಂದ್ರ, ದ್ರೌಪದಿಯರಂತೆ ನಾಮಸ್ಮರಣೆಯಿಂದಲೇ ಇಚ್ಛಿಸಿದುದನ್ನು ಪಡೆಯಬಹುದು. ಕುಬ್ಜೆ, ಕುಚೇಲ, ವಿದುರ, ಶಬರಿ, ಗೋಪಿಕೆಯರು, ಶಿಬಿ, ಜಟಾಯು, ಅಕ್ರೂರ, ಅಹಲ್ಯೆಯರಂತೆ ಅನನ್ಯವಾಗಿ ಸ್ತುತಿಸುತ್ತಾ ದೈವದರ್ಶನಕ್ಕಾಗಿ ಕಾಯುತ್ತಾ ಮುಕ್ತಿ ಪಡೆಯಬಹುದು. ಹಿರಣ್ಯಾಕ್ಷ, ಹಿರಣ್ಯಕಶಪು, ರಾವಣ, ಶಿಶುಪಾಲ, ದುರ್ಯೋಧನರಂತೆ ದ್ವೇಷಿಸುತ್ತ ನಿಂದಿಸುತ್ತಲೂ ದೇವರನ್ನು ಕಾಣಬಹುದು."[೪೦]

ಕೃಷ್ಣದಾಸರು ಈ ಎಲ್ಲ ಬಗೆಯಲ್ಲಿ ತತ್ವಾನ್ವಿತ ದಿವ್ಯ ದರ್ಶನದ ಮಾರ್ಗಗಳನ್ನು ಉಲ್ಲೇಖಿಸುತ್ತಾರೆ. ಹಾಗೆಯೇ ಶರಣಾಗತಿ ತತ್ವದ ತಳಹದಿಯ ಮೇಲೆ ಭಾವಿಸಿಕೊಂಡಿದ್ದಾರೆ. ಆತ್ಮವನ್ನು ಪರಿಪರಿಯಾಗಿ ಶ್ರೀಹರಿಗೆ ಸಮರ್ಪಿಸುತ್ತ ಮೋಕ್ಷಕ್ಕಾಗಿ ಹಾತೊರೆದಿದ್ದಾರೆ. ಶ್ರೇಷ್ಠ ಪುರಾಣಗಳಲ್ಲಿ ಕಂಡುಬರುವ ಭಕ್ತರ ಪ್ರತಿಮೆಗಳಿಲ್ಲದೆ ಕೀರ್ತನೆಗಳೇ ಇಲ್ಲ. ಎನ್ನುವಷ್ಟರ ಮಟ್ಟಿಗೆ ಹಲವು ಶ್ರೇಷ್ಠಭಕ್ತರ ನಿದರ್ಶನಗಳನ್ನು ಕೊಡುತ್ತ, ಭಗವಂತನ ಅನುಗ್ರಹದಿಂದ ಭಕ್ತರಿಗೆ ಆದ ಲಾಭವನ್ನು ನೆನಪಿಸುತ್ತಾರೆ. ಮನಸ್ಸು ತಂಬಿ ಸ್ತುತಿಸುವ ಆತ್ಮನಿವೇದನೆಯ ಭಾವ ಪರವಶತೆಯನ್ನು ಇವರ ಕೀರ್ತನೆಯಲ್ಲಿ ಕಾಣುತ್ತೇವೆ. ದಾಸರು ಶ್ರೀಹರಿಯ ದಾಸನಾಗುವ ಪರಿಯನ್ನು ಈ ರೀತಿಯಲ್ಲಿ ಅಭಿವ್ಯಕ್ತಿಸಿದ್ದಾರೆ.

''ದಾಸನಾಗುವೆನು ಹರಿಯೇ ನಿಮ್ಮ

ದಂಡಿಗೆ ಹಿಡಿದು ಊರ್ಧ್ವ

ಪೌಂಡ್ರ ತುಳಸೀಮಾಲೆಯಿಂದಾ

ಪುಂಡಲೀಕ ವರದಶ್ರೀ |

ಪಾಡುರಂಗ ವಿಠ್ಠಲನೆಂಬಾ

ಲಜ್ಜೆಯಳಿದು ನೃತ್ಯ |

ಹೆಜ್ಜೆಗೊಮ್ಮೆ ತೋರಿಸುತ |

ಗರ್ಜಿಸುತ ಹರಿನಾಮ |

ಸಜ್ಜನರ ಒಲಿಸುವಾ''[೪೧]

ಕೃಷ್ಣದಾಸರ ಈ ಕೀರ್ತನೆಯಲ್ಲಿ, ನವವಿಧ ಭಕ್ತಿಯ ಮೂಲಕವಾಗಿ ತನು-ಮನ-ಧನವನ್ನು ಶ್ರೀಹರಿಗೆ ಅರ್ಪಿಸಿದ್ದಾರೆ. ಅನ್ಯರ ಭಜಿಸದೆ ಭಗವಂತನನ್ನು ಮಾತ್ರ ಭಜಿಸಿ ದಾಸನಾದ ಬಗೆಯನ್ನು ಆಡಿಕೊಳ್ಳುತ್ತಾರೆ. ದಂಡಿಗೆ, ತುಳಿಸಿ ಮಾಲೆ, ಲಜ್ಜೆಯಳಿದ ನೃತ್ಯ, ಗೆಜ್ಜೆಯ ನಿನಾದದ ಮೂಲಕ ಹರಿನಾಮ ಸ್ಮರಣೆಯನ್ನು ಗರ್ಜಿಸಿದ್ದಾರೆ. ಸಜ್ಜನರ ಸಂಗವನ್ನು ಒಲಿಸಿಕೊಳ್ಳುವ ಬಗೆಯನ್ನು ದಾಸರು ಕಂಡುಕೊಂಡವರು. ಈ ತೆರನಾಗಿ ಭಕ್ತಿಯ ಅನುಭವವನ್ನು ಅನುಭವಿಸಿದ್ದಾರೆ. ತಾವು ಮನದಟ್ಟು ಮಾಡಿಕೊಂಡು ಇತರರಿಗೂ ಆ ಮೂಲಕ ಭಕ್ತಿಯ ವಿಧವನ್ನು ತೋರ್ಪಡಿಸುತ್ತಾರೆ. ಅತ್ತಿತ್ತ ಹರಿದಾಡುವ ಮನಸ್ಸನ್ನು ಹಿಡಿದು ನಿಲ್ಲಿಸುವುದು ಕಷ್ಟದಾಯಕವಾಗಿದೆ. ಮುಗ್ಧ ಮಗುವಿನೋಪಾಯದಲ್ಲಿ ಶ್ರೀಹರಿಯನ್ನು ಪದೇ ಪದೇ ಪದ್ಯಗಳ ಮೂಲಕ ಸ್ಮರಣಿಸುತ್ತಾರೆ. ಸೇವೆಯನ್ನು ಮಾಡುವುದರಲ್ಲಿ ಇರುವ ಆನಂದವನ್ನು ಶ್ರೀಹರಿಯಲ್ಲಿ ಕಾಣುತ್ತಾರೆ. ಮತಿಹೀನನಾದ ನನ್ನನ್ನು ಮುಕ್ತಿಗೆ ಕರೆದುಕೊಂಡು ಹೋಗು ಎನ್ನುತ್ತಾರೆ. ಕೃಷ್ಣದಾಸರ ಆತ್ಮೀಯತೆಯ ಮನೋಭಾವ ವಿಭಿನ್ನತೆಯಿಂದ ಕೂಡಿದೆ. ತಾನು ಅನುಭವಿಸಿದ ಲೌಕಿಕ ಸುಖದ ಹುಚ್ಚಾಟದಲ್ಲಿ ತೊಡಗಿದ ಪ್ರಮೇಯವನ್ನು ಈ ರೀತಿಯಲ್ಲಿ ಹೇಳಿಕೊಂಡಿದ್ದಾರೆ.

''ಹುಚ್ಚಾದೆನಣ್ಣಾ | ಮುಚ್ಚುಗೊಂಡು ನಾನು

ಕರವಿಟ್ಟ ಸಿರಸದಲ್ಲಿ | ಅರುಹಿದ ಕಿವಿಯಲ್ಲಿ |
ಮರಳು ಬೀಜಾಕ್ಷರನು

ಮನದ ಮತಿಯಾ ಕೆಟ್ಟು | ಜನದ ಲಜ್ಜೆಯಾ ಬಿಟ್ಟು |
ಕುಣಿದು ಕೂಗುವೆ ಹರಿನಾಮವನು

ಹಿಂದಾದಾ ನೆನೆಯದೆ ಮುಂದ ಹಂಬಲಿಸದೇ |
ಬಂದದನುಂಡು ಕುಳ್ಳಿರುವೆನು

ಅರಿವೆಯ ಹೊದ್ದುಕೊಂಡು | ಪರವೆ ಪ್ರಪಂಚ
ಗಂಡು | ಜರಿದು ಬಲ್ಲವಿಕೆ ಹಮ್ಮವನು''[೪೨]

ಈ ಕೀರ್ತನೆಯಲ್ಲಿ ಕೃಷ್ಣದಾಸರು ತನ್ನ ಗುರುವಿನ ಬೀಜಾಕ್ಷರ ಮಹತ್ವವನ್ನು ಹೇಳುತ್ತಾರೆ. ಆ ಘಟನೆಯ ಹಿಂದಿರುವ ತನ್ನ ತಪ್ಪುಗಳನ್ನು ನೆನೆಯುತ್ತಾರೆ. ಅವುಗಳನ್ನು ಹರಿಯ ನಾಮಸ್ಮರಣೆಯ ಮಾಡುವ ಮೂಲಕ ಪರಿಹರಿಸಿಕೊಳ್ಳುವ ಸಂಕಲ್ಪ ಕಂಡುಬರುತ್ತದೆ. ದಾಸರು ಆತ್ಮನಿವೇದನೆಯ ಕೀರ್ತನೆಗಳನ್ನು ಶರಣಾಗತಿ ತತ್ವದ ಮೇಲೆಯೇ ಕಟ್ಟಿರುತ್ತಾರೆ. ಶರಣಾಗತಿ ಎಂಬುದು ಭಕ್ತಿಯ ಅತ್ಯಂತ ಸುಲಭ ಮಾರ್ಗ. ಆದರೆ ಅದನ್ನು ಅನುಸರಿಸಿಕೊಂಡು ಹೋಗುವುದು ಕಠಿಣ.

ಸುಖಾಪೇಕ್ಷೆ ತೊರೆದು ತನ್ನದೆಲ್ಲವನ್ನು ಅಲ್ಲಗಳೆಯುತ್ತಾರೆ. ಧನ್ಯತೆಯ ಮನೋಭಾವನೆಯಿಂದ ತನ್ನ ಸರ್ವಸ್ವವನ್ನು ಶ್ರೀಹರಿಯ ಪಾದಕ್ಕೆ ಸಮರ್ಪಿಸುವುದು ಬಹುಮುಖ್ಯವಾಗಿದೆ.

> ''ಧನ್ಯ ಧನ್ಯಾ | ಜಗದೊಳವನೇ | ಧನ್ಯ ಧನ್ಯಾ |
> ಧನ್ಯ ಧನ್ಯ ಅವ ತನ್ನೊಳು ಸ್ವಹಿತದ |
> ಕಣ್ಣದೆರೆದು ಗುರುವಿನ್ನರಿತಿಹ ನಿಜ |
> ಸಣ್ಣ ದೊಡ್ಡದರೊಳು ಘನ್ನವ ನೋಡುತಾ |
> ಮನ್ನಿಸಿ ಶಾಂತಿಯಲಿನ್ನಿಳಿದವನೇ''[೪೩]

ಭಗವಂತನಿಗೆ ತನ್ನನ್ನು ತಾನು ಅರ್ಪಿಸಿಕೊಂಡು ಧನ್ಯನಾದ ಬಗೆಯೇ ಆತ್ಮನಿವೇದನೆಯಾಗಿದೆ. ಪರಮಾತ್ಮನ ಸಾನ್ನಿಧ್ಯಕ್ಕಾಗಿ ಮತ್ತು ಆತನ ಅನುಗ್ರಹಕ್ಕಾಗಿ ಅನೇಕ ಕೀರ್ತನೆಗಳು ಮೀಸಲಾಗಿವೆ. ಯಾವುದೇ ಕಾರ್ಯ ಯಾವುದೇ ವ್ಯಕ್ತಿಯನ್ನು ಕಂಡರೂ ಎಲ್ಲದರಲ್ಲಿಯೂ ಭಗವಂತನನ್ನು ಕಾಣಬಲ್ಲ ಶಕ್ತಿ ಕೃಷ್ಣದಾಸರ ಕೀರ್ತನೆಗಳಲ್ಲಿ ಒಳಗೊಂಡಿದೆ. ಅಹಂಕಾರ, ಭ್ರಮೆ ಇಲ್ಲಿ ನಿರಸನವಾಗಿ ಕಂಡುಬರುತ್ತದೆ. ನಾನು ಎಂಬ ಭಾವ ಹೋಗಿ ತಾನು ಕೇವಲ ನೆಪ ಮಾತ್ರ, ಎಲ್ಲವೂ ಶ್ರೀಹರಿಯ ಮನೋಬಲದಿಂದ ಮೂಡಿ ಬಂದಿದೆ.

೫. ವಿರಹವೇದನೆ

ಮಧುರ ಭಾವವು ಎರಡು ತರಹದ ಹಂತವನ್ನು ಹೊಂದಿರುತ್ತದೆ. ಒಂದು ವಿರಹ ಅಥವಾ ವಿಪ್ರಲಂಬ. ಮತ್ತೊಂದು ಧನ್ಯತೆ ಅಥವಾ ಸಂಭೋಗ ವಿಪ್ರಲಂಬ. ಇದು ಇಬ್ಬರು ಪರಸ್ಪರ ದೂರವಿದ್ದಾಗ ಹುಟ್ಟಿಕೊಳ್ಳುವಂತದ್ದು. ಸಂಭೋಗವೆಂದರೆ ಇಬ್ಬರು ಪರಸ್ಪರ ಕೂಡಿಕೊಂಡು ತೃಪ್ತರಾಗುವಂತದ್ದು. ಇಲ್ಲಿ ವಿರಹವೆಂದರೆ ವಿಪ್ರಲಂಬ ಭಕ್ತ ಮತ್ತು ಭಗವಂತನು ಪರಸ್ಪರ ದೂರವಾದ ಹಿನ್ನೆಲೆಯಲ್ಲಿ ರಚಿತಗೊಂಡ ಕೀರ್ತನೆಗಳು ವಿರಹವೇದನೆ ಕೀರ್ತನಗಳಾಗಿವೆ.

''ವಿರಹದ ಘಟ್ಟದಲ್ಲಿ ಭಕ್ತನಿಗೆ ತನ್ನ ಸರ್ವಸ್ವವೂ, ಏಕೈಕ ರಕ್ಷಕನೂ ಆದ ದೇವರು ತನ್ನಿಂದ ಅಗಲಿರುವುದರಿಂದ ಭಕ್ತ ತೀವ್ರ ದುಃಖದಲ್ಲಿರುತ್ತಾನೆ. ದುಃಖತಪ್ತನಾದ ಈತ ಜೀವನದ ಪ್ರತಿಕ್ಷಣದಲ್ಲೂ ಆಧ್ಯಾತ್ಮಿಕವಾದ ಬಿಕ್ಕಟ್ಟೊಂದನ್ನು ಎದುರಿಸುತ್ತಿರುತ್ತಾನೆ. ಈ ಹಂತದಲ್ಲಿ ಅವನು ತನ್ನ ಸಮೀಪಕ್ಕೆ ಬಾರೆಂದು ದೇವರನ್ನು ದೀನನಾಗಿ ಪ್ರಾರ್ಥಿಸುತ್ತಾನೆ. ತನ್ನ ತಪ್ಪನ್ನು ಮನ್ನಿಸಬೇಕೆಂದು ಬೇಡುತ್ತಾನೆ. ದೇವರು ಔದಾರ್ಯವನ್ನು ಮೆಚ್ಚಿಸ್ತುತಿಸುತ್ತಾನೆ. ದೇವರ ಕೃಪೆ ತನ್ನ ಮೇಲೆ ಉಂಟಾಗಲು ಅಗತ್ಯವೆನ್ನುವ ಕೆಲವು ಅರ್ಹತೆಗಳನ್ನು ತಾನು ಹೊಂದಿರುವುದಾಗಿಯೂ ನಿವೇದಿಸುತ್ತಾನೆ. ಇಷ್ಟಾದರೂ ದೇವರು ತನ್ನೆಡೆಗೆ ಬಾರದುದಕ್ಕೆ ಕಾರಣಗಳನ್ನು ಊಹಿಸುತ್ತಾನೆ.''[೪೪] ಹೀಗೆ ವಿರಹಿಯಾದವನ ಅನಿಸಿಕೆ, ಅಭಿಪ್ರಾಯಗಳು ಭಾವತರಂಗಗಳ ಮೂಲಕ ಹೊಯ್ದಾಡುತ್ತ ಮುನ್ನಡೆಯುತ್ತವೆ. ಈ ಸಂದರ್ಭದಲ್ಲಿ ಆತನಿಂದ ಅಭಿವ್ಯಕ್ತಿಗೊಂಡ ಭಾವ ವೈವಿಧ್ಯತೆಯಿಂದ ಕೂಡಿರುತ್ತದೆ. ಕೆಲವೊಮ್ಮೆ ಆತನ ಮಾತುಗಳು ಸಾಮೀಪ್ಯದಿಂದ ಕೂಡಿದ್ದರೆ ಕೆಲವೊಮ್ಮೆ

ಅಸಹಜವಾಗಿ ದೂರ ನಿಲ್ಲುತ್ತವೆ. ಹೀಗೆ ಧನ್ಯತೆ ಕಾತುರತೆ, ಸಂದೇಹ ಮುಂತಾದ ಭಾವ ರಚನೆಗಳು ಈ ಕೀರ್ತನೆಗಳಲ್ಲಿ ಎದ್ದು ಕಾಣುತ್ತವೆ. ''ಇಲ್ಲಿ ಈ ಮೊದಲೆ ಸಮಾಗಮ ಹೊಂದಿದ ನಾಯಕ, ನಾಯಕಿಯರು ಬೇರ್ಪಟ್ಟಿರುತ್ತಾರೆ. ಆದ್ದರಿಂದ ವಿರಹತಾಪ ತೀವ್ರತಮವಾಗಿರುತ್ತದೆ. ಆಲಂಕಾರಿಕರು ಮತ್ತು ಕವಿಗಳು ಅಭಿಪ್ರಾಯದಂತೆ ವಿರಹದ ಚಿತ್ರಣವಿಲ್ಲದೆ ಪ್ರೀತಿಯ ಪರಿಪೂರ್ಣತೆ ಸಾಧ್ಯವಿಲ್ಲ. ವಾಸ್ತವಾಗಿ ವೈವಿಧ್ಯಮಯ ಚಿತ್ರಣಕ್ಕೆ ವಿರಹವೇ ಸೂಕ್ತ ಮೂಲಸ್ಥಾನ. ಆದ್ದರಿಂದಲೇ ಭಕ್ತ ಕವಿಗಳು ಮಿಲನ ಅಥವಾ ಸಂಭೋಗ ಶೃಂಗಾರಕ್ಕಿಂತ ವಿರಹ ಚಿತ್ರಣದಲ್ಲಿ ಹೆಚ್ಚು ಆಸಕ್ತರಾದಂತೆ ತೋರುತ್ತದೆ.''[೪೫] ಹಾಗಾಗಿ ಭಕ್ತರಾದ ಹರಿದಾಸರು ವಿರಹದ ಕಷ್ಟಗಳನ್ನು ಅನುಭವಿಸಿ ಭಗವಂತನನ್ನು ಅನುಗ್ರಹಿಸಿಕೊಳ್ಳುವ ಇಂತಹ ವಿರಹ ವೇದನೆಯ ಕೀರ್ತನೆಗಳನ್ನು ರಚಿಸಿರುವುದು ಕಂಡುಬರುತ್ತದೆ.

ಕೃಷ್ಣದಾಸರು ತಮ್ಮ ನವವಿಧ ಭಕ್ತಿಯ ಸಾಧನದ ಮಾರ್ಗದಲ್ಲಿ ತೀವ್ರ ವಿರಹದ ಭಾವವು ಸ್ಫೋಟಗೊಂಡಿದೆ. ಅವರ ಕೀರ್ತನೆಗಳ ಅನೇಕ ರಚನೆಗಳು ವಿರಹಭಾವವನ್ನು ತುಂಬಿಕೊಂಡು ನಿಂತಿವೆ. ಶ್ರೀಹರಿ ಹಾಗೂ ಲಕ್ಷ್ಮೀದೇವಿಯ ಮಧ್ಯದಲ್ಲಿ ಕೃಷ್ಣದಾಸರು ವಿರಹ ಭಾವವನ್ನು ಹುಟ್ಟಿಸಿದ್ದಾರೆ. ಒಬ್ಬರನೊಬ್ಬರು ಪರಸ್ಪರ ಅಗಲಿದಾಗ ಆಗುವ ವಿರಹವೇದನೆಯನ್ನು ಶಬ್ದಚಿತ್ರಗಳಲ್ಲಿ ಹೊಮ್ಮಿಸಿದ್ದಾರೆ.

''ವಾರಿಜ ಸಂಭವ ತನಯ ತುಗಂಬುರ ಮಾಳ್ವಾ
ಚಾರು ಗಾಯನ ರತನಾ |
ಮಾರನಾ ಪಡೆದ ಲಾವಣ್ಯಾ ರಾಶಿ
ಸಾಕಾರನ ತಂದು ತೋರೇ

ಚರಣರು ಉಳ್ಳನ ಪೋರವದ ಪೆಸರಿನಾ
ಇರುವ ದಿಕ್ಕಿನೋಳಿಹನಾ
ಪರಮ ಮಿತ್ರನಾಹಾರಾ ಮಾಳ್ವೆರಿಯಣ್ಣನಾ ನಿರುತ ಸೇವೆಯ
ಕೊಂಬನಾ | ಶರೀರದಿ ಜನಸಿದವಳ ಕೂಡಿಕೊಂಡಳ ಅರಸನ
ತನುಭವನಾ | ಧರಿಸಿದವನ ಕೂಡಾ
ಸ್ನೇಹವ ಮಾಳ್ಪನಾ ಹರಿಣಾಕ್ಷಿ ತಂದು ತೋರೇ''[೪೬]

ಈ ಕೀರ್ತನೆಯಲ್ಲಿ ಶ್ರೀಹರಿ ಹಾಗೂ ಲಕ್ಷ್ಮೀದೇವಿಯರ ವಿರಹವನ್ನು ಮನ ದುಂಬಿ ಕೊಂಡಾಡಿದ್ದಾರೆ. ಶ್ರೀಹರಿಯನ್ನು ಕಾಣುವ ತವಕದಲ್ಲಿ ಶ್ರೀಹರಿ ಮತ್ತು ಲಕ್ಷ್ಮೀದೇವಿಯ ಮಧ್ಯದಲ್ಲಿ ಇಬ್ಬರಿಗೂ ಸಖಿಯಾಗಿ ನಿಂತವರು. ಅವರ ವಿರಹ ಇರುವ ಸ್ಥಾನವನ್ನು ಅರುಹಲು ಒಬ್ಬರನ್ನೊಬ್ಬರು ವರ್ಣಿಸುವುದು ಅತ್ಯಂತ ಹೃದಯಸ್ಪರ್ಶಿಯಾಗಿದೆ. ಹಾಗೆಯೇ ಸಖಿ ಪರಮಾತ್ಮನನ್ನು ಕರೆಯುವ ಪ್ರಸಂಗವನ್ನು ಕೃಷ್ಣದಾಸರು ಈ ರೀತಿಯಾಗಿ ವರ್ಣಿಸಿದ್ದಾರೆ.

‘‘ಬಾರೋ ಬಾರೋ ಕೋಪವಿನ್ಯಾತಕೆನ್ನ ಕೂಡಾ ರಂಗರಾಯಾ |
ಸಾರಿದ ನಿನ್ನರಸಿಯ ತಪ್ಪನೊಳ್ಪರೇ ರಂಗರಾಯಾ

ಚಲ್ವ ಕಣ್ದೆರೆವುತ ಮೊಗವತಿರಹುವರೇ ರಂಗರಾಯಾ |
ಹಲ್ಲವ ಮಸೆಯುತ ಘುಡುಘುಡಿಸುವರೇ ರಂಗರಾಯಾ

ಭೀಕರಾಕೃತಿಯಾಗಿ ಕೊಡಲಿಯ ಪಿಡಿವರೇ ರಂಗರಾಯಾ |
ಏಕಾಂಕಿಯಾಗಿ ಕದ್ದು ತಿರುಗುವರೇ ರಂಗರಾಯಾ

ಅಗೋಚರವಾಗದೇ ತುರಗೇರಿ ತ್ವರಿತದ ರಂಗರಾಯ |
ಸುಮದಿ ಬಾ ಮಹಿಪತಿ ಸುತ ಜೀವನ ರಂಗರಾಯಾ’’[೪೭]

ಹರಿ ಮತ್ತು ಲಕ್ಷ್ಮಿಯ ವಿರಹದ ತಾಪವನ್ನು ವರ್ಣಿಸುತ್ತಾರೆ. ಲಕ್ಷ್ಮಿಯ ಕೃಪೆಯಿಂದ ಶ್ರೀಹರಿಯು ಅವಳ ಸಾಮೀಪ್ಯಕ್ಕಾಗಿ ಹಾತೊರೆದು ಬರುತ್ತಾಳೆ. ತಾನು ಆ ನಿಮಿತ್ಯ ದರ್ಶನವನ್ನು ಪಡೆಯಲು ಅವರಿಬ್ಬರ ನಡುವಿನ ಪ್ರೇಮಾಂಕುರವನ್ನು ಈ ಪದ್ಯದಲ್ಲಿ ಸುಂದರವಾಗಿ ಬಣ್ಣಿಸಿದ್ದಾರೆ. ಹಾಗೆಯೇ ಲಕ್ಷ್ಮಿದೇವಿ ಮುಖೇನ ಶ್ರೀಹರಿಯನ್ನು ಕರೆಯುವ ಕೀರ್ತನೆಯು ಈ ರೀತಿಯಲ್ಲಿ ಅಭಿವ್ಯಕ್ತಿಗೊಂಡಿದೆ.

‘‘ನುಡಿ ಎನ್ನಪ್ರಿಯನಾ ನೀ ತಂದು ತೋರೆ ಸುಜ್ಞಾನೇ

ಕನಸಿನೊಳಗ ಕಂಡ ಪರಿಯಾ ರೂಪವ ದೋರಿ |
ನೆನವಿನೊಳಗಿಟ್ಟು ಮಾಯವಾದನೇ

ಅಂಗಯ್ಯ ಲಿಂಗದಂತೆ ಸುಲಭವಾಗಿ ನಮ್ಮ |
ಸಂಗ ಸುಖವ ಬೀರಿದನೇನೇ’’[೪೮]

ಈ ಕೀರ್ತನೆಯಲ್ಲಿ ಲಕ್ಷ್ಮಿಯ ಮುಖಾಂತರ ಶ್ರೀಹರಿಯನ್ನು ಕರೆಯುವ ಪ್ರಯತ್ನ ಮಾಡಿದ್ದಾರೆ. ಕನಸಿನ ವೃತ್ತಾಂತವನ್ನು ಹೇಳುತ್ತಾ ಮಾಯವಾದ ಬಗೆಯನ್ನು ಹೇಳುತ್ತಾರೆ. ಅಂಗೈಯೊಳಗಿನ ಲಿಂಗದಂತೆ ಸದಾ ಜೊತೆಗಿದ್ದು ಸಂಗಸುಖವನ್ನು ಕೊಡುವೆನೆಂದು ಲಕ್ಷ್ಮಿದೇವಿಯಲ್ಲಿ ಬೇಡಿಕೊಳ್ಳುತ್ತಾರೆ. ತೀವ್ರತರವಾದ ವಿರಹವೇದನೆಯನ್ನು ಪರಮಾತ್ಮನಲ್ಲಿ ಕೃಷ್ಣದಾಸರು ಈ ರೀತಿಯಲ್ಲಿ ಮಾಡಿಕೊಂಡಿದ್ದಾರೆ.

‘‘ಮರಳು ಮಾಡಿದನಲ್ಲೇ ಏಣಾಕ್ಷಿ
ಘವ ಘವಿಸುವಾಯವಿಯಾ ನೋಟದಿ ನೋಡಿ |
ಸವಿಸವಿಯದಾ ಮಾತನಾಡೀ

ಚಿತ್ತ ರಮಿಸುವಂತೆ ರೂಪವ ದೋರಿ |
ಅತ್ತಿತ್ತಗಲದ್ಹಾಂಗ ನಿಜ ಬೀರಿ

ಗುರುವರ ಮಹಿಪತಿ ನಂದ ನೊಡೆಯನಾ |
ಅರಘಳಿಗಿರಲಾರೆ ಅಗಲಿನಾ''[೪೯]

ಎನ್ನುವಲ್ಲಿ ಲಕ್ಷ್ಮೀದೇವಿಯು ಶ್ರೀಹರಿಗೆ ಮರುಳಾದ ಕ್ಷಣದ ವಿಲಕ್ಷಣದ ಭಾವ ಎದ್ದು ಕಾಣುತ್ತದೆ. ಗಮಗಮಿಸುವ ಸುವಾಸನೆಯ ದೇಹವನ್ನುಳ್ಳ ಶ್ರೀಹರಿಯು ಪ್ರಥಮ ನೋಟದಲ್ಲಿಯೇ ಲಕ್ಷ್ಮಿಯ ಮನಸ್ಸನ್ನು ಸೆಳೆದ ಅಪೂರ್ವ ಸೌಂದರ್ಯಪ್ರಜ್ಞೆಯ ನೋಟ ಈ ಕೀರ್ತನೆಯಲ್ಲಿ ಹಾಸುಹೊಕ್ಕಾಗಿದೆ. ಚಿತ್ತವನು ತಾನು ಸೆಳೆಯುವ ರಮಿಸೆ ಕ್ಷಣಾರ್ಧದಲ್ಲಿ ರೂಪವನ್ನು ಬದಲಿಸುವನು. ಅತ್ತಿತ್ತ ಅಲುಗಾಡದ ಹಾಗೆ ವಿರಹವನ್ನು ಬೀರಿದ ಶ್ರೀಹರಿಯನ್ನು ನೆನೆದು ಅರಗಳಿಗೆಯನ್ನು ಬಿಟ್ಟು ಇರಲಾರೆ. ಎಂಬ ಲಕ್ಷ್ಮಿಯ ಮಾತುಗಳು ಇಡೀ ಕೀರ್ತನೆಯ ಭಾವಲಹರಿಯನ್ನು ಹೆಚ್ಚಿಸುತ್ತದೆ.

ಮುಂದುವರಿದು ಲಕ್ಷ್ಮೀ ಸಖಿಯನ್ನು ಕರೆಯುವುದು ಆಕೆಯ ಮೂಲಕ ಪರಮಾತ್ಮನ ಇರುವಿಕೆಯನ್ನು ತಿಳಿದುಕೊಳ್ಳುವುದು. ಆ ಸ್ಥಿತಿಗತಿ ಕುರಿತು ಈ ರೀತಿಯಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

''ಮದ್ದಾನೆ ಗತಿ ಸಖಿ ಬಾರಮ್ಮಾ ||
ಮುದ್ದು ಮೊಗದ ರಂಗನ ತಂದು ತೋರಮ್ಮಾ

ಇಂದು ಎನ್ನ ಚಿತ್ತ ಸ್ವಸ್ಥವಾಗದೇ |
ಒಂದು ಗಳಿಗಿ ಕ್ರಮಣವಾಗಿ ಹೋಗದೇ

ಬಿಗಿದವೇನೆ ಮಾಯಿ ಫಣಿಗಳು |
ವೇಗದಿಂದ ಬರುತಿದೇ ತಂಗಾಳಿಗಳು

ಮಂದರಧರನು ಯಾಕೆ ಬಾರನೇ |
ಚಂದ್ರ ಕಿರಣ ಝಳಕ ನಿಲ್ಲಲಾರೆನೇ

ಮುನಿದನ್ಯಾತಕ ತಾನು ಹೇಳಮ್ಮಾ |
ಮೊದಲೆನ್ನ ಬಿನ್ನಹವ ಹೋಗಿ ನೀನು ಹೇಳಮ್ಮಾ

ಮೊದಲೆನ್ನ ಕೈಯ್ಯಾ ತಾ ಹಿಡುವರೇ |
ತದನಂತರದಿ ತಪ್ಪ ನೋಡುವರೇ''[೫೦]

ಈ ಕೀರ್ತನೆಯು ತೀವ್ರತರದ ವಿರಹವನ್ನು ಅಭಿವ್ಯಕ್ತಿಗೊಳಿಸುತ್ತದೆ. ಲಕ್ಷ್ಮಿಯು ಶ್ರೀಹರಿಯನ್ನು ಕರೆಯಲು ತನ್ನ ಸಖಿಗೆ ಹೇಳುತ್ತಾಳೆ. ಆ ಸಂದರ್ಭದಲ್ಲಿ ಲಕ್ಷ್ಮಿಗೆ ಆವರಿಸಿದ ವಿರಹವನ್ನು ಸಂಕುಚಿತವಾಗಿ ಹೇಳಿರುವ ಪದ್ಯವಿದು. ಮದವನ್ನೇರಿದ ಆನೆಯಂತಾಗಿದೆ ನನ್ನ ಗತಿ. ಮುದ್ದುಮೊಗದ ಶ್ರೀಹರಿಯು ಇಲ್ಲದಿರುವುದರಿಂದ ನನ್ನ ಚಿತ್ತ ಚಂಚಲತೆಯಿಂದ ಕೂಡಿದೆ. ತಂಗಾಳಿಯ ಚಳಿಗೆ ಬೇಸತ್ತಿದೆ. ಶ್ರೀಹರಿಯು ಏಕೆ ಬಾರೆನು, ಆತ ಬರುವವರಿಗೆ ಚಂದ್ರಕಿರಣ ಜಳಕ ನಿಲ್ಲಲಾರೆನೆ ಎಂಬ ಈ ಮಾತುಗಳು ಕೀರ್ತನೆಯಲ್ಲಿ ಧ್ವನಿಯನ್ನು ಮಾರ್ದ್ವನಿಸುತ್ತದೆ. ಯಾಕೆ ಮುನಿಸಿಕೊಂಡನೆಂದು ಪ್ರಶ್ನಿಸಿಕೊಳ್ಳುತ್ತ ಮೊದಲು ನನ್ನ ವಿರಹ ಬಿನ್ನಹವನ್ನು ಹೋಗಿ ಹೇಳೆಂದು ಸಖಿಗೆ ಆಜ್ಞಾಪಿಸುತ್ತಾಳೆ. ನಂತರ ಪರಮಾತ್ಮ ಬಂದು ಮೊದಲಿಗೆ ಕೈಯನ್ನು ಹಿಡಿಯುವನೆ? ತದನಂತರದಲ್ಲಿ ತಪ್ಪು ನೋಡುವುದು ಕೇಳುವುದು ಮಾಡುವನು. ಇಲ್ಲಿ ಕೀರ್ತನೆಯುದ್ದಕ್ಕೂ ವಿರಹ ಭಿನ್ನಹ ನಾದತ್ವದಿಂದ ತುಂಬಿ ತುಳುಕುತ್ತದೆ. ಇನ್ನೊಂದು ಪದ್ಯದಲ್ಲಿ ಕೃಷ್ಣ ಮತ್ತು ರುಕ್ಮಿಣಿಯ ಸಾಮೀಪ್ಯವನ್ನು ಈ ರೀತಿಯಲ್ಲಿ ಹೇಳುತ್ತಾರೆ.

‘‘ಒಂದು ದಿನ ರಾತ್ರಿಲಿ ಹೊರಗಿಂದಲಿ
ನಂದ ನಂದನು ಬರಲಿ |
ಛಂದದಿ ರುಕ್ಮಿಣಿ ಮನದೊಳರಿತು ನುಡಿ
ಯಂದಳು ಸರಸದಲಿಗ

ಆರಯ್ಯ ನಟ್ಟನಡುವಿರುಳಿನಲಿ |
ಧೀರತನ ದಿಂದಲಿ |
ಸಾರಿ ಸಾರಿ ಕದವ ನೊತ್ತುತ ಧನಿ
ದೋರದೆ ಸಮ್ಮ ನಿಹುದೀಗ’’[೫೧]

ಒಂದು ದಿನ ರಾತ್ರಿ ಶ್ರೀಕೃಷ್ಣಪರಮಾತ್ಮನು ರುಕ್ಮಿಣಿಯ ಮಂದಿರಕ್ಕೆ ಬಂದು ಕದವ ತಟ್ಟುತ್ತಾನೆ. ಆಗ ರುಕ್ಮಿಣಿಯು ಬಂದವರ್‍ಯಾರೆಂದು ಕೇಳುವ ಸಂದರ್ಭದ ಪದ್ಯವಿದು. ಈ ಪದ್ಯದಲ್ಲಿ ಮಾರ್ಮಿಕವಾಗಿ ದಶಾವತಾರದ ಸೂಚ್ಯ ವಿಚಾರಗಳು ಒಳಗೊಂಡಿವೆ. ‘‘ಆರಯ್ಯ ನಟ್ಟುನಡುರುಳಿನಲ್ಲಿ ಧೀರತನದಿಂದ ನನ್ನ ಅಂತಃಪುರದ ಕದವನ್ನು ತಟ್ಟಿದ ಧನಿ ಯಾರು?’’ ರುಕ್ಮಿಣಿಯು ಪ್ರಶ್ನಿಸಲು ಪರಮಾತ್ಮನು ರುಕ್ಮಿಣಿಯ ಹಾವಭಾವ ವಿಲಕ್ಷಣದ ಪ್ರಸಂಗವನ್ನರಿಯುತ್ತಾನೆ. ಈ ಮಾತನ್ನು ಹರುಷದಿಂದ ಕೇಳಿ ಅಂತಃಪುರವನ್ನು ಪ್ರವೇಶಿಸಿದ ಪರಿಯ ಸೊಬಗನ್ನು ಈ ಕೀರ್ತನೆಯಲ್ಲಿ ಮಾರ್ಮಿಕವಾಗಿ ಸೆರೆ ಹಿಡಿದಿದ್ದಾರೆ.

ಇನ್ನೊಂದು ಪದ್ಯದಲ್ಲಿ ಲಕ್ಷ್ಮೀದೇವಿ ಹಾಗೂ ತನ್ನ ಸಖಿ ಇವರಿಬ್ಬರ ನಡುವೆ ಶ್ರೀಹರಿಯ ಬರುವಿಕೆಯ ವಿಚಾರವನ್ನು ಸಂವಾದ ರೂಪದಲ್ಲಿ ಕೃಷ್ಣದಾಸರು ಸುಂದರವಾಗಿ ನಿರೂಪಿಸಿದ್ದಾರೆ.

''ನೀರಜಗಂಧಿಯೆ ಹೇಳೇ ಸುಳಿದವರಾರಮ್ಮಾ |
ನೀರಜ ಶರಪತಿ ಕಾಣಮ್ಮಾ ||

ಅರುಣನಖಾಂಗುಲಿ ಗುಲ್ಫ ಗೆಜ್ಜೆ ಕಾ |
ಪುರ ನೂಪುರದ ಲೊಪ್ಪುವನವದಾರಮ್ಮಾ |
ಸರಸಿಯೊಳಗಪೊಕ್ಕು ತಮನಸುವ ಬಗೆದು |
ವರಶ್ರುತಿ ತಂದವ ಕಾಣಮ್ಮಾ ||

ಕರಿ ದಶನಂದದಿ ಜಂಘೆ ಪೊಂಬಾಳೆಯ |
ಪರಿಯ ತೊಡೆಯುಳ್ಳವ ದಾರಮ್ಮಾ |
ಶರಧಿ ಮಥಿಸುವಂದುಗಿರಿ ನಿಲ್ಲದಿರೆ ಬಂದು |
ಭರದಿ ಬೆನ್ನವಿತ್ತವ ಕಾಣಮ್ಮ''[೫೨]

ಪ್ರಸ್ತುತ ಕೀರ್ತನೆಯು ಪರಮಾತ್ಮನ ವಿಚಾರವಾಗಿ ಆತನ ವ್ಯಕ್ತಿತ್ವವನ್ನು ಕೊಂಡಾಡುವ ದೃಶ್ಯ ಎದ್ದು ಕಾಣುತ್ತದೆ. ಪರಮಾತ್ಮನ ದೇಹದ ಮೈ ಸಿರಿ, ಆತ ಧರಿಸುವ ವಸ್ತು ಪ್ರತಿಯೊಂದು ಈ ಪದ್ಯದಲ್ಲಿ ಮಾರ್ದನಿಸುತ್ತದೆ. ಸಹಜವಾದ ಸವಿ ಸವಿಯ ಮಾತಿನಲಿ ಪರಮಾತ್ಮ ಎಲ್ಲರನ್ನು ಸೋಲಿಸುವ ಪರಿ ಇಲ್ಲಿದೆ. ಕೃಷ್ಣದಾಸರು ತಮ್ಮ ಭಕ್ತಿಯ ಪರಾಕಾಷ್ಠತೆಯನ್ನು ಇಂಥ ಪದ್ಯಗಳ ಮೂಲಕ ಕರುಣ, ಶೃಂಗಾರ ರಸಗಳ ಹಿತವಾದ ಮಾರ್ಗದಲ್ಲಿ ನಿರೂಪಿಸಿರುವುದು ವೈಶಿಷ್ಟ್ಯಪೂರ್ಣವಾಗಿದೆ.

ಹಾಗೆಯೇ ಲಕ್ಷ್ಮಿಯ ವಿರಹವನ್ನು ಹಲವು ಕೀರ್ತನೆಗಳಲ್ಲಿ ಮತ್ತೆ ಮತ್ತೆ ಪ್ರಸ್ತಾಪಿಸಿದ್ದಾರೆ. ಆ ಕೀರ್ತನೆಯ ಸ್ವಾರಸ್ಯ ಈ ರೀತಿಯಲ್ಲಿದೆ. ಜ್ಞಾನಸಖಿ ಕೇಳೆ ಶ್ರೀನಿವಾಸನನ್ನು ತಂದು ಕೊಡೆ, ಎನ್ನುವಲ್ಲಿ ಲಕ್ಷ್ಮಿದೇವಿಯ ವಿರಹದ ಉತ್ಕಟತೆಯ ಭಾವ ಗೋಚರಿಸುತ್ತದೆ. ಇದನ್ನೇ ಸಖಿ ನುಡಿಯ ಮೂಲಕ ಈ ರೀತಿಯಲ್ಲಿ ಹೇಳುತ್ತಾರೆ.

''ಎಲೆ ದೇವಿ ಇಂತು ಚಿಂತೆಯು ಯಾಕ |
ಸುಲಭದಿ ತಂದು ತೋರುವೆ ನಿನ್ನರಸನಾ ||

ನಳಿನಗಳಲಿ ಅಪರಾಧವಾಯಿತೆಂದು |
ಮುಳಿದು ಬಿಂಕದಿ ಅಳಿಮೊರೆದು ತಾನೆದ್ದು |
ಕಲಸಾರುವೇನೇ ನಿನ್ನಯ ತನುಗುಪವ |
ತೊಲಗಿಬಿಟ್ಟು ನಿಲ್ಲುವನೇನೇ ರಂಗಾ''[೫೩]

ಲಕ್ಷ್ಮಿಯ ಸಖಿಗೆ ಮಾತುಗಳನ್ನಾಡಿ ಪರಮಾತ್ಮನನ್ನು ಮನವೊಲಿಸಿ ಕರೆತರುವ ಪ್ರಯತ್ನವನ್ನು ಮಾಡುತ್ತಾರೆ. ನಂತರ ಸಖಿ ಪರಮಾತ್ಮನೆಡೆಗೆ ಹೋಗಿ ಶ್ರೀದೇವಿಯ ವಿರಹವೇದನೆ ಹಾಗೂ ತಪ್ಪೊಪ್ಪಿಗೆ ಮಾತಗಳನ್ನಾಡುವ ಪದ್ಯವನ್ನು ಕೃಷ್ಣದಾಸರು ಸೊಗಸಾಗಿ ಚಿತ್ರಿಸಿದ್ದಾರೆ.

''ಯಾಕಲೋ ರಂಗ ನಿನ್ನರಸಿಯೊಳು ಮುನಿದಿರುವೆ |
ಲೋಕವೀರೇಳು ರಕ್ಷಿಪ ಮುದ್ದು ರಂಗಾ ||

ನಾಲ್ಕನೆಯ ಅವತಾರಲಿ ಉಗ್ರವಾಗಿರೆ |
ಆ ಕಮಲಜ ಮುಖ್ಯ ಬೆದರುತಿರಲು |
ಲಕುಮಿ ತಾಕಂಡು ಬಂದು ತೊಡೆ ಮೇಲೆ ಕುಳ್ಳಿರಲು |
ಈ ಲೋಕದೊಳು ಶಾಂತನೆನಸಿದಳೊ ನಿನ್ನರಸಿ''[೫೪]

ಸಖಿಯು ಶ್ರೀಹರಿಗೆ ನಿನ್ನರಸಿಯ ಜೊತೆಗೆ ಮುನಿಸು ಏಕೆ ಎಂದು ಪ್ರಶ್ನಿಸುತ್ತಾಳೆ. ಲೋಕದ ಉದ್ಧಾರಕನಾದ ನೀನು ನಿನ್ನರಸಿಯ ಜೊತೆಗೆ ಜಗಳವೇಕೆ ಎಂದು ಕೇಳುತ್ತಾಳೆ. ನಾಲ್ಕನೆಯ ಅವತಾರದಲ್ಲಿ ನಿನ್ನ ತೊಡೆಯ ಮೇಲೆ ಕುಳಿತು ಲೋಕದ ಶಾಂತಿಗೊಸ್ಕರ ಬಂದವಳ ಜೊತೆಗೆ ಮುನಿಸು ನಿನಗೇತಕೆ ಎಂದು ಶ್ರೀಲಕ್ಷ್ಮಿಯ ವಿವಿಧ ಅವತಾರ ಪರಮಾತ್ಮನಿಗೆ ನೆನಪಿಸಿಕೊಡುವ ಪ್ರಯತ್ನವನ್ನು ಸಖಿಯಾಗಿ ಕೃಷ್ಣದಾಸರು ಈ ಕೀರ್ತನೆಯಲ್ಲಿ ಅಭಿವ್ಯಕ್ತಿಸಿದ್ದಾರೆ. ಇದರಿಂದ ಸಂತೃಪ್ತರಾದ ಶ್ರೀಹರಿಯು ಸಖಿಗೆ ಲಕ್ಷ್ಮೀದೇವಿಯ ಕಡೆಗೆ ಹೋಗುವ ವಿಚಾರವನ್ನು ಮನೋಜ್ಞವಾಗಿ ಬಿಂಬಿಸಿದ್ದಾರೆ.

''ನಡಿ ನೀರೇ ಪೋಪಾ ದೇವಿ ಇದ್ದೆಡೆಗೆ |
ಕಡು ಕೋಪವ್ಯಾಕ ಶ್ರೀರಮೆ ಕೂಡ ಎನಗೆ

ಫುಲ್ಲಲೋಚನೆ ಕುಂದರದನೆ ಸುಫಣಿ ವೇಣಿ |
ಮಲ್ಲಿಕಾ ಮಂದಸ್ಮಿತೆ ಚಲ್ವಕದಪು |
ಬಿಲ್ಲು ಕಾಮನ ಸೋಲಿಪ ಭ್ರೂಲತೆಯುಳ್ಳ |
ಸಲ್ಲಲಿತಾಂಗಿ ಯಾವಾಗ ಕಂಡೆಪೆನೆ''[೫೫]

ಶ್ರೀಹರಿಯು ಸಖಿಯ ಮೂಲಕ ಲಕ್ಷ್ಮೀದೇವಿಗೆ ತನ್ನ ಬರುವಿಕೆಯ ಸೂಚನೆಯನ್ನು ನೀಡುತ್ತಾರೆ. ಲಕ್ಷ್ಮಿದೇವಿಯ ಒಯ್ಯಾರವನ್ನು ಬಣ್ಣಿಸುತ್ತಾರೆ. ಕಡುಕೋಪ ಎನಗೇತಕ್ಕೆ ಶ್ರೀರಮೆಯ ಜೊತೆಗೆ ಎಂದು ಹೇಳಿ ಲಕ್ಷ್ಮಿಯನ್ನು ಕೂಡಲು ಬರುವ ವಿಚಾರವನ್ನು ಸಖಿಗೆ ಶ್ರೀಹರಿಯು ತಿಳಿಸುತ್ತಾರೆ. ಇಲ್ಲಿಯ ಮಾತುಗಳು ಸರಸದ ಮಾಧುರ್ಯತೆಯನ್ನು ಬಿಂಬಿಸುತ್ತವೆ. ಪರಮಾತ್ಮನ ಈ ಮಾತುಗಳಿಂದ ಸಖಿಯು ಸಂತುಷ್ಟಗೊಳ್ಳುತ್ತಾಳೆ. ಸಖಿ ಶ್ರೀದೇವಿಗೆ ಈ ರೀತಿಯಾಗಿ ಹೇಳುತ್ತಾಳೆ.

''ಇದೋ ಬಂದಾನೇಳೇ ಭಾವೇ ನಿನ್ನರಸಾ |
ಮುದದಿ ಪ್ರಾರ್ಥನೆಯ ಮಾಡಿ ಕರೆತಂದೆನೀಗ

ನೊಸಲಲಿ ಇಟ್ಟ ಕಸ್ತೂರಿ ರತ್ನಮಯದಿಂದ |
ಪೊಸಪರಿಯ ಕಿರೀಟವಧರಿಸಿ |
ಎಸೆವ ಕುಂಡಲದಿಂದ ಪೊಳೆವಾಕದಪುಗಳು |
ಬಿಸರು ಹದಳ ನೇತ್ರಲೊಪ್ಪುತ ನಮ್ಮ''[೫೬]

ಸಖಿಯು ಪರಮಾತ್ಮ ಬಂದ ಬಗೆಯನ್ನು ಶ್ರೀದೇವಿಗೆ ತಿಳಿಯಪಡಿಸುತ್ತಾಳೆ. ಇಲ್ಲಿ ಕೃಷ್ಣದಾಸರು ಶ್ರೀಹರಿಯ ದೇಹಸಿರಿಯ ವ್ಯಕ್ತಿತ್ವ ನಾನಾ ಬಗೆಯಲ್ಲಿ ವರ್ಣಿಸಿದ್ದಾರೆ. ಗರುಡನ ಮೇಲೇರಿ ಹರುಷದಿ ಬರುವ ಪರಮಾತ್ಮನ ಬರುವಿಕೆಯನ್ನು ಮನದುಂಬಿ ಹಾಡಿಹೊಗಳಿದ್ದಾರೆ. ಹಾಗೆಯೇ ಪರಮಾತ್ಮನು ಶ್ರೀದೇವಿಯ ಕಂಡು ಪ್ರೇಮಾಂಕುರಗೊಂಡು ಆಕೆಯ ಸಿಟ್ಟನ್ನು ತಣ್ಣಿಸುವ ಮಧುರ ಮಾತುಗಳನ್ನು ಈ ರೀತಿಯಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ.

''ಇನ್ಯಾಕೆ ದೇವಿ ಮುನಿಸು ಮಾತಾಡೇ |
ನಿನ್ನ ಹಿಡಿದ ಛಲ ಗೆಲಿಸಿದ ಬಳಿಕ

ಘನ ಮಳೆಗೆರೆವ ಜೀಮೂತಮ್ಯಾಲೇತಾ |
ಮುನಿಪ ಕೋಪದಿ ಪೋಗುತಲಿಹ |
ಮನ ದೊಳಗಿದ್ದ ಚಾತಕನಂತೆ ನಿನ್ನ ಮ್ಯಾಲೆ |
ವನರುಹ ನೇತ್ರ ನಾ ಮುನಿದುದು ಕಾಣೆ''[೫೭]

ಶ್ರೀಹರಿಯು ಲಕ್ಷ್ಮಿಯನ್ನು ರಮಿಸುವ ಮಾತುಗಳು ಸರಸ ಸಲ್ಲಾಪದಲ್ಲಿ ಮೈದೊಳೆಯುತ್ತವೆ. ಈ ಮಾತುಗಳಿಗೆ ಶ್ರೀದೇವಿಯು ಸಂತುಷ್ಟಳಾಗದೆ ಇದ್ದಾಗ, ಮತ್ತೆ ಪರಮಾತ್ಮನು ಶ್ರೀರಮೆಯನ್ನು ಕುರಿತು ಈ ರೀತಿಯಲ್ಲಿ ಹೇಳುತ್ತಾರೆ.

''ಮಾತನಾಡಲೆ ಜಾಣೆ ಮೋಹನಿಭಿ ಮದಯಾನೆ |
ರೀತಿ ನಿನಗುಚಿತವೇನೇ | ಯಾತಕಿದು ಮನ ಮುನಿಸು |
ಎನ್ನೊಳು ಸುಖಬೆರೆಸು | ಪ್ರೀತಿ ರತಿಸೊಬಗು ದೊರೆನಾರೀ ||

ತಿಂಗಳಾನನೆ ನಿನ್ನ ತೋಳಿಂಬವಿಲ್ಲದಿರೆ |
ಕಂಗಳಿವೆ ಗೂಡವಲ್ಲೆ ನಲ್ಲೆ |
ಅಂಗ ದವಯವವು ತಮ್ಮ ಅರ್ಥಿಯನೆ ಜರಿದವಾ |
ಲಿಂಗನವ ಬಯಸಿ ನೋಡೆ ನೀಡೇ''[೫೮]

ಶ್ರೀರಮೆಗೆ ಪರಮಾತ್ಮನು ತನ್ನ ಪ್ರೀತಿಯ ರತಿ ಸೊಬಗನ್ನು ದಾರಿ ಎರೆಯಲು ಹಾತೊರೆಯುತ್ತಾನೆ. ತನ್ನ ಮೇಲಿರುವ ಮುನಿಸನ್ನು ತೊರೆದು ಸುಖವನ್ನು ಕೇಳುತ್ತಾನೆ. ನಿನ್ನ ತೋಳಬಂದಿಯ ಸುಖವನುಂಡು ತಿಂಗಳಾಯಿತು. ನಿನ್ನೊಲಿದು ರತಿ ಸೊಬಗಿನ ಅಮೃತದ ಫಲವನ್ನು ಉಣಿಸು ಎಂದು ಕೇಳಿಕೊಳ್ಳುತ್ತಾನೆ. ಶ್ರೀಹರಿಯು ಹೀಗೆ ಅನೇಕ ಕೀರ್ತನೆಯಲ್ಲಿ ವಿರಹದ ವಿಭಿನ್ನವಾದ ಛಾಯೆಗಳು ಕಾಣಿಸಿಕೊಳ್ಳುತ್ತವೆ. ಕೃಷ್ಣದಾಸರು ಶ್ರೀಹರಿ ಮತ್ತು ಶ್ರೀದೇವಿಯ ನಡುವೆ ಸಖಿಯಾಗಿ ಭಕ್ತಿಯ ಮೂಲಕ ಭಗವಂತನ ಅನುಗ್ರಹವನ್ನು ಪಡೆಯಲು ಹಾತೊರೆದ ಸಂದರ್ಭಗಳು ಇಲ್ಲೆಲ್ಲ ಕೀರ್ತನೆಗಳಲ್ಲಿ ಎದ್ದು ಕಾಣುತ್ತವೆ. ಕೃಷ್ಣದಾಸರು ವಿರಹವೇದನೆಯಿಂದ ಅಗಲಿದ ಪರಮಾತ್ಮ ಮತ್ತು ಶ್ರೀದೇವಿಯನ್ನು ಒಂದುಗೂಡಿಸುವುದರ ಮೂಲಕ ಪರಮಾತ್ಮನ ಜ್ಞಾನದಲ್ಲಿ ಮನಸೋಲುವ ತವಕ ಇಲ್ಲಿಯ ಕೀರ್ತನೆಯಲ್ಲಿದೆ.

ಶ್ರೀದೇವಿಯು ಪರಮಾತ್ಮನನ್ನು ಕರೆದು ತಂದ ಸಖಿಗೆ ಕೊನೆಗೆ ಈ ರೀತಿಯಲ್ಲಿ ಅಭಯ ಹಸ್ತವನ್ನು ನೀಡುತ್ತಾಳೆ.

''ಸಖಿ ಕೇಳೇ ಇನ್ನು ಹರುಷದ ಮಾತಾ |
ಸಕಲ ಜನರಿಗೆ ಆನಂದ ವೀವಾ |

ಇಂತೆಂದು ಹರಿಯು ನಾನಾಪರಿ ವಿರಹದ |
ಸಂತಾಪ ಮಾತನ ನುಡಿಯಲು ಕೇಳಿ |
ಅಂತರಂಗದ ಕೋಪವ ಬಿಟ್ಟು ಎದ್ದು | ಅ |
ನಂತನ ಬಿಗಿದಪ್ಪಿದಳು ಅಂಬುಜಾಕ್ಷಿ''[೫೯]

ಕೃಷ್ಣದಾಸರು ಲೌಕಿಕ ಪ್ರಪಂಚದಲ್ಲಿದ್ದೂ ಆಧ್ಯಾತ್ಮಿಕ ಚಿಂತನೆಯತ್ತ ತಮ್ಮ ಕೀರ್ತನೆಗಳನ್ನು ರಚಿಸಿದ ಪರಿ ಅದ್ಭುತವಾದದ್ದು. ಭಕ್ತನ ವಿರಹ ಎಷ್ಟು ಕಷ್ಟಗಳಿಂದ ಕೂಡಿದ್ದರೂ ಸಹ ಕೊನೆಗೆ ಪರಮಾತ್ಮನ ಅನುಗ್ರಹದಿಂದ ಅವೆಲ್ಲವನ್ನು ಸಹಿಸಿಕೊಳ್ಳುತ್ತಾನೆ. ಭಕ್ತಿ ಸಾಧನೆಯ ಮಾರ್ಗದಲ್ಲಿ ಮುನ್ನಡೆದು ಆತನ ಒಲುಮೆಯನ್ನು ಗೆಲ್ಲುವುದು ಪ್ರಮುಖವಾಗಿರುವಂತದ್ದು. ದಾಸರು ಶ್ರೀಹರಿಯ ಕೃಪೆಗಾಗಿ ಮಾಡಿದ ಪ್ರಯತ್ನಗಳು ಇಲ್ಲಿಯ ಕೀರ್ತನೆಗಳಲ್ಲಿ ಹದುಳಗಟ್ಟಿ ನಿಂತಿವೆ.

೬. ಮುಕ್ತಿಯ ಪರಿಕಲ್ಪನೆ

ಮುಕ್ತಿಯೆಂಬುದು ಜನನ, ಮರಣಗಳಿಂದ ವಿಮುಕ್ತನಾಗಿ ಸ್ವರೂಪಭೂತವಾದ ಆನಂದವನ್ನು ಪಡೆಯುವುದಾಗಿದೆ. ಭಕ್ತಿಯ ಗುರಿಯಾದ ಮುಕ್ತಿಯನ್ನು ಮೋಕ್ಷ ಅಥವಾ ಕೈವಲ್ಯವೆಂಬ ಹೆಸರುಗಳಿಂದ ಕರೆಯುತ್ತಾರೆ. ಮೋಕ್ಷ ಎನ್ನುವುದು ಹುಟ್ಟು-ಸಾವುಗಳಿಂದ ಸುಖ-ದುಃಖಗಳಿಂದ ಪಾರಾಗಿ ಶಾಶ್ವತ ಆನಂದವನ್ನು ಪಡೆಯುವುದರಲ್ಲಿ ಲೀನವಾಗುವುದು. ಜೀವನವು ಸರ್ವ ವಿಧದ ಪಾಪಗಳಿಂದ ಕೂಡಿದ್ದಾಗಿದೆ. ಅವುಗಳಿಂದ ಬಿಡುಗಡೆ ಹೊಂದಿ, ಪರಮಾನಂದವನ್ನು

ಹೊಂದುವುದು ಮುಕ್ತಿ. ಮುಕ್ತಿಯನ್ನು ಅಪೇಕ್ಷಿಸುವ ಭಕ್ತರು ತಾರತಮ್ಯ ಜ್ಞಾನವನ್ನು ಅರಿತು ಭಕ್ತಿಯಿಂದ ಜ್ಞಾನ ಮಾಡಬೇಕು. ಅರಿಷಡ್ವರ್ಗಗಳನ್ನು ಹತೋಟಿಯಲ್ಲಿಟ್ಟು ಕೊಂಡು ಸದಾ ಶ್ರೀಹರಿಯ ಧ್ಯಾನದಲ್ಲಿ ನಿರತರಾಗಬೇಕು. ಮಾನವ ತನ್ನೆಲ್ಲ ಕ್ರಿಯೆಗಳಿಗೆ ಸರ್ವಾಂತರ್ಯಾಮಿಯಾದ ಪರಮಾತ್ಮನೇ ಕಾರಣಕರ್ತನಾಗಿರುತ್ತಾನೆ. ದೃಢವಾದ ನಂಬಿಕೆಯಿಂದ ತನ್ನೆಲ್ಲ ಕ್ರಿಯೆಗಳನ್ನು ಶ್ರೀಹರಿಗೆ ಅರ್ಪಿಸಿದಾಗ ಮಾತ್ರ ಮುಕ್ತಿ ದೊರೆಯುತ್ತದೆ. ಮುಕ್ತಿಯನ್ನು ಕುರಿತು ಕೃಷ್ಣದಾಸರು ಈ ರೀತಿಯಲ್ಲಿ ಅಭಿವ್ಯಕ್ತಿಗೊಳಿಸಿದ್ದಾರೆ.

‘‘ಮುಕುತಿಗೆ ಹೊಣಿಯಿದಕೋ ಭಕುತಿ

ಹರಿಭಕುತಿಯ ಗುರು ಮೂರ್ತಿಲಿ ತಂದು |
ಬೆರೆವದು ತನುಮನವಚನದಲೀ

ಆಚಾರ್ಯಮಾಂವಿಧಿ ಎಂದುದ್ದವಗೇ |
ಸೂಚಿಸಿ ಹೇಳಿದ ಯದವರನೀಗ

ಸರ್ವಂ ವಾಸುದೇವನೆನುತಿರಲಿಕ್ಕೆ |
ಗುರ್ವಿನೊಳಗ ಅನುಮಾನವು ಬೇಕ

ಬಲ್ಲವ ಬಲ್ಲವನೀ ಮಾತಿನ ಖೂನಾ |
ಎಲ್ಲರಿಗಿದು ಅಗಮ್ಯದ ಸ್ಥಾನಾ’’[೬೦]

ಮುಕ್ತಿಗೆ ಭಕ್ತಿಯೇ ಮೂಲ. ಹರಿಭಕ್ತಿಗೆ ಗುರುಮೂರ್ತಿಯ ತಂದು ಬರೆಸುವುದು ಮುಕ್ತಿ. ಗುರುವಾದವ ಶಿಷ್ಯನಿಗೆ ಸನ್ಮಾರ್ಗವನ್ನು ಸೂಚಿಸುವುದೇ ಮುಕ್ತಿಗೆ ಕಾರಣ. ಬಲ್ಲವ ಬಲ್ಲದಿರುವನಿಗೆ ಮಾತಿಗೆ ಮತಿತಾರ್ಥವನ್ನು ಬೋಧಿಸುವುದೇ ಮುಕ್ತಿ. ಭಗವಂತನ ಸಾಕ್ಷಾತ್ಕಾರಕ್ಕೆ ಕಾರಣೀಭೂತವಾದ ಭಕ್ತಿಯೇ ನಿಜವಾದ ಮುಕ್ತಿ. ಈ ಭಕ್ತಿಯನ್ನು ವಿವಿಧ ಬಗೆಯಲ್ಲಿ ಆಚರಿಸುವ ನಂಬಿಕೆ ನಮ್ಮಲ್ಲಿದೆ. ಅವುಗಳನ್ನು ಕುರಿತು ಕೃಷ್ಣದಾಸರು ತಮ್ಮದೇ ಧಾಟಿಯಲ್ಲಿ ವಿಶ್ಲೇಷಿಸಿದ್ದಾರೆ. ಇಲ್ಲಿ ಯಾವ ಕಾರಣದಿಂದ ಮೋಕ್ಷ ಲಭಿಸುತ್ತದೆ ಎಂಬುದನ್ನು ಚಿತ್ರಿಸಿದ್ದಾರೆ.

‘‘ಮೋಕ್ಷವಿಲ್ಲಾ| ಗುರು ಕೃಪೆ ವಿನಾ

ಮಾನ್ಯ ಸ್ವದೇಶದಿ ಧನ್ಯ ವಿದೇಶದ |
ಉನ್ನತ ಕುಲದುತ್ಪನ್ನ ನೋಡಲು |
ಸನ್ನುತ ಕರ್ಮಗಳನ್ನಸುವ ಸಂ |

ಪನ್ನನು ಗುಣದಲಿ ಮನ್ನಾಗೇನು

ಪುಸ್ತಕ ಹಿಡಿಯಲು ವಸ್ತು ಬೃಹಸ್ಪತಿ |

ವಿಸ್ತರಿಸ್ಥೇಳುವ ಶಾಸ್ತ್ರದರ್ಥವ |

ದುಸ್ತರ ಯೋಗದ ನಿಸ್ತರಿಸುವ ಘನ |

ಪ್ರಸ್ತುತ ತಪಸಭ್ಯಸ್ತ್ರಾಗೇನು''[೬೧]

ಗುರುವಿನ ಕೃಪೆಯಿಲ್ಲದೆ ಮೋಕ್ಷ ಎಂಬುವದು ಸಿಗದು. ದೇಶವಿದೇಶಕ್ಕೆ ಹೋಗಿ ಧನಧಾನ್ಯ ಸಂಪತ್ತನ್ನು ಗಳಿಸಿಕೊಳ್ಳಬಹುದು. ಉನ್ನತ ಕುಲದಲ್ಲಿ ಜನಿಸಿರಬಹುದು. ರಾಶಿ ರಾಶಿ ಕೃತಿಗಳನ್ನು ಅಭ್ಯಾಸ ಮಾಡಿರಬಹುದು. ಆದರೆ ಶ್ರೀಹರಿಯ ಒಲವಿಲ್ಲದೆ ಮೋಕ್ಷ ಕಾಣುವುದು ಸಾಧ್ಯವಿಲ್ಲ. ಈ ಪರಿಯ ಸ್ಥಿತಿ ಅಥವಾ ಮೋಕ್ಷ ಮನುಷ್ಯನಿಗೆ ತಲುಪಬೇಕಾದರೆ ಎಲ್ಲ ಆಶೆಗಳನ್ನು ತ್ಯಜಿಸಿ ಭಕ್ತಿಯ ಸಾಧನೆಗೆ ಒಳಗಾಗಬೇಕು. ಸರ್ವೊತ್ತಮನಾದ ಶ್ರೀಹರಿಯಲ್ಲಿ ದೃಢವಾದ ನಂಬಿಕೆಯಿನ್ನಿಡುವುದೇ ಭಕ್ತಿ. ಅದುವೇ ಮುಂದೆ ಮುಕ್ತಿಗೆ ದಾರಿಯಾಗುತ್ತದೆ. ಲೌಕಿಕ ಜನರು ಮಾಡುವ ಭಕ್ತಿಗೂ ತತ್ವ ಸಿದ್ಧಾಂತದಿಂದ ಬಂದ ಭಕ್ತಿಗೂ ತನ್ನದೆಯಾದ ಭಿನ್ನತೆಯಿದೆ. ಭಕ್ತಿಯ ಮೂಲವನ್ನು ನಾವು ಜ್ಞಾನದ ಮೂಲಕ ನೋಡುವಂತಹದು. ಅದನ್ನು ಭಯದಿಂದ ನೋಡುವಂತದ್ದಲ್ಲ. ಲೌಕಿಕ ಜೀವನದ ಎಲ್ಲ ಸುಖ ದುಃಖದ ವಸ್ತುವಿನಲ್ಲಿ ಶ್ರೀಹರಿ ತುಂಬಿಕೊಂಡಿರುತ್ತಾನೆ. ಆತನಿಂದ ಆನಂದವನ್ನು ಪಡೆಯುವ ತನಕ ಚಿಂತನೆ ಬೆಳೆದಂತೆ ಭಕ್ತಿಯು ಹೆಚ್ಚುತ್ತಾ ಹೋಗುತ್ತದೆ. ಇದೇ ಭಕ್ತಿಯು ಮುಂದೆ ಮೋಕ್ಷಕ್ಕೆ ದಾರಿಯಾಗುತ್ತದೆ.

''ಭಕ್ತಿಲೇಸು ಮುಕ್ತಿಗಿಂತಲಿ

ಭಕ್ತಿಲೇಸು ಮುಕ್ತಿಗಿಂತಲಿ |

ಭಕ್ತಜನರಾ ಪಾಲಿಸುವನಾ |

ಭಕ್ತಿಗೊಲಿದು ಫಣಿಗಣ ಲೋಕದಿ |

ಯುಕ್ತಬಲಿಯ ಬಾಗಿಲಲೊಳಿಹ ರಂಗಯ್ಯನಾ |

ಸುರಪ್ರಿಯನಾ ಮುನಿಧ್ಯೇಯನಾ''[೬೨]

ಮುಕ್ತಿಗಿಂತಲೂ ಭಕ್ತಿಯೇ ಲೇಸೆಂದು ಕೃಷ್ಣದಾಸರು ಇಲ್ಲಿ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಭಕ್ತಜನರ ಭಕ್ತಿಗೆ ಒಲಿದು ಮುಕ್ತಿಯ ದೊರಕಿಸಿ ಕೊಡುವ ಶ್ರೀಹರಿಗೆ ಭಕ್ತಿಯೇ ಲೇಸೆಂಬುದು ಮುಖ್ಯವಾಗಿದೆ. ಸದಾ ಹರಿಭಕ್ತಿಯ ಶರಣಾರಿಗಿರುವುದೇ ಮುಕ್ತಿ. ವ್ರತ, ತಪಸ್ಸುಗಳನ್ನು ಅರಿಯದೆ ಇರಬಹುದು. ಶ್ರುತಿ ಸ್ಮೃತಿಯನ್ನು ಕೇಳದೆ ಜೀವನದ ನಿಜಪ್ರೀತಿಯನ್ನು ಅರಿಯದು. ಶಮ-

ದಮ ಜ್ಞಾನದ ವಿರತಿ ನಂಬದವನ ಶ್ರೀಹರಿಯ ನಂಬಿಕೆ ಇಲ್ಲದೆ ಅರಿಯರು ಸಾಧನದ ಮುಕ್ತಿಯನ್ನು.

''ಗರಡಿಲಿಟ್ಟು ಹುಳುವ ತನ್ನ ಗುರುತ ತೋರುವದು ಭ್ರಂಗೀ |
ಅರಿಯದೇನು ಜನಾ ಗಾದಿಯಲ್ಲಾ |
ಗುರು ಚರಣ ನಂಬದೆವೆ ಮುಕ್ತಿಯಿಲ್ಲಾ |
ಇದು ಸಾರಿದನು ಮಹಿಪತಿ ಸೊಲ್ಲಾ''[೬೩]

ಅರಿಯದ ಭಕ್ತಿ ನಿಜವಲ್ಲ. ತಿಳಿಯದ ಜನ ಮುಕ್ತಿಯ ಅರಿವಿಲ್ಲ. ಗುರುಚರಣವ ನಂಬದೆ ಮುಕ್ತಿ ಸಿಗಲು ಸಾಧ್ಯವಿಲ್ಲ. ಮನುಷ್ಯನ ಸ್ವಭಾವ ಕ್ರಿಯೆಯನ್ನು ಅನುಲಕ್ಷಿಸಿ ಸದ್ಭವ ಭಕ್ತಿಯಿಂದ ಮುಕ್ತಿಯಲ್ಲಿ ವಿಲೀನವಾಗುವ ಮಾರ್ಗವನ್ನು ಕೃಷ್ಣದಾಸರು ತೋರಿಸಿದ್ದಾರೆ. ಮುಕ್ತಿಯನ್ನು ಪಡೆದುಕೊಳ್ಳುವ ಮನುಷ್ಯರು ಯಾವುದೇ ವಿಧದ ದುಃಖದಲ್ಲಿ ವಿಲೀನವಾಗದೆ ಸಂಪ್ರೀತಿಯ ಭಕ್ತಿಯಲ್ಲಿ ನಂಬಿಕೆಯನ್ನಿಟ್ಟು ಸಂಪೂರ್ಣ ಮುಕ್ತಿಯನ್ನು ಪಡೆಯಬೇಕು. ಮುಕ್ತಿಯ ಪಡೆಯುವ ವಿಧಾನವನ್ನು ಈ ಪದ್ಯದಲ್ಲಿ ಸ್ಪಷ್ಟಪಡಿಸುತ್ತಾರೆ.

''ಸಾವಧಾನಾಗಿ ಮಾಡೆಲೋ ಗುರುಭಕ್ತಿ |
ಕಾವಕರುಣಾಳುದೋರಿ ನಿಜ ಮುಕ್ತಿ

ಗುರುನಾಮಸ್ಮರಣೆ ಅನುದಿನಾ |
ಗುರುಮೂರ್ತಿಯ ಮಾಡಿ ನಿಜಧ್ಯಾನಾ |

ಗುರುಚರಣವ ಪೂಜಿಸು ನಿಧಾನಾ |
ಗುರುನಮನದಿ ಹಾಕಿರೋ ಟಾಂಗಣಾ''[೬೪]

ಮುಕ್ತಿಯನ್ನು ಪಡೆಯುವವರು ಗುರುಭಕ್ತಿಗೆ ಪಾತ್ರವಾಗುವ ಈ ಬಗೆ ಕೀರ್ತನೆಯಲ್ಲಿ ಧ್ವನಿಸುತ್ತದೆ. ಗುರುನಾಮಸ್ಮರಣೆ, ಗುರುಧ್ಯಾನ, ಗುರುಚರಣ ಪೂಜೆ, ಗುರುಭಕ್ತರ ಸಂಗ, ಗುರುವಾಕ್ಯ, ಗುರುಪ್ರಸಾದ, ಗುರುವಿನ ಅಭಯ, ಗುರುವಿಗೆ ಅರ್ಪಿಸಿದ ತನುಮನ ಧನವು ಮುಕ್ತಿ ಪಡೆಯಲು ಸಹಕಾರಿಯಾಗುತ್ತವೆ. ಮುಕ್ತಿಯನ್ನು ಪಡೆದ ಮಾನವನು ಜ್ಞಾನಸಂಪನ್ನ ವಿರಕ್ತಿಯ ಭಾವವನ್ನು ಹೊಂದುತ್ತಾನೆ. ಈ ಭಕ್ತಿಯಿಂದ ಶ್ರೀಹರಿಯು ಮುಕ್ತರಿಗೆ ಅವರವರ ಭಾವಕ್ಕೆ ಇಚ್ಛೆಸುವ ಹಾಗೆ ಸುಖ ಭೋಗವನ್ನುಂಟು ಮಾಡುತ್ತಾನೆ. ಇನ್ನೊಂದು ಕೀರ್ತನೆಯಲ್ಲಿ ಮುಕ್ತಿ ದೊರೆತ ಪರಿಯನ್ನು ದಾಸರು ಹಾಡಿಕೊಂಡಿದ್ದಾರೆ.

''ಕಂಡೆನಮ್ಮಾ ಕೌತುಕದಾ ಗಾರುಡಿಗನಾ |
ಕೊಂಡಾಡಲಳವಲ್ಲ ಹೇಳಲೇ ನಾ

ಶುದ್ಧ ಸತ್ವದಾ ಗಿರಿಶಿಖರದಲಿಹರದೊಂದು |
ಬೋಧದನಾಗರ ನೂದುವನಾ

ಭಕ್ತಿ ಮುಕ್ತಿಯಂಬಾ ಗೆಜ್ಜೆಯ ಲೊಪ್ಪುತಿಹ ಪದದಿ |
ಭಕ್ತರುದ್ದೇಶಕ ಬಂದ ಜವದಿ"[೬೫]

ಕಂಡೆ ನಾನು ಕೌತುಕದ ವಿಷಯವನ್ನು. ಶುದ್ಧಸತ್ವದ ಗಿರಿಶಿಖರದಲ್ಲಿರುವ ಭಕ್ತಿ ಮುಕ್ತಿಯೆಂಬ ಗೆಜ್ಜೆಯ ನಾದವು. ಎನ್ನ ಭಕ್ತಿಯ ಪದ್ಯಕ್ಕೆ ಶ್ರೀಹರಿಯು ಕರುಣಿಸಿದ ಯುಕ್ತಿಯಾಗಿದೆ. ಮುಕ್ತಿಗೆ ಭಕ್ತಿಯೇ ಮೊದಲ ಪ್ರಯತ್ನ ಮನುಷ್ಯರಿಂದ ಆರಂಭವಾಗಬೇಕು. ಆ ಮಾನವನ ಪರಿಪಕ್ವವಾದ ಭಕ್ತಿಗೆ ಅಡೆತಡೆಗಳುಂಟಾದರೂ ಸಹ ಶ್ರೀಹರಿಯು ತಾನಾಗಿಯೇ ದಯೆ ತೋರುತ್ತಾನೆ. ಶ್ರೀಹರಿಯ ಅನುಗ್ರಹದಿಂದ ಸಿದ್ಧಿ ಸಾಧನವ ಪಡೆದ ಕೃಷ್ಣದಾಸರು ನನಗೇತರ ಭಯವೊ ಗುರುನಾಥನ ಆಶ್ರಯ ಇರುವಾಗ ಎನ್ನುತ್ತಾರೆ. ದಾಸರು ತನಗಾದ ಪರಮಾನಂದವನ್ನು ಹೇಳಿಕೊಂಡಿದ್ದಾರೆ.

ಎನಗಿನ್ಯಾತರ ಹಂಗೇನು |
ಘನ ಗುರು ತಾನಾದ ಶ್ರಯಧೇನು

ಸುರಲೋಕ ಪದವಿಯ ಸುಖದಿಚ್ಛೆಯಾತಕ |
ಪರಗತಿ ದಾಯಕ ದೊರಕಿರಲಿಕ್ಕೆ

ರಿದ್ಧಿ ಶಿದ್ಧಿಗಳೆಂಬ ಮಾತಿನ ಗೊಡವಿಲ್ಲಾ |
ಸಾಧ್ಯವಾಗಿರೆ ಗುರು ಶ್ರೀ ಪಾದ ಕಮಲಾ

ಹಂಬಲಿಸೆನು ಯೋಗ ಭೋಗ ಮುಕ್ತಿಯ ನಾಲಕು |
ಅಂಬುಜಾಕ್ಷನ ಸೇವೆಯಲಿರುವುದೇ ಸಾಕು"[೬೬]

ಗುರು ದಯೆಯನ್ನು ಪಡೆದ ಮೇಲೆ ನನಗೆ ಯಾತರ ಹಂಗು ಎಂದು ಪ್ರಶ್ನಿಸುತ್ತಾರೆ. ಗುರುವಿನ ಶ್ರೀರಕ್ಷೆ ದೊರೆತ ಮೇಲೆ ನನಗೆ ಯಾತರ ಭಯ ಸುರಲೋಕ ಪದವಿ ಸುಖದ ಇಚ್ಛೆಯನ್ನರಿತು ಪ್ರಗತಿ ದೊರೆತ ಮೇಲೆ ನನಗೆ ಯಾತರದ ಹಂಗು ಎನ್ನುತ್ತಾರೆ. ರಿದ್ಧಿ ಶಿದ್ಧಿಗಳೆಂಬ ಗೊಡವೆ ಬೇಕಿಲ್ಲ. ಶ್ರೀಗುರುವಿನ ಚರಣ ಕಮಲಕ್ಕೆ ಶಿರಬಾಗುವುದರಿಂದ ಸದಾ ಹಂಬಲಿಸುವನು ನಾನು. ಯೋಗ-ಭೋಗ ಮುಕ್ತಿಯ ಸಾಧನೆಗೆ ಇದು ಶ್ರೀಹರಿಯ ಸೇವೆಯಲ್ಲಿರುವವರಿಗೆ ಸಾಕು. ಮುಕ್ತಿಯ ಮತಿತಾರ್ಥವನ್ನು ಬಿಚ್ಚಿ ಹೇಳುತ್ತಾರೆ. ಸಂತರ ಸಹವಾಸ ಮಾಡಿ ಅಂತರಸುಖವನ್ನು ಪಡೆದುಕೊಂಡಿದೆ. ತಂತುಮಿಡಿದು ನಿಶ್ಚಿಂತದಿ ಘನ

ವಿಶ್ರಾಂತಿ ಪಡೆದ ಶ್ರೀಹರಿಯಿಂದ ಮುಕ್ತಿಯು ದೊರೆತ ಪರಿಯನ್ನು ಬಣ್ಣಿಸುತ್ತಾರೆ. ಕೃಷ್ಣದಾಸರು ಮುಕ್ತಿಗಿಂತಲೂ ಭಕ್ತಿಯೇ ಶ್ರೇಷ್ಠವೆನ್ನುತ್ತಾರೆ. ಭಕ್ತಿಯ ಸವಿಸಾರವೆಲ್ಲದರ ತಿರುಳನ್ನು ಬಲ್ಲವನೆ ಬಲ್ಲ. ಮುಕ್ತಿಯೊಳಗೆ ಸುಖವಿದೆ ಎನ್ನುತ್ತ ಭಕ್ತಿಯ ಪರಾಕಾಷ್ಠತೆಯನ್ನು ಮಾನವನಿಗೆ ಸವಿಸ್ತಾರವಾಗಿ ತಿಳಿಯಪಡಿಸುತ್ತಾರೆ. ಹರಿಮೆಚ್ಚಿದ ಭಕ್ತರಾದ ಪ್ರಹ್ಲಾದ, ನಾರದ, ರುಕ್ಮಾಂಗದ, ಧ್ರುವ, ಅಂಬರೀಷ, ಗಜೇಂದ್ರ ಹನುಮ, ವಿಭೀಷಣ, ಅಜಮಿಳ, ಉದ್ಧವ, ಪುಂಡಲೀಕ, ಮುಂತಾದವರ ಭಕ್ತಿಯ ಸಾಧನವನ್ನು ಈ ರೀತಿಯಲ್ಲಿ ನೆನೆಯುತ್ತಾರೆ.

''ಸುಕಶೌನಕ ಮುಖ್ಯ ಸಜ್ಜನರಾ |
ಪ್ರಕಟದಿ ಮಹಿಪತಿ ನಂದನು ಸ್ತುತಿಸಿದ |
ಮುಕುತಿಗೆ ಯೋಗ್ಯ-ನಾ ಮಾಡುವರಾ''[೬೭]

ಎಂದೆನ್ನುತ ಕೃಷ್ಣದಾಸರು ಮಹಾನುಭಾವರ ಭಕ್ತಿಯನ್ನು ಸ್ತುತಿಸುತ್ತಾರೆ. ಈ ಮೂಲಕ ಮುಕ್ತಿಗೆ ಯೋಗ್ಯನನ್ನಾಗಿ ನನ್ನನ್ನು ಮಾಡು ಎಂದು ಶ್ರೀಹರಿಯಲ್ಲಿ ಬೇಡಿಕೊಳ್ಳುತ್ತಾರೆ. ಇವರ ಹಲವು ಕೀರ್ತನೆಯಲ್ಲಿ ಮುಕ್ತಿಯ ಪರಿಕಲ್ಪನೆಯ ಭಕ್ತಿಯ ವಿವಿಧ ಮಜಲಿನಲ್ಲಿ ಕಂಡುಬರುತ್ತದೆ.

೭. ಅಹಂಕಾರ ಖಂಡನೆ ಮತ್ತು ಮನಸ್ಸಿಗೆ ಉಪದೇಶ

ಮಾನವನ ಶರೀರವು ಪರಮಾತ್ಮ ಕರುಣಿಸಿದ ಕೊಡುಗೆಯಾಗಿದೆ. ಇದನ್ನು ಸಾರ್ಥಕಪಡಿಸಿಕೊಳ್ಳಲು ಸದ್ಭಕ್ತಿ, ಸದಾಚಾರ, ಸದ್ಗುಣಗಳಿಂದ ಇಂದ್ರಿಯನಿಗ್ರಹವನ್ನು ಮಾಡಿಕೊಳ್ಳಬೇಕು. ಶ್ರೀಹರಿಯ ಸೇವೆಗೆ ಸಮರ್ಪಿಸುವ ಮಾರ್ಗವೇ ಸನ್ಮಾರ್ಗವಾಗಿದೆ. ಆದರೆ ನಾನು ಎಂಬ ಅಹಂಕಾರದಿಂದ ಪರಮಾತ್ಮ ನೀಡಿದ ಈ ಶರೀರ ಹಾನಿ ಮಾಡಿಕೊಳ್ಳುವ ಜನರನ್ನು ಕೃಷ್ಣದಾಸರು ಕಾರವಾಗಿ ಎಚ್ಚರಿಸುತ್ತಾರೆ.

ದೇಹದ ಒಳಗಿರುವ ಇಂದ್ರಿಯ ಸುಖಕ್ಕೆ ಮನಸ್ಸು ಸೋತ ಮಾನವನು ಈ ದೇಹ ಪರಮಾತ್ಮನಿಂದ ಎರವಲು ಪಡೆದಿರುವುದು ಎಂಬುದನ್ನು ಅರಿಯಬೇಕಾಗಿದೆ. ದೇಹದ ಮಹೋನ್ನತಿಯನ್ನು ಮನುಜನ ಜೀವನವನ್ನು ಸದ್ಭಕ್ತಿಯ ಮೂಲಕ ಸನ್ಮಾರ್ಗದತ್ತ ನಡೆಸುವುದು ಪ್ರಮುಖ ಆಶಯವಾಗಿದೆ. ಇಂದ್ರಿಯ ವ್ಯಾಮೋಹವು ಅಸ್ತಿತ್ವವನ್ನು ಕಸಿದುಕೊಳ್ಳುವ ಕ್ರಿಯೆಯನ್ನು ಕೃಷ್ಣದಾಸರು ಅನೇಕ ಕೀರ್ತನೆಗಳಲ್ಲಿ ಖಂಡಿಸಿದ್ದಾರೆ. ಅಹಂಕಾರ ಖಂಡನೆ ಮತ್ತು ಮನಸ್ಸಿಗೆ ಉಪದೇಶಿಸುವ ತತ್ವಗಳನ್ನು ಬಿತ್ತರಿಸಿದ್ದಾರೆ.

ಅಹಂಕಾರವೆಂಬ ಮರ ಗಟ್ಟಿಯಾದ ಬೇರು ಮೇಲೆ ಬೃಹದಾಕಾರವಾಗಿ ಬೆಳೆದಿದೆ. ಮನುಜನ ಸಾಧನೆಗೆ ಅಹಂಕಾರವು ಅಡ್ಡಿಯಾಗಿದೆ. ಅಂಹಂಕಾರವನ್ನು ತೊರೆದು ಮದಾಂಧರಾಗಿ ಜೀವನದ ಅರಿವಿಲ್ಲದ ಮಾನವ ಹುಚ್ಚರಂತೆ ಕುಣಿದಾಡುತ್ತಿರುವುದನ್ನು ಕೃಷ್ಣದಾಸರು ಖಂಡಿಸುತ್ತಾರೆ. ಇಲ್ಲಿ ಮನಸ್ಸಿಗೆ ಲಗಾಮನ್ನು ಹಾಕುವ ಪ್ರಯತ್ನ ಮಾಡಿದ್ದಾರೆ. ಗುರುಸೇವೆ, ಗುರುಭಕ್ತಿ, ಗುರುಪೂಜೆಯಿಲ್ಲದೆ ಈ ಜನ್ಮ ವ್ಯರ್ಥವಾಗಿದೆ. ಗುರುವಿನ ಮೇಲಿರುವ ನಂಬಿಕೆ ಸಾಧನೆಯ ಶಿಖರಕ್ಕೊಂದು ಕಳಸವಾಗುತ್ತದೆ.

''ಬಿಡು ಬಿಡು ಆತ್ಮ ಸ್ತುತಿಯನು ಪರನಿಂದೆಯನು

ತನ್ನ ಗುಣವ ತಾನೇ ಹೊಗಳುತಲಿ |
ಅನ್ಯರ ದೂಷಿಸಲೇನು

ತಾ ಕೋಡಗ ಮರಿ ಬನ ಹಳಿವಂತೆ |
ವ್ಯಾಕುಳ ಹಿಡಿದರೆ ತಾನು

ಮಹಿಪತಿ ಸುತ ಪ್ರಭು ಬೋಧವ ಕೇಳುತ |
ಸ್ವಹಿತನ ಪಡಿಯೋ ನೀನು''[೬೮]

ಮನುಷ್ಯನು ನಾನೆಂಬ ಅಹಂಕಾರದಿಂದ ಪರನಿಂದನೆಯನ್ನು ಮಾಡುತ್ತಾನೆ. ತನ್ನ ಗುಣಗಳನ್ನು ಹೊಗಳುವ ಮನುಜಗೆ ಅನ್ಯರ ದೂಷಣೆಯ ಮಾಡುವುದು ಉಚಿತವೇ. ತಾನೊಬ್ಬ ಕ್ರೂರಮೃಗವಾಗಿ ಮರಿಪ್ರಾಣಿಯನ್ನು ಆರೋಪಿಸುವುದು ಜೀವನದಲ್ಲಿ ಸರಿಯಲ್ಲ. ಸಾಧುಸಜ್ಜನರ ಬೋಧನೆಯ ಉಪದೇಶವ ಕೇಳಿ ಸ್ವಹಿತವ ಪಡೆಯೊ ಮನುಜ. ಭ್ರಾಂತಿಗೇಡಿ ಈ ಮನುಷ್ಯನ ಸ್ವಭಾವ ಕಂಡು ಕೃಷ್ಣದಾಸರು ಈ ರೀತಿಯಲ್ಲಿ ಹೇಳುತ್ತಾರೆ.

''ಬಿಡು ಭ್ರಾಂತಿಯನ್ನು ಮಾನವ ನಿನ್ನಾ |
ಪಡೆದುಕೋ ಸದ್ಗತಿಯನು

ತಡಿಯದೇ ಸದ್ಗುರು ಅಡಿಗಳ ಪೂಜಿಸಿ |
ಒಡನೆ ಭವಾಂಭವಾಂಬುಧಿ ಥಡಿಯುವ ಸಾರೆಲೋ

. . . .

ಹಿಂದಾದ ನೆನಹಿಸದೇ ವಾಸನೆಗಳ |
ಮುಂದೇನು ಕಾಮಿಸದೇ |
ಬಂದದ ಅನುಭವಿಸಿ |ಕ|
ನಸಿನಾನಂದ ವಿದೆಂದು ಭಾವಿಸೀ |
ತಂದೆ ಮಹಿಪತಿ ಕಂದನ ಸಾರಿದ |
ದ್ವಂದ್ವ ಗೆಲಿದು ಗೋವಿಂದ ನೆನೆಯುತ''[೬೯]

ಸದ್ಗತಿಯನ್ನು ಪಡೆದುಕೊಳ್ಳಲು ದುರ್ಬುದ್ಧಿಯನ್ನು ಬಿಡು. ತಾನು ಯಾರು? ತನ್ನ ಇರುವಿಕೆ ಏನು ಎಂಬುದನ್ನು ಅರಿತುಕೊಳ್ಳಬೇಕು. ಜ್ಞಾನಿಗಳ ತತ್ವಗಳನ್ನು ತಿಳಿದು ನೋಡಿ

ಸ್ವಾನುಭವದಲ್ಲಿ ಅನುಭವಿಸಬೇಕು. ಕೆಟ್ಟದ್ದನ್ನು ನೆನೆಯದೆ ಉತ್ತಮವಾದುದನ್ನು ಪಡೆದುಕೊಳ್ಳಲು ಮಾನವ ಮೊದಲು ಭ್ರಾಂತಿಯನ್ನು ಬಿಟ್ಟು ಸದ್ಗತಿಯನ್ನು ಪಡೆದುಕೊಳ್ಳಬೇಕು. ಬಿಟ್ಟುಬಿಡು ನಿನ್ನ ದುರ್ಗುಣದ ಸಂಗ. ಹಿಡಿಯಬೇಕು ಸಾಧು ಸಜ್ಜನರ ಶ್ರೀಪಾದವ. ಕಾಮ, ಕ್ರೋಧ, ಮೋಹ ಇವು ಮತಿಗೆಟ್ಟ ಮನಸ್ಸಿನಲ್ಲಿ ಇರುತ್ತವೆ. ಇಂಥ ಇಂದ್ರಿಯ ಸುಖಕ್ಕೆ ಮನಸೋಲದೆ ಗುರು ಹಿರಿಯರ ಮಾರ್ಗವನ್ನು ಅನುಸರಿಸಬೇಕು. ಕೃಷ್ಣದಾಸರ ಈ ಸಂದೇಶಗಳು ಮಾನವ ಲೋಕವನ್ನು ಉದ್ಧಾರ ಮಾಡುವ ನುಡಿಗಳಾಗಿವೆ. ಒಣಮಾತಿನ ಒಯ್ಯಾರದ ಜನರಿಗೆ ತಕ್ಕಂತೆ ಉತ್ತರಿಸಿದ್ದಾರೆ.

''ಬಿಡು ಬಿಡು ಒಣಮಾತಿನ ಸೊಗಸು |
ಕುಡಿ ಸ್ವಾನಂದ ಬಳ್ಳಿಯ ಚಿಗಿಸು''[೨೦]

ಎಂಬ ಮಾತುಗಳನ್ನು ಜನರಿಗೆ ಜ್ಞಾನದ ಅರಿವನ್ನು ನೀಡುವ ನಿಟ್ಟಿನಲ್ಲಿ ಬಿತ್ತರಿಸಿದ್ದಾರೆ. ಸಂಗೀತದ ಜ್ಞಾನವ ಪಡೆದು ಪ್ರಪಂಚದಲ್ಲಿ ಹಲವರು ಹೆಸರನ್ನು ಮಾಡಿದ್ದಾರೆ. ತನ್ನ ವಾದನಗಳಿಗೆ ಪ್ರಾಮುಖ್ಯತೆಯನ್ನು ಕೊಡದ ಇಂತಹ ಮನುಷ್ಯರು ಆ ನಾದದ ಹಿಂದಿರುವ ಶ್ರೀಹರಿಯ ಶಕ್ತಿಯನ್ನು ನೆನೆಯಬೇಕು. ಜ್ಞಾನದ ಬೆಳೆಯನ್ನು ಬೆಳೆದು ಸ್ವಚ್ಛಂದವಾಗಿ ಈ ಮಾನವ ಹೊಲವನ್ನು ಉಳಬೇಕು. ಗುರುವಿನ ಅಭಯದಿಂದ ಸ್ವಂತದ ಹೊಲ ಹಿಡಿಯಬೇಕು. ವಿವೇಕ ಎಂಬ ನೇಗಿಲ ಹೂಡಬೇಕು. ದೃಢಪಾಶದಿಂದ ಎತ್ತನ್ನು ಹೊಡಯಬೇಕು. ಜ್ಞಾನ, ಭಕ್ತಿ, ವೈರಾಗ್ಯದ ಅನ್ಯೋನ್ಯಭಾವದಿಂದ ಕೂರಿಗೆಯನ್ನು ಎಳೆಯಬೇಕು. ಗುರುಕರುಣ ಎಂಬ ಮಳೆಯ ಸುರಿಸಿ ವೇದಾಂತ ಎಂಬ ತತ್ವದ ಬೀಜ ಬಿತ್ತಬೇಕು. ಅನುಮಾನ ಎಂಬ ಕಸವನ್ನು ತೆಗೆದು ಬೋಧನೆಯೆಂಬ ಎಡೆಯನ್ನು ಹಾಕಬೇಕು. ವರಕ್ಷೋಭೆ ಎಂಬ ನುಡಿಯನ್ನು ಹೇಳುತ್ತಾ, ಬೆಳೆಗಾಳಕ್ಕೆ ಬರುವ ಹಕ್ಕಿಯನ್ನು ಕಾಯಬೇಕು. ಪರಮಜ್ಞಾನ ಜಾಗೃತಿಯಿಂದ ಕವಣೆಯ ಎಸೆಯಬೇಕು. ಪರಿಪೂರ್ಣವಾದ ಬಳಿಕ ತನ್ನ ಜೀವನವೆಂಬ ಒಕ್ಕಲುತನದಲ್ಲಿ ತೊಡಗಬೇಕೆಂಬುದು ಕೃಷ್ಣದಾಸರ ನುಡಿ.

ಆಧ್ಯಾತ್ಮಿಕ ಸುಖದ ರೀತಿ ನೀತಿಗಳನ್ನು ತಮ್ಮ ಹರಿಕೀರ್ತನೆಗಳ ಮುಖಾಂತರ ಜನರಿಗೆ ಬೋಧಿಸುತ್ತಾ, ದುರ್ನಡತೆ, ದುಶ್ಚಟಗಳಿಂದ ದೂರವಾಗಲು ಪ್ರಯತ್ನಿಸಿದ್ದಾರೆ. ಸಂಸಾರ ಮೋಹಕ್ಕೆ ಸಿಲುಕಿ ಜನ್ಮವನ್ನು ವ್ಯರ್ಥ ಮಾಡಿಕೊಳ್ಳುವ ಜನರಿಗೆ ಈ ಕೆಳಗಿನ ಪದ್ಯದಲ್ಲಿ ಉದ್ದೇಶದ ನುಡಿಗಳನ್ನಾಡಿದ್ದಾರೆ.

''ಛೀ ಛೀ ಛೀ ಛೀ

ಬಿಟ್ಟು ಕೊಡೋ ನೀ ಸಂಸಾರ ಭ್ರಾಂತಿ |
ಎಷ್ಟು ಸೋಸವಿ ದುಃಖವ ಪಂಥಿ |
ಅಷ್ಟು ಪಾಶದೀ ಬಿಗಿದಿಹ ಗ್ರಂಥಿ |
ಕಷ್ಟ ಪಟ್ಟಿನ್ನು ಮಾಡುವಿ ಚಿಂತಿ''[೨೧]

ಮನುಷ್ಯ ಜನ್ಮ ನೀರಿನ ಮೇಲಿನ ಗುಳ್ಳೆಯಂತೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಿಂದ ಸುತ್ತುವರಿಯಲ್ಪಟ್ಟಿದೆ. ಹೀನ ಸುಖ ಭೋಗದ ಆಸೆಯಲ್ಲಿ ಸಿಲುಕಿ ಪಾಪದ ಗೂಡಾಗಿದೆ. ಸಂಸಾರದಲ್ಲಿ ಸುಖವಿದೆ ಎಂದು ಭ್ರಾಂತನಾಗಿ ದುಃಖಸಾಗರದಲ್ಲಿ ಮುಳುಗಿರುವಿ. ಈ ದೇಹವು ಅಷ್ಟು ಪಾಶದಿ ಗುರಿಯಾಗಿ ಕಷ್ಟಪಡುತ್ತಿರುವಿ. ಸತಿಸುತರು ನೆನೆವರು ಎಂದು ನಂಬಿ ಮೂರ್ಖರಾಗಿ ಉಳಿದಿರುವೆ. ದೇಹವು ಬಾಲ್ಯ, ಯೌವನ, ಮುಪ್ಪು ಆವರಿಸಿ ಭ್ರಾಂತಿಗೆಟ್ಟು ಹೋಗುವುದು. ಆಗ ನೀನು ಆಸೆಪಟ್ಟ ಇಂದ್ರಿಯ ಸುಖಗಳು ಸಿಗಲಾರವು. ಕಾಂತಿಹೀನನಾಗಿ ಕಷ್ಟಕ್ಕೆ ಗುರಿಯಾಗಿ ಪರಮಾತ್ಮನನ್ನು ನೆನೆಯದೆ ಆಸೆಗಳ ಭ್ರಷ್ಟನಾಗಬೇಡ. ಎಂದು ಕೃಷ್ಣದಾಸರು ತಮ್ಮ ತತ್ವಬೋಧನೆಯನ್ನು ಉಣಬಡಿಸಿದ್ದಾರೆ. ಈ ಜನ್ಮವನ್ನು ನೆನೆದು ಈ ರೀತಿಯಲ್ಲಿ ಖಂಡಿಸುತ್ತಾರೆ.

''ಛೀ ಯಾತರ ಜನ್ಮಾ
ನಾಯಿಗಿಂತ್ತಾಧಮ

ಛೀ ಯಾತರ ಜನ್ಮಾ
ನಾಯಿ ಹಿಂದತ್ತಾಧಮ
ಬಾಯಿ ಬಡಕನಾಗಿ
ಮಯ್ಯ ಮರೆವರೇ ನಮ್ಮಾ''[೭೨]

ಎಂದು ಸಾಗುವ ಕೀರ್ತನೆಯಲ್ಲಿ ಮಾನವ ಜನ್ಮವು ಹೇಸಿ ಬುದ್ಧಿಯಿಂದ ಕೂಡಿದ ಪರಿಯನ್ನು ಅನಾವರಣಗೊಳಿಸಿದ್ದಾರೆ. ನಾಯಿಗಿಂತಲೂ ಕಡೆಯಾದ ಜನ್ಮ. ಬಾಯಿಬಡಕನಾಗಿ ಹಾದಿಯಗುಂಟ ಹೋಗುವ ಬರುವವರಿಗೆ ಬೊಗುಳುವ ಮೂರ್ಖರ ಜನ್ಮ. ಬುದ್ಧಿಯು ಮೊದಲೇ ಇಲ್ಲ. ತಿದ್ದಿ ಹೇಳಿದರೆ ಕೇಳುವರಿಲ್ಲ. ಇದ್ದ ಎರಡು ದಿನ ಸುಖದಿಂದ ಇರಲು ಶ್ರೀಹರಿಯ ಭಜನೆಯನ್ನು ಮಾಡುವುದಿಲ್ಲ. ಬೌದ್ಧಿಕ ಸುಖದ ಬೆನ್ನು ಹತ್ತಿ ವ್ಯರ್ಥವಾಗಿ ಜೀವನ ಕಳೆಯುತ್ತಿದ್ದಾನೆ. ತಾನು ಹುಟ್ಟಿ ಬಂದ ಈ ಜನ್ಮವನ್ನು ಸಾರ್ಥಕಪಡಿಸಿಕೊಳ್ಳದೆ ಮೂರ್ಖನಾಗಿ ತಿರುಗುತ್ತಿದ್ದಾನೆ. ಕಾಡಿನ ಮರದಂತೆ ಬೆಳೆದು ಒಂದು ದಿನ ನಾಶವಾಗಿ ಹೋದರೆ ಏನು ಫಲ. ಗುರು ಹಿರಿಯರ ಮುಂದೆ ಗರ್ವದಿಂದ ಇರದೆ ಸಜ್ಜನನಾಗಿ ಬಾಳಿದರೆ ಅದುವೇ ನಿಜವಾದ ಧರ್ಮವಾಗಿದೆ.

''ತಿಳಿಯೋ ಮನವೇ ನಿಜ ಘನವಾ |
ಕಳಿಯೋ ಹಮ್ಮಿನ ಅವಗುಣವಾ

ಸದ್ಗುರು ಶರಣವ ನೀ ಬ್ಯಾಗ |
ಸದ್ಗುಣದಲಿಹುದು ಜಗದೊಳಗ |

ತದ್ಗತ ಬೋಧವರೆದು ಈಗ |
ಸದ್ಗತಿ ಕಾಣಿಸುವುದು ನಿನಗ''[೭೩]

ಮನಸ್ಸಿನ ಅಹಂಕಾರವನ್ನು ಹಾಗೂ ಅವಗುಣವನ್ನು ತಿರಸ್ಕರಿಸುವ ಉಪದೇಶದ ತತ್ವಗಳು ಈ ಕೀರ್ತನೆಯಲ್ಲಿ ಮೈದಾಳಿದೆ. ಸದ್ಗುರು ಶರಣರ ಸಂಗ ಸದ್ಗತಿಯನ್ನು ಕಾಣಿಸುವುದಾಗಿದೆ. ಆಶೆಗಳೆಂಬ ಬಯಕೆಯನ್ನು ಹತೋಟಿಯಲ್ಲಿಟ್ಟುಕೊಂಡು ಗುರುವಿನ ಭಕ್ತಿಯನ್ನು ಮಾಡುವುದಾಗಿದೆ. ಮನುಷ್ಯನ ಅವಗುಣಗಳು ಸುಖದ ಹಾದಿಯಾಗಲಾರವು. ಜ್ಞಾನಿಗಳು ಹಾಕಿಕೊಟ್ಟ ಸನ್ಮಾರ್ಗವನ್ನು ಪಡೆದು ಸುಜ್ಞಾನವನ್ನು ಸಂಪಾದಿಸುವುದೇ ನಿಜವಾದ ಮನುಷ್ಯನ ಗುಣ. ಹಾಗಾಗಿ ಮನುಷ್ಯನಲ್ಲಿರುವ ಡಂಭಾಚಾರ, ಗರ್ವ, ಲೋಭ ಮುಂತಾದವುಗಳನ್ನು ಜರೆಯುತ್ತ ಎಚ್ಚರದ ನುಡಿಗಳನ್ನು ಪ್ರತಿಪಾದಿಸಿದ್ದಾರೆ. ಮನಸ್ಸು ಏನು ಬೋಧಿಸಿದರೂ ಸರಿದಾರಿಗೆ ಬರದಿದ್ದಾಗ ಈ ರೀತಿಯಲ್ಲಿ ಹೇಳುತ್ತಾರೆ.

''ಏನು ಹೇಳಿದರೇನು ಹೀನ ಮನಕ |
ತಾನು ಎಚ್ಚರ ಹಿಡಿಯ ದನಕಾ |

ಬೂದಿಯೊಳಗ ಹೋಮ ಮಾಡಿದಂತೆ |
ಬೋಧಾನುಗ್ರಹ ಕಳವದು ಮರೆತಕೆ ||

ಹರಿ ಕೀರ್ತನೆ ಇರಲಿಲ್ಲಾ |
ಬರಡು ಮಾತಿಗೆ ಸುಖ ಪಡುದಲ್ಲಾ ||

ಒಮ್ಮೆಯಾದರೂ ಹರಿ ಹರಿಯಂದು |
ಝುಮ್ಮೆನೆವೆ ಪಶ್ಚಾತ್ತಾಪ ಬಾರದೆಂದು |

ಗಾಳಿಯಂತೆ ಓಡಾಡುವದು ನೋಡಿ
ಕಾಲೂರಿ ನಿಲ್ಲದು ಮತಿಗೇಡಿ''[೭೪]

ಮನಸ್ಸು ಎಷ್ಟೇ ಹತೋಟಿಯಲ್ಲಿಟ್ಟುಕೊಂಡರೂ ತನ್ನ ದುರ್ಬುದ್ಧಿಯ ಛಾಯೆಯನ್ನು ಬಿಡದು. ಬೂದಿಯೊಳಗೆ ಹೋಮವ ಸುಟ್ಟರೂ ಏನು ಪ್ರಯೋಜನ. ಹರಿಭಕ್ತರ ಸಂಗ ಕೀರ್ತನೆಯ ಫಲವಿಲ್ಲದೆ ಬರಡು ಮಾತಿನಿಂದ ಸುಖ ದೊರೆಯುವುದಿಲ್ಲ. ಒಮ್ಮೆಯಾದರೂ ಹರಿನಾಮ ಸ್ಮರಣೆಯನ್ನು ಎತ್ತರದ ಧ್ವನಿಯಿಂದ ಕೂಗಿದರೆ ಈ ಜನ್ಮದಲ್ಲಿ ಪಶ್ಚಾತ್ತಾಪವನ್ನು ಕಳೆದುಕೊಳ್ಳಬಹುದು. ಗಾಳಿಯಂತೆ ಓಡಾಡುವ ಮನಸ್ಸನ್ನು ಕಾಲೂರಿ ನಿಲ್ಲಲು ಮತಿಗೇಡಿಯಾದ ಮಾನವ ಪ್ರಯತ್ನಿಸಬೇಕು. ಆಗ ಸ್ವಹಿತ ವಿವೇಕ ಪ್ರಾಪ್ತವಾಗುತ್ತದೆ. ಮದವನ್ನು ತುಂಬಿ

ಉಬ್ಬುವ ಮನುಷ್ಯನಿಗೆ ಕೃಷ್ಣದಾಸರು ಮೂರು ದಿನದ ಸಂತೆಯನ್ನು ವಿಸ್ತರಿಸಿ ಹೇಳುತ್ತಾರೆ. ಬುದ್ಧಿಯಲ್ಲಿ ಬಹುಜನ ಗೆದ್ದ ಮದದಿಂದ ಬಿದ್ದು ಹೋಗುವ ಕಾಲಕ್ಕೆ ಸದ್ದಿಲ್ಲದೆ ಹೋಗುತ್ತದೆ ಈ ದೇಹ. ಶ್ರೀಹರಿಯ ಮೊರೆ ಹೊಕ್ಕ ಪ್ರಾರ್ಥನೆ ನೆನೆದರೆ ಉಬ್ಬುವ ಕೊಬ್ಬುವ ಹಬ್ಬವ ಸುಖವನ್ನು ಪರಿಹರಿಸುತ್ತಾನೆ. ಇನ್ನಾದರೂ ತಿಳಿದು ನೋಡು ಮನರಾಯ ನಿನ್ನ ಕಣ್ಣಿನ ಬಂಧುವಿನ ಸ್ವಹಿತದ ಉಪಾಯ. ನಾನಾ ಜನ್ಮದಲ್ಲಿ ಹುಟ್ಟಿಬಂದು ದುರ್ಲಭ ಸುಖವನ್ನು ಪಡೆದಿರುವೆ. ಇಂದು ನಾಳೆ ಎನ್ನಬೇಡ ನಿಶ್ಚಿತವಾಗಿಯೂ ಮರಳಿ ಬರುವುದಲ್ಲ ಈ ನರದೇಹ. ಹಾಗಾಗಿ ಸ್ಥಿರವಲ್ಲದ ದೇಹವನ್ನು ಹಾಳು ಮಾಡಿಕೊಳ್ಳಬೇಡ ಎಂಬುದು ಕೃಷ್ಣದಾಸರ ಅಭಿಮತವಾಗಿದೆ.

''ನಂಬು ಹರಿಯ ಎನ್ನ ಮನವೇ

ಸುರಪತಿ ಮುಳಿಯಲು ಸಕಲ ಗೋವಳರನು |
ಹೊರೆದನು ಕರದೆತ್ತ ಗಿರಿಯಾ

ಭಕುತಿಲಿ ಶರಣು ಬರಲು ಸುಧಾಮನು |
ಸಕಲ ಸುಖವನಿತ್ತಾ ದೊರೆಯಾ''[೨೫]

ಹೀಗೆ ಅಹಂಕಾರ, ಆಶೆ ಮುಂತಾದವುಗಳನ್ನು ಹೊತ್ತುಕೊಂಡ ಮನುಷ್ಯನ ಮನಸ್ಸನ್ನು ಕುರಿತು ಕೃಷ್ಣದಾಸರು ಹಲವು ಕೀರ್ತನೆಗಳಲ್ಲಿ ಚಿತ್ರಿಸಿದ್ದಾರೆ. ಮಾನವನ ಕಲ್ಯಾಣದ ಮಾರ್ಗವನ್ನು ಸೂಚಿಸಿದ್ದಾರೆ. ಅದಕ್ಕಾಗಿ ಅಹಂಕಾರವೆಂಬ ಮರದ ಎಲೆಗಳು ಹರಿನಾಮಸ್ಮರಣೆಯ ಬಿರುಗಾಳಿಯಿಂದ ಹಾರಿಸಬೇಕು. ಹೃದಯವೆಂಬ ಭೂಮಿಯನ್ನು ಶುಚಿಗೊಳಿಸುವ ಪದ್ಯಗಳು ಇಲ್ಲಿವೆ. ಅಹಂಕಾರದ ಬಲೆಯಲ್ಲಿ ಸಿಕ್ಕು ಒದ್ದಾಡಿ ಆ ಬಲೆಯಿಂದ ಬಿಡಿಸಿಕೊಂಡು ಹೊರ ಬಂದ ಅನೇಕ ಹರಿಭಕ್ತರು ಇದ್ದಾರೆ. ಉದಾಹರಣೆಗೆ ದೂರ್ವಾಸ, ಮನ್ಮಥ ಮುಂತಾದವರ ಉದಾಹರಣೆಯನ್ನು ಕೊಡುತ್ತಾರೆ. ಮನುಷ್ಯ ಜನ್ಮದ ಅಹಂಕಾರದ ಬುದ್ಧಿಯನ್ನು ಸರಿಪಡಿಸುವ ಕಳಕಳಿಯ ಮಾತುಗಳು ಇಲ್ಲಿವೆ. ಈ ಕೀರ್ತನೆಗಳು ಸಜ್ಜನರ ಸಾಧನೆಗೆ ಸಹಾಯಕವಾಗಿ ಜೀವನದ ಪ್ರೀತಿಯನ್ನು, ವೃತ್ತಾಂತವನ್ನು ಹೆಚ್ಚಿಸುತ್ತದೆ. ಶ್ರೀಹರಿಯ ದಯದಿಂದ ಜೀವನಮುಕ್ತಿಯನ್ನು ಕಾಣುವ ಹಂಬಲ ಇಲ್ಲಿ ಎದ್ದು ಕಾಣುತ್ತವೆ.

ಕೊನೆಟಿಪ್ಪಣಿಗಳು

೧. ಸಮಗ್ರ ದಾಸಸಾಹಿತ್ಯ ಸಂಪುಟ-೧೧, ಭಾಗ-೧, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು, (ಸಂ) ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು. ೨೦೦೩, ಪ್ರಸ್ತಾವನೆ, ಪುಟ ೨೫.

೨. ಅದೇ, ಪುಟ ೨೬.

೩. ಅದೇ, ಪುಟ ೨೭.

೪. ಅದೇ, ಪ್ರಸ್ತಾವನೆ ಪುಟ ೨೭.

೫. ಅದೇ, ಪುಟ ೨೯.

೬. ಅದೇ, ಪುಟ ೨೮.

೭. ಅದೇ, ಪ್ರಸ್ತಾವನೆ ಪುಟ ೨೭.

೮. ಅದೇ, ಪುಟ ೨೦.

೯. ಅದೇ, ಪುಟ ೫೩.

೧೦. ಅದೇ, ಪುಟ ೭೪-೭೫.

೧೧. ಅದೇ, ಪುಟ ೮೩.

೧೨. ಅದೇ, ಪುಟ ೨೨೧.

೧೩. ಅದೇ ಪುಟ ೮೭-೮೮.

೧೪. ಅದೇ, ಪುಟ ೨೩೮-೨೩೯.

೧೫. ಅದೇ, ಪ್ರಸ್ತಾವನೆ ಪುಟ ೨೯.

೧೬. ಅದೇ, ಪ್ರಸ್ತಾವನೆ ಪುಟ ೩೦.

೧೭ ಅದೇ, ಸಂಪುಟ–೧೧, ಭಾಗ–೨, ಪುಟ ೮೩.

೧೮. ಅದೇ, ಪುಟ ೨೩.

೧೯. ಅದೇ, ಪುಟ ೯೪.

೨೦. ಅದೇ, ಪುಟ ೫೮.

೨೧. ಅದೇ, ಪುಟ ೨೨.

೨೨. ಶ್ರೀ ಗುರುಭಾಸ್ಕರ ಮಹಿಪತಿ ಜ್ಞಾನ ಗಂಗಾವಾಹಿನಿ, ರಾಮಯ್ಯಾ ಗುರಪ್ಪಯ್ಯ ಹರಿದಾಸ, ೨೦೦೯, ಪುಟ ೧೧೬

೨೩. ಸಮಗ್ರ ದಾಸಸಾಹಿತ್ಯ ಸಂಪುಟ-೧೧ ಭಾಗ-೨, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು, (ಸಂ) ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪುಟ ೮೮-೮೯.

೨೪. ಅದೇ, ಪುಟ ೩೪.

೨೫. ಶ್ರೀ ಗುರುಭಾಸ್ಕರ ಮಹಿಪತಿ ಜ್ಞಾನ ಗಂಗಾವಾಹಿನಿ, ರಾಮಯ್ಯ ಗುರುಪ್ಪಯ್ಯ ಹರಿದಾಸ, ೨೦೦೯, ಪುಟ ೧೨೦

೨೬. ಸಮಗ್ರದಾಸ ಸಾಹಿತ್ಯ ಸಂಪುಟ-೧೧, ಭಾಗ-೨, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು (ಸಂ) ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪುಟ ೮೮.

೨೭. ಅದೇ, ಪ್ರಸ್ತಾವನೆ, ಪುಟ ೩೧-೩೨.

೨೮. ಅದೇ, ಪುಟ ೧೦೧.

೨೯. ಅದೇ, ಪುಟ ೧೦೩.

೩೦. ಅದೇ, ಪುಟ ೧೯೮-೧೯೯.

೩೧. ಅದೇ, ಪುಟ ೨೧೯–೨೨೦

೩೨. ಅದೇ, ಪುಟ ೧೯೧.

೩೩. ಅದೇ, ಸಂಪುಟ-೧೧, ಭಾಗ–೧, ಪುಟ ೧೦೮.

೩೪. ಅದೇ, ಪುಟ ೧೧೦.

೩೫. ಅದೇ, ಪುಟ ೧೧೧-೧೧೨.

೩೬. ಅದೇ, ಪುಟ ೧೧೩.

೩೭. ಅದೇ, ಪುಟ ೧೩೨.

೩೮. ಅದೇ, ಪುಟ ೧೪೬.

೩೯. ಅದೇ, ಪುಟ ೧೪೭.

೪೦. ಶ್ರೀವೈಷ್ಣವ ಹರಿದಾಸ ಸಾಹಿತ್ಯ, ಪ್ರೊ.ನಾ.ಗೀತಾಚಾರ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೭, ಪುಟ ೨೫-೨೬.

೪೧. ಸಮಗ್ರ ದಾಸಸಾಹಿತ್ಯ ಸಂಪುಟ-೧೧, ಭಾಗ-೧, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು, (ಸಂ) ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,

ಬೆಂಗಳೂರು, ೨೦೦೩, ಪುಟ ೧೫೪-೧೫೫.

೪೨. ಅದೇ, ಸಂಪುಟ-೧೧, ಭಾಗ-೨, ಪುಟ ೫೯-೬೦.

೪೩. ಅದೇ, ಪುಟ ೧೩೮.

೪೪. ಶ್ರೀ ತ್ಯಾಗರಾಜರ ಕೃತಿಗಳಲ್ಲಿ ಸಂಗೀತ ಮತ್ತು ಭಕ್ತಿ: ಒಂದು ಅಧ್ಯಯನ, ಡಾ.ಟಿ.ಎನ್.ಪದ್ಮ, ಸುವಿದ್ಯಾ ಪ್ರಕಾಶನ, ಬೆಂಗಳೂರು, ೧೯೯೮, ಪುಟ ೨೮೬.

೪೫. ಅದೇ, ಪುಟ ೨೮೬.

೪೬. ಸಮಗ್ರ ದಾಸಸಾಹಿತ್ಯ ಸಂಪುಟ-೧೧, ಭಾಗ-೨, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು, (ಸಂ) ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ೨೦೦೩, ಪುಟ ೨೩೯-೨೪೦.

೪೭. ಅದೇ, ಸಂಪುಟ-೧೧, ಭಾಗ-೧, ಪುಟ ೨೦೦.

೪೮. ಅದೇ, ಪುಟ ೧೭೫.

೪೯. ಅದೇ, ಪುಟ ೨೦೯-೨೧೦.

೫೦. ಅದೇ, ಪುಟ ೨೦೯.

೫೧. ಶ್ರೀ ಗುರುಮಹಿಪತಿಸುತ ಶ್ರೀ ಕೃಷ್ಣರಾಯರಿಂದ ವಿರಚಿತ ವಿರಹ ಬಿನ್ನಹ ಅರ್ಥ ಬೆಡಗಿನ ಹಾಗೂ ಇತರ ಪದಗಳು, (ಸಂ) ಶ್ರೀದೇವಪ್ಪಯ್ಯಾ ಕಾಖಂಡಕಿ, ಶ್ರೀಗುರುಮಹಿಪತಿ ದಾಸಸಾಹಿತ್ಯ ಪ್ರಚಾರ ಸಮಿತಿ ಕಾಖಂಡಕಿ, ೧೯೯೦, ಪುಟ ೨೧-೨೨.

೫೨. ಅದೇ, ಪುಟ ೨೪-೨೫

೫೩. ಸಮಗ್ರ ದಾಸಸಾಹಿತ್ಯ ಸಂಪುಟ-೧೧, ಭಾಗ-೧, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು, (ಸಂ) ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪುಟ ೧೧೪-೧೧೫

೫೪. ಅದೇ, ಪುಟ ೨೧೭.

೫೫. ಅದೇ, ಪುಟ ೧೫೯.

೫೬. ಅದೇ, ಪುಟ ೯೮.

೫೭. ಅದೇ, ಪುಟ ೯೯.

೫೮. ಅದೇ, ಪುಟ ೨೧೧.

೫೯. ಅದೇ, ಪುಟ ೨೪೫.

೬೦. ಅದೇ, ಪುಟ ೨೧೪-೨೧೫.

೬೧. ಅದೇ, ಸಂಪುಟ-೧೧, ಭಾಗ–೨, ಪುಟ ೮೮-೮೯.

೬೨. ಅದೇ, ಸಂಪುಟ-೧೧, ಭಾಗ–೨, ಪುಟ ೧೬೫.

೬೩. ಅದೇ, ಪುಟ ೯೨.

೬೪. ಅದೇ, ಪುಟ ೯೩.

೬೫. ಅದೇ, ಪುಟ ೨೫-೨೬.

೬೬. ಅದೇ, ಪುಟ ೧೮.

೬೭. ಅದೇ, ಪುಟ ೪.

೬೮. ಅದೇ, ಪುಟ ೧೫೯.

೬೯. ಅದೇ, ಪುಟ ೧೬೦.

೭೦. ಅದೇ, ಪುಟ ೧೬೧.

೭೧. ಅದೇ, ಪುಟ ೧೨೬.

೭೨. ಅದೇ, ಪುಟ ೧೨೭.

೭೩. ಅದೇ, ಪುಟ ೧೩೧.

೭೪. ಅದೇ, ಪುಟ ೧೧೮-೧೧೯.

೭೫. ಅದೇ, ಸಂಪುಟ–೧೧, ಭಾಗ–೧, ಪುಟ ೧೯೦.

ಅಧ್ಯಾಯ ಐದು

ಕೃಷ್ಣದಾಸರ ಖಂಡಕಾವ್ಯಗಳು: ವಿಶ್ಲೇಷಣೆ

ಅಧ್ಯಾಯ ಐದು

ಕೃಷ್ಣದಾಸರ ಖಂಡಕಾವ್ಯಗಳು: ವಿಶ್ಲೇಷಣೆ

ಮಹಾಕಾವ್ಯಕ್ಕಿಂತಲೂ ಕಡಿಮೆ ಸರ್ಗಗಳುಳ್ಳ ಕಾವ್ಯ ಅಥವಾ ಚಿಕ್ಕಕಾವ್ಯ ಖಂಡಕಾವ್ಯವಾಗಿದೆ. ಕಂಠಸ್ಥವಾಗಿ ಉಳಿದು ಬಂದ ಭಾವಗೀತೆಗಿಂತ ವಿಸ್ತೃತವಾದ ಕಥನಕವನಗಳನ್ನು 'ಲಾವಣಿ' ಎಂದು ಕರೆಯುತ್ತಾರೆ. ಆದರೆ ಲಾವಣಿಗಿಂತಲೂ ವಿಶಿಷ್ಟವಾಗಿ ಸುದೀರ್ಘ ಕಥನವನ್ನು ಒಳಗೊಂಡ ಖಂಡಕಾವ್ಯವನ್ನು ಕುರಿತು ಹೆಚ್ಚಿನ ಅಧ್ಯಯನಗಳು ನಡೆಯಬೇಕಾಗಿದೆ. ಲಾವಣಿ ಮತ್ತು ನೀಳ್ಗವನ ಖಂಡಕಾವ್ಯಕ್ಕಿಂತಲೂ ಚಿಕ್ಕವುಗಳಾಗಿವೆ. ಲಾವಣಿಯ ಕಥಾಸಂವಿಧಾನ ಸರಳ ಮತ್ತು ನೇರವಾಗಿದ್ದು, ಪಾತ್ರಗಳ ಸಂಖ್ಯೆ ಹೆಚ್ಚಿಲ್ಲದೆ ನಾಲ್ಕಾರು ಗಂಟೆಗಳ ಕಾಲ ಹಾಡುವಷ್ಟು ದೀರ್ಘವಾಗಿರುತ್ತವೆ. ಖಂಡಕಾವ್ಯವನ್ನು ವಿಶೇಷವಾಗಿ ಹಬ್ಬಹರಿದಿನದ ಸಂದರ್ಭದಲ್ಲಿ ಹಾಡುತ್ತಾರೆ. ದೇವರ ವಿವಿಧ ಲೀಲೆಯನ್ನು ಅದ್ಭುತವಾಗಿ ವೀರ, ರೌದ್ರ, ಕರುಣ ಮುಂತಾದ ರಸಗಳಿಂದ ಅಭಿವ್ಯಕ್ತಿಸುತ್ತಾರೆ. ಆಖ್ಯಾನ ಮತ್ತು ಉಪ ಆಖ್ಯಾನಗಳಿಂದ ರೋಮಾಂಚನ ಕಾರಿಯಾದ ದೀರ್ಘವಾದ ಕಥನ ರಚನೆಯನ್ನು ಖಂಡಕಾವ್ಯವು ಒಳಗೊಂಡಿರುತ್ತದೆ. ಖಂಡಕಾವ್ಯಗಳು ಸಾಮಾನ್ಯವಾಗಿ ಸಹೃದಯರಿಗೆ ನೀತಿಬೋಧೆ, ಧರ್ಮಬೋಧೆ, ತತ್ವಬೋಧೆಯನ್ನು ಸೊಗಸಾಗಿ ತಿಳಿಯಪಡಿಸುತ್ತವೆ. ಇಂತಹ ಅಂಶಗಳು ಕಥೆಯ ಚಮತ್ಕಾರವನ್ನು ಹೆಚ್ಚಿಸುತ್ತವೆ. ಹರಿದಾಸ ಸಂಪ್ರದಾಯದಲ್ಲಿ ಅನೇಕ ಹರಿದಾಸರು ಇಂತಹ ವಿಶಿಷ್ಟವಾದ ಕಾವ್ಯಮಾರ್ಗವನ್ನು ಸೃಷ್ಟಿಸಿಕೊಂಡಿದ್ದಾರೆ. ಕನಕದಾಸರು, ಶ್ರೀಪಾದರಾಯರು, ವಾದಿರಾಜರು ಮೊದಲಾದವರು ಈ ಬಗೆಯ ಸಾಹಿತ್ಯವನ್ನು ನಿರ್ಮಿಸಿದ್ದಾರೆ. ಈ ಪರಂಪರೆಯನ್ನೇ ಕಾಖಂಡಕಿ ಕೃಷ್ಣದಾಸರು ಸಹ ಮುಂದುವರಿಸಿದ್ದಾರೆ.

ಖಂಡಕಾವ್ಯದಲ್ಲಿ ಶಿಷ್ಟಪರಂಪರೆಯ ಕಾವ್ಯಗಳಂತೆ ಪೀಠಿಕಾ ಭಾಗದಲ್ಲಿ ಮಂಗಳಾಚರಣ, ದೈವಗಳ ಸ್ಮರಣೆ, ಸ್ತೋತ್ರ ಮುಂತಾದವುಗಳು ಕಂಡುಬರುತ್ತವೆ. ಕಾವ್ಯದ ಶರೀರದಲ್ಲಿ ವಿವಿಧ ರಾಗಗಳ ಸಂಯೋಜನೆ, ತಾಳಗಳ ಬದಲಾವಣೆ, ಮಧ್ಯೆ ಮಧ್ಯೆ ಸಭಿಕರಿಗೆ ನಿರಾಸಕ್ತಿ ಉಂಟಾಗದಂತೆ ವಿವಿಧ ಶ್ಲೋಕಗಳನ್ನು ಒಳಗೊಂಡಿರುತ್ತವೆ. ಹೀಗೆ ಮುಕ್ತಾಯದವರೆಗೆ ಒಂದು ಕ್ರಮಬದ್ಧತೆಯಲ್ಲಿ ಖಂಡಕಾವ್ಯಗಳು ಸಾಗುತ್ತವೆ. ಕವಿಯ ಕಾವ್ಯನಾಮ, ಹಾಡಿದವರ ಹೆಸರು, ಕುಲ ಹೀಗೆ

ಕಾವ್ಯಗಳಲ್ಲಿ ಚಾರಿತ್ರಿಕವಾದ ಅಂಶಗಳು ಗೋಚರಿಸುತ್ತವೆ. ಕಾವ್ಯವನ್ನು ಕೇಳುಗನಿಗೆ ಮತ್ತು ಕಾವ್ಯವನ್ನು ಪಾರಾಯಣ ಮಾಡುವವನಿಗೆ ದೊರೆಯುವ ಪುಣ್ಯ ಫಲಗಳನ್ನು ಆರಂಭದಲ್ಲಿ ಅಥವಾ ಮುಕ್ತಾಯದಲ್ಲಿ ಕೊಟ್ಟಿರುತ್ತಾರೆ. ಕಾವ್ಯವನ್ನು ನಿರ್ಲಕ್ಷಿಸುವವರಿಗೆ ಇದರಿಂದ ಆಗುವ ಹಾನಿಯನ್ನು ನೀಡಿ, ಅವರನ್ನು ಅಧ್ಯಾತ್ಮದತ್ತ ಸೆಳೆಯುವ ಎಚ್ಚರದ ಮಾರ್ಗವು ಕಾವ್ಯಗಳಲ್ಲಿರುತ್ತದೆ.

ಲಾವಣಿ ಸಾಹಿತ್ಯ ಹಾಡುವವರಿಗೆ ಮತ್ತು ದಾಸರ ಕಾವ್ಯವನ್ನು ಹಾಡುವವರಿಗೆ ಅಂತಹ ವ್ಯತ್ಯಾಸ ಕಂಡುಬರುವುದಿಲ್ಲ. ಆದರೆ ಲಾವಣಿ ಸಾಹಿತ್ಯ ಹೆಚ್ಚಾಗಿ ಲೌಕಿಕವಾದ ಅಂಶವನ್ನು ಬಿತ್ತರಿಸುತ್ತದೆ. ದಾಸರ ಕಾವ್ಯಗಳು ಅಲೌಕಿಕದ ಕಡೆಗೆ ವಾಲುತ್ತವೆ. ಎರಡು ಸಾಹಿತ್ಯದ ಉದ್ದೇಶ ಕಥೆಯನ್ನು ಹೇಳುವುದಾಗಿದೆ. ಪುಣ್ಯಕಥೆಯ ಧಾರ್ಮಿಕ ಚೌಕಟ್ಟಿಗೂ ಮತ್ತು ಲೌಕಿಕ ಕಥೆಯ ಚೌಕಟ್ಟಿಗೂ ಅದರದೇ ಆದ ಮಾನದಂಡಗಳಿವೆ. ಈ ದೃಷ್ಟಿಯಿಂದ ದಾಸರ ಕಾವ್ಯಗಳು ಲಾವಣಿ ಸಾಹಿತ್ಯಕ್ಕಿಂತಲೂ ಬೇರೆಯಾಗಿ ನಿಲ್ಲುತ್ತವೆ. ಧಾರ್ಮಿಕ ಪರಿಸರದ ಆವರಣದಲ್ಲಿ ಸಾಹಿತ್ಯ ಅನಾವರಣಗೊಳ್ಳುತ್ತದೆ. ದೇವರ ಮೇಲಿನ ಭಕ್ತಿ, ಶ್ರದ್ಧೆ, ನಿಷ್ಠೆ ಇಲ್ಲಿ ಮುಖ್ಯವಾಗಿರುತ್ತದೆ. ಕೇವಲ ಮನರಂಜನೆಯ ಸಂಗೀತವಾಗಿ ಸಾಹಿತ್ಯ ಮುಂದುವರಿಯದೆ, ಧರ್ಮದ ತಾತ್ವಿಕತೆಯನ್ನು ಬೋಧಿಸುವ ನಿಟ್ಟಿನಲ್ಲಿ ಇಂತಹ ಕಾವ್ಯಗಳು ರಚನೆಯಾಗಿವೆ. ಕೃಷ್ಣದಾಸರ ಖಂಡಕಾವ್ಯಗಳು ಈ ಮೇಲಿನ ಅಂಶಗಳನ್ನು ಒಳಗೊಂಡಿರುವಂತವುಗಳು. ಅವುಗಳ ವಿಶ್ಲೇಷಣೆಯನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

೧. ಸುಂದರಕಾಂಡ

ಕೃಷ್ಣದಾಸರ ಖಂಡಕಾವ್ಯಗಳಲ್ಲಿ ಪ್ರಮುಖವಾದ ಕಾವ್ಯ ಸುಂದರಕಾಂಡ. ಸುಂದರಕಾಂಡ ಕಥೆಯು ೨೦ ಪದ್ಯಗಳಲ್ಲಿ ೧೨೬ ನುಡಿಗಳಲ್ಲಿ ರಚಿತಗೊಂಡಿದೆ. ಮದ್ವಾಲ್ಮೀಕಿ ರಾಮಾಯಣದ ಸುಂದರಕಾಂಡವನ್ನು ಕೃಷ್ಣದಾಸರು ಸಂಕ್ಷಿಪ್ತ ರೂಪದಲ್ಲಿ ಚಿತ್ರಿಸಿದ್ದಾರೆ. ಮೂಲ ಕಥಾಸಿದ್ಧಾಂತಕ್ಕೆ ವ್ಯತ್ಯಾಸ ಬಾರದಂತೆ ಘಟನೆಗಳನ್ನು ವಿಭಿನ್ನ ರೀತಿಯಲ್ಲಿ ಹೇಳಿರುವುದರಿಂದ ಪಂಡಿತರಿಗಷ್ಟೇ ಅಲ್ಲದೆ, ಪಾಮರರಿಗೂ ರುಚಿಸುವ ಹಾಗೆ ಕಥೆಯನ್ನು ನಿರೂಪಿಸಿದ್ದಾರೆ. ಸುಂದರಕಾಂಡ ಕಾವ್ಯದ ಉದ್ದಕ್ಕೂ ಹನುಮಂತನ ಜೀವನದ ಮಹತ್ವದ ಪ್ರಸಂಗಗಳು ಕಂಡುಬರುತ್ತವೆ. ಹನುಮಂತನನ್ನು ಆಶ್ರಯಿಸಿದ ಇತರ ಕಪಿಗಳು ಸಹ ಶ್ರೀರಾಮನ ಅನುಗ್ರಹಕ್ಕೆ ಪಾತ್ರರಾಗುವ ಸಂಗತಿಯನ್ನು ಕಾವ್ಯವು ಚಿತ್ರಿಸಿದೆ. ಕಾವ್ಯದ ನಾಯಕ ಹನುಮಂತ ಅವನು ಲಂಕಾನಗರವನ್ನು ಪ್ರವೇಶ ಮಾಡುವ ಪೂರ್ವದಿಂದ ಹಿಡಿದು, ಸೀತೆಯನ್ನು ಕಂಡು ಅವಳಿಗೆ ರಾಮನು ನೀಡಿದ ಗುರುತಿನ ಉಂಗುರವನ್ನು ನೀಡುತ್ತಾನೆ. ಅವಳಿಂದ ಮರಳಿ ಆಭರಣದ ಗುರುತನ್ನು ತರುವವರೆಗಿನ ಕಥೆಯನ್ನು ಈ ಕಾವ್ಯ ಕಟ್ಟಿಕೊಡುತ್ತದೆ. ಹೀಗಾಗಿ ಇಲ್ಲಿಯ ಪ್ರಸಂಗಗಳು ಸಾಧನಮಾರ್ಗದ ಮುಖ್ಯ ತತ್ವಗಳಿಗೆ ಪ್ರತಿಸ್ಪಂದಿಸುವಂತಿವೆ. ತತ್ವಜ್ಞಾನ ಬೋಧಕರಾದ ಕೃಷ್ಣದಾಸರು ತಮ್ಮ ಅಪಾರವಾದ ಪ್ರತಿಭೆಯ ಮೂಲಕ ಕಾವ್ಯವನ್ನು ಹೆಣೆದಿದ್ದಾರೆ.

ಕಾವ್ಯದ ಆರಂಭವು ಮಂಗಳಾಚರಣದಿಂದ ಕೂಡಿದ್ದು, ಕೃಷ್ಣದಾಸರು ಈ ರೀತಿಯಲ್ಲಿ ಪ್ರಾರಂಭಿಸಿದ್ದಾರೆ.

''ಛಂದದಮೃತ ಶಾರದೆ ವಾಣಿ |
ವಂದಿತಾಖಿಳ ನಿರ್ಜರ ವಾಣಿ |
ಬಂದು ಸನ್ಮತಿ ನೀಡುತ ಶಾರದಾ |
ಇಂದುವದನೆ ರಕ್ಷಿಸು ಶಾರದಾ''[೧]

ಎಂದು ಸರಸ್ವತಿ ದೇವಿಯ ಸ್ತುತಿಮಾಡಿ, ಶ್ರೀರಾಮನನ್ನು ಸ್ಮರಿಸುತ್ತಾರೆ. ಶ್ರೀಹನುಮಂತನನ್ನು ನೆನೆದು ಸುಂದರಕಾಂಡ ಕಾವ್ಯವನ್ನು ಪ್ರಾರಂಭಿಸಿದ್ದಾರೆ. ಕೃಷ್ಣದಾಸರು ಮದ್ವಾಲ್ಮೀಕಿ ರಾಮಾಯಣವನ್ನೇ ಆಧಾರವಾಗಿಟ್ಟುಕೊಂಡವರು. ಆದರೆ ಜನಸಾಮಾನ್ಯರಿಗೆ ರುಚಿಸುವ ಹಾಗೆ ಸರಳತೆಯ ಮೂಲಕ ತತ್ವಬೋಧೆಯನ್ನು ಅನಾವರಣಗೊಳಿಸಿದ್ದಾರೆ. ಸುಂದರಕಾಂಡವು ಜನಸಾಮಾನ್ಯರ ಶ್ರೇಷ್ಠ ಸೊಬಗಿನ ಕಾವ್ಯವಾಗಿ ಮೂಡಿಬರುವಂತೆ ಮಾಡಿದ್ದಾರೆ. ಶ್ರೀರಾಮನ ಚರಿತವ ಕೇಳಿ ಹರುಷದಲ್ಲಿ ಬಾಳಿ ಎಂದು ಹೇಳುತ್ತಾ ಕಥೆಯ ಹಂದರಕ್ಕೆ ಪ್ರವೇಶ ಮಾಡಿದ್ದಾರೆ.

ಹನುಮಂತನ ನಾಡು ಕಿಷ್ಕಿಂದೆ. ಶ್ರೀರಾಮನು ಅಗಲಿದ ಸೀತೆಯನ್ನು ಹುಡುಕುತ್ತ ಆ ಪ್ರದೇಶಕ್ಕೆ ಆಗಮಿಸುತ್ತಾನೆ. ಸುಗ್ರೀವರಾಜನು ಅವರನ್ನು ಆದರದಿಂದ ಬರಮಾಡಿಕೊಳ್ಳುತ್ತಾನೆ. ಆಗ ಶ್ರೀರಾಮನು ಕಪಿಗಳಿಗೆ ಸೀತೆಯ ಅಪಹರಣದ ಸುದ್ದಿಯನ್ನು ಹೇಳುತ್ತಾನೆ. ತದನಂತರ ಶ್ರೀರಾಮನು ಹನುಮಂತನನ್ನು ಪ್ರತ್ಯೇಕವಾಗಿ ಕರೆದು ಅವನಿಗೆ ಗುರುತಿನ(ಖೂನ) ಮುದ್ರಿಕೆಯನ್ನು ಕೊಟ್ಟು ಸೀತೆಯ ಸಂದೇಶವನ್ನು ತರಲು ಹೇಳುತ್ತಾನೆ. ಆಗ ಹನುಮಂತನು ದಕ್ಷಿಣಕ್ಕೆ ಸಾಗಿ ಸಮುದ್ರೋಲ್ಲಂಘನ ಮಾಡಲು ಅಣಿಯಾಗುತ್ತಾನೆ. ಒಳ್ಳೆಯ ಕೆಲಸಕ್ಕೆ ನೂರಾರು ಕಷ್ಟಗಳು ಎನ್ನುವಂತೆ ಹನುಮಂತನು ಸಮುದ್ರ ದಾಟುವ ಕಾರ್ಯದಲ್ಲಿ ಕಷ್ಟಗಳು ಎದುರಾಗುತ್ತವೆ. ಸುರಪತಿಯಾದ ಇಂದ್ರನು ಹನುಮಂತನ ವೀರತ್ವವನ್ನು ಪರೀಕ್ಷಿಸಲು ಒಬ್ಬ ಅಸುರೆಯನ್ನು ದಾರಿ ಕಟ್ಟಲು ಕಳುಹಿಸುತ್ತಾನೆ. ಅವಳ ಹೆಸರು ಸುರಸೆ. ಹನುಮಂತನಿಗಿಂತಲೂ ಅಧಿಕ ಆಕಾರ ಬೆಳೆಸುತ್ತಾಳೆ. ಆಗ ಹನುಮಂತನು ಸುರಸೆಯ ಮುಖದಲ್ಲಿ ಪ್ರವೇಶಿಸಿ ಅವಳ ಎದೆಯನ್ನು ಸೀಳಿ ಹೊರಬರುತ್ತಾನೆ. ಮೈನಾಕ ಪರ್ವತವನ್ನು ತುಳಿದು ಸಮುದ್ರಕ್ಕೆ ಒತ್ತಿ ಮುಂದೆ ಸಾಗುತ್ತಾನೆ. ನೆಳಲನ್ನು ಹಿಡಿದೆಳೆದು ಪಶುಪಕ್ಷಿಗಳನ್ನು ಭಕ್ಷಿಸುವ ಸಿಂಹಿಕೆಯನ್ನು ಸಂಹರಿಸಿ ಸಮಯಸ್ಫೂರ್ತಿ, ವಿವೇಕ ಪ್ರಜ್ಞೆಯನ್ನು ಬಿತ್ತರಿಸುತ್ತಾನೆ. ತೃಣಬಿಂದು ಮುನಿಯಿಂದ ಮಾರ್ಗದರ್ಶನವನ್ನು ಪಡೆದು ಲಂಕಾಪುರವನ್ನು ಪ್ರವೇಶಿಸುತ್ತಾನೆ. ಆ ಲಂಕಾಪುರದ ವರ್ಣನೆಯನ್ನು ಹರಿದಾಸ ಕೃಷ್ಣದಾಸರು ಸ್ವಾರಸ್ಯಕರವಾಗಿ ಈ ರೀತಿಯಲ್ಲಿ ವರ್ಣಿಸುತ್ತಾರೆ.

''ಅಣುರೂಪದಲಿ ಪೊಕ್ಕು ಹನುಮಾ ಲಂಕೆಯ ಚಲುವಿಕೆಯನು |
ಮಣಿ ಸ್ವರ್ಣಾಂಕಿತವಾದ ಬಾಗಿಲುಗಳಿಂ ದೊಪ್ಪೊದ ಮಂದಿರವನು ||
ಹಣಿದಾಛತ್ತರಡಕ್ಕೆ ಚಾಮರದಲಿ ಪ್ರಸಾದ ಗೋಪುರವನು |
ಎಣೆಗಾಣದಿಹ ರಾಕ್ಷಸರ ಸಿರಿಗೆ ತಲೆದೂಗುತಲಿ ನಡೆದನು

ಮನೆ ಮನೆ ಅಗ್ನಿ ಹೋತ್ರದಲಿರುವಾ ನನದಲಿ ವೇದ ಘೋಷಗಳು |
ಅನುದಿನ ಮಧ್ಯ ಸುರಾಪಾನದಲಿಂ ದನುಚಿತ ಸೇವಿಪ ಖಾದ್ಯಗಳು ||
ಘನಶಾಸ್ತ್ರದ ಚರ್ಚೆಗಳು ಮಾಡುತ ನೆನೆವ ಶಿವೋಹಂ ವಚನಗಳು''[೨]

ಇಡೀ ಲಂಕಾಪುರದಲ್ಲಿಯ ಅಧರ್ಮ ಗೋಚರವಾಗುತ್ತದೆ. ವಿಭೀಷಣನಂತಹ ಬ್ರಹ್ಮಜ್ಞಾನಿಗಳು ಲಂಕಾಪುರದಲ್ಲಿದ್ದರೂ ಸಹ ಇಂತಹ ವಿಚಿತ್ರವಾದ ಜನವಸತಿಯನ್ನು ನೋಡಿ ಹನುಮಂತ ನಗುತ್ತಾನೆ. ತಾನು ಸಹಜವಾಗಿ ಕಪಿಚೇಷ್ಟೆಗಳನ್ನು ಮಾಡುತ್ತಾನೆ. ಆನೆಗಳ ಬಾಲವನ್ನು ಹಿಡಿದು ಹಿಂದಕ್ಕೆ ಎಳೆಯುತ್ತಾನೆ. ಕುದುರೆಗಳನ್ನು ವಿಚಿತ್ರ ರೀತಿಯಲ್ಲಿ ಸವಾರಿ ಮಾಡುತ್ತಾನೆ. ಇದನ್ನು ನೋಡಿದ ಅಲ್ಲಿಯ ಜನರು ಇದು ದೈವಕ್ಷೋಭವೋಃ ರಾವಣಾಸುರನ ಪುಣ್ಯ ತೀರಿತು ಎಂದು ಅಂದುಕೊಳ್ಳುತ್ತಾರೆ. ಹನುಮಂತನ ಕಪಿಚೇಷ್ಟೆ ಇಷ್ಟಕ್ಕೆ ನಿಲ್ಲದೆ ರಾಜಭಂಡಾರದಲ್ಲಿ ಇರುವ ಧನ, ಕನಕ ಭೂಷಣಗಳನ್ನೆಲ್ಲ ಎಳೆದು ಬೀದಿಗೆ ಹಾಕುತ್ತಾನೆ. ಸೀತೆಯ ಸುದ್ದಿಯನ್ನು ತಿಳಿಯುವ ಸಲುವಾಗಿ ಉಪಾಯದಿಂದ ಹೊಳೆಯ ದಂಡೆಯಲ್ಲಿ ಕುಳಿತುಕೊಳ್ಳುತ್ತಾನೆ. ಸಹಜ ಚೇಷ್ಟೆಗಳನ್ನು ಮುಂದುವರಿಸಿ ಬಾಲದ ಸಹಾಯದಿಂದ ಹೆಂಗಳೆಯರು ಹೊತ್ತಿರುವ ಕೊಡಗಳನ್ನು ಕೆಡುವುತ್ತಾನೆ. ಭಯದಿಂದ ಹೆಂಗಳೆಯರು ಓಡಾಡುತ್ತಾರೆ. ರಾವಣನು ಸೀತೆಯನ್ನು ಅಶೋಕವನದಲ್ಲಿ ಇಟ್ಟಿರುವುದರಿಂದ ಶಿವನು ಕೋಪಿಸಿಕೊಂಡುದರ ಫಲವಿದು ಎಂದು ನುಡಿಯುತ್ತಾರೆ. ತಾನು ಬಯಸಿದ ಸುದ್ದಿ ಆ ಹೆಂಗಳೆಯರಿಂದ ತಿಳಿದ ಹನುಮಂತನು ರಾವಣನ ಸಭಾಮಂಟಪಕ್ಕೆ ಆಗಮಿಸುತ್ತಾನೆ.

''ದುರುಳನು ಕೂತಿಹ ಸಭೆಗಾಗಿ
ಕಂಭ ತೊಲಿಯು ಗೋಡೆಗಳೆಲ್ಲವೂ |
ರತ್ನಾಂಬುಧಿಯದಂದಿ ತೋರುತಲಿ |
ಎಂಭತ್ತು ನಾಲ್ಕುಗಾವುದ ಮಂಟಪ |
ತುಂಬಿದ ಮಾನ್ಯರ ಸಭೆ ಕಂಡಾ

ಎಡ ಬಲ ಕನ್ಯರು ಚಮರವಟಿಸುವ |
ಗಡಣದಿ ಸಿಂಹಾಸನ ಮ್ಯಾಲ |
ಸಡಗರದಲಿ ಕುಳಿತಿದ್ದದ ಶಾಸನ |
ಹಿಡಿದ ಕೈ ದೀಪಾಕ ಯಣಿ ಇಲ್ಲಾ

ಕಾಣುತ ರೋಷದಿ ಕೈ ದೀಪಗಳೆಲ್ಲಾ |
ತ್ರಾಣದಿ ಪಟಪಟ ನೋಂದಿಸುತಾ

ಪ್ರಾಣಿಗಳೆಲ್ಲರ ವಸ್ತ್ರಗ್ರಹಣ |
ಮೌನದಿ ಮಾಡಿದ ಬಾಲದಲಿ |

ಕತ್ತಲೆಯೊಳು ತಾ ರಾಕ್ಷಸರೆಲ್ಲರು |
ಬತ್ತಲೇ ಓಡ್ಯಾಡುತ ಲಿರಲಿ |
ಸತ್ವರ ಹೋಗುತ ಅರಸನ ಕಿವಿಯೊಳು |
ವತ್ತಿ ಕೂಗಿದ ಜಯರಾಮೆಂದು ||

ಗುದ್ದಿದ ಹೆಗಲಲಿ ಸಿಂಹಾಸನದಿಂ |
ಬಿದ್ದಂರರಾವಣ ಬೆವರುತಲಿ''[೩]

ಪದ್ಯದ ಈ ಮೇಲಿನ ಸಾಲುಗಳು ಇಡೀ ಲಂಕಾಪುರದಲ್ಲಿಯ ಘಟನೆಯನ್ನು ವಿಶಿಷ್ಟ ರೀತಿಯಲ್ಲಿ ಬಣ್ಣಿಸುತ್ತವೆ. ಕೃಷ್ಣದಾಸರ ಕವಿತ್ವಕ್ಕೆ ಈ ಕಾವ್ಯ ಮೆರುಗನ್ನುಂಟುಮಾಡಿದೆ. ರತ್ನ ಖಚಿತವಾದ ಕಂಬ, ತೊಲೆಗೋಡೆಗಳಿಂದ ಅಲಂಕಾರಯುತವಾಗಿ ಆ ರಾಜಮಂಟಪವು ರತ್ನಾಂಬುಧಿಯಂತೆ ತೋರಿತು. ಎನ್ನುವಲ್ಲಿ ರಾವಣನ ಅರಮನೆಯ ಸಿರಿ ವೈಭವ ಎದ್ದುಕಾಣುತ್ತದೆ. ಎತ್ತರವಾದ ಸಿಂಹಾಸನದ ಮೇಲೆ ಅಲಂಕೃತಗೊಂಡ ರಾವಣನಿಗೆ ಎಡಬಲದಲ್ಲಿ ದೇವಕಣ್ಣಿಕೆಯರು ಚಾಮರವನ್ನು ಬೀಸುತ್ತಿದ್ದರು. ಹನುಮಂತ ರಾವಣನನ್ನು ರೋಷದಿಂದ ನೋಡುತ್ತಿರುವಾಗ ಕೈ ದೀಪಗಳು ಪಟಪಟನೆ ನಂದಿಹೋಗುತ್ತವೆ. ಹನುಮಂತ ತನ್ನ ಬಾಲದಿಂದ ಎಲ್ಲರ ವಸ್ತ್ರಗ್ರಹಣ ಮಾಡಲು ಅವರು ಬೆತ್ತಲೆಯಾಗಿ ಕತ್ತಲಲ್ಲಿ ಓಡಾಡಲಿಕ್ಕೆ ಪ್ರಾರಂಭಿಸುತ್ತಾರೆ. ಈ ಸಂಗತಿ ರಾವಣನಿಗೆ ತಿಳಿಯುವಷ್ಟರಲ್ಲಿ 'ಜಯರಾಮ' ಎಂದು ಗರ್ಜಿಸಿದ ಹನುಮಂತನಿಂದ ಗುದ್ದಿಸಿಕೊಂಡ ರಾವಣ ಸಿಂಹಾಸನದಿಂದ ಕೆಳಕ್ಕೆ ಉರುಳುತ್ತಾನೆ. ಆಗ ಹನುಮಂತನು ಹರುಷದಿಂದ ಹೊರಗೆ ಬರುತ್ತಾನೆ.

ಹನುಮಂತನು ಮಹಾಪರಾಕ್ರಮಿ, ಧೈರ್ಯವಂತ. ಕುಂಭಕರ್ಣನ ಮನೆಗೆ ಪ್ರವೇಶ ಮಾಡಿದ ಸಂಗತಿಯನ್ನು ಕೃಷ್ಣದಾಸರು ಉದಾತ್ತವಾಗಿ ಬಿಂಬಿಸಿದ್ದಾರೆ.

''ಐಗಾವದ ಮನೆಯು ಎರಡುಗಾವುದ ಮಂಚ |
ಮ್ಯಾಗ ಮಲಗಿದ್ಭವ ನೀಲಾದ್ರಿಯಂತೆ ||
ಮೈಗೆ ತಲೆದೂಗುತ ಬಾಗಿ ನೋಡುಲಿರಲಿ |
ಮೂಗಿನ ಉಸುರಿಗೆ ಸಿಕ್ಕಿ ಹೋದನು ಹನುಮಾ

ಉಸುರಿನ ಯಡಯಾಟದಲಿ ಸಂಕಟ ಬಿಡುತಾ |
ಎಸೆವ ಭ್ರೂಮಧ್ಯವನು ಚಿವುಟಿದನು ||

ಅಸುರಸೀತ ಝಾಡಿಸಿ ಸಿಡಿದ ಬೀಳುತಲೆದ್ದು |
ಅಸಮ ರಾವಣನ ಮಲಗುವ ಮನಿ ಹೊಕ್ಕನು"

ಹನುಮಂತನು ಕುಂಭಕರ್ಣನ ದೈತ್ಯ ದೇಹ ವೀಕ್ಷಿಸಿ ನಿದ್ರಾಭಂಗ ಮಾಡಿಬಂದ ಪ್ರಸಂಗ ಮೂಲ ರಾಮಾಯಣದ ಸುಂದರಕಾಂಡಕ್ಕಿಂತಲೂ ವಿಭಿನ್ನವಾಗಿ ಇಲ್ಲಿ ಕಾಣಿಸಿಕೊಂಡಿದೆ. ಮುಂದೆ ಹನುಮಂತ ರಾವಣನ ಶಯ್ಯಾಗಾರವನ್ನು ಸೇರುತ್ತಾನೆ. ಅಲ್ಲಿಯ ರಾವಣನ ಅಂತಃಪುರದ ಅಲಂಕಾರ ವರ್ಣನೆ ಕಣ್ಣಿಗೆ ಕಟ್ಟುವಂತೆ ಮೂಡಿಬಂದಿದೆ. ರಾವಣನ ಶಯ್ಯಾಗಾರದಲ್ಲಿ ರಾವಣನ ಮಗ್ಗುಲಲ್ಲಿ ಮಲಗಿರುವ ಸುಂದರಿಯನ್ನು ಕಂಡು ಹನುಮಂತನು ಉಗ್ರನಾಗುತ್ತಾನೆ. ಸೀತೆಯಾಗಿರಬಹುದೆಂದು ಸಂಶಯ ಪಡುತ್ತಾನೆ. ನಂತರ ಇದು ಸಾಧ್ಯವಿಲ್ಲವೆಂದು ಭಾವಿಸಿ ಸುಮ್ಮನಾಗುತ್ತಾನೆ. ನಂತರ ರಾವಣನ ಅಚ್ಚುಮೆಚ್ಚಿನ ಆಯುಧವಾದ ಚಂದ್ರಹಾಸ ಖಡ್ಗವನ್ನು ಕುತೂಹಲದಿಂದ ಎತ್ತಿ ನೋಡುತ್ತಾನೆ. ಮುಂದೆ ಅಲ್ಲಿಂದ ಸರಳ ಸಂಪನ್ನ ಸದ್ಗುಣನಾದ ಭಕ್ತ ವಿಭೀಷಣನ ಮನೆಗೆ ಸಾಗುತ್ತಾನೆ. ಹೀಗೆ ಪ್ರತಿ ವಿಧದಲ್ಲಿಯೂ ಹನುಮಂತ ರಾಮನ ಸೇವಕನಾಗಿ ಸೀತೆಯನ್ನು ಹುಡುಕುವ ಕಾರ್ಯ ತೀವ್ರಗತಿಯಿಂದ ಮುಂದುವರಿಸುತ್ತಾನೆ. ವೈಷ್ಣವ ಧರ್ಮದ ವಿಭೀಷಣನು ಶ್ರೇಷ್ಠ ಭಾಗವತ ಸಂಪ್ರದಾಯಸ್ಥ. ತಾಳ ತಂಬೂರಿಯೊಂದಿಗೆ ಹರಿಕಥೆಯನ್ನು ಹಾಡುತ್ತಿದ್ದನು. ಪೂರ್ವಜನ್ಮದ ಆತನ ವೃತ್ತಾಂತ ತಿಳಿದು ಸೀತೆಯನ್ನು ಪತ್ತೆ ಹಚ್ಚಲು ಹನುಮಂತ ಪ್ರಾರಂಭಿಸುತ್ತಾನೆ.

ಎಷ್ಟು ಹುಡುಕಿದರೂ ಸೀತೆಯು ಕಾಣದಂತಾಗಲು ಹನುಮಂತನು ತ್ರಿಕೂಟಾಚಲ ಸಹಿತ ಈ ಉಪವನವನ್ನು ತನ್ನ ಬಾಲದಿಂದ ಎತ್ತಿ ರಘುಪತಿಯ ಮುಂದೆ ಇಡುವೆನು ಎಂದು ನಿರ್ಧರಿಸುತ್ತಾನೆ. ಮೌನವಾಗಿ ಬಾಲವನ್ನು ಹರಿಬಿಡುತ್ತಾನೆ. ಇದನ್ನು ಅರಿತ ಮೂಲ ಮಾರುತಿಯು ಹನುಮಂತನಿಗೆ ಅಶೋಕವನದ ದಾರಿ ತೋರುತ್ತಾನೆ. ಅಶೋಕವನದಲ್ಲಿ ಒಂದು ಮರದ ಕೊಂಬೆಯನ್ನೇರಿ ಹನುಮಂತ ಇಂದುಮುಖಿಯಾದ ಸೀತೆಯನ್ನು ಸಂಭ್ರಮದಿಂದ ಕಾಣುತ್ತಾನೆ. ಆಗ ಸೂರ್ಯೋದಯವಾಗುತ್ತದೆ. ಅದೇ ಸಮಯದಲ್ಲಿ ರಾವಣನು ಅಲ್ಲಿಗೆ ವೈಭವದೊಡನೆ ಬಂದು ಸೀತೆಯೊಡನೆ ಸಂಯುಕ್ತಿಯ ಮಾತುಗಳನ್ನಾಡಲು ಹವಣಿಸುತ್ತಾನೆ. ಅದಕ್ಕೆ ಸೀತೆಯು ರಾವಣನನ್ನು ತೃಣಸಮಾನವೆಂದು ಬಗೆದು ಆತನ ಜೊತೆ ಮಾತನಾಡದೆ ಮೌನವಾಗುತ್ತಾಳೆ. ಅದೇ ವೇಳೆಗೆ ಮಂಡೋದರಿಯು ಅಲ್ಲಿಗೆ ಆಗಮಿಸಿ, ರಾವಣನಿಗೆ ಸೀತೆಯ ಕೂಡ ಸೆಣಸುವುದು ಉಚಿತವಲ್ಲ ಎಂದು ಬೇಡಿಕೊಂಡು ಅರಮನೆಯತ್ತ ಹೋಗುತ್ತಾರೆ.

ಶ್ರೀರಾಮನ ವಿರಹ ತಾಪದಿಂದ ಮತ್ತು ರಾವಣನ ಬಂಧನದಿಂದ ಸೀತೆಯು ಬಳಲುತ್ತಿರುತ್ತಾಳೆ. ಈ ಸಂದರ್ಭದಲ್ಲಿ ತ್ರಿಜಟೆಯೆಂಬ ರಾಕ್ಷಸಿಯು ಸೀತೆಯ ಬಳಿ ಬರುತ್ತಾಳೆ. ಸೀತೆಗೆ ಹನುಮಂತನಿಂದ ತಂದ ರಾಮಮುದ್ರಿಕೆಯ ವಿಷಯವನ್ನು ತಿಳಿಸಿ, ಅವಳ ಕೈಗೆ ಸೇರುವಂತೆ ಮಾಡುತ್ತಾಳೆ. ಹನುಮಂತನನ್ನು ಆದರದಿಂದ ಕರೆದು ಕ್ಷೇಮ ಸಮಾಚಾರವನ್ನು ಸೀತೆಯು ಕೇಳಿಕೊಳ್ಳುತ್ತಾಳೆ. ಆ ಬಳಿಕ ಸೀತೆಯು ರಾಮನ ಉಂಗುರವನ್ನು ತನ್ನ ಆಪ್ತ

ಗೆಳತಿಯೆಂದು ಬಗೆದು ಅದರೊಡನೆ ಸ್ನೇಹದಿಂದ ಮೌನವಾಗಿ ಸಂವಾದ ನಡೆಸುತ್ತಾಳೆ. ಈ ಸಂವಾದ ಸಂದರ್ಭವನ್ನು ಕೃಷ್ಣದಾಸರು ಬಹು ಸುಂದರವಾಗಿ ವರ್ಣಿಸಿದ್ದಾರೆ.

''ಮಾತನಾಡಲೆ ಜಾಣೇ ಮುದ್ರೇನೀ ಸುಜ್ಞಾನೆ |
ಭೂತಳದೊಳು ರಘು ನಾಥನಗಲಿ ಬಂದೀ |
ಏನು ಕಾರಣ ಹೇಳೇ ಸಖಿಯೇ || . . .
. . . .
ಎಡ ಭಾಗದಲಿ ನಾನು ಬಲ ಭಾಗದಲಿ ನೀನು |
ಬಿಡದಕ್ಕ ತಂಗೇರಾ ಸುಖಲಿದೆವು |
ಪಾಪಿ ತಂದನು ಎನಗ| ಸಖಿಯೇ''[೫]

ಎಂದು ಸೀತೆಯು ಆ ಉಂಗುರವನ್ನು ಉದ್ದೇಶಿಸಿ, ತನ್ನ ಪತಿ ಶ್ರೀರಾಮನ ಬರುವಿಕೆಗಾಗಿ ಕಾಯುತ್ತಾಳೆ. ರಾಮಲಕ್ಷ್ಮಣರು ತನ್ನನ್ನು ಈ ಬಂಧನದಿಂದ ಬಿಡಿಸಿಕೊಂಡು ಹೋಗದೆ ಯೋಗಸಮಾಧಿಯ ವ್ರತವನ್ನು ಹಿಡಿದಿದ್ದಾರೆಂಬ ಪ್ರಶ್ನೆಯನ್ನು ಕೇಳುತ್ತಾಳೆ.

''ಒಂದು ವಾನರ ಬರಲಿ |
ಲಂಕೆಯಾ ದಹಿಸಲಿ |
ಬಂದು ಕೊಡುವ ಸಂತಸ |
ಬಳಿಕ ಗಿರಿ ತೇಲಿಸಿ ಜಲಧಿಯಲಿ | ಸಖಿಯೇ ||
ಛಂದದಿ ದಳೆ ಸಹಿತಾ ಇಳಿದು ಈರ್ವರು ತ್ವರಿತಾ |
ನಿಂದು ರಾಕ್ಷಸರನು ಕೊಲ್ಲವರೆಂದು ಆಯಿತುನುಡಿ ವ್ಯಥಾ | ಸಖಿಯೇ''[೬]

ಎನ್ನುತ ವಾಲ್ಮೀಕಿಯ ನುಡಿ ಸುಳ್ಳಾಯಿತೆ? ನನಗೆ ಯಾವ ಗತಿ ಬಂದಿದೆ ಎಂದು ತನ್ನ ಹೃದಯದ ದುಃಖವನ್ನು ವ್ಯಕ್ತಪಡಿಸುವಾಗ ಹನುಮಂತ ಅವಳ ದರ್ಶನವನ್ನು ಪಡೆಯುತ್ತಾನೆ. ಹನುಮಂತನನ್ನು ಕುರಿತು ಆತನ ಹಿನ್ನೆಲೆ ಕುರಿತು ವಿಚಾರಿಸುತ್ತಾಳೆ.

''ಆವ ದೇಶದಿಂದ ಬಂದ್ಯೋ ವಾನರೇಶನೇ
ಆವ ಸ್ಥಳದಲ್ಲಿ ದೊರಕಿತೀ ಮುದ್ರೆಯು ||
ಆರ ಮಗನೋ ನಿನ್ನ ಹೆಸರವೇನೋ |
ಆರು ಕಳುಹಿದರೋ ನಿನ್ನನಿಲ್ಲಿಗೆ''[೭]

ಸೀತೆಯ ದುಃಖ ಇಲ್ಲಿ ಎದ್ದು ಕಾಣುತ್ತದೆ. ಮುಂದೆ ಕಾವ್ಯವು ಸಂವಾದ ರೂಪದಲ್ಲಿ ಮುಂದುವರಿಯುತ್ತದೆ. ರಾಮ ಮತ್ತು ಲಕ್ಷ್ಮಣರ ಕುರಿತು ಹಾಗೂ ರಾಮನು ನೀಡಿದ ಗುರುತಿನ ಉಂಗುರ ಕುರಿತು ಹನುಮಂತನು ವಿವರಿಸಿದ ರೀತಿ ಆಪ್ಯಾಯಮಾನವಾಗಿದೆ. ಎಲ್ಲಿಯೂ ಸುತ್ತು ಬಳಸಿಲ್ಲ. ನೇರ ಮತ್ತು ಸರಳ ರೀತಿಯಲ್ಲಿ ಕಥೆಯು ಮುಂದುವರಿಯುತ್ತದೆ.

‘‘ಮಾರುತ ನಂದನ ರಾಮಚಂದ್ರನ ದಾಸ |
ಕರೆವದೆನಗ ನಾಮ ಹನುಮನೆಂದು ||

ನಿಮ್ಮ ಸುದ್ದಿಯನೆಲೆ ತಿಳಿಯಲೆಂದು |
ಝುಮ್ಮನಟ್ಟಿದ ನೆನ್ನಾ ರಘುನಾಥನು ||

ತಮ್ಮ ಖೂನಗೋಸುಗ ಮುದ್ರಿಕೊಟ್ಟನು |
ನಿಮ್ಮ ಕುರುಹು ಕೊಟ್ಟರೆ ಕೊಂಡೊಯ್ವೆನೆಂದು’’[೮]

ಈ ರೀತಿಯಲ್ಲಿ ಹನುಮಂತನು ಉತ್ತರಿಸುತ್ತಾನೆ. ಅನಂತರ ಮತ್ತೆ ಸೀತೆಯನ್ನು ಕುರಿತು

‘‘ಜನನಿಗೆಂದನು ಹಸಿದಿಹೆ ಜನನಿ ||
ಅನುಜ್ಞ ವಾದರೀಗ ವನಫಲವಾ |
ದಣುವಾಹಿಂಗುವ ಪರಿ ಮೆಲುವೆನೆಂದು’’[೯]

ಎಂದು ಹೇಳುವಲ್ಲಿ ಹನುಮಂತನ ಭಕ್ತಿ ಎದ್ದುಕಾಣುತ್ತದೆ. ಮುಂದೆ ಸೀತೆಗೆ ತನ್ನ ಸಿದ್ಧಿಯನ್ನು ತೋರಿಸಿ ಅಶೋಕವನವನ್ನು ಹೋಗುತ್ತಾನೆ. ಹನುಮಂತ ಬರುವ ರಭಸಕ್ಕೆ ಆ ಅಶೋಕವನದಲ್ಲಿ ಬಿರುಗಾಳಿ ಬೀಸಿದಂತಾಗುತ್ತದೆ. ಗಿಡಮರಗಳು ಅಲುಗಾಡುತ್ತವೆ. ತನ್ನ ಬಾಲದಿಂದ ಹನುಮಂತ ಗಿಡಗಳನ್ನು ಜಾಡಿಸಿ ಹಣ್ಣುಗಳನ್ನು ಉದುರಿಸುತ್ತಾನೆ. ಮರಗಳನ್ನು ಉರುಳಿಸುತ್ತಾನೆ. ಇದರಿಂದ ಗಾಬರಿಗೊಂಡ ರಾಕ್ಷಸರು ಕೋಡಗ ವನ ಕೆಡಿಸಿತು ನೋಡಿರೊ, ಹಿಡಿಯಿರಿ, ಹೊಡೆಯಿರಿ, ಕೊಲ್ಲಿರಿ ಎಂದು ಹೇಳುತ್ತಾ ಹನುಮಂತನನ್ನು ಹಿಂಬಾಲಿಸುತ್ತಾರೆ. ಆಗ ಹನುಮಂತನು ಐವತ್ತು ಸಾವಿರ ರಾಕ್ಷಸರನ್ನು ಒಂದೇ ಸೂಡಿನಲ್ಲಿ ಕಟ್ಟಿ ಸಾಗರದ ಮಧ್ಯದಲ್ಲಿ ಹಾಕುತ್ತಾನೆ. ಇದನ್ನಾಲಿಸಿದ ಅಕ್ಷಯ ಕುಮಾರನು ಅಲ್ಲಿಗೆ ಬರುತ್ತಾನೆ. ಅವನ ಸೈನ್ಯವನ್ನು ಕಾಲಲ್ಲಿ ಮೆಟ್ಟಿ ಸವರುತ್ತಾನೆ. ಈ ಸುದ್ದಿ ತಿಳಿದ ರಾವಣನ ಸಭೆಯಲ್ಲಿ ಕೋಲಾಹಲ ಉಂಟಾಗುತ್ತದೆ.

ಇಂದ್ರಜಿತ ರಥವನ್ನೇರಿ ಹನುಮಂತನ ಎದುರಿಗೆ ಬಂದು, ಬ್ರಹ್ಮದೇವನನ್ನು ನೆನೆದು ಬ್ರಹ್ಮಾಸ್ತ್ರ ಬಿಡುತ್ತಾನೆ. ಇದರಿಂದ ಹನುಮಂತ ಬಂಧನಕ್ಕೊಳಗಾಗುತ್ತಾನೆ. ಬಂಧಿಸಿದ

ಹನುಮಂತನನ್ನು ರಾವಣನ ಮುಂದೆ ಒಪ್ಪಿಸುತ್ತಾರೆ. ಬಾಲದಲ್ಲಿ ಹನುಮಂತನ ಮರ್ಮವಿದೆ ಎಂದು ತಿಳಿದು ಬಾಲಕ್ಕೆ ಬೆಂಕಿಯನ್ನು ಇಡಲು ಪ್ರಾರಂಭಿಸುತ್ತಾರೆ. ಅದಕ್ಕಾಗಿ ಅರಮನೆ, ಪುರಮನೆಗಳ ವಸ್ತ್ರಗಳನ್ನೆಲ್ಲ ತಂದರೂ ಸಾಕಾಗಲಿಲ್ಲ. ಕೊನೆಗೆ ಸೀತೆಯ ವಸ್ತ್ರವನ್ನು ತನ್ನಿ ಎನ್ನಲು ಬಾಲ ಸಣ್ಣದಾಗುತ್ತದೆ. ಬಾಲಕ್ಕೆ ಕೊಡಗಟ್ಟಲೆ ಎಣ್ಣೆಯನ್ನು ಸುರಿಯುತ್ತಾರೆ. ಬೆಂಕಿಯು ಒಮ್ಮೆಲೆ ಪುಟವಾಗುವುದಿಲ್ಲ. ಇಲ್ಲಿ ಅಗ್ನಿದೇವನಿಗೂ ಸಹ ಹನುಮಂತನ ಮೇಲಿನ ಪ್ರೀತಿ ವ್ಯಕ್ತವಾಗುತ್ತದೆ. ಕೊನೆಗೆ ಅದೇ ಬಾಲದ ಅಗ್ನಿಯಿಂದ ರಾವಣನ ಗಡ್ಡಮೀಸೆಗಳು ಸುಟ್ಟು ಹೋಗುತ್ತವೆ. ಹನುಮಂತ ತನ್ನ ಬಾಲಿನ ಬೆಂಕಿಯಿಂದ ಇಡೀ ಲಂಕಾಪುರವನ್ನು ಅಗ್ನಿಗೆ ಆಹುತಿ ಕೊಡುತ್ತಾನೆ. ಇದರಲ್ಲಿ ಮಹಾಭಕ್ತನಾದ ವಿಭೀಷಣನ ಮನೆ ಮಾತ್ರ ಉಳಿಯುತ್ತದೆ. ಹೀಗೆ ಹನುಮಂತನು ಲಂಕಾ ನಗರಕ್ಕೆ ಬೆಂಕಿಯಿಟ್ಟು ತನ್ನ ಬಾಲವನ್ನು ವಾರಿಧಿಯೊಳಗೆ ಅದ್ದಲು ವರುಣನು ಅನುಕೂಲ ಮಾಡಿಕೊಡುತ್ತಾನೆ.

''ಮೂರು ಪಾಲವ ಲಂಕೆಯ ದಹಿಸಿ |
ಊರೊಳಿದ್ದಸುರನೆಲ್ಲರ ನೋಯಿಸಿ ||
ವಾರಧಿಯೊಳಗ ಎದ್ದಲು ಬಾಲವಾ |
ಅರೆನಾನೆನಲು ಹಿಡಿನು ಕೋಲವಾ''[೧೦]

ಲಂಕೆಯ ಅವನತಿ ಇಲ್ಲಿ ಗೋಚರಿಸುತ್ತದೆ. ಆಗ ಹನುಮಂತನ ಶಕ್ತಿ ರಾವಣನ ಅರಿವಿಗೆ ಬರುತ್ತದೆ. ಮುಂದೆ ಹನುಮಂತ ಸೀತೆಯನ್ನು ಭೇಟಿಯಾಗಿ ವಂದಿಸಿ ಕರುಣದಿ ಆಜ್ಞೆಯನ್ನು ಬೇಡುತ್ತಾನೆ.

''ಕರೆದ ಭೂಷಣ ಕೊಟ್ಟಳು ಖೂನಕ |
ಹೊರಗ ಬರುತಲಿ ಉಪವನ ಸ್ಥಾನಕ ||
ಕರೆದ ಬ್ರಹ್ಮನ ಧ್ಯಾಯಿಸಿ ಮನದಲಿ |
ಬರುತ ಹೇಳಿದ ಹನುಮನುದಯದಲಿ''[೧೧]

ಎನ್ನುತ ಸೀತಾದೇವಿಯು ತನ್ನ ಆಭರಣವನ್ನು ಗುರುತಿಗಾಗಿ ಕೊಡುತ್ತಾಳೆ. ಅದನ್ನು ಭಕ್ತಿಯಿಂದ ಸ್ವೀಕರಿಸಿ ಉಪವನಕ್ಕೆ ಹನುಮಂತನು ಮರಳುತ್ತಾನೆ. ಬ್ರಹ್ಮದೇವನನ್ನು ಸ್ಮರಿಸಿ ಅವನಿಂದ ರಾಮನಿಗೆ ಈ ಘಟನೆಯ ಕುರಿತು ಒಂದು ಪತ್ರವನ್ನು ಬರೆದುಕೊಡುವಂತೆ ಪ್ರಾರ್ಥಿಸುತ್ತಾನೆ. ಸೀತೆಯ ಸಮಾಚಾರದ ಶುಭಲಿಖಿತವನ್ನು ಬ್ರಹ್ಮನು ಬರೆದುಕೊಡುತ್ತಾನೆ. ತುಂಬ ಸಂತೋಷದಿಂದ ಹನುಮಂತನು ಆಕಾಶಕ್ಕೆ ಹಾರಿ ನೀಲಾದ್ಯರನ್ನು ಸಾರುತ ಅಪ್ಪಿ ಅವರಿಗೆ ಶ್ರವಣಸುಖಃವಾರ್ತೆಯನು ಬಿಡುತ್ತಾನೆ. ಅವಸರದಲ್ಲಿ ಅವರೆಲ್ಲರೂ ಕೂಡಿ ಆಕಾಶ

ಮಾರ್ಗದಿಂದ ಬರುತ್ತಾರೆ. ಅವರ ಗೆಲುವಿನ ಮುಖ ಕಂಡು ಸುಗ್ರೀವ ಹಾಗೂ ವಾನರ ಮುಖ್ಯಸ್ಥರು ಕಾರ್ಯಸಿದ್ಧಿ ಫಲಿಸಿದೆ ಎಂದು ಅರಿತುಕೊಳ್ಳುತ್ತಾರೆ.

ಹನುಮಂತನು ಶ್ರೀರಾಮನ ಹತ್ತಿರ ಬಂದು ನಮಸ್ಕರಿಸಿ ಸೀತಾದೇವಿಯ ವೃತ್ತಾಂತವನ್ನು ಮನತುಂಬಿ ಹೇಳುತ್ತಾನೆ.

‘‘ಜನನಿಯ ಪಾದವ ಕಂಡೆನು ಕುಶಲದಿ |
ವನದೊಳಿಗಿಪ್ಪಳುತವ ಚರಣಾ |
ಅನುದಿನಧ್ಯಾನವ ಮಾಡುತನಾಲಿಗಿ |
ಕೊನಿಯಲಿರಾ ಮೆಂಬುಚ್ಚರಣಾ ||
ಮನದಲಿ ಪರವಶವಾಗುತ ವಮ್ಮಿಗೆ |
ಅನುಭವಿಸುತ ಬಾಹ್ಯಾಚರಣಾ ||
ತನು ಕೃಶವಾಗಿಹ ಝುಳಕೊಡ್ಡಿದಲತೆ |
ಯನೆ ಬಲಿಬಿದ್ದು ನಿಶಾಚರನಾ
ಅಂಗವಕಾಣಿ ಕೊಳ್ಳದೆ ನಿಮ್ಮಯ |
ಉಂಗುರ ಇಳಹಲಿ ಅವನಿಯಲಿ |
ಕಂಗಳಲೀಕ್ಷಿಸಿ ಬಾಗುತ ಅಪ್ಪುತ |
ಸಂಗಸಖೀ ಬಾಯನು ತಳಲಿ’’[೧೨]

ಸೀತೆಯ ಸ್ಥಿತಿಯನ್ನು ಹನುಮಂತನು ಹೇಳುತ್ತಾನೆ. ತಾವು ಕೊಟ್ಟ ಗುರುತಿನ ಉಂಗುರವನ್ನು ಅಪ್ಪಿಕೊಂಡು ಸೀತಾಮಾತೆ ಸಂಗ ಸಖಿಯೆ ಬಾ ಇತ್ತ ಎಂದು ಪ್ರೀತಿಯಿಂದ ಕರೆಯುತ್ತಾಳೆ. ಮುಂದೆ ರಾಮನಿಗೆ ತಮ್ಮ ಗುರುತಿನ ಆಭರಣ ನೀಡಬೇಕೆಂದು ಕೇಳಿಕೊಂಡಾಗ ಹರುಷದಿಂದ ಒಡವೆಯನ್ನು ಕೊಡುತ್ತಾಳೆ. ನಂತರ ಅಲ್ಲಿ ನಡೆದ ಘಟನೆಯನ್ನು ಬ್ರಹ್ಮನು ಬರೆದ ಪತ್ರದ ಮೂಲಕ ವಿಸ್ತರಿಸುತ್ತಾನೆ. ಹನುಮಂತನ ಈ ಎಲ್ಲ ವಿದ್ಯಮಾನದಿಂದ ಸಂತುಷ್ಟಗೊಂಡ ಶ್ರೀರಾಮನು ಹನುಮಂತನಿಗೆ ಬ್ರಹ್ಮಪದವಿಯನ್ನು ಕೊಟ್ಟು ಸಲಹುತ್ತಾನೆ.

ಹೀಗೆ ಕೃಷ್ಣದಾಸ ಸುಂದರಕಾಂಡ ಕಾವ್ಯವು ಸುಂದರವಾದ ಕಥಾವಸ್ತುವನ್ನು ಹೊತ್ತುಕೊಂಡು ಸಾಗಿದೆ. ಅಗಲಿದ ಶ್ರೀರಾಮ ಸೀತೆಯರಿಗೆ ತಮ್ಮ ಪ್ರೀತಿಯ ವಾರ್ತೆಯ ಸಂಧಾನ ಮತ್ತು ಅದಕ್ಕೊಂದು ಮುದ್ರಿಕೆಯ ಆಭರಣಗಳ ವಿನಿಮಯ ನೀಡುವುದಾಗಿದೆ. ಇದು ಅಗಲಿದ ವ್ಯಕ್ತಿಗಳ ಮಾನಸಿಕ ಸಮಾಗಮದ ಸುಖವನ್ನುಂಟುಮಾಡುವ ಮತ್ತು ಹನುಮಂತನ ದೈತ್ಯಕಾರ್ಯವನ್ನು ಸುಂದರಕಾಂಡ ಕಾವ್ಯವು ಚಿತ್ರಿಸುತ್ತದೆ. ಕಾವ್ಯದ ಕಥಾನಾಯಕನಾದ ಹನುಮಂತನು ಸಂದೇಶವಾಹಕನಾಗಿ, ರಾಮನ ಸೇವಕನಾಗಿ ತನ್ನ ಸುಂದರ ವ್ಯಕ್ತಿತ್ವದ

ಅನಾವರಣ ಇಲ್ಲಿ ಗೋಚರಿಸುತ್ತದೆ. ಒಟ್ಟಿನಲ್ಲಿ ಈ ಕಾವ್ಯವು ಕೃಷ್ಣದಾಸರ ಒಂದು ವಿಶಿಷ್ಟತೆಯಲ್ಲಿ ಅರಳಿದ ಮಹತ್ವಪೂರ್ಣ ಕಾವ್ಯವಾಗಿದೆ.

೨. ಕಾಳಿಯ ವರದ ಕಥೆ

ಕಾಳಿಯ ವರದ ಕಥಾಪ್ರಸಂಗ ಭಾಗವತದ ಕೃಷ್ಣಕಥಾ ಕ್ರಮದಲ್ಲಿ ಕಾಳಿಯ ಮರ್ದನ ಸಂದರ್ಭದಲ್ಲಿ ಕಂಡುಬರುತ್ತದೆ. ಕೃಷ್ಣದಾಸರು ಕೃಷ್ಣನ ವಿವಿಧ ಲೀಲೆಗಳನ್ನು ಅಲ್ಲಲ್ಲಿ ಹೇಳಿಕೊಂಡಿದ್ದಾರೆ. ಅದರ ಜೊತೆಗೆ ಇಲ್ಲಿಯ ಕಥೆಯ ಸಂದರ್ಭಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿದ್ದಾರೆ. ಈ ಕಥಾಪ್ರಸಂಗವು ೨೩ ನುಡಿಗಳಿಂದ ಕೂಡಿದ ಚಿಕ್ಕ ಕಾವ್ಯವಾಗಿದೆ. ಕೃಷ್ಣದಾಸರು ಮೂಲ ಭಾಗವತದಲ್ಲಿರುವ ಕಥೆಗೆ ಹೊಸ ಮೆರುಗನ್ನು ನೀಡಿದ್ದಾರೆ. ಭಾಗವತದಲ್ಲಿ ಯಮುನೆಯ ಮಡುವಿನಲ್ಲಿ ಅಡಗಿ ಕುಳಿತ ಕಾಳಿಯ ಸರ್ಪವು ಇಡೀ ನದಿಯನ್ನು ವಿಷಮಗೊಳಿಸಿರುತ್ತದೆ. ವಿಷಬಾಧೆಯಿಂದ ಅಲ್ಲಿರುವ ಪ್ರಾಣಿ ಪಕ್ಷಿಗಳು ಸಂಕಷ್ಟಕ್ಕೆ ಗುರಿಯಾಗಿರುತ್ತವೆ. ಇದರಿಂದ ಅವುಗಳನ್ನು ವಿವೇಚನೆಗೊಳಿಸಲು ಕೃಷ್ಣ ಪರಮಾತ್ಮನು ಆ ಸರ್ಪದ ಜೊತೆ ಸೆಣಸಾಡಿದ ಸಂದರ್ಭವನ್ನು ಈ ಕಾವ್ಯವು ತಿಳಿಯಪಡಿಸುತ್ತದೆ.

ಕೃಷ್ಣದಾಸರು ಮೂಲ ಕಥೆಗೆ ತಮ್ಮದೇ ಆದ ವಸ್ತು ವಿಶಿಷ್ಟತೆಯನ್ನು ಜೋಡಿಸಿದ್ದಾರೆ. ಇಲ್ಲಿ ಗೋವುಗಳನ್ನು ಮೇಯಿಸುವ ಬಾಲಕರ ಚೆಂಡು ಆ ಕಾಳಿಯ ಮಡುವಿನಲ್ಲಿ ಬಿಳುತ್ತದೆ. ಶ್ರೀಕೃಷ್ಣನು ಆ ಚೆಂಡನ್ನು ತೆಗೆಯಲು ಹೋಗುವ ಪ್ರಸಂಗ ಕಥೆಯಲ್ಲಿ ಜರುಗುತ್ತದೆ. ಈ ಕಥಾ ಪ್ರಸಂಗಕ್ಕೆ ಸ್ವಾಭಾವಿಕ ಪರಿಕಲ್ಪನೆಯನ್ನು ಕೃಷ್ಣದಾಸರು ನೀಡಿದ್ದಾರೆ. ಆರಂಭದಲ್ಲಿ ಕೃಷ್ಣದಾಸರು ಗೋಬಾಲಕರ ಚೆಂಡಾಟ ನೋಟವನ್ನು ಸುಂದರವಾಗಿ ಬಿಂಬಿಸಿದ್ದಾರೆ.

''ಗೋಪಿತನಯ ನದಿ ತೀರದಲಿ|
ಗೋಪಾಲರ ಕೂಡಿಕೊಂಡಾಡುತಲಿರೆ

ರತ್ನ ಖಚಿತದಿಂದಲಿ ಮಿಗಿಲೆನಿಸುವ |
ಉನ್ನತವಾದ ಚಂಡವ ಪಿಡಿದು ||
ಹೊನ್ನುಮಯದ ಪಳಿಯದ ನೆಗೆದಾಗಳೆ |
ಚನ್ನ ಮೂರುತಿ ಗೋವಳರನ್ನು ಕರವುತಾ |

ಎಡಗೈಯ ಚಂಡವ ನಪ್ಪಳಿಸೊಗೆಯಲು |
ತಡೆಯದೆ ಪೋಗಲು ಶರದಂತೆ ||
ಹಿಡಿ ಹಿಡಿ ಹಿಡಿಯನು ತೊಬ್ಬರಿಗೊಬ್ಬರು |
ಪೊಡುವಿಗೆ ಬೀಳುವ ಮುನ್ನ ಪಿಡಿದಿಡುತಾ

ಈ ರೀತಿಯೊಳೆಡೆಯಾಡುತಿರಲಿ ಕೈ |
ಮೀರಿ ಮರುತ ವಶದಿಂ ಪೋಗಿ ||
ಘೋರ ತರವೆನಿಪ ಕಾಳಿ ನಾಗೇಂದ್ರನು |
ಸೇರಿಹನಾ ಮಡುಥಡಿ ಮರು ಸೇರಲು''[೧೩]

ಕಥೆಯ ಆರಂಭವು ಗೋಪಾಲ ಬಾಲಕರ ಚೆಂಡಿನಾಟದ ವೈಭವವು ಸಹಜ ರೀತಿಯಲ್ಲಿ ನಡೆಯುತ್ತಿರುತ್ತದೆ. ಆ ಚೆಂಡಾಟದಲ್ಲಿ ಚೆಂಡು ಕೈ ತಪ್ಪಿನಿಂದಾಗಿ ಕಾಳಿ ನಾಗೇಂದ್ರನನ್ನು ಸೇರಿದಾಗ ಈ ಕಥೆಯ ಮುಖ್ಯ ಹಂದರ ಅನಾವರಣಗೊಳ್ಳುತ್ತದೆ. ಮುಂದೆ ಗೋಪಾಲಕರು ಅಲ್ಲಿಯ ಸಂದರ್ಭವನ್ನು ಶ್ರೀಕೃಷ್ಣನಿಗೆ ವಿವರಿಸುತ್ತಾರೆ. ಆವಾಗ ಶ್ರೀಕೃಷ್ಣನು ಆ ನದಿಯಲ್ಲಿ ಅಡಗಿರುವ ಸರ್ಪದ ವಿಷಯವನ್ನು ಕುರಿತು ತರ್ಕಿಸುತ್ತಾನೆ. ಯಮುನಾ ನದಿಯ ಕುಂಡದ ಮೇಲೆ ಹಾರಿಹೋಗುತ್ತಿದ್ದ ಪಕ್ಷಿಗಳು ವಿಷಪ್ರಾಶನದಿಂದ ಸತ್ತು ಬಳಲುತ್ತಿದ್ದವು. ಅಲ್ಲಿಯ ಅಲೆಗಳ ಮೂಲಕ ಬೀಸುತ್ತಿದ್ದ ಗಾಳಿಯು ಮರಗಿಡಗಳನ್ನು ನಾಶಮಾಡುತ್ತಿತ್ತು. ಇಂತಹ ಭಯಂಕರವಾದ ಸರ್ಪವನ್ನು ಮನಿಸಲೆಂದು ಶ್ರೀಕೃಷ್ಣನು ಯೋಚಿಸುತ್ತಾನೆ. ಇಂತಹ ಸಂದರ್ಭದಲ್ಲಿ ಗೋಪಾಲ ಬಾಲಕರ ಚೆಂಡು ಆ ವಿಷದ ಕುಂಡಲಿಗೆ ಬಿದ್ದಿರುವಾಗ ಅದನ್ನು ಹೊರತೆಗೆಯಲು ತನ್ನ ಅನಂತ ಶಕ್ತಿಯ ರುದ್ರಾವತಾರವನ್ನು ಅಲ್ಲಿ ಪ್ರದರ್ಶಿಸುತ್ತಾನೆ. ಗೋಪಾಲಕರು ವಿಷ ಕುಂಡಲಿಯಲ್ಲಿ ಬಿದ್ದಿರುವ ಚೆಂಡಿನ ಸಂಗತಿಯನ್ನು ತಿಳಿಸಿ ಅದನ್ನು ತೆಗೆದುಕೊಡುವಂತೆ ಶ್ರೀಕೃಷ್ಣ ಪರಮಾತ್ಮನನ್ನು ಕೇಳಿಕೊಳ್ಳುತ್ತಾರೆ.

''ಎಲಿಯೊಳಗಡಗಲು ಕಾಣುತ ಸಕಲರು |
ಸಲಲಜ ನೇತ್ರಗ ಭಿನ್ನವಿಸೆ ||
ಸ್ಥಳವಾವದು ತೋರೆನಗೆನುತಾ ಶ್ರೀ |
ಲಲನೆಯ ವಲ್ಲಭವರ ಕೂಡಾ ನಡೆದನು ''[೧೪]

ಶ್ರೀಕೃಷ್ಣನು ಆ ನದಿಯನ್ನು ಪ್ರವೇಶ ಮಾಡುತ್ತಾನೆ. ಕಾಳಿಯ ಸರ್ಪದ ವಿಷ ಬಲವಾಗಿರುವುದರಿಂದ ತಾನು ವಿಹರಿಸುವ ಯಮುನೆಯ ಜಲವು ವಿಷದಿಂದ ಕೂಡಿರುವುದನ್ನು ತಿಳಿದುಕೊಂಡ ಶ್ರೀಕೃಷ್ಣನು ಸೊಂಟಕ್ಕೆ ತಟ್ಟೆಯನ್ನು ಬಿಗಿದುಕೊಂಡು ಎತ್ತರವಾದ ಕದಂಬ ವೃಕ್ಷದ ಮೇಲೆ ತನ್ನ ಎರಡು ಭುಜಗಳನ್ನು ತಟ್ಟಿಕೊಳ್ಳುತ್ತಾ ಮಡುವಿನೊಳಗೆ ದುಮ್ಮುಕುತ್ತಾನೆ. ಯಮುನೆಯ ನೀರು ಕೃಷ್ಣನ ಪ್ರವೇಶಕ್ಕೆ ಉಕ್ಕಲು ಪ್ರಾರಂಭಿಸುತ್ತದೆ. ಅದರ ತೆರೆಗಳು ಉಕ್ಕಿ ಕೆಂಪು, ಹಳದಿಯಾಗಿ ಮೇಲಕ್ಕೇಳುತ್ತವೆ. ಶ್ರೀಕೃಷ್ಣನು ನೀರಿಗೆ ದುಮ್ಮಿಕಿರುವದರಿಂದ ಕಾಳಿಯ ಮಡುವಿನ ನೀರು ಅತ್ತ ಇತ್ತ ಹರಡಿಕೊಳ್ಳುತ್ತದೆ. ಈ ಸಂದರ್ಭವನ್ನು ಮನೋಹರವಾಗಿ ಕೃಷ್ಣದಾಸರು ಬಿಂಬಿಸಿದ್ದಾರೆ.

ಬಂದು ಕಡವ ಮರನೇರಿ ನೋಡಲು ಗಿಡ |
ದಿಂದ ಮಡುವಿನೊಳು ಬೀಳಲಿಕೆ ||
ಬಂಧುಗಳಿರ್‍ಯಾ ಕೇಳೀಗ ಮುಣುಗಿನಾ |
ತಂದು ಕೊಡವೆನುತಲಿ ವಳಪೊಕ್ಕನು''[೧೫]

ಶ್ರೀಕೃಷ್ಣನು ಈ ರೀತಿಯಲ್ಲಿ ಕಾಳಿಯ ಮಡುವಿಗೆ ಪ್ರವೇಶ ಮಾಡುತ್ತಾನೆ. ತನ್ನ ಅಚಲ ಭಾವಗಳಿಂದ ಮದಗಜದಂತೆ ನೀರನ್ನು ಬಡಯಲು ತೊಡಗುತ್ತಾನೆ. ಕೃಷ್ಣನ ಭುಜಗಳ ಬಡಿತದಿಂದ ನೀರಿನಲ್ಲಿ ಜೋರಾದ ಶಬ್ದವಾಗತೊಡಗುತ್ತದೆ. ಕಣ್ಣಿನಿಂದಲೇ ಕೇಳುವ ಕಾಳಿಯ ಸರ್ಪಕ್ಕೆ ಆ ಶಬ್ದ ಕೇಳಿದಾಗ ತನ್ನ ನಿವಾಸ ಸ್ಥಾನವನ್ನು ಯಾರು ತಿರಸ್ಕರಿಸುತ್ತಿದ್ದಾರೆಂದು ಕಾಳಿಯು ಕುಪಿತನಾಗಿ ಕೃಷ್ಣನ ಮುಂದೆ ಬರುತ್ತಾನೆ. ಈ ಸಂಗತಿಯನ್ನು ಹಾಗೂ ಕಾಳಿಯ ಗೆಳತಿಯರನ್ನು ಕೃಷ್ಣದಾಸರು ಉದಾತ್ತವಾಗಿ ಹೀಗೆ ವರ್ಣಿಸಿದ್ದಾರೆ.

''ಮತ್ಸ್ಯಗಿಂದಧಿಕ ಮಹಾವೇಗದಿ ಗೋ |
ವತ್ಸಾವಳಿ ದಕ್ಷಕ ನಡದಾ ||
ಸತ್ಸಲಿಲದೊಳಗ ನಾಗಕನ್ನಿಕೆಯರು |
ಉತ್ಸಹದಲಿ ಕ್ರೀಡಿಸುವದು ಕಂಡನು

ಅಂಬುಜ ಮುಖಿಯರು ಸರ್ವಾಭರಣದಿ |
ರಂಭೆಯರನು ಸೋಲಿಸುವಂತ ||
ಕುಂಭ ಕುಚೆಯರು ತಿರುಗಿ ನೋಡಲು ವರ |
ಅಂಬುಧಿವಾಸಾನಾ ಕಣ್ಣಿಲೆ ಕಂಡರು

ಮದನ ಮೋಹನನ ನೋಡುತ ಮುದದೋರ್ವಳು
ಸುಡತೀವನ ನುಡಿಸಬೇಕೆಂದು ||
ಬದಿಗೆ ಬರುತಲಿ ಕೇಳಿದಳು ನೀನಾರ್‍ಯೆಯ್ಯಾ |
ಸದನ ವೆಲ್ಲಿಹುದು ನೀನಾರ ಕುರವನೋ

ನೋಡಿದಿಡೆ ಬಾಲಕ ರೂಪಾಗಿಹಾ |
ರೂಢಿಲಿ ಮರೆವದು ಹೆಸರೇನೋ ||
ಮಾಡುವ ಕಜ್ಜೇನುಂಟುಯನಲ ಹರಿ
ನೋಡಿದರುತ್ತ ಕುಡುದನಿತರೊಳಗೆ''[೧೬]

ಶ್ರೀಕೃಷ್ಣನ ಜಲಕ್ರೀಡೆಯಾಟದಿಂದ ಕುಪಿತಗೊಂಡ ಕಾಳಿಯು, ಶಾಮಲ ವರ್ಣದ ಬಾಲಕನನ್ನು ನೋಡಿ ಚಕಿತಗೊಳ್ಳುತ್ತಾನೆ. ಈ ಸಂದರ್ಭವನ್ನು ಮೂಲ ಭಾಗವತಕ್ಕಿಂತಲೂ ವಿಭಿನ್ನವಾಗಿ ಕೃಷ್ಣದಾಸರು ಚಿತ್ರಿಸಿದ್ದಾರೆ. ಕೃಷ್ಣನು ನೀರಿನಲ್ಲಿ ಮುಳುಗಿ ಪಾತಾಳಕ್ಕೆ ಹೋಗುತ್ತಾನೆ. ಅಲ್ಲಿ ಕಾಳಿಯ ನಾಗನ ವೈಭವವನ್ನು ನೋಡುತ್ತಾನೆ. ಅವನ ಸುತ್ತಲಿರುವ ಸ್ತ್ರೀಯರನ್ನು ಮಾತನಾಡಿಸುತ್ತಾನೆ. ಆ ಸ್ತ್ರೀಯರ ವರ್ಣನೆ ಇತ್ಯಾದಿಯಾಗಿ ಪ್ರಾಸಂಗಿಕ ಕಲ್ಪನೆಯ ಮೂಲಕ ಕೃಷ್ಣದಾಸರು ತಮ್ಮದೆಯಾದ ಕಾವ್ಯಶೈಲಿಯನ್ನು ಇಲ್ಲಿ ಬಿತ್ತರಿಸಿದ್ದಾರೆ. ಶ್ರೀಕೃಷ್ಣ ಮತ್ತು ಕಾಳಿಯ ನಡುವೆ ಘೋರವಾದ ಕಾದಾಟ ಸಂಭವಿಸುತ್ತದೆ. ಆ ಸಂದರ್ಭದಲ್ಲಿ ಕೃಷ್ಣನನ್ನು ಕಂಡ ನಾಗಸ್ತ್ರೀಯರು ನಾಗನ ದುರಂತ ಕಂಡು ಕೈಮುಗಿದು ಬೇಡಿಕೊಳ್ಳುತ್ತಾರೆ. ಶಿಕ ವೈರಿ ವರನು ಆದ ಸರ್ಪಗಳಲ್ಲಿ ಶ್ರೇಷ್ಠನಾದ ಆ ನಾಗನನ್ನು ಶ್ರೀಕೃಷ್ಣ ತನ್ನ ಭುಜಬಲ ಪರಾಕ್ರಮದಿಂದ ಸದೆಬಡಿಯಲು ಕಾಳಿಯ ಜೀವಶಕ್ತಿಯು ಕ್ಷೀಣಿಸತೊಡಗುತ್ತದೆ. ರಕ್ತವು ಹರಿಯತೊಡಗುತ್ತದೆ. ಕೊನೆಗೆ ಮೂರ್ಛಿತನಾಗಿ ಕಾಳಿಯು ಬಿದ್ದು ಬಿಡುತ್ತಾನೆ. ಮತ್ತೆ ಚೇತರಿಸಿಕೊಂಡು ಬುಸುಗುಟ್ಟುತ್ತ ಕೃಷ್ಣನ ಮೇಲೆ ಬಂದಾಗ ಕೃಷ್ಣನು ಕಾಳಿಯ ಹೆಡೆಯ ಮೇಲೆ ಹಾರಿ ನಾಟ್ಯವಾಡುತ್ತ ಹೆಡೆಯನ್ನು ಬಗ್ಗಿಸಿ ಬಿಡುತ್ತಾನೆ. ಇಂತಹ ಕಲ್ಪನೆಯನ್ನು ಕೃಷ್ಣದಾಸರು ಕಾಲ್ಪನಿಕವಾಗಿ ಒಡಮೂಡಿಸಿದರೂ ಸಹ, ಭಾಗವತ ಸಂಪ್ರದಾಯದಲ್ಲಿ ಕಾಳಿಯ ಮರ್ದನ ಮಾಡಿದಾಗ ಈ ಪ್ರಸಂಗವು ಕಂಡುಬರುತ್ತದೆ. ಹೀಗೆ ಕಾಳಿಯ ನಾಗನ ಸ್ತ್ರೀಯರು ಶ್ರೀಕೃಷ್ಣನಲ್ಲಿ ಪ್ರಾರ್ಥಿಸಿಕೊಳ್ಳುತ್ತಾರೆ. ಅದಕ್ಕೆ ಶ್ರೀಕೃಷ್ಣನು ಅಭಯ ಹಸ್ತ ನೀಡಿ ಕಾಳಿಯನ್ನು ಕೊಲ್ಲದೆ ಆ ಸ್ಥಳದಿಂದ ಬೇರೆಡೆ ಹೋಗಲು ಸೂಚಿಸುತ್ತಾರೆ. ಈ ಸಂಗತಿಯು ಕಾವ್ಯದಲ್ಲಿ ಸೊಗಸಾಗಿ ಪ್ರತಿಪಾದಿತಗೊಂಡಿದೆ.

‘‘ಎನ್ನಲಹಿ ನುಡಿದೆಮ್ಮರಿಖಗ್ಗ ಪತಿರಲು |
ಎನಗೆ ನಿ ವೈದಡೆ ಕೊಲ್ಲುವನು ||
ಅನುದಿನ ಸರ್ಪಾಂತಕ ಎನುತಲಿ ಗರು |
ಡನ ಬಿರುದವ ಸಾರುತಲಿ

ಎಂದಡಂಜದಿರುನೀ ಎನ್ನ ವಾದಾರ |
ವಿಂದ ಸೋಂಕಲು ಗರುಡನು ತಡಿಯಾ ||
ಎಂದ ಭಯಿತುರಗನಾಶಿರ್ಕ |
ಸಂಧಿಸಿ ಸೋತ್ರವ ಕೊಂಡೈ ತಂದನು

ಬಂದನು ತ್ವರಿತದಿಯ ಮುನೆಯ ಥಡಿಯಲ್ಲಿ |
ನಿಂದಾ ಫಣಿಯವನೇರಿ ||

ಇಂದಿರೇಶನು ಕೊಳಲವನು ಪಿಡಿದು |೫|
ನಂದದಿ ನೃತ್ಯವ ಮಾಡುತಲಿರ್ದನು"[೧೭]

ಕೃಷ್ಣನ ಈ ನೃತ್ಯ ಮನೋಹರವಾಗಿ ಗೋಪಾಲಕರಿಗೆ ಕಾಣಿಸುತ್ತದೆ. ಆಗ ದೇವಾನುದೇವತೆಗಳು ಕೃಷ್ಣನ ಮಹಿಮೆಯನ್ನು ಕೊಂಡಾಡುತ್ತ ಹೋಗುತ್ತಾರೆ. ಕೃಷ್ಣನ ಅದ್ಭುತವಾದ ನೃತ್ಯದಿಂದಾಗಿ ಕಾಳಿಯನ ಹೆಡೆಗಳು ಭಿನ್ನ ಭಿನ್ನವಾಗಿ ಕಾಣಿಸಿಕೊಳ್ಳುತ್ತಿದ್ದವು. ಅಪಾರವಾದ ಕೃಷ್ಣನ ಭಾರವನ್ನು ತಡೆಯಲಾರದೆ ಕಾಳಿಯು ಸಂಕಟಕ್ಕೆ ಗುರಿಯಾಗುತ್ತಾನೆ. ತನ್ನ ಪತಿಯ ದುರ್ದೆಸೆಯನ್ನು ಕಂಡು ಕೃಷ್ಣನಲ್ಲಿ ಬಿನ್ನವಿಸಿಕೊಳ್ಳುತ್ತಾ ಪ್ರಾರ್ಥಿಸಿಕೊಳ್ಳುತ್ತಾರೆ. ನಮ್ಮ ಮಕ್ಕಳು ಹಾಗೂ ಪತಿಯನ್ನು ಉಳಿಸಿಕೊಡಬೇಕೆಂದು ಕೃಷ್ಣನಿಗೆ ಮತ್ತೆ ಶರಣಾಗುತ್ತಾರೆ. ಇದಕ್ಕೆ ಕೃಷ್ಣನ ಮನಸ್ಸು ಕರಗಿ ಅಭಯಹಸ್ತವನ್ನು ನೀಡಲು ಮುಂದಾಗುತ್ತಾನೆ. ಕಾವ್ಯದಲ್ಲಿನ ಈ ಸನ್ನಿವೇಶ ಕಾವ್ಯದ ಮಾಧುರ್ಯತೆಗೊಂದು ಕನ್ನಡಿಯಾಗಿದೆ.

"ಧಿಗಿ ಧಿಗಿ ಧಿಗಿಯನುತಲಿ ಕುಣಿಯಲು |೫೦|
ದುಗೆ ಗೆಜ್ಜೆಯ ಝಣ ಝಣ ಕೆನಲು |
ಮಗುಳೆ ಕೊಳಲು ಧ್ವನಿಗೇಳುತ ಬಂದರು |
ಸಗಟಾರಿ ಬಂದೆನುತಲಿ ಸಂಗಡಿಗರು ||

ಬರುತ ಕಂಡೋಡಿದ ರತಿ ಚಿಂತೆಯಲಿಹ |
ವರನಂದ ಯಶೋದೆಯಾ ಪೊರೆಗೆ |
ಶರಣ ರಕ್ಷಕ ಬಂದೆನುತಲಿ ಕೇಳಲು |
ಹರುಷದಿ ಘಳಿಲನೇಳುತ ನಡೆದವರು"[೧೮]

ನದಿಯಿಂದ ಹೊರಬಂದ ಕೃಷ್ಣ ಪರಮಾತ್ಮ ಮತ್ತು ಆತನ ನಾಗನ ಮೇಲಿನ ನೃತ್ಯ ಸಹೃದಯನ ಮನಸ್ಸನ್ನು ಸೂರೆಗೊಳಿಸುತ್ತದೆ. ಇಲ್ಲೆಲ್ಲ ದಶಾವತಾರದ ಇಣುಕುನೋಟ ಕಣ್ಮುಂದೆ ಬರುತ್ತದೆ. ನಾಗಶ್ರೀಯ ಪ್ರಾರ್ಥನೆಯು ಕೃಷ್ಣನ ಮನಸ್ಸನ್ನು ಅರಳಿಸುತ್ತದೆ. ಕೊನೆಗೆ ಕೃಷ್ಣ ಪ್ರಾದಾಂಕಿತ ಕಾಳಿಯನಿಗೆ ಗರುಡನ ಭಯವಿಲ್ಲವೆಂದು ಅಭಯಹಸ್ತ ನೀಡುತ್ತಾನೆ. ಆ ಮೇಲೆ ಕಾಳಿಯ ನಾಗನನ್ನು ಮೇಲೆ ತಂದು ಅವನ ಫಣಿಗಳ ಮೇಲೇರಿ ಕುಣಿಯುತ್ತಾನೆ. ಶ್ರೀಕೃಷ್ಣನ ಮರ್ದನ ನೃತ್ಯ ನೋಡಲು ದೇವತೆಗಳು ಆಕಾಶದಲ್ಲಿ ತಲ್ಲೀನರಾಗಿ ಆ ನೃತ್ಯಕ್ಕೇ ತಲೆದೂಗುತ್ತಾರೆ. ಹೀಗೆ ಕೃಷ್ಣದಾಸರು ಕೃಷ್ಣನ ವಿವಿಧ ಕಾರ್ಯವನ್ನು ಈ ಚಿಕ್ಕ ಕಾವ್ಯದ ಮೂಲಕ ಸುಂದರವಾಗಿ ಅಭಿವ್ಯಕ್ತಿಸಿದ್ದಾರೆ.

೩. ಗಜೇಂದ್ರಮೋಕ್ಷ

ಗಜೇಂದ್ರಮೋಕ್ಷ ಕಥಾಪ್ರಸಂಗದ ಕಾವ್ಯವು ೨೭ ಪದ್ಯಗಳನ್ನೊಳಗೊಂಡಿದೆ. ೧೪೭ ನುಡಿಗಳಲ್ಲಿ ರಚಿತವಾಗಿದೆ. ಮದ್ಭಾಗವತ ಪುರಾಣವು ಭಗವಂತ ಮತ್ತು ಭಕ್ತರ ನಡುವಿನ ಅವಿನಾಭಾವದ ತಾತ್ವಿಕ ಕಥಾನಕಗಳಿಂದ ಕೂಡಿದೆ. ಇಲ್ಲಿಯ ಕಥೆಗಳು ಭಕ್ತಿರಸಕ್ಕೆ ಪೋಷಕವಾಗಿ ತತ್ವ ಸಂದೇಶವನ್ನು ಬೀರುತ್ತವೆ. ಈ ದೃಷ್ಟಿಕೋನದಿಂದ ಗಜೇಂದ್ರಮೋಕ್ಷ ಕಾವ್ಯವು ಮುಖ್ಯವಾಗಿ ಗೋಚರಿಸುತ್ತದೆ. ಕೃಷ್ಣದಾಸರು ಭಕ್ತಿರಸವನ್ನು ಕಾವ್ಯದ ಮೂಲಕ ಉಕ್ಕಿಸುವ ಪ್ರಯತ್ನ ಮಾಡಿದ್ದಾರೆ. ಕಾವ್ಯದ ಆರಂಭವು ಭಗವಂತನ ಸ್ಮರಣೆಯಿಂದ ಸಾಗುತ್ತದೆ. ಜೊತೆಗೆ ಕಾವ್ಯದ ಉದ್ದೇಶವನ್ನು ಆರಂಭದಲ್ಲಿಯೇ ಸ್ಪಷ್ಟಪಡಿಸಿದ್ದಾರೆ.

''ಶ್ರೀರಮಣನ ಪದಯುಗಳಕೆ ಶರಣೆಂಬೆ ವಾರಂ ವಾರದಿ ನೆನೆದು |
ಕಾರುಣ್ಯದಲಿ ಮೊರೆಹೊಕ್ಕ ದೀನರ ಭಯವಾರಿಸಿ ಸಲಹುವನು |
ಧಾರುಣಿಯೊಳು ಹುಸಿಯಲ್ಲಿದಕ್ಕೊಂದು ಸಾರುವೆ ಇತಿಹಾಸವ |
ತಾರಕವಾದ ಗಜೇಂದ್ರ ಮೋಕ್ಷ ಕಥಾಸಾರುವ ಕೇಳುವುದು''[೧೯]

ಕೃಷ್ಣದಾಸರು ಭಗವಂತ ಮತ್ತು ಭಕ್ತ ಇವರಿಬ್ಬರ ನಡುವಿನ ಭಕ್ತಿಯ ಸಂಬಂಧವನ್ನು ಲೋಕಕ್ಕೆ ತೋರಿಸುವ ಪ್ರಯತ್ನವನ್ನು ಕಾವ್ಯದ ಮೂಲಕ ಮಾಡಿದ್ದಾರೆ. ಶ್ರೀ ಮಗ್ಭಾವತದಲ್ಲಿಯ ಸಂದರ್ಭವನ್ನೇ ಇಲ್ಲಿ ತಂದರು ಸಹ, ಅದು ಅವತರಣಿಕೆಯ ಪ್ರತಿಬಿಂಬವಾಗಿ ಕಂಡುಬಂದಿದೆ. ಭಗವಂತ ಮಾನವರಿಗೆ ಸುಲಭವಾಗಿ ಒಲಿದು ಅವರ ಕಷ್ಟಗಳನ್ನು ನಿವಾರಿಸುವುದು ಪರಂಪರೆಯಲ್ಲಿ ನಡೆದುಬಂದ ಸಂಗತಿಯಾಗಿದೆ. ಆದರೆ ಇಲ್ಲಿ ಶ್ರೀಹರಿಯು ಮೂಢಯೋನಿಯೆಂದೆನಿಸಿದ ಗಜೇಂದ್ರನಿಗೆ ಪ್ರತ್ಯಕ್ಷನಾಗಿ ಆತನನ್ನು ಕಷ್ಟದಿಂದ ಪಾರು ಮಾಡಿ ಅನುಗ್ರಹಿಸಿದ ವಿಷಯ ಭಕ್ತಸಾಧಕರಿಗೆ ಜಿಜ್ಞಾಸೆಯನ್ನು ಮೂಡಿಸುತ್ತದೆ. ಇಲ್ಲಿಯ ಗಜೇಂದ್ರನಿಗೆ ಅಂತಹ ಜ್ಞಾನ, ಭಕ್ತಿ, ವೈರಾಗ್ಯದ ಮಹತ್ವ ಇವುಗಳ ಮರ್ಮ ತಿಳಿಯದೆ ಹೇಗೆ ಶ್ರೀಹರಿಯನ್ನು ಒಲಿಸಿಕೊಳ್ಳಲು ಸಾಧ್ಯ, ಎಂಬ ಪ್ರಶ್ನೆ ಎಲ್ಲರನ್ನು ಕಾಡುತ್ತದೆ. ಆ ಗಜೇಂದ್ರನ ಹಿಂದಿನ ಜನ್ಮದ ವೃತ್ತಾಂತ ಇವುಗಳಿಗೆಲ್ಲ ಉತ್ತರಿಸುತ್ತದೆ.

''ಪರೀಕ್ಷಿತಗೊರೆದನು ಶುಕಮುನಿ ತಾ ಮುನ್ನೆ ಹರುಷದಿ ಕೇಳೆನುತಾ |
ಅರಸನೊಬ್ಬನಿಂದ್ರದ್ಯುಮ್ನರಾಯನೆಂಬ ಪರಮ ಕೀರುತಿ ವಂತನು ||
ನಿರುತದಿ ತನುಮನ ವಚನದಿ ತಾ ನಂಬಿ ಹರಿಪಾರಾಯಣನಾಗಿಹಾ |
ಬೆರೆತನು ಭಕುತಿಗೆ ಅರಸುತನವ ಬಿಟ್ಟು ಸೆರೆಯಾದ ವೈರಾಗ್ಯದಿ

ಜಡೆಯ ಬೆಳಸಿ ಮೌನವ್ರತದಿಂದ ವನದೊಳು ಕಡಲ ಶಯನ ಪೂಜೆಯ |
ಬಿಡದೆ ಮಾಡುತಿರಲೊಮ್ಮೆ ತಾ ಶಿಷ್ಯಗಡಣದಿಂದ ಗಸ್ತ್ಯನು ||
ಒಡನಲ್ಲಿಗೈ ತರೆ ನೃಪನಿದಿರೇಳಪೆ ನುಡಿಯದೆ ಕುಳಿತಿರಲಾ |
ನಡೆಕಂಡು ಗುರು ಮಹಿಪತಿ ಪ್ರಭು ದಾಸನು ಕಡುಕೋಪ ಮುನಿ ತಾಳಿದ''[೨೦]

ಗಜೇಂದ್ರನು ಹಿಂದಿನ ಜನ್ಮದಲ್ಲಿ ಇಂದ್ರದ್ಯುಮ್ನನೆಂಬ ರಾಜನಾಗಿದ್ದನು. ರಾಜನು ಜ್ಞಾನ, ಭಕ್ತಿ, ವೈರಾಗ್ಯಯುಕ್ತನಾಗಿ ಮಹಾತಪಸ್ವಿಯಾಗಿದ್ದನು. ಒಂದು ದಿನ ಆಗಸ್ತ್ಯ ಋಷಿಗಳು ಅವನಲ್ಲಿಗೆ ಬಂದಾಗ ಅವರಿಗೆ ಎದ್ದು ನಿಂತು ವಿನಯದಿಂದ ಸತ್ಕರಿಸಲಿಲ್ಲ. ಇದರಿಂದ ಕುಪಿತಗೊಂಡ ಅಗಸ್ತ್ಯಋಷಿ ಇಂದ್ರದ್ಯುಮ್ನನಿಗೆ ಮದ್ದಾನೆಯಾಗು ಎಂಬ ಶಾಪವನ್ನು ಹಾಕುತ್ತಾನೆ. ಇದು ಗಜೇಂದ್ರನ ಹಿಂದಿನ ಜನ್ಮದ ಪೂರ್ವಕಥೆ. ಮುಂದೆ ಈ ಶಾಪಕ್ಕೆ ಗುರಿಯಾಗಿ ಗಜೇಂದ್ರನು ಆನೆಯಾಗಿ ಹುಟ್ಟುತ್ತಾನೆ. ಆ ಋಷಿಮುನಿಯ ಶಾಪ ಎಸಗುವ ಸಂದರ್ಭವನ್ನು ಕೃಷ್ಣದಾಸರು ಹೀಗೆ ಬಣ್ಣಿಸಿದ್ದಾರೆ.

''ಏನೆಲವೋ ಮೂಢ ಮಾನವನೇ ಎಂದು ನುಡಿ |
ದನು ಅಗಸ್ತ್ಯಮುನಿ ದೋರುವ ಡಾಂಭಿಕನೇ

ಜಡೆ ಹೊತ್ತು ವೈರಾಗ್ಯ ತಾಳಿ ವ್ರತ ತಪದಿಂದ |
ಬಿಡದೆ ಮಹಾತ್ಮರವಮಾನ ಮಾಡುವದೆತ್ತ ||
ದೃಢ ಭಾಗವತ ಧರ್ಮವೆತ್ತ ಗರ್ವ |
ನಡತೆಯಲಿ ಬೆರೆತು ಕುಳಿತಿಹುದು ತಾನೆತ್ತು ||

ಎಲ್ಲರಿಗೆ ತಾನೆ ಕಿರಿಯೆಂದು ವಿನಯ ತಾಳಿ |
ಬಲ್ಲತನ ತೋರಿ ವಾರಿಸದೆ ವಳ್ಳೆವರಲ್ಲಿ ||
ನಿಲ್ಲುವವ ಸಾಧು ಅವನಿಯಲಿ ಸುಗುಣ |
ವೆಲ್ಲಿನಿತು ನಿನಗೇಕೆ ವನವಾಸವಿಲ್ಲ

ಎನಗಿಂತ ಅತಿಶಯ ನೀನಾದೆಲವೋ ಮದದಿಂದ |
ಅನುವಾಗಿ ಗಜಯೋನಿಯಲಿ ಜನಿಸು ಹೋಗೆಂದ ||
ಮುನಿದು ಶಾಪವನಿತ್ತು ಛಂದದಿಂ ತಿರುಗಿ
ಘನಗುರು ಮಹಿಪತಿಪ್ರಿಯ ಮುನಿಪ ಬಂದ''[೨೧]

ಇದರಲ್ಲಿ ಗಜೇಂದ್ರನ ಪೂರ್ವಜನ್ಮದ ಕಥೆಯು ಬಿತ್ತರವಾಗಿದೆ. ಆ ಜನ್ಮದಲ್ಲಿ ಪಡೆದ ಶಾಪವು ಅವನನ್ನು ಕಾಡುವ ರೀತಿಯಲ್ಲಿ ಅಭಿವ್ಯಕ್ತಗೊಂಡಿದೆ. ಅಗಸ್ತ್ಯ ಋಷಿಯ ಈ ಮೇಲಿನ ನುಡಿಗಳು ಗಜೇಂದ್ರನಿಗೆ ತುಂಬ ಸಂಕಟವನ್ನು ತರುತ್ತವೆ. ಕಾವ್ಯದ ಆರಂಭ ರಮ್ಯವಾಗಿವಾಗಿದೆ. ಕಥಾಹಂದರಕ್ಕೆ ಬರುವ ಮುಂಚೆ ಅದರ ಹಿನ್ನೆಲೆಯನ್ನು ಕೊಡುವ ಮೂಲಕ ಕೃಷ್ಣದಾಸರು ಈ ಕಾವ್ಯದ ಕಥೆಗೆ ಮೆರುಗನ್ನು ನೀಡಿದ್ದಾರೆ. ಭಕ್ತ ಮತ್ತು ಭಗವಂತನ ನಡುವಿನ ಅವಿನಾಭಾವದ ಸಂಕೇತವಾಗಿ ಇಲ್ಲಿಯ ಕಥೆ ಚಿತ್ರಿತಗೊಂಡಿದೆ. ಇದೆಲ್ಲವೂ ಕಾವ್ಯದ ಮಹತ್ವವನ್ನು ಬಿಂಬಿಸುತ್ತದೆ.

ಕೃಷ್ಣದಾಸರು ಗಜೇಂದ್ರಮೋಕ್ಷ ಕಥಾಭಾಗದಲ್ಲಿ ತ್ರಿಕೂಟ ಪರ್ವತ, ಸ್ಥಾವರ ಸಂಪತ್ತಿನ ವರ್ಣನೆಯನ್ನು ಮೂಲ ಶ್ರೀಮದ್ಭಾಗವತದಲ್ಲಿ ಚಿತ್ರಿತವಾದಂತೆ ಸೆರೆ ಹಿಡಿದ್ದಿದ್ದಾರೆ. ಆದರೆ ತಮ್ಮ ಕೀರ್ತನೆಯ ಅಭಿವ್ಯಕ್ತಿಯಲ್ಲಿ ಸ್ವಂತಿಕೆಯನ್ನು ಮೆರೆದಿದ್ದಾರೆ. ಕಾವ್ಯಭಾಗವು ಕೇವಲ ವರ್ಣನೆಗೆ ಮಾತ್ರ ಸೀಮಿತವಾಗದೆ, ಆ ನಾಡಿನ ಸಕಲ ಸಂಪತ್ತು, ಅಲ್ಲಿಯ ಪುಣ್ಯಕ್ಷೇತ್ರಗಳ ಸಂದರ್ಶನದ ಪುಣ್ಯದ ಫಲವಾಗಿ ಕಂಡುಬರುತ್ತದೆ. ಗಜೇಂದ್ರನ ಅಭಯದಿಂದ ಅಲ್ಲಿರುವ ಎಲ್ಲ ಮೃಗಗಳು ಸುರಕ್ಷಿತವಾಗಿ ತಮ್ಮ ನೆಲೆಯನ್ನು ಕಂಡುಕೊಂಡಿವೆ. ಇದು ಹರಿಭಕ್ತರ ಸಂಗದ ಆಶ್ರಯದ ಆಶ್ರಮವಾಗಿ ಎಲ್ಲ ಸಕಲ ಜೀವರಾಶಿಗಳಿಗೂ ನಿರ್ಭಯವನ್ನು, ಸಂತೋಷವನ್ನು ಉಂಟುಮಾಡುವ ಸಂದೇಶ ಇಲ್ಲಿ ಎದ್ದು ಕಾಣುತ್ತದೆ.

''ನಾನೊಂದು ನೆನೆಯಲು ತಾನೊಂದಾಯಿತು ಪ್ರಾರಬ್ಧಗತಿ ಬಿಡದೆಂದು |
ತಾ ನಿಜ ಧೈರ್ಯವ ತಾಳಿದ ಹರಿಯನ್ನುದ್ಧರಿಸದೆ ಇರನೆಂದು |
ಭೂನಾಥಗಾಮೇಲೆ ಗಜಜನ್ಮವಾಯಿತು ಪಾಲ್ಗಡಲದ ದಡದಲೊಂದು |
ತಾನಾಗ ವರ ತ್ರಿಕೂಟಾಚಲ ವನದಲಿ ಜನಿಸಿದವ ಬಂದು''[೨೨]

ದಾಸರು ಗಜೇಂದ್ರನ ಜನನವನ್ನು ಚಿತ್ರಿಸಿ ಕಥೆಯ ಆಶಯವಿನ್ಯಾಸವನ್ನು ಸ್ಪಷ್ಟಪಡಿಸಿದ್ದಾರೆ. ಭಗವಂತನ ಮೇಲಿನ ಅಚಲವಾದ ಶಕ್ತಿ ಯಾವ ಕಾಲಕ್ಕಾದರೂ ಫಲವನ್ನು ನೀಡುವಂತಹದ್ದು. ಆದ್ದರಿಂದ ಗಜೇಂದ್ರ ತನ್ನ ಪ್ರಾರಬ್ಧಗತಿಯನ್ನು ನೆನಪಿಸಿಕೊಂಡು ಶ್ರೀಹರಿಯ ಮೇಲೆ ಇಟ್ಟಿರುವ ತನ್ನ ಅಚಲವಾದ ಶ್ರದ್ಧೆಯು ಕಾವ್ಯದಲ್ಲಿ ಅನಾವರಣಗೊಳ್ಳುತ್ತದೆ. ಕೃಷ್ಣದಾಸರು ಗಜೇಂದ್ರ ಜನಿಸಿದ ಪ್ರದೇಶವನ್ನು ಮನತುಂಬಿ ಕೊಂಡಾಡಿದ್ದಾರೆ. ಒಂದು ರೀತಿಯಲ್ಲಿ ಇಡೀ ಸ್ವರ್ಗವೇ ಅಲ್ಲಿ ನೆಲೆ ನಿಲ್ಲುವ ಹಾಗೆ ಅಲ್ಲಿಯ ಪ್ರದೇಶ ಅಭಿವ್ಯಕ್ತಗೊಂಡಿದೆ.

''ಶೃಂಗ ಮೂರರ ಮೇಲೆ ಹರಿಹರ ಬ್ರಹ್ಮರ ಸಾನಿಧ್ಯವಾ ಗಿರಿಯಲ್ಲಿ |
ಮಂಗಳವಾದ ಸ್ಥಳದಲ್ಲಿ ಹುಟ್ಟಿದ ಅವನ ಭಾಗ್ಯವೇಂ ಬಣ್ಣಿಸಲಿ |
ಜಂಗಮ ಗಿರಿಯಂತೆ ಗಜರಾಜನೊಪ್ಪಿದ ಉನ್ನತೋನ್ನತ ಕಾಯದಲಿ
ಕಂಗಳಿಗಿದಿರವ ಬಗೆಯದೆ ಮತ್ತೊಂದು ಮಾತಂಗ ತಿರುಗುವನಲ್ಲಿ''[೨೩]

ಪರ್ವತರಾಜ ತ್ರಿಕೂಟದ ತಪ್ಪಲಿನಲ್ಲಿ ನಾನಾ ವಿಧದ ಹಣ್ಣು, ಗಿಡಮರ, ಹೂವಿನಿಂದ ಅಲಂಕೃತಗೊಂಡಿದೆ. ಹಲವಾರು ಹೆಣ್ಣಾನೆ, ಮರಿಯಾನೆ, ಸಣ್ಣಾನೆಗಳ ಜೊತೆ ಗಜೇಂದ್ರನು ವಾಸವಾಗಿ ವಿಹರಿಸುತ್ತಿದ್ದನು. ಅಲ್ಲಿಯ ದುರ್ಬಲ ಪ್ರಾಣಿಗಳು ಗಜರಾಜನ ಕೃಪೆಯಿಂದ, ನಿರ್ಭಯವಾಗಿ ಸಂಚರಿಸುತ್ತಿದ್ದವು. ಗಜರಾಜನ ವಾಸನೆಯಿಂದ ಸಿಂಹ, ಹುಲಿ, ಚಿರತೆ ಮುಂತಾದವುಗಳಾದ ಹಿಂಸೆಯ ಪ್ರಾಣಿಗಳು, ಸರ್ಪಗಳು ಇನ್ನೂ ಅನೇಕ ದುಷ್ಟಮೃಗಗಳು ಓಡಿಹೋಗುತ್ತಿದ್ದವು. ಆ ತೆರನಾಗಿ ಅಲ್ಲಿ ಗಜರಾಜನ ಜೀವನಸಾಗಿತ್ತು. ಗಜರಾಜನು ತನ್ನ ಸಂಗಾತಿಗಳ ಜೊತೆ ಭಾರವಾದ ಹೆಜ್ಜೆಯನ್ನು ಹಾಕುತ್ತಿದ್ದರೆ ಅಲ್ಲಿಯ ಪರ್ವತವೇ ನಡುಗುತ್ತಿತ್ತು. ಗಜರಾಜನ ಗಂಡಸ್ಥಲದಿಂದ ಒಸರುತ್ತಿದ್ದ ಮದೋದಕವನ್ನು ಪಾನ ಮಾಡಲು ದುಂಬಿಗಳು ಜೊತೆ ಜೊತೆಯಾಗಿಯೇ ಹಾರುತ್ತಿದ್ದವು. ಮದದಿಂದ ಅದರ ಕಣ್ಣುಗಳು ವಿಹ್ವಲವಾಗಿದ್ದವು. ಈ ದೃಶ್ಯವನ್ನು ಕೃಷ್ಣದಾಸರು ಕಾವ್ಯಾತ್ಮಕತೆಯಿಂದ ಸೆರೆ ಹಿಡಿದಿದ್ದಾರೆ.

''ಗಂಡಸ್ಥಳದಿ ಮದಜಲಧಾರೆ ಸುರಿಯಲು |
ಜೊಂಡ ವನಭೂಮಿ ಕೆಸರಾಗಿಹುದು |
ತಂಡ ಪರಿಮಳ ವಾಸನೆ ಕೊಳುತ ಮೃಗವ್ಯಾಘ್ರ |
ಹಿಂಡು ಶರಭ ಗುಹ್ಯ ಬಿಟ್ಟಡವಿ ಹೊಕ್ಕವು ||

ಮಲೆತ ಮೃಗ ಬೆನ್ನಟ್ಟಿ ಹೊಕ್ಕದರ |
ಬಳಗ ಸಹಿತ ತಾಳಪಟಿ ಯಾಡುವಾ |
ಉಳಿದ ಮೃಗಜಾತಿಗೆ ಉಳಿಗಾಲ ವೆಲ್ಲಿಹುದು |
ಬಲಗೊಂಡು ಶರಣ ಹೊಕ್ಕು ಭಯದಿ ಬದುಕಿದವು''[೨೪]

ಸುಡುವ ಬೇಸಿಗೆಯ ಬಿಸಿಲಿನ ತಾಪದಿಂದ ಗಜರಾಜನು ವ್ಯಾಕುಲನಾಗಿದ್ದನು. ತನ್ನ ಸಂಗಾತಿಗಳಿಗೂ ಸಹ ಬಾಯಾರಿಕೆ ಕಾಡುತ್ತಿತ್ತು. ಆಗ ದೂರದ ಕಮಲದ ಸುವಾಸನೆಗೆ ಕಂಪಿಸುತ್ತಿತ್ತು. ಆ ಗಾಳಿಯ ಜಾಡನ್ನು ಆ ಸರೋವರ ಕಡೆಗೆ ವೇಗವಾಗಿ ನಡೆಯುತ್ತಾ ಸರೋವರದ ಬಳಿಗೆ ಗಜರಾಜನು ಬರುತ್ತಾನೆ. ಸರೋವರದ ನೀರು ಅತ್ಯಂತ ನಿರ್ಮಲವಾಗಿ ಅಮೃತದಂತೆ ಮಧುರವಾಗಿತ್ತು. ಗಜೇಂದ್ರನು ಮೊದಲಿಗೆ ಆ ಸರೋವರದಲ್ಲಿ ಇಳಿದು ತನ್ನ ಸೊಂಡಿಲಿನಿಂದ ನೀರನ್ನು ಎತ್ತಿ ಯಥೇಚ್ಛವಾಗಿ ಕುಡಿದು ದಣಿವನ್ನು ಇಂಗಿಸಿಕೊಳ್ಳುತ್ತಾನೆ. ತನ್ನ ಸಂಗಾತಿಗಳಿಗೆ ನೀರನ್ನೆತ್ತಿ ಚೆಲ್ಲುತ್ತಾ ಸ್ನಾನ ಮಾಡಿಸುತ್ತಾನೆ. ಶ್ರೀಹರಿಯ ಮಾಯೆಯಿಂದ ಮೋಹಿತನಾದ ಗಜೇಂದ್ರನು ಉನ್ಮತ್ತನಾಗಿದ್ದನು. ತನ್ನ ತಲೆಯ ಮೇಲೆ ದೊಡ್ಡದಾದ ಒಂದು ಆಪತ್ತು ಹೊಂಚುಹಾಕುತ್ತಿತ್ತು. ಅದು ಗಜೇಂದ್ರನಿಗೆ ತಿಳಿದಿರಲಿಲ್ಲ. ಆ ಸನ್ನಿವೇಶವನ್ನು ಕೃಷ್ಣದಾಸರು ಅದ್ಭುತವಾಗಿ ಹೆಣೆದಿದ್ದಾರೆ.

‘‘ಆಲಿಸಿನ್ನು ಕಥೆಯ ಶುಕನೆಂದನು ಜಲದೊಳಗೀಪರಿಯಲಿ
ಮೇಳದಿ ಆಡುವ ಕರಿದ್ವನಿಗೇಳುತ ಬಂದಿತೊಂದುನೆಗಳಿ ||

ಬರುತಲಿರೋಷದಿ ಕಾಲ್ವಿಡಿಯಲು ಗಜವರನೆಂದ ಜಲಚರವೇ |
ಶರಣ ಹೊಕ್ಕವರನು ಕೊಲ್ಲೆ ನಾ ಏಳೇಳು ಬಿಡು ಬಿಡು ಭೀತಿಯನು |
ಕರಿಗುತ್ತರ ಕೊಟ್ಟಿತ ನಿನ್ನ ಕರುಣವ ಬೀರಲೋ ಅನ್ಯರೊಡನೆ |
ದುರಳನ ಬಿಡೆನೆನುತಂಘ್ರಿಯ ನುಂಗುತುಯಳಿಯಿತು ಶರೀರವನೆ’’[೨೫]

ಗಜೇಂದ್ರನ ವೈಭವವನ್ನು ಕಣ್ಣಿಗೆ ಕಟ್ಟುವಂತೆ ಕೃಷ್ಣದಾಸರು ಸೆರೆ ಹಿಡಿದಿದ್ದಾರೆ. ಆದರೆ ಭಗವಂತನ ಭಕ್ತರಾದವರಿಗೆ ಯಾವ ವಿಷಯಗಳಲ್ಲಿ ಸಂತೋಷ ಸಿಗುತ್ತದೆ ಎಂಬುದನ್ನು ತರ್ಕಿಸಲು ಆಗುವುದಿಲ್ಲ. ಒಮ್ಮೆಲೇ ಪ್ರಾರಬ್ಧ ಕರ್ಮವಶಾತ್ ಸಂಕಟಗಳು ಅನಿರೀಕ್ಷಿತವಾಗಿ ಬರುವುದುಂಟು. ಬಂದಿರುವ ಸಮಸ್ಯೆಯನ್ನು ಪರಿಹಾರ ಮಾಡಲು ಭಗವಂತನು ಭಕ್ತರಿಗೆ ಒಂದು ಉಪಾಯವನ್ನು ನೀಡಿರುತ್ತಾನೆ. ಅದುವೇ ಭಕ್ತಿಯಿಂದ ಶ್ರೀಹರಿಯನ್ನು ನೆನೆಯುವುದಾಗಿದೆ. ಅದು ಈ ಕಾವ್ಯದಲ್ಲೊಂದು ಉದಾಹರಣೆಯಾಗಿದೆ. ಗಜೇಂದ್ರ ಮೊಸಳೆಯ ಬಾಯಲ್ಲಿ ಸಿಕ್ಕು ಸಂಕಟವನ್ನು ಎದುರಿಸುತ್ತಿದ್ದಾನೆ. ಮೊಸಳೆಯ ಬಿಗಿ ಹಿಡಿತದಿಂದ ಬಿಡಿಸಿಕೊಳ್ಳಲು ತನ್ನ ಸಂಗಾತಿ ಆನೆಗಳು ಸಹ ಪ್ರಯತ್ನ ಮಾಡಿದರು ಸಾಧ್ಯವಾಗದೇ ಇರುವಂತಾಗುತ್ತದೆ. ಎಲ್ಲ ಆನೆಗಳು ಈತನ ಸಂಕಟ ನೋಡಿ ನಿರುಪಾಯರಾಗಿ ಗಜೇಂದ್ರನೊಬ್ಬನನ್ನೇ ಬಿಟ್ಟು ಹೋದಾಗ ಗಜೇಂದ್ರನಿಗೆ ನಿಜವಾಗಿಯೂ ವೈರಾಗ್ಯ ಉದಯವಾಗುತ್ತದೆ. ಹೀಗೆ ಈ ಘಟನೆ ಅನೇಕ ವರ್ಷಗಳವರೆಗೆ ನಡೆಯುತ್ತದೆ. ಗಜೇಂದ್ರ ಮತ್ತು ಮೊಸಳೆಯನ್ನು ಮೇಲಕ್ಕೆತ್ತಿದರೆ, ಮತ್ತೇ ಕೆಲವೊಮ್ಮೆ ಮೊಸಳೆ ನೀರಿಗೆ ಹಾಕುತ್ತದೆ. ಈ ರೀತಿಯಲ್ಲಿ ಬಹಳ ದಿನಗಳವರೆಗೆ ಸೆಣಸಾಟ ನಡೆಯುತ್ತದೆ. ಇದರಿಂದ ಗಜೇಂದ್ರನ ಶರೀರ ಶಿಥಿಲವಾಗಿ ತನ್ನ ನಿಜವಾದ ಶಕ್ತಿಯು ಕುಗ್ಗುತ್ತಾ ಸಾಗುತ್ತದೆ. ಕೊನೆಗೆ ಗಜೇಂದ್ರನು ಒಂದು ತಿರ್ಮಾನಕ್ಕೆ ಬರುತ್ತಾನೆ.

‘‘ಆ ಸಮಯಕೆ ಮತಿ ವದಗಿತು ಮನದಲಿ ಪೂರ್ವಭವಾಂತರದಾ |
ವಾಸುದೇವನ ಪೂಜಿಸಿದಾ ಫಲದಿಂದ ವೈರಾಗ್ಯ ಪರನಾದಾ ||
ಘೇಶನಿರ್ಜರಾಕಾಶದಿ ನೋಡುತ ವಂದಿಸಿ ಕಣ್ದೆರೆದ |
ದ್ದಾಸ ಬಲಿದು ಗುರು ಮಹಿಸತಿ ಪ್ರಭುವಿನ ತಾ ನೆನೆದಾ’’[೨೬]

ಯಾರು ಈ ಜಗತ್ತಿನ ಮೂಲಕ್ಕೆ ಕಾರಣಕರ್ತರಾಗಿದ್ದಾರೋ, ಎಲ್ಲರ ಹೃದಯದಲಿ ಆತ ನೆಲೆಸಿರುತ್ತಾನೆಯೋ ಅಂತ ಚೈತನ್ಯದ ವಿಸ್ತಾರನಾದ ಸಚ್ಚಿದಾನಂದ ಸ್ವರೂಪಿಯಾದ ಪರಮಾತ್ಮನಿಗೆ

ನಾನು ನಮಸ್ಕರಿಸುತ್ತೇನೆ. ಭಕ್ತಿಯಿಂದ ಆತನನ್ನು ಧ್ಯಾನಿಸುತ್ತೇನೆಂಬ ನಿರ್ಧಾರಕ್ಕೆ ಗಜೇಂದ್ರನು ಬರುತ್ತಾನೆ. ‘‘ಈ ಸಂಸಾರವೆಂಬುವುದು ತ್ರಿಕೂಟ ಪರ್ವತ, ಮೂರು ಗುಣಗಳ(ಸತ್ವ, ರಜ, ತಮ) ಸಂಯೋಜನೆಯಿಂದ ಆದದ್ದು. ಇಲ್ಲಿ ಗಜೇಂದ್ರನಂತೆ ಹಿಂದಿನ ಕರ್ಮದ ಫಲದಿಂದ ಹುಟ್ಟಿ ಬಂದು ಜೀವರು ಸತಿ, ಸುತ, ಬಂಧು, ಮಿತ್ರ, ಆಪ್ತವರ್ಗವೆಂಬ ಹಿಂಡಾನೆಗಳನ್ನು ಸಾಕಿ, ಸಲುಹಿ ಅವರಿಗೆಲ್ಲ ಅಭಯವನ್ನು ನೀಡಿ ಮರೆಯುವರು. ಆದರೆ ಗಜೇಂದ್ರನು ಸರೋವರದಲ್ಲಿ ಆನಂದದಿಂದ ತನ್ನ ಬಳಗದ ಜೊತೆ ಜಲಕ್ರೀಡೆಯಲ್ಲಿ ಮೈ ಮರೆತಾಗ ಮೊಸಳೆಯು ಬಂದು ಕಾಲು ಹಿಡಿದಂತೆ ಈ ಜೀವನ ಸಂಸಾರ ಸುಖದಲ್ಲಿ ಮೆರೆದಾಡುವಾಗ, ಅನಿರೀಕ್ಷತವಾಗಿ ‘ಮೃತ್ಯು’ ಎಂಬ ಮೊಸಳೆಯು ಸೆಳೆಯುವುದು. ಇದರಿಂದ ಪಾರು ಮಾಡಲು ಬಂಧು, ಬಾಂಧವರೆಂಬ ಅಸಂಖ್ಯ ಆನೆಗಳು ಸಾಕಷ್ಟು ಸೆಣೆಸಾಡುವವು. ಆದರೆ ಕೊನೆಗೆ ಸ್ವಾರ್ಥಿಗಳಾದ ಇವರು ಗಜರಾಜನೊಬ್ಬನನ್ನೇ ಬಿಟ್ಟಂತೆ, ಈ ಜೀವನವನ್ನು ಬಿಟ್ಟು ಓಡಿಹೋಗುವರು.’’[೨೭] ಹಾಗಾಗಿ ಗಜೇಂದ್ರನು ಸಕಾಲದಲ್ಲಿ ಇಲ್ಲಿ ಮುಕ್ತಿಯ ಉಪಾಯವನ್ನು ಕಂಡುಕೊಂಡದ್ದು ಅರ್ಥಪೂರ್ಣವಾಗಿದೆ. ಪೂರ್ವ ಜನ್ಮದ ಸುಕೃತವಿದ್ದರೆ ಭಕ್ತಿಯು ಮತ್ತಷ್ಟು ತೀವ್ರವಾಗುತ್ತದೆ. ಎಂಬುದಕ್ಕೆ ಈ ಕಾವ್ಯವು ಅತ್ಯಂತ ನಿದರ್ಶನವಾಗಿದೆ. ಕಾವ್ಯದ ಈ ಭಾಗ ಅಂತಸತ್ವ ಪೂರ್ಣವಾಗಿ ಕಂಡುಬಂದಿದೆ. ಇಲ್ಲಿ ಶೋಕರಸ ಮಡುಗಟ್ಟಿ ನಿಂತಿದೆ. ಕರುಣೆ, ಮಮಕಾರ, ಆರ್ತಭಕ್ತಿ ಉಕ್ಕಿ ಹರಿದಿವೆ. ಅದನ್ನು ಕೃಷ್ಣದಾಸರು ಹಲವು ಪದ್ಯಗಳಲ್ಲಿ ಒತ್ತಿ ಹೇಳಿದ್ದಾರೆ.

‘‘ಬಾರಯ್ಯಾ ಸಿರಿರಮಣ ದೋರು ನಿನ್ನಯ ಚರಣಾ |
ಬೀರಿ ನಿಜಘನಕರುಣ ತೋರಿಸೋಯನ್ನಾ ||
ನೆಗಳಿ ನುಂಗಿತು ದೇಹವೆಂದು ಮೊರೆ ಇಡುವದಿಲ್ಲಾ |
ಬಗೆದೆನ್ನಾ ಜೀವನವ ನಿನ್ನ ಮಾಯನೆಗಳಿ ||
ಜಗದೊಳಗೆ ನುಂಗುತಿದೆ ತಿರುಗಿ ಬಾರದ ಪರಿಲಿ
ನಗಧರನೆ ಬ್ಯಾಗೊದಗಿ ಬಿಡಿಸೆನ್ನ ಕಾಯೋ ||
ಮರಣ ಭಯಕಂಜಿ ನಾ ಶರಣವನು ಹೋಗಲಿಲ್ಲ |
ಭರದಿ ಮಾಡಿದ ಮುನ್ನಿನಘದ ಯೋಗದಲಿ |
ಕರಿಜನ್ಮದಲಿ ಬಂದೆ ಮುಂದಾವ ಜನುಮಗಳೋ’’[೨೮]

ಗಜೇಂದ್ರನ ಭಕ್ತಿ ಇಲ್ಲಿ ಸಹೃದಯನ ಕರುಣೆಯನ್ನು ಉಕ್ಕಿಸುತ್ತದೆ. ಪರಮಾತ್ಮನಿಗೆ ಈ ಧ್ವನಿ ಕೇಳಿಸದೆ ಇರಲು ಸಾಧ್ಯವಿಲ್ಲ. ಹಾಗೆಯೇ ನಾನಾ ಪ್ರಕಾರವಾಗಿ ಭಗವಂತನ ವಿವಿಧ ಲೀಲೆಗಳನ್ನು ಕೃಷ್ಣದಾಸರು ಕಣ್ಮುಂದೆ ತಂದಿದ್ದಾರೆ. ಶ್ರೀಹರಿಯು ತಾನು ಭಕ್ತರಿಗಾಗಿ ಮಾಡಿದ

ಅಭಯಹಸ್ತದ ವಿವಿಧ ಛಾಯೆಗಳು ಇಲ್ಲಿ ಮಾರ್ದ್ವನಿಸುತ್ತವೆ. ಗಜೇಂದ್ರನ ಸಂಕಟ ಸ್ವಾಭಾವಿಕವಾಗಿ ಭಕ್ತಿಯ ಮಾರ್ಗವನ್ನು ಹಿಡಿಯುತ್ತದೆ. ಹೀಗಾಗಿ ಶ್ರೀಹರಿಯು ಆತನ ನೆರವಿಗೆ ಆಗಮಿಸುತ್ತಾನೆ. ಗಜೇಂದ್ರನನ್ನು ಅನುಗ್ರಹಿಸಲು ಬಂದ ಶ್ರೀಹರಿಯ ಬಂಧಮೋಚಕತ್ವವೂ ಹೆಚ್ಚಾಗಿ ಕಂಡುಬರುತ್ತದೆ.

‘‘ಏನೆಂಥೇಳಲಿ ನಾ ಮಹಿಮೆಯ ಏನೆಂಥೇಳಲಿ ನಾ |
ತಾನಂದವರ ಅಭಿಮಾನ ತನ್ನದುಯಂಬದೀನ ಜನೋದ್ಧರ ನಾ’’[೨೯]

ಶ್ರೀಹರಿಯ ಸ್ತುತಿಯ ಮಹಿಮೆಯ ಕಾರ್ಯಗಳು ಇಲ್ಲಿ ಗೋಚರಿಸುತ್ತವೆ. ಶ್ರೀಹರಿಯನ್ನು ನೆನೆದ ಗಜೇಂದ್ರನು ಆತನ ಕೃಪೆಗೆ ಪಾತ್ರನಾಗುತ್ತಾನೆ. ಮೊಸಳೆಯ ಹಿಡಿತಕ್ಕೆ ಸಿಕ್ಕ ಗಜೇಂದ್ರನ ಕಾಲು ಸಂಕಟವನ್ನು ಪಡುತ್ತಿದ್ದವು. ಆ ಸಮಯದಲ್ಲಿ ಶ್ರೀಹರಿಯು ಆಕಾಶದಲ್ಲಿ ಗರುಡನ ಹೆಗಲೇರಿ, ಕೈಯಲ್ಲಿ ಸುದರ್ಶನ ಚಕ್ರವನ್ನು ಧರಿಸಿಕೊಂಡು ಗಜೇಂದ್ರನು ಕಾಣುತ್ತಾನೆ. ಗಜೇಂದ್ರನು ಶ್ರೀಹರಿಯನ್ನು ನೋಡಿ ತನ್ನ ಸೊಂಡಿಲಿನಿಂದ ಒಂದು ಕಮಲದ ಪುಷ್ಪವನ್ನು ಶ್ರೀಹರಿಯ ಪಾದಕ್ಕೆ ಎರಗಿ ನಮಸ್ಕರಿಸುತ್ತಾನೆ. ತಕ್ಷಣವೇ ದಯಾಮಯನಾದ ನಾರಾಯಣನು ಗರುಡನಿಂದ ಥಟ್ಟನೆ ಕೆಳಗಿಳಿದು ಮೊಸಳೆಯ ಬಾಯನ್ನು ತನ್ನ ಚಕ್ರಾಯುಧದಿಂದ ಸೀಳಿಹಾಕಿ ಗಜೇಂದ್ರನನ್ನು ಮುಕ್ತಗೊಳಿಸುತ್ತಾನೆ. ನಂತರದ ಶ್ರೀಹರಿಯು ಭಕ್ತರನ್ನು ಉದ್ಧರಿಸಿ ಈ ರೀತಿಯಲ್ಲಿ ಹೇಳುತ್ತಾನೆ.

‘‘ಭಕುತರ ಜೀವನವೆನ್ನಯ ಜೀವನ |
ಭಕುತರ ಸುಖವೆನ್ನೆಯ ಸುಖವು |
ಭಕುತರ ಪೂಜೆಯುಯನ್ನಯ ಪೂಜೆಯು |
ಭಕುತರ ವಚನೆನ್ನಯವಚನಾ |

ಭಕುತರ ಹಾನಿಯುಯನ್ನಯ ಹಾನಿಯು |
ಭಕುತರ ದ್ವೇಷಿಯನ್ನಯ ದ್ವೇಷಿ |
ಭಕುತದ ನಿಂದೆಯುಯನ್ನಯ ನಿಂದೆಯು| ತಿಳಿ |
ಭಕುತರ ಸಂಗವೆನ್ನಯ ಸಂಗಾ’’[೩೦]

ತನ್ನನ್ನು ನಂಬಿದ ಭಕ್ತರಿಗೆ ಶ್ರೀರಕ್ಷೆಯಾಗಿ ಭಗವಂತನು ಅಭಯದಾನ ಮಾಡಿ ಅಲ್ಲಿಂದ ತೆರಳುತ್ತಾನೆ. ಈ ಕಾವ್ಯ ಭಾಗವು ಕೃಷ್ಣದಾಸರಲ್ಲಿ ತೀವ್ರವಾಗಿ ಕಾಡಿದೆ. ಅವರ ಮನಸ್ಸನ್ನು ಪ್ರಭಾವಗೊಳಿಸಿದೆ. ಅದರ ಪರಿಪಕ್ವತೆಗೆ ಕನ್ನಡಿ ಹಿಡಿದಿರುವಂತಿದೆ. ಇಲ್ಲಿ ಇನ್ನೊಂದು ಬಹುಮುಖ್ಯವಾದ ಸಂಗತಿ ಅಡಗಿದೆ. ಗಜೇಂದ್ರನ ಹಾಗೇ ಪೂರ್ವಜನ್ಮದಲ್ಲಿ ಮೊಸಳೆಯು ಹೂ ಹೂ ಎಂಬ ಗಂಧರ್ವನಾಗಿದ್ದನು. ಇವರಿಬ್ಬರು ಶ್ರೀಹರಿಯ ಕೃಪೆಯಿಂದ ಶಾಪಮುಕ್ತರಾಗುವುದು ಇಡೀ ಕಾವ್ಯಕ್ಕೆ ಮೆರುಗನ್ನು ಉಂಟುಮಾಡುತ್ತದೆ. ಕಾವ್ಯದ ಕೊನೆಯಲ್ಲಿ ದಾಸರು ಕಾವ್ಯದ ಮಹತ್ವ ಕುರಿತು ಆಡಿಕೊಂಡಿದ್ದಾರೆ.

''ಶರಣು ಶರಣುಯನ್ನಿ ಗುರುಮೂರ್ತಿಗೆ |
ಮೊರೆ ಹೊಕ್ಕವರ ಕಾಯಿವಾ ಮಹಿಪತಿಗೆ

ಇದಕೆ ಕರ್ತನಲ್ಲಾ ನಾನು ಕೇಳಿರೆಲ್ಲಾ |
ವದಗಿ ಹೇಳಿಸಿದ ತಾನೇ ಕಥಿಯ ಸೊಲ್ಲಾ

ಲೋಹ ಚುಂಬಕದ ಸನ್ನಿಧಾನದಲಿ |
ವಿಹರಿಸುವಂತೆ ನೋಡಿರವನಿಯಲಿ

ಕುಂದನಾರಿಸದೆ ತನ್ನ ವಾಸನೆನಿಸಿ |
ಕಂದನುದ್ಧರಿಸಿದನು ದಯವಿರಿಸಿ''[೩೧]

ಕೃಷ್ಣದಾಸರು ಈ ಮೇಲಿನ ನುಡಿಯಲ್ಲಿ ಅರ್ಥಗರ್ಭಿತವಾಗಿ ಈ ಕಥೆಯ ಒಳಮರ್ಮವನ್ನು ಹೇಳಿದ್ದಾರೆ. ಕರ್ತೃತ್ವವನ್ನು ಅಲ್ಲಗಳೆದು ಭಗವಂತನಲ್ಲಿ ಅರ್ಪಿಸುವ ಇವರ ಭಾವ ದಾಸ್ಯತ್ವವನ್ನು ನೆನಪಿಸುತ್ತದೆ. ಕೃಷ್ಣದಾಸರ ಈ ತರಹದ ಭಾವ ಹರಿಭಕ್ತರನ್ನು ಮೈಮರೆಯುವಂತೆ ಮಾಡುತ್ತದೆ. ಒಟ್ಟಿನಲ್ಲಿ ಗಜೇಂದ್ರಮೋಕ್ಷ ಕಾವ್ಯವು ಕರುಣರಸವನ್ನು ಪ್ರಧಾನ ಭೂಮಿಕೆಯಾಗಿಟ್ಟುಕೊಂಡು ಶ್ರೀಹರಿಯ ಕರುಣೆಗೆ ಪಾತ್ರರಾಗುವ ಜೀವಿಗಳ ಕುರಿತು ತಿಳಿಯಪಡಿಸುವ ಕಾವ್ಯವಾಗಿದೆ.

೪. ಪ್ರಹ್ಲಾದ ಚರಿತ್ರೆ

ಕೃಷ್ಣದಾಸರು ರಚಿಸಿರುವ ಪ್ರಹ್ಲಾದ ಚರಿತ್ರೆಯು ೨೫ ಪದ್ಯಗಳನ್ನು ಒಳಗೊಂಡಿದೆ. ೧೩೩ ನುಡಿಗಳಲ್ಲಿ ರಚಿತವಾಗಿದೆ. ಕೃಷ್ಣದಾಸರು ಕಾವ್ಯದಲ್ಲಿ ವಿಶೇಷವಾಗಿ ಅನುಷಂಗಿಕವಾಗಿ ಪ್ರಹ್ಲಾದ ಚರಿತ್ರೆಯನ್ನು ಹೇಳುತ್ತಾ ಭಕ್ತ ಚಿಲ್ವಾಳನ ಕಥೆಯನ್ನು ನೆನಪಿಸುತ್ತಾರೆ. ಪ್ರಹ್ಲಾದನ ಚರಿತ್ರೆ ಜೊತೆ ಚಿಲ್ವಾಳನ ಚರಿತ್ರೆಯು ಈ ಕಾವ್ಯಕ್ಕೆ ಮೆರುಗನ್ನು ಉಂಟುಮಾಡಿದೆ. ಕಾವ್ಯದ ಆರಂಭವು ದೇವತಾಸ್ತುತಿಯಿಂದ ಪ್ರಾರಂಭಗೊಳ್ಳುತ್ತದೆ. ಈ ಭಾಗದಲ್ಲಿ ಶ್ರೀಹರಿಯ ಲೀಲೆಗಳನ್ನು ನೆನಪಿಸುತ್ತಾ ಪ್ರಹ್ಲಾದನ ಚರಿತ್ರೆಗೆ ಆಗಮಿಸುತ್ತಾರೆ ಕೃಷ್ಣದಾಸರು.

''ತನ್ನಿಂದ ತನ್ನ ಭಕ್ತರ ಮಹಿಮೆಗಳನು | ಬಣ್ಣಿಸಿ ಹೊಗಳುವನು |
ಉನ್ನತ ಸುಖವಿತ್ತು ಕಾವನುದಯವಿ ಪ್ರಸನ್ನ ಮುಕುಂದನು ||
ಇನ್ನು ನಾ ಕೇಳುವೆನದಿಂದ ಶರಣನ ಸನ್ನುತ ಚರಿತವನು |
ಚೆನ್ನಾಗಿ ಕೊಂಡಾಡುವೆನು ಹರುಷದಿ ಈಗ ಧನ್ಯನಾಗುವೆನೆನುತಾ ||

ಭಾಗವತರ ಮಾಲಿಯೊಳು ಮೇರುಯನಿಸಿದಾ| ಯೋಗಿ ಪ್ರಹ್ಲಾದ ದೇವನು |
ಬಾಗಿ ಹರಿಯಕಂಡು ಭವದಾ ದುರಿತಗಳ| ನೀಗಿ ಸದ್ಗತಿ ಕಂಡನು |

ಆ ಗುಣ ನಿಧಿ ಚರಿತವ ತುದಿಮೊದಲಿಂದ| ಯೋಗವ ಕೇಳಿರೆಲ್ಲಾ |
ಶ್ರೀಗುರುಮಹಿಪತಿ ನುಡಿಸಿದ ಪರಿಯಲಿ| ಈಗಳುಸುರುವೆ ಸೊಲ್ಲಾ"[೨೧]

ಚರಿತ್ರೆಯನ್ನು ಹೇಳುವ ಉದ್ದೇಶವನ್ನು ಈ ಮೇಲಿನ ನುಡಿಯಲ್ಲಿ ಸ್ಪಷ್ಟಪಡಿಸಿದ್ದಾರೆ. ಶ್ರೀಹರಿಯು ತನ್ನ ಲೀಲೆಗಳಿಗಿಂತಲೂ ತನ್ನ ಭಕ್ತಿಕಾರ್ಯವನ್ನು ಪ್ರಶಂಸಿಸುತ್ತಾ ಇರುತ್ತಾನೆ. ಅದಕ್ಕಾಗಿ ಭಗವಂತ ಮತ್ತು ಭಕ್ತ ಇವರ ನಡುವಿನ ಅವಿನಾಭಾವ ಸಂಬಂಧ ಇಂತಹ ಚರಿತ್ರೆಯನ್ನು ರಚಿಸಲು ಪ್ರೇರಕವಾಗುತ್ತದೆ. ಭಾಗವತರ ಮಾಲೆಯಲ್ಲಿ ಸರ್ವಶ್ರೇಷ್ಠನಾದ ಭಕ್ತ ಪ್ರಹ್ಲಾದನ ಮಹಿಮೆಯನ್ನು ಹೇಳುತ್ತ ಶ್ರೀಹರಿಯನ್ನು ಕೊಂಡಾಡುವುದು ಈ ಕಾವ್ಯದ ಅಂತರಾಳವಾಗಿದೆ. ಕೃಷ್ಣದಾಸರು ಪ್ರಹ್ಲಾದನ ಕಥೆಯನ್ನು ಹೇಳುತ್ತಾ, ಸಾಂದರ್ಭಿಕವಾಗಿ ಸಹೃದಯರಿಗೆ ಚಿಲ್ಹಾಳನ ಕಥೆಯನ್ನು ಉದಾಹರಿಸುತ್ತಾರೆ. ಭಕ್ತ ಮತ್ತು ಭಗವಂತನ ಸಂಬಂಧವನ್ನು ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ಚಿತ್ರಿಸುವ ಪ್ರಯತ್ನವನ್ನು ಕೃಷ್ಣದಾಸರು ಇಲ್ಲಿ ಮಾಡಿದ್ದಾರೆ.

"ಸಾತ್ವಿಕ ಸ್ವಭಾವದ ಜೀವಿಗಳು ಎಲ್ಲೇ ಹುಟ್ಟಲಿ, ಯಾವುದೇ ವಿರುದ್ಧ ವಾತಾವರಣವಿರಲಿ, ಎಂಥ ವಿಷಮ ಪ್ರಸಂಗಗಳಿರಲಿ. ತಮ್ಮ ಸ್ವಭಾವಕ್ಕನುಗುಣವಾಗಿ ಶ್ರೀಹರಿ ಭಕ್ತಿಯನ್ನು ಅಖಂಡ ವಿಶ್ವಾಸವನ್ನು ಬಿಡಲಾರರು. ಇದಕ್ಕನುಗುಣವಾಗಿ ಶ್ರೀಹರಿಯೂ ತನ್ನ ಭಕ್ತರನ್ನು ರಕ್ಷಿಸದೇ ಇರಲಾರ. ಈ ಭಕ್ತನ ಹಾಗೂ ಸ್ವಾಮಿಯ ಸ್ವರೂಪ ಸಾಕ್ಷಾತ್ಕಾರವೂ ಸುದೀರ್ಘ ವಿಷಮ ಪರಿಸ್ಥಿತಿಯ ಜೊತೆಗೆ ಸಂಘರ್ಷಣ ನಡೆದಾಗಲೇ ಆಗುವುದು. ಭಕ್ತಶ್ರೇಷ್ಠ ಪ್ರಹ್ಲಾದನ ಸತ್ವ ಪರೀಕ್ಷೆಯ ಅಂತಿಮಘಟ್ಟವು ನರಸಿಂಹ ಪ್ರಾದುರ್ಭಾವ ಹಾಗೂ ಅನಂತರದಲ್ಲಿಯ ಪ್ರಸಂಗಗಳಲ್ಲಿ ಹೆಚ್ಚಾಗಿ ಕಂಡಿದೆ. ಈ ಕಥೆಯಲ್ಲಿ ಮುಖ್ಯವಾಗಿ ಕಂಡುಬರುವ ಹಿರಣ್ಯಕಶಿಪು, ಪ್ರಹ್ಲಾದ-ನಾರದ-ಗುರುವೃಂದ ಮೊದಲಾದವರೆಲ್ಲರೂ, ಮೂಲತಃ ಸಾತ್ವಿಕ ಸ್ವಭಾವದವರೇ."[೨೨] ಆದರೆ ಹಿರಣ್ಯಕಶಿಪು ಮಾತ್ರ ಬದಲಾವಣೆಗೊಂಡು ತಾನೇ ಸರ್ವಸ್ವ ಎಂದು ಬಗೆದು ಶ್ರೀಹರಿಯನ್ನು ಅಲ್ಲಗಳೆದ ರೀತಿ ಇಲ್ಲಿ ವಿಭಿನ್ನವಾಗಿ ಚಿತ್ರಿತಗೊಂಡಿದೆ.

ಹಿರಣ್ಯಕಶಿಪು ತನ್ನ ತಮ್ಮನಾದ ಹಿರಣ್ಯಾಕ್ಷನ ವಧೆಯಿಂದ ದುಃಖಿತರಾದ ತನ್ನ ಕುಟುಂಬದವರನ್ನು ಸಂತೈಸುತ್ತಾನೆ. ಜೀವನವು ಪರತಂತ್ರವಾಗಿದ್ದು, ಪರಮಾತ್ಮನೇ ಸ್ವತಂತ್ರನಾಗಿದ್ದಾನೆ. ಸಾವು ಯಾರನ್ನೂ ಸಹ ಬಿಟ್ಟಿಲ್ಲ. ಹೀಗೆ ಉಪದೇಶದ ಮಾತುಗಳನ್ನಾಡುತ್ತಾನೆ. ಮತ್ತೆ ತನ್ನ ತಮ್ಮನ ಸಾವಿನಿಂದ ತನ್ನಲ್ಲಿಯೇ ಯೋಚಿಸಿ, ಪ್ರಚೋದಿತನಾಗಿ ತಾನು ಉಗ್ರವಾದ ತಪಸ್ಸನ್ನು ಮಾಡುತ್ತಾನೆ. ಮೃತ್ಯುವನ್ನು ಜಯಿಸುವ ವರವನ್ನು ಬ್ರಹ್ಮನಿಂದ ಪಡೆಯುತ್ತಾನೆ. ಈ ಕಡೆ ತನ್ನ ಧರ್ಮಪತ್ನಿ ಕಯಾದು ಪ್ರಹ್ಲಾದನಿಗೆ ಜನ್ಮವೆತ್ತುತ್ತಾಳೆ. ಒಂದು ಕಡೆ ಆಸ್ತಿಕನಾದ ತಂದೆ ಮತ್ತೊಂದು ಕಡೆ ನಾಸ್ತಿಕನಾದ ಮಗನ ನಡುವೆ ನಡೆಯುವ ಮುಂದಿನ ಕಥೆಯು ಕಾವ್ಯದ ಮಹತ್ವಕ್ಕೆ ಒತ್ತನ್ನು ನೀಡಿದೆ.

"ಹಿರಣ್ಯಕಶ್ಯಿಪನೆಂಬ ಅದಟ ದೈತ್ಯೇಂದ್ರ| ಇರುತಿರೆ ಹರಿದ್ವೇಷಿಯನಿಸಿ |
ವರಗಳ ಪಡಿಯಲು ವಿಪಿನಕನಡೆದ್ಹೋಗಿ ಕುಳಿತನು ಆಹಾರವ ತ್ಯಜಿಸಿ ||
ಇರಲಿತ್ತ ಮುನಿಯೊಳು ಅವನ ಪಟ್ಟದರಾಣಿ ಕಯಾಧು ಗರ್ಭವ ಧರಿಸೀ |
ಸುರಪನು ಕಾಣುತ ಕೊಂಡೊಯ್ದು ಸ್ವರ್ಗಕ ಚೋರಬುದ್ಧಿಯಿಂದಾದರಿಸೀ ||

ಋಷಿವರ ನಾರದ ಕಾಣುತ ಇಂದ್ರನಜರಿದು ಬಿಡಿಸಿಕೊಂಡನಂದು |
ಶಿಶುವಿಗೆ ಗರ್ಭದಿ ಹರಿಭಕ್ತಿ ಉಪದೇಶವ ಮಾಡಿ ಕರುಣದಿ ನಿಂದು |
ಅಸಿಯಳ ತಂದು ಸ್ವಮಂದಿರ ಹಂಗಿಸಿದ ಹಡೆದಳು ಪೂರ್ಣಕ ಬಂದು |
ಅಸುರನು ಆ ಮ್ಯಾಲ ತಪಸಿದ್ದಿಯಲಿ ಬಂದ ಹರುಷಕ ಪ್ರತಿ ಇಲ್ಲಾ ಸಂದು"[೩೪]

ಒಂದೆಡೆ ತಪಸ್ಸಿಗೆ ವರವ ಪಡೆದುಕೊಂಡ ಸಂತೋಷ ಇನ್ನೊಂದೆಡೆ ಪ್ರಹ್ಲಾದ ಜನ್ಮವೆತ್ತಿದ ಋಷಿ ಇವರೆಡು ಹಿರಣ್ಯಕಶಿಪನಿಗೆ ತುಂಬ ಸಂತಸವನ್ನು ಉಂಟುಮಾಡುತ್ತವೆ. ಆದರೆ ಒಂದೆಡೆ ಸಾವಿಲ್ಲದ ವರವ ಪಡೆಯಲು ಸಾಹಸ ಇನ್ನೊಂದೆಡೆ ಅದೇ ಶ್ರೀಹರಿಯ ಕೃಪೆಯಿಂದ ಆ ವರಕ್ಕೆ ಪರ್ಯಾಯವಾಗಿ ಪ್ರಹ್ಲಾದನಿಗೆ ಗರ್ಭದಲ್ಲಿಯೇ ಉಪದೇಶ. ಈ ಸಂಗತಿ ಇಡೀ ಕಾವ್ಯದ ಅಂತರಾಳವನ್ನು ಹೆಚ್ಚಿಸುತ್ತದೆ. ಹಿರಣ್ಯಕಶಿಪ ಬೇಡಿದ ವರವ ಸಾಮಾನ್ಯವಾದುದಲ್ಲ. ಭಗವಂತನು ಸೃಷ್ಟಿಸಿರುವ ಯಾವುದೇ ಪ್ರಾಣಿಯಿಂದಲೂ, ಬೇಕಾದರೆ ಮನುಷ್ಯನಿರಲಿ, ಪಶುಪ್ರಾಣಿಯಾಗಿರಲಿ, ಅಪ್ರಾಣಿಯಾಗಿರಲಿ, ದೇವತೆ, ದೈತ್ಯ, ನಾಗಗಳು ಯಾರಿಂದಲೂ ನನ್ನ ಮೃತ್ಯುವು ಆಗದಿರಲಿ. ಒಳಗೆ ಹೊರಗೆ, ಹಗಲಲ್ಲಿ ರಾತ್ರಿಯಲ್ಲಿ ಯಾವುದೇ ಅಸ್ತ್ರ-ಶಸ್ತ್ರಗಳಿಂದಾಗಲಿ, ಭೂಮಿಯಲ್ಲಾಗಲಿ, ಆಕಾಶದಲ್ಲಾಗಲಿ, ಯಾವುದರಿಂದಲೂ, ಎಲ್ಲೆಯಾಗಲಿ ನನಗೆ ಮರಣವುಂಟಾಗದಿರಲಿ. ಇಂದ್ರಾದಿ ಸಮಸ್ತ ಲೋಕಪಾಲಕರಿಗೆ ಇರುವ ಮಹಿಮೆ ನನಗೂ ಇರಲಿ. ಈ ವರವನ್ನು ಅನುಗ್ರಹಿಸು ಎಂದು ಹಿರಣ್ಯಕಶಿಪು ಕೇಳಿಕೊಂಡು ವರವನ್ನು ಪಡೆಯುತ್ತಾನೆ. ಆ ನಿಮಿತ್ಯ ಶ್ರೀಹರಿಯು ಪ್ರಹ್ಲಾದನಿಗೆ ಭಕ್ತಿಯ ಶಕ್ತಿಯನ್ನು ತುಂಬುತ್ತಾನೆ. ಇವೆಲ್ಲ ಕಾವ್ಯದ ಮುಖ್ಯ ಘಟ್ಟಗಳು. ಯಾವುದನ್ನು ಎಲ್ಲಿ ಸೆರೆ ಹಿಡಿಯಬೇಕೆಂಬುದನ್ನು ಕೃಷ್ಣದಾಸರು ಕಾವ್ಯದಲ್ಲಿ ಅಸಾಧಾರಣವಾಗಿ ಬಿಂಬಿಸಿದ್ದಾರೆ. ಚಿಕ್ಕ ಬಾಲಕ ಪ್ರಹ್ಲಾದ ಪೌರ್ಣಿಮೆ ಚಂದ್ರನ ಹಾಗೇ ಬೆಳೆಯಲಿಕ್ಕೆ ಪ್ರಾರಂಭಿಸುತ್ತಾನೆ. ಆರಂಭದಲ್ಲಿಯೇ ತಂದೆಗೆ ವಿರುದ್ಧವಾದ ಶಬ್ದವನ್ನು ಪ್ರಯೋಗಿಸುತ್ತಾನೆ. ಬಾಲಕನಿಗೆ ವಿದ್ಯಾರ್ಜಣೆ ಮಾಡಿಸಲು ಪ್ರಾರಂಭಿಸಿದಾಗ ಪ್ರಹ್ಲಾದ ಓಂಕಾರ ರೂಪದಿ ಹರಿಯೆಂದು ಬರೆಯುತ್ತಾನೆ. ಇದು ಹಿರಣ್ಯಕಶಿಪುನಿಗೆ ನುಂಗಲಾರದ ತುತ್ತಾಗುತ್ತದೆ. ಅದನ್ನೆ ಕೃಷ್ಣದಾಸರು ಪ್ರಲ್ಹಾದ ಮತ್ತು ವಿದ್ಯಾಗುರುವಿನ ಸಂವಾದ ಮೂಲಕ ಈ ರೀತಿಯಲ್ಲಿ ಹೇಳುತ್ತಾರೆ.

"ನಾನೆಂಬ ಅಕ್ಕರದಿಂದ ಕೇಡಾಹುದು ಯಾತಕ ಬರೆಸುವಿ ಗುರುವೇ |
ತಾನೊಂದೇ ಶ್ರೀಹರಿನಾಮವ ಬರೆದರೆ ಸಾಲದೆ ಬ್ರಹ್ಮಾಂಡ ಕೊಳುವೆ |
ಕಾನನ ಪೊಕ್ಕಂತೆ ನಾನಾ ಸಾಧನದಿಂದ ಫಲವೇನು ತಿಳಿವದು ನೀವೇ |
ಈ ನುಡಿಕೇಳೆಂದು ಬೆರಗಾಗಿ ಗುರುಯಂದಾ ಬಾಲಗಿನ್ನೇನೆಂದು ನುಡಿವೇ"[೩೫]

ಬಾಲಕ ಪ್ರಹ್ಲಾದನ ಈ ಮಾತುಗಳು ವಿದ್ಯಾ ಗುರುವಿಗೆ ತಲ್ಲಣವನ್ನು ಉಂಟುಮಾಡುತ್ತದೆ. ಈ ವಿಷಯ ಹಿರಣ್ಯಕಶಿಪನಿಗೆ ಗೊತ್ತಾದರೆ ನಮ್ಮನ್ನು ಸುಮ್ಮನೆ ಬಿಡುವುದಿಲ್ಲ. ಎಂದು ಬಾಲಕನಿಗೆ ತಿಳಿಯಪಡಿಸಿದಾಗ ಬಾಲಕ ಈ ಮೇಲಿನ ನುಡಿಯಂತೆ ದಿಟ್ಟ ಉತ್ತರವನ್ನು ಕೊಡುತ್ತಾನೆ. ಬಾಲಕನ ವಿದ್ಯಾಭ್ಯಾಸ ಹೀಗೆಯೇ ಮುಂದುವರಿಯುತ್ತದೆ. ಒಂದು ದಿನ ಹಿರಣ್ಯಕಶಿಪು ಕುತೂಹಲದಿಂದ ಮಗನನ್ನು ಕರೆದು ಆತನ ಅಭ್ಯಾಸ ಕುರಿತು ವಿಚಾರಿಸುತ್ತಾನೆ. ಆ ಸಂಗತಿಯನ್ನು ಬಹುಸುಂದರವಾಗಿ ಕೃಷ್ಣದಾಸರು ಬಣ್ಣಿಸಿದ್ದಾರೆ.

''ಕೌತುಕ ಶಿಶುವೆಂದು ಗುರು ಸುಮ್ಮನಿರಲಿತ್ತ ಒಂದು ದಿನದಿ ಹಿರಣ್ಯಕನು |
ಪ್ರೀತಿಲಿ ಮಗನನು ಕರೆದು ಕೇಳಿದನು ಏನು ಕಲಿತೈಯ್ಯಾ ನೀನು ||
ಆತುರ ನಿನಗಾವದರೊಳಿಹದಿನ್ನು ಕೇಳಿಸಬೇಕೆನಗದನು |
ಈತರ ಕೇಳಲು ಹರಿದ್ವೇಷಿ ಪಿತನೆಂದು ಬಗೆಯದೆ ಹೇಳಿದ ನಿಜನು ||

ಅವನ ಚರಣದ ಭಕ್ತಿಗೆ ಬೆರೆಯಲು ಭೇದಿಸುವದು ಭವಬಂಧಾ |
ದೇವೋತ್ತುಮಾತನೆ ಗುರುಮಹಿಪತಿ ಸ್ವಾಮಿ ನಾಮದ ನೆನಿಯಲಾನಂದಾ ||
ಆವದುರತಿ ನಿನಗೆಂದನ್ನ ಕೇಳಲು ಹೇಳಿದ ಸ್ವಮತದ ಛಂದಾ |
ಈ ವಚನವ ಕೇಳಿ ಘಾಯಿವಡದ ಉರಗನಂತೆ ನೋಡುತ ನಿಂದಾ''[೩೬]

ಪ್ರಹ್ಲಾದನ ಈ ತರಹದ ನುಡಿಗಳಿಂದ ಹಿರಣ್ಯಕಶಿಪು ಚಿಂತಾಕ್ರಾಂತನಾಗುತ್ತಾನೆ. ಇಡೀ ವಿಶ್ವವೇ ನಾನು ಹೇಳಿದ ಹಾಗೇ ಕೇಳುತ್ತ ನಡೆಯುತ್ತಿದೆ. ಆದರೆ ನನ್ನ ಮಗ ಮಾತ್ರ ಶ್ರೀಹರಿಯ ಧ್ಯಾನ, ಜಪ, ತಪವೆಂಬ ಮಾತುಗಳನ್ನು ಆಡುತ್ತಿರುವುದು ಸಹಿಸಿಕೊಳ್ಳಲಿಕ್ಕೆ ಆಗುವುದಿಲ್ಲ. ಇದಕ್ಕೊಂದು ಏನಾದರೊಂದು ಉಪಾಯ ಕಂಡುಕೊಳ್ಳಬೇಕೆಂದು ನಿರ್ಧರಿಸುತ್ತಾನೆ. ಸಮಯ ಬಂದಾಗ ಅದನ್ನು ಪ್ರಯೋಗಿಸಬೇಕೆಂದು ಅಂದುಕೊಳ್ಳುತ್ತಾನೆ. ಆದರೆ ಆ ಬಾಲಕನನ್ನು ಹೇಗಾದರು ಮಾಡಿ ಕೊಂದುಬಿಡಬೇಕೆಂದು ಪ್ರಯತ್ನಿಸುತ್ತಾನೆ. ಅದೆಲ್ಲವು ಬಾಲಕನಿಗೆ ತಾಗುವುದಿಲ್ಲ. ಶ್ರೀಹರಿಯ ಪರಮ ಭಕ್ತನಾದ ಪ್ರಹ್ಲಾದನು ಶ್ರೀಹರಿಯ ನಾಮಸ್ಮರಣೆಯಲ್ಲಿಯೇ ತನ್ನ ನಿತ್ಯದಿನಗಳನ್ನು ಕಳೆಯಲಿಕ್ಕೆ ಪ್ರಾರಂಭಿಸುತ್ತಾನೆ. ಇದರಿಂದ ತಂದೆ ಎಸೆದ ಕೊಲೆಯ ಸಂಚು ಪ್ರಹ್ಲಾದನಿಗೆ ನಾಟುವದಿಲ್ಲ. ಬೆಟ್ಟದ ಮೇಲಿಂದ ಕೆಳಗೆ ಹಾಕಿದರು ಬದುಕುತ್ತಾನೆ. ಬೆಂಕಿಯಿಂದ ಪಾರಾಗುತ್ತಾನೆ. ವಿಷಸರ್ಪದಿಂದ ಪಾರಾಗುತ್ತಾನೆ. ಹೀಗೆ ಸತತವಾಗಿ ಪ್ರಯೋಗ ಮಾಡಿ ಕೊನೆಗೆ ತಾಯಿಯಿಂದ ವಿಷವನ್ನು ಸೇವಿಸುವ ಪ್ರಸಂಗ ಬರುತ್ತದೆ. ಇದು ಕಾವ್ಯದಲ್ಲಿ ಶೋಕರಸವನ್ನು ಮಾರ್ದ್ವನಿಸುತ್ತದೆ. ಈ ಸನ್ನಿವೇಶವನ್ನು ಕೃಷ್ಣದಾಸರು ತಾರ್ಕಿಕವಾಗಿ ಕಾವ್ಯದಲ್ಲಿ ತಂದಿದ್ದಾರೆ. ಇದೇ ಸಂದರ್ಭವನ್ನು ಅನುಲಕ್ಷಿಸಿ ಸಹೃದಯರಿಗೆ ಚಿಲ್ಹಾಳನ ಕಥೆಯನ್ನು ನೆನಪಿಸಿದ್ದಾರೆ.

‘‘ಬಾರಯ್ಯಾ ಪ್ರಹ್ಲಾದ| ಹರಿಭಕ್ತಿ ಅಲ್ಲದಾ |
ಸಾರಿಬಾ ಭೋಜನಕ ನಿನಗಲ್ಲದಾ ||

ಕೇಳಿ ಬಂದನು ಬದಿಗೆ| ಹೊಳೆ| ಹೊಳೆವಾಭರಣದಲಿ |
ಬಾಲನು ಕೈದೊಳೆದು ಕುಳ್ಳಿರಲಿ ||

ಎಡೆ ಮಾಡು ಜನನಿಯಾ| ಕಂಡು ನೇತ್ರಾಶ್ರುಗಳು |
ಕೊಡು ದುಃಖ್ಯಾತಕವ ಹೇಳನ್ನಾಣೆ ||

ರಾಯನಾಜ್ಞವು ನಿನಗೆ| ವಿಷವಾ ಉಣಿಸೆಂದು |
ಸಾಯಾಸದಲಿ ಬೆಳೆಸಿ ಕೊಲ್ವೆನಾನಿಂದು ||

ಯಂದು ಕಾಂಬೆನೋ ನಿನ್ನಾ ಗುಣನಿಧಿ ಶಿಶುರನ್ನಾ|
ಯಂದು ಕಂಬನಿಯಿಂದ ತುಂಬಲು ಕಣ್ಣಾ ||

ತರಳನೆಂದನು ಜನನಿ| ಬಿಡುನಿನ್ನಾ ಶೋಕವನು |
ಹರಿ ಭಕ್ತರಿಗೆ ಉಂಟೇ ಹಾನಿ ಇನ್ನು’’[೩೭]

ಪ್ರಹ್ಲಾದ ತನ್ನ ತಾಯಿಂದಲೆ ವಿಷದ ಆಹಾರವನ್ನು ಸ್ವೀಕರಿಸುವುದು. ತಾಯಿಗೆ ಅಭಯವನ್ನು ಹೇಳುವುದು. ಇಡೀ ಕಾವ್ಯದಲ್ಲಿ ಮಿಂಚಿನ ಸೆಳೆತವಾಗಿ ಈ ಸನ್ನಿವೇಶ ಕಂಡುಬರುತ್ತದೆ. ಇನ್ನೊಂದೆಡೆ ಇದೇ ಸಂಗತಿಯನ್ನು ಇಟ್ಟುಕೊಂಡು ಇನ್ನೊಬ್ಬ ತಂದೆ ತಾಯಿಗಳು ಶಿವನಿಗಾಗಿ ತನ್ನ ಮಗನನ್ನೇ ಬಲಿಕೊಟ್ಟು ಶಿವನ ಕೃಪೆಗೆ ಪಾತ್ರರಾಗುವ ಸಂದರ್ಭವನ್ನು ನೆನೆಪಿಸುತ್ತಾ, ಸಾಗುವ ಕೃಷ್ಣದಾಸರ ಕಾವ್ಯ ನಿಜಕ್ಕೂ ಅದ್ಭುತ. ಒಂದು ಕಡೆ ಶಿವನ ಮೇಲಿನ ಭಕ್ತಿಯಿಂದ ಮಗನ ಬಲಿ. ಇನ್ನೊಂದೆಡೆ ತಮ್ಮ ಸ್ವಾರ್ಥದಿಂದ ಮಗನ ಬಲಿಕೊಡುವ ಪ್ರಕ್ರಿಯೆ. ಇವೆರಡು ವಿರುದ್ಧವಾಗಿರುವುದು ಮುಖ್ಯವಾಗಿದೆ. ಕೃಷ್ಣದಾಸರು ಪ್ರಹ್ಲಾದನ ಚರಿತ್ರೆಯ ಮೂಲಕ ಇಂತಹ ಸಾಧಕರಾದ ಇನ್ನುಳಿದವರ ಪರಿಚಯ ಮಾಡಿಕೊಡುವುದು ಕಾವ್ಯದ ದೃಷ್ಟಿಯಿಂದ ಮಹತ್ವಪೂರ್ಣವಾದ ಸಹಸಂಬಂಧವಾಗಿದೆ.

ಕೃಷ್ಣದಾಸರು ಸಾಂದರ್ಭಿಕವಾಗಿ ಚಿತ್ರಿಸಿದ ಸಿರಾಳಶೆಟ್ಟಿಯ ಮಗ ಚಿಲ್ಹಾಳನ ಕಥೆಗೂ ಮತ್ತು ಪ್ರಹ್ಲಾದನ ಕಥೆಗೂ ಸಂಬಂಧವಿಲ್ಲ. ಆದರೆ ಬಾಲಭಕ್ತರ ಭಕ್ತಿಯನ್ನು ಸಭಿಕರು ಆಸ್ವಾದಿಸುವುದಕ್ಕಾಗಿ ಈ ಪ್ರಯೋಗವನ್ನು ಮಾಡಿದ್ದಾರೆ. ಸಿರಾಳಶೆಟ್ಟಿ ಎಂಬ ಹಣವಂತನು ಬಂದವರಿಗೆಲ್ಲ ದಾನವನ್ನು ಮಾಡುತ್ತ ಇದ್ದನು. ಇಂತಹ ಪುಣ್ಯಪುರುಷನಿಗೆ ಚಿಲ್ಹಾಳ ಎಂಬ ಮಗನಿರುತ್ತಾನೆ. ಇವರ ಸಂಸಾರ ಹಾಗೂ ಶಿವನ ಮೇಲಿನ ಪ್ರೀತಿ ಇವುಗಳು ಇಡೀ ದೇವಲೋಕವೆ ಮಾತನಾಡುವ ಹಾಗೇ ನಡೆದಿರುತ್ತದೆ. ಇಂತಹ ಶ್ರೇಷ್ಠ ಭಕ್ತನ ಪರೀಕ್ಷೆಗೆಂದು

ಒಂದು ದಿನ ಶಿವನು ವೇಷ ಬದಲಿಸಿ ಇವನ ಮನೆಗೆ ಬರುತ್ತಾನೆ. ಶಿವನ ಆಗಮನದಿಂದ ಸಿರಾಳಶೆಟ್ಟಿ ಸ್ವಾಗತಿಸಿ ಕರೆತಂದು ಕುಳ್ಳಿರಿಸಿ ಉಪಚರಿಸುತ್ತಾನೆ. ಆಗ ಶಿವನು ತನಗೆ ಬೇಕಾದ ಊಟದ ವ್ಯವಸ್ಥೆಯಾಗಬೇಕೆಂದು ಕೇಳಿಕೊಳ್ಳುತ್ತಾನೆ.

''ಕೇಳೆಲೋ ನಿಜಶರಣಾ| ನಾನು ಬಂದ ಕಾರಣಾ |
ಬಾಳುವ ನರಮಾಂಸಾ| ಪಾಕಮಾಡಿ ಉಣಿಸೆನ್ನಾ ||

ಕೊಂಡಾ ಸೇವಕರನ್ನು| ಕೊಂಡು ಕೊಟ್ಟರ ನಾನೊಲ್ಲೆ |
ಖಂಡಿಸಿ ನಿನ್ನ ತನುವಾ| ತಂದಿಟ್ಟರಾಂವೆಲ್ಲೆ ||

ಯನಲಾಗ ಸತಿಯದ್ದು| ಕೈ ಮುಗಿದು ನಿಂದಿರಲು |
ವನಿತೇರಾ ಮಾಂಸವೆನಗ| ಭಾಗ್ಯವಹುದೇನೋ ಹೇಳು ||

ಗುರುಮಹಿಪತಿ ಸ್ವಾಮಿ| ದಾಸ ನೀನಾದರ |
ತಿರುಗುವ ನಿಮ್ಮ ಮಗನಾ| ಹರುಷದೆಡಿಮಾಡಿದರೆ''[೩೮]

ಎಂದು ಶಿವನು ಆ ಬಾಲಕ ಚಿಲ್ಹಾಳನ ಮಾಂಸವನ್ನು ಸತಿ-ಪತಿ ಕೂಡಿಕೊಂಡು ಸರಿಯಾಗಿ ಪ್ರತ್ಯೇಕಿಸಿ ಪುಡಿ ಮಾಡಿ ಅಡುಗೆ ಮಾಡಿ ಬಡಿಸಬೇಕೆಂದು ಕೇಳಿಕೊಳ್ಳುತ್ತಾನೆ. ಸಾಮಾನ್ಯ ಜನರು ದಾನವನ್ನೇ ಮಾಡದೆ ಇರುವಾಗ, ಸಿರಾಳಶೆಟ್ಟಿಗೆ ತನ್ನ ಮಗನ ಮಾಂಸವನ್ನು ಕೇಳುತ್ತಿರುವ ಈ ಅತಿಥಿಯನ್ನು ಸತ್ಕರಿಸಬೇಕು. ಇಲ್ಲ ಎಂದು ಬರಿಕೈಲೆ ಕಳುಹಿಸಬಾರದು. ಹಾಗಾಗಿ ಪತಿ-ಪತ್ನಿ ಕೂಡಿಕೊಂಡ ಶಿವನ ಆಶಯವನ್ನು ಪೂರೈಸಲಿಕ್ಕೆ ಒಪ್ಪಿಕೊಳ್ಳುತ್ತಾರೆ. ಆದರೆ ಇಲ್ಲಿ ತಾವು ಹೆತ್ತ ಕರುಳು ತಮ್ಮಿಂದಲೇ ಪ್ರಾಣಬಿಟ್ಟು ಅದೇ ದೇಹವನ್ನು ಅಡುಗೆ ಮಾಡುವುದು ನಿಜವಾಗಲು ಸಾಧ್ಯವಿಲ್ಲ. ಇದು ಭಗವಂತನ ಶ್ರೇಷ್ಠ ಭಕ್ತರಿಗೆ ಮಾತ್ರ ಸಾಧ್ಯವಾದದು. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಶಿರಾಳಶೆಟ್ಟಿ ಮತ್ತು ಆತನ ಮಡದಿ ಚಿಲ್ಹಾಳನನ್ನು ಕರೆದು ಶಿವನು ನಿನ್ನ ದೇಹವನ್ನು ಬಯಸಿದ್ದಾನೆ. ಅದಕ್ಕಾಗಿ ನಿನ್ನ ಮಾಂಸವನ್ನು ಅವನಿಗೆ ನೀಡಬೇಕಾಗಿದೆ. ಎಂದು ವಿಧವಿಧ ಕೇಳಿಕೊಳ್ಳುತ್ತಾರೆ. ಆಗ ಆ ಬಾಲಕ ಈ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾನೆ. ತಾಯಿ ಮತ್ತು ಮಗ ಚಿಲ್ಹಾಳನ ಮಾತಿನ ನುಡಿ ಕಾವ್ಯಕ್ಕೆ ಒಂದು ಸಂಚಲವನ್ನು ನೀಡುತ್ತದೆ.

''ಬಾರೆಲೆ ನಿಜಕಂದಾ| ಚಿಲ್ಹಾಳ |
ತಾರಕಭವ ಕಲ್ಲೋಳಾ

ನಿನ್ನಾ ಮಾಂಸವ ಬಯಸಿ| ತಾನಾಗಿ|
ಮನ್ನಿಸಿ ಬಂದನು ಯೋಗಿ''[೩೯]

ಎಂದು ತಾಯಿ ಮಗನಿಗೆ ಹೇಳುತ್ತಾಳೆ. ಆಗ ಮಗ ತಾಯಿಯನ್ನು ಕುರಿತು

"ಅಹುದಹುದಲೆ ಜನನೀ| ನೀಯನ್ನಾ |
ಸ್ವಹಿತವೆಸಗಿದೆ ಘನಾ ||

ಯಾಚಕ ನಿವನೆನದೆ| ಶಿವನೆಂದು
ಯೋಚಿಸಿಕೊಡುಯನಗಿಂದು"[೬೦]

ಇಲ್ಲಿ ಶಿವನಿಗಾಗಿ ತನ್ನ ಮಗನನ್ನು ಬಲಿ ಕೊಡುವ ರೀತಿ ಒಂದೆಡೆಯಾಗುತ್ತದೆ. ಅಲ್ಲಿ ಪ್ರಹ್ಲಾದನನ್ನು ಸ್ವಂತ ತಂದೆ ತಾಯಿಗಳೇ ತಮ್ಮ ಇಷ್ಟದಂತೆ ನಡೆಯಲಿಲ್ಲ ಎಂಬ ಕಾರಣಕ್ಕಾಗಿ ವಿಷ ಹಾಕುವ ಕ್ರಮ ಇನ್ನೊಂದೆಡೆಯಾಗಿದೆ. ಇವೆರಡು ಶಿವನ ಸಾಕ್ಷಾತ್ಕಾರಕ್ಕಾಗಿ ನಡೆಯುವ ಧರ್ಮದ ಪ್ರತೀಕ. ಚಿಲ್ಹಾಳನ ಕಥೆಯಲ್ಲಿ ಮಗನನ್ನು ಶಿವನಿಗೆ ಅರ್ಪಿಸಲು ಮುಂದಾದ ಪ್ರಸಂಗ, ಪ್ರಹ್ಲಾದ ಕಥೆಯಲ್ಲಿ ಶ್ರೀಹರಿಯ ಭಕ್ತನಾದ ತನ್ನ ಮಗನನ್ನೇ ಮುಗಿಸುವ ಸಂಚು. ಇಂತಹ ಕಾವ್ಯಗಳು ನಿಜತತ್ವ, ನಿಜಸಾರ ಪರಿಧಿಯಲ್ಲಿ ಅರಳಿನಿಂತು ಭಕ್ತ ಮತ್ತು ಭಗವಂತನ ನಡುವಿನ ನಂಟು ಬಿಡಿಸಲಾರದ ಸೇತುವೆಯಾಗಿ ಕಂಡುಬರುತ್ತವೆ. ಹೀಗೆ ಚಿಲ್ಹಾಳನ ಕಥೆಯಲ್ಲಿ ಮಗನನ್ನು ತಂದೆ ತಾಯಿ ಶಿವನಿಗೆ ಅರ್ಪಿಸಲು ಆತನಲ್ಲಿ ಕೇಳಿಕೊಳ್ಳುತ್ತಾರೆ. ಚಿಲ್ಹಾಳನು ಸಹ ಪ್ರೀತಿಯಿಂದ ಈ ಕಾರ್ಯಕ್ಕೆ ಒಪ್ಪಿಗೆ ಸೂಚಿಸುತ್ತಾನೆ. ಆತ್ಮಬಲಿದಾನಗಳು ಒಂದು ಊರು, ನಾಡು, ದೇಶ, ಹೀಗೆ ಅನೇಕ ರೀತಿಯಲ್ಲಿ ಒಳ್ಳೆಯದಾಗುವುದಾದರೆ ಅದನ್ನು ಇತಿಹಾಸದಲ್ಲಿ ಅನೇಕರು ಒಪ್ಪಿಕೊಂಡು ತಮ್ಮ ಪ್ರಾಣತ್ಯಾಗ ಮಾಡಿದ್ದಾರೆ. ಆದರೆ ಚಿಲ್ಹಾಳನ ಕಥೆಯಲ್ಲಿ ಶಿವನೇ ಭಕ್ತನ ಮನಸ್ಸನ್ನು ಅರಿಯಲು ಮಾಡಿದ ತಂತ್ರ ರೀತಿ ಭಿನ್ನವಾದುದಾಗಿದೆ. ಸತಿ-ಪತಿಗಳು ಒಂದುಗೂಡಿ ಶಿವನಿಗೆ ಊಟಮಾಡಿಸಲು ಸನ್ನದ್ಧರಾಗುತ್ತಾರೆ. ಆದರೆ ಶಿವನು ಮತ್ತೆ ಮನೆಯಲ್ಲಿ ಕಂದನಿಲ್ಲದೆ ನಾನು ಊಟವನ್ನು ಮಾಡುವದಿಲ್ಲ. ನಿಮ್ಮ ಮಗನು ಬಂದರೆ ಮಾತ್ರ ಊಟ ಮಾಡುತ್ತೇನೆಂದು ಹೇಳುತ್ತಾನೆ. ಆಗ ತಾಯಿ ಮಗ ಶಾಲೆಯಲ್ಲಿರುವನು ಎಂದು ಹೇಳುತ್ತಾಳೆ. ಇದಾವುದಕ್ಕೆ ಒಗ್ಗದ ಶಿವನು ಹಠ ಹಿಡಿದು ಕುಳಿತಾಗ ತಾಯಿ ತನ್ನ ಕಂದನನ್ನು ಕರೆಯುವ ರೀತಿ ಕರುಣರಸಕ್ಕೊಂದು ಉದಾಹರಣೆಯಾಗಿದೆ.

"ಯನ್ನಗರ್ಭದ ಖಣಿ ಗುಣಮಣಿ ಚಿಲ್ಹಾಳ| ಬ್ಯಾಗ ಬಾರೋ |
ಚಿನ್ನನೆ ಹಸಿದಿಹೆ ಆಡಲು ನೀ ಹೋಗಿ ಬ್ಯಾಗ ಬಾರೋ ||

ನಿನ್ನಯ ಮಾರ್ಗವ ನೋಡುತಲಿಹಯತಿ ಬ್ಯಾಗ ಬಾರೋ
ಉಣ್ಣದೆ ಕೈದೆಶೆದಿಹ ನಿನ್ನ ಕರಿಯಂದು ಬ್ಯಾಗ ಬಾರೋ"[೬೧]

ಎಂದು ತಾಯಿಯು ತನ್ನ ಕರುಳಿನ ಕುಡಿಯನ್ನು ಕರೆಯುತ್ತಾಳೆ. ಪರಮಾತ್ಮನ ಲೀಲೆಯು ಯಾರಿಗೆ ಗೊತ್ತು. ಕರೆದಾಗ ಮಗು ಬರುವುದಿಲ್ಲ ಎಂಬ ಅಳುಕು ತಂದೆ ತಾಯಿಯರಿಗೆ.

ಏಕೆಂದರೆ ತಾವೇ ತಮ್ಮ ಮಗನ ಶಿರವ ಕತ್ತರಿಸಿ ಅಡುಗೆ ಮಾಡಿದೆ. ಈಗ ಮಗನನ್ನು ಕರೆದರೆ ಎಲ್ಲಿಂದ ಬಂದಾನು ಎಂಬ ಆತಂಕ ಅವರನ್ನು ಕಾಡುತ್ತಿತ್ತು. ಆದರೆ ಆ ಕರೆಗೆ ಓಗೊಟ್ಟು ಬಾಲಕ ಚಿಲ್ಲಾಳ ಮನೆಗೆ ಆಗಮಿಸುತ್ತಾನೆ. ಆ ಸಂಭ್ರಮವನ್ನು ಕೃಷ್ಣದಾಸರು ಈ ರೀತಿಯಲ್ಲಿ ಅಭಿವ್ಯಕ್ತಿಸಿದ್ದಾರೆ.

''ದುಡುದುಡು ನಲಿವುತ ಬಂದನು ತನ್ನ ಜನನಿಯ ಧ್ವನಿಯಾಲಿಸಿ ಕೇಳಿ |
ಪೊಡವಿಲಿ ಗಿರಿಜೇತನ ಯೋಗಮಾಯದಿ ಬಾಲಕ ನಿಜರೂಪವ ತಾಳಿ''[೪೨]

ಆಗ ಪರಮಾತ್ಮನು ತನ್ನ ನಿಜಸ್ವರೂಪವನ್ನು ಅವರಿಗೆ ತೋರಿಸಿ ಘನ ಪದವಿಯನ್ನು ನೀಡಿ ಹರಸುತ್ತಾನೆ. ಒಂದೆಡೆ ಶಿವಭಕ್ತನ ಮಗ ಚಿಲ್ಲಾಳನ ಕಥೆ ಹೀಗೆ ಮಾಡಿದೆ. ಇನ್ನೊಂದೆಡೆ ಕೃಷ್ಣದಾಸರು ಪ್ರಹ್ಲಾದ ವಿಷ ಅನ್ನವನ್ನು ಉಂಡು ಬದುಕುಳಿದ ರೀತಿಯನ್ನು ಚಿತ್ರಿಸಿದ್ದಾರೆ. ಭಕ್ತ ಪ್ರಹ್ಲಾದ ತನ್ನ ತಂದೆ ವಿಧಿಸಿದ ಸಂಕಷ್ಟದಿಂದ ಒಂದೊಂದಾಗಿ ಪಾರಾಗುತ್ತಾ ಮುನ್ನಡೆದ ಇದನ್ನು ಸಹಿಸಲು ತಂದೆಗೆ ಆಗಲಿಲ್ಲ. ತನ್ನ ಪುತ್ರನ ಅನೀತಿಯನ್ನು ಕಂಡ ಹಿರಣ್ಯಕಶಿಪ ಕೊನೆಗೆ ತನ್ನ ಮಗನನ್ನೇ ಕೊಂದುಹಾಕಲು ನಿಶ್ಚಯಿಸುತ್ತಾನೆ. ಅದಕ್ಕೆ ಅಂಜದೆ ಅಳುಕದೆ ಶಾಂತಚಿತ್ತದಿಂದ ಪ್ರಹ್ಲಾದ ಶ್ರೀಹರಿಯ ನಾಮಸ್ಮರಣೆಯಲ್ಲಿ ನಿಲ್ಲುತ್ತಾನೆ. ಇದಕ್ಕೆ ಪ್ರತಿಯಾಗಿ ಹಿರಣ್ಯಕಶಿಪು ನಾನು ಸ್ವಲ್ಪ ಕೋಪಗೊಂಡರೂ ಮೂರುಲೋಕಗಳೂ ಮತ್ತು ಲೋಕಪಾಲಕರೂ ಥರಥರನೆ ನಡುಗುವರು. ಹೀಗಿರುವಾಗ ಎಲೈ ಮೂರ್ಖನೇ ನೀನು ಯಾರ ಬಲದ ಮೇಲೆ ನಿರ್ಭಯನಂತೆ ನನ್ನ ಆಜ್ಞೆಯನ್ನು ಮುರಿದಿದ್ದೀಯೇ ಎಂದು ಉಚ್ಚರಿಸುತ್ತಾನೆ. ಆಗ ಪ್ರಹ್ಲಾದನು ತಾನು ಭಕ್ತಿಯಿಂದ ನೆನೆಯುತ್ತಿರುವ ಶ್ರೀಹರಿಯ ಲೀಲೆಗಳನ್ನು ಹೇಳುತ್ತಾನೆ. ಅದಕ್ಕೆ ಪ್ರತಿಯಾಗಿ ಹಿರಣ್ಯಕಶಿಪು ನಿನ್ನ ಭಗವಂತನನ್ನು ಈಗಲೇ ಕರೆ ಅವನು ಅರಮನೆಯಲ್ಲಿದ್ದಾನೆ. ಈ ಗಾಳಿಯಲ್ಲಿದ್ದಾನೆ. ಈ ಕಂಬದಲ್ಲಿ ಇದ್ದಾನೆ. ಹೀಗೆ ಪ್ರಶ್ನೆಯನ್ನು ಕೇಳುತ್ತಿರಲಾಗಿ ಆ ಬಾಲಕ ಪ್ರಹ್ಲಾದ ಹೌದು ಎಂದು ಉತ್ತರಿಸುತ್ತಾನೆ. ಹಿರಣ್ಯಕಶಿಪುವಿನ ಸಿಟ್ಟು ನೆತ್ತಿಗೇರಿ ಕಂಭವನ್ನು ಒಡೆದು ಹಾಕಿದಾಗ ನರಹರಿಯು ಪ್ರತ್ಯಕ್ಷನಾಗುತ್ತಾನೆ. ಈ ಸಂದರ್ಭದಲ್ಲಿ ನರಹರಿಯ ಆಗಮನವನ್ನು ಕೃಷ್ಣದಾಸರು ಸೊಗಸಾಗಿ ಪ್ರತಿಧ್ವನಿಸಿದ್ದಾರೆ.

''ನರಹರಿ ಬಂದು ಮೂಡಿದಾ |
ಶರಣಗ ದಯವಾ ಮಾಡಿದಾ ||

ತಟತಟ ಬಿರಿಯಲು ಕಂಭವ ಳಗಿನ ಭಟಭಟ ಶಬ್ದವ ತೋರುತಾ |
ಕಟಕಟ ಬ್ರಹ್ಮಾಂಡೊಡೆಯಿತೋ ನೋಡಲು ಪಟಪಟ ತಾರೆಗಳ್ಹಾರಲುತಾ

ಗುಡುಗುಡುಗುಟ್ಟಿ ಬಾಯೊಳಗಗ್ನಿಯ ಧಡಧಡ ಕಿಡಿಗಳನುಗುಳುತ್ತಾ |
ಗಡಬಡಿಸಲು ಸಮುದ್ರಗಳೆಲ್ಲವು ಬುಡುಬುಡಗುಳ್ಳಿಗಳೇಳಲುತಾ

ಘಳಘಳ ಭೂಮಿಯು ಬಿಚ್ಚಿತು ಗಿರಿಗಳು ಹಳಹಳ ಕಲ್ಲುಗಳುದುರಿದವು |
ಭಳಭಳ ಬಾಸುವ ರವಿಶತ ತೇಜನ ಥಳಥಳ ಮಿಂಚುಗಳಾಡಿದವು''[೬೩]

ಈ ರೀತಿಯಲ್ಲಿ ಆಗಮಿಸಿದ ನರಹರಿಯು ಹಿರಣ್ಯಕಶಿಪನನ್ನು ಸಂಹರಿಸಿ ಭಕ್ತನಾದ ಪ್ರಹ್ಲಾದನನ್ನು ಅವನಿಂದ ಪಾರು ಮಾಡಿ ಅಭಯ ಹಸ್ತವನ್ನು ನೀಡುತ್ತಾನೆ. ಇಲ್ಲಿ ಒಂದು ಅಂಶವನ್ನು ಗಮನಿಸಬೇಕು. ಹಿರಣ್ಯಕಶಿಪು ಸಾಯದಿರುವ ವರ ಪಡೆದರೂ ಮರಣ ಹೊಂದಿದನು. ಪ್ರಹ್ಲಾದನಿಗೆ ತಾಯಿ ಕೊಟ್ಟ ವಿಷವು ಇವನ ಕೈ ಸ್ಪರ್ಶದಿಂದ ಅಮೃತವಾಗಿ ಸಾವನ್ನೇ ಕೊಂದವನು. ಹಾಗಾಗಿ ಹರಿಭಕ್ತಿಯಿಂದ ಕೂಡಿದ ಆಸ್ತಿಕತೆಗೆ ಎಂದಾದರೂ ಜಯ ಖಚಿತ. ಇದು ಪ್ರಹ್ಲಾದ ಚರಿತ್ರೆಯ ಕಾವ್ಯದಿಂದ ತಿಳಿದುಬರುವ ಮುಖ್ಯ ಸಂದೇಶವಾಗಿದೆ.

೫. ಸುಧಾಮಚರಿತ್ರೆ

ಕೃಷ್ಣದಾಸರ ಸುಧಾಮ ಚರಿತ್ರೆ ಕಾವ್ಯವು ಎಂಟು ಪದ್ಯಗಳನ್ನು ಒಳಗೊಂಡು ಅರವತ್ತ್ಮೂರು ನುಡಿಗಳಲ್ಲಿ ಮೂಡಿಬಂದಿದೆ. ಸುಧಾಮನು ಶ್ರೀಕೃಷ್ಣನ ಆಪ್ತಮಿತ್ರನು. ಬ್ರಹ್ಮಜ್ಞಾನಿಯಾಗಿದ್ದವನು. ವಿಷಯಗಳಿಂದ ವಿರಕ್ತನ್ನು, ಶಾಂತಚಿತ್ತನು ಆಗಿದ್ದನು. ಸುಧಾಮನು ಗೃಹಸ್ತನಾಗಿದ್ದರೂ ಸಹ ಜೀವನದಲ್ಲಿ ಸಂತುಷ್ಟನಾಗಿದ್ದನು. ಕಡುಬಡತನ ಅವನನ್ನು ಕಾಡುತ್ತಿತ್ತು. ಅವನ ಬಟ್ಟೆ ಹರಿದು ಹಳೆಯದಾಗಿದ್ದರಿಂದ ಜನರು ಕುಚೇಲನೆಂದು ಕರೆಯುತ್ತಿದ್ದರು. ಅವನ ಪತ್ನಿಯೂ ಸಹ ಅವನಂತೆಯೇ ಹಸಿವೆಯಿಂದ ಬಳಲಿದವಳಾಗಿದ್ದಳು. ಬಡತನ ದಾರಿದ್ರ್ಯದಿಂದ ಕೂಡಿದ ಸಂಸಾರವನ್ನು ನೋಡಿ ದುಃಖಿತಳಾದ ಆತನ ಪತ್ನಿಯು, ತನ್ನ ಪತಿ ಸುಧಾಮನ ಬಳಿಗೆ ಬಂದು ಹೀಗೆ ಹೇಳಿಕೊಳ್ಳುತ್ತಾಳೆ. ಸಾಕ್ಷಾತ್ ಲಕ್ಷ್ಮೀಪತಿಯಾದ ಶ್ರೀಕೃಷ್ಣನ ಬಳಿಗೆ ಹೋಗಿ ಕುಟುಂಬದ ತೊಂದರೆಯನ್ನು ಹೇಳಿಕೊಂಡು ಅವರಿಂದ ಧನವನ್ನು ತರಲು ಸೂಚಿಸುತ್ತಾಳೆ.

''ರಮಣೀ| ತಿಳಿದು ನೋಡು ನಿಜವಾಲಿಸಿ ನುಡಿಗಳ ಯದುಕುಲ ದೀಪಕನಾ |
ಬಳಿಗೆ ನಡಿದು ನಾ ಹೋಗುವದುಚಿತವೆ ಲಕ್ಷ್ಮೀಯ ಸನ್ನಿಧಾನಾ ||

ಉದರವ ತುಂಬದೆ ಎನ್ನೊಳು ಮೊದಲಿನಾ ಬಣ್ಣ ಮುಖದಲಿಲ್ಲಾ |
ಹೊದಿಯಲು ವಸ್ತ್ರ ನೋಡಲು ಶತಖಂಡ ಝುರ್ಝುರಾಗಿಹದಲ್ಲಾ ||
ಒದಗಿ ನಾ ಹೋಗುತ ಕೃಷ್ಣನ ಗೆಳೆಯನು ಎಂದಾಡಲು ಸೊಲ್ಲಾ''[೬೪]

ತನ್ನ ಪತ್ನಿಯ ಮಾತಿನಿಂದ ಕೃಷ್ಣನ ಭೇಟಿಯಾಗಲು ನಿರ್ಧರಿಸಿ ತನ್ನ ಹೆಂಡತಿಗೆ ಹೇಳುತ್ತಾನೆ. ಕೃಷ್ಣನಿಗೆ ಕೊಡಲು ಯೋಗ್ಯವಾದ ಏನಾದರು ವಸ್ತು ಮನೆಯಲ್ಲಿದೆಯೇ ಇದ್ದರೆ ಕೊಡು. ಸ್ನೇಹಿತನನ್ನು ಬರಿಗೈಯಿಂದ ಕಾಣುವುದು ಸರಿಯಲ್ಲ. ಇದರಿಂದ ಉಲ್ಲಾಸಿತಳಾದ ಸುಧಾಮನ ಹೆಂಡತಿ ಅವರಿವರ ಮನೆಯಿಂದ ಎರಡು ಸೆರೆಯು ಅವಲಕ್ಕಿಯನ್ನು ಉಲ್ಲಾಸದಿ ತಂದು ಹರಿದ ಬಟ್ಟೆಯಲ್ಲಿ ಕಟ್ಟಿ ಪತಿ ಸುಧಾಮನಿಗೆ ಕೊಡುತ್ತಾಳೆ. ಸುಧಾಮನ ಮನದಲ್ಲೊಂದು

ಅಳುಕು ಕಾಡುತ್ತಿತ್ತು. ಶ್ರೀಕೃಷ್ಣನ ಜೊತೆಗೆ ಹಣದ ವಿಚಾರ ಮಾತನಾಡುವುದು ಇರಲಿ, ಅವನ ದರ್ಶನವೇ ವಿರಳವಾಗಿದೆ. ಎಂದು ತಿಳಿದುಕೊಂಡು ದ್ವಾರಕಾಪಟ್ಟಣದತ್ತ ಹೆಜ್ಜೆ ಹಾಕುತ್ತಾನೆ. ದ್ವಾರಕಾಪಟ್ಟಣವನ್ನು ಪ್ರವೇಶಿಸಿದ ಸುಧಾಮ ಅಲ್ಲಿಯ ಭವ್ಯ ಅರಮನೆ, ಭೂಸಂಪತ್ತನ್ನು ಕಣ್ಣಾರೆ ನೋಡಿ ಮನಸಾರೆ ಆನಂದಿಸುತ್ತಾನೆ. ಈ ಸಂದರ್ಭವನ್ನು ಕೃಷ್ಣದಾಸರು ವರ್ಣನಾತ್ಮಕವಾಗಿ ಬಿಂಬಿಸಿದ್ದಾರೆ.

''ದ್ವಾರಕಿಯಾ ನೋಡಿ ಸುಧಾಮಾ |
ಮನದೊಳು ಬಲು ಪ್ರೇಮಾ ||

ಹೊನ್ನಮಯದ ಪಟ್ಟಣ ಶೃಂಗಾರವ |
ಬಣ್ಣಿಸಲರಿಯನಾ ಉರಗೇಂದ್ರಾ ||
ಚನ್ನಾಗಿ ಎಡಬಲದಂಗಡಿ ನೋಡಲು |
ಕಣ್ಣವ ಕೋರೈಸುವ ಪರಿಯಾ

ಆನೆಯ ಸಾಲವು ಕುದುರೆಯ ಸಾಲಿನ |
ತಾನರಿಯನು ರಥ ಎಣಿಕೆಗಳಾ ||

ಮಾನವರಂಗದ ತೇಜದ ಭೂಷಣ |
ಮೌನದಿ ನೋಡುತ ನಡೆತಂದಾ ||
ರಾಜಕುಮಾರರು ಪರಿಪರಿಯಾಟದಿ |
ರಾಜ ಬೀದಿಯಲಾಡುತಿಹರು ||
ರಾಜ ಋಷಿಯರೆಡೆಯಾಡುತಲಿಹರು |
ರಾಜೀವ ನೇತ್ರನ ಅರಮನಿಗೆ''[೬೫]

ಎಂಬುವಲ್ಲಿ ದ್ವಾರಕಾಪಟ್ಟದ ಸಿರಿಯು ಎದ್ದುಕಾಣುತ್ತದೆ. ಸುಧಾಮ ಆ ನಗರದ ಪ್ರಮುಖ ಬೀದಿಯನ್ನು ದಾಟಿ ಭವ್ಯವಾದ ಕೃಷ್ಣನ ಅರಮನೆಗೆ ಪ್ರವೇಶ ಮಾಡುತ್ತಾನೆ. ಸುಧಾಮನ ಪ್ರವೇಶವನ್ನು ಮಿತ್ರ ಕೃಷ್ಣ ದೂರದಿಂದಲೇ ನೋಡುತ್ತಾನೆ. ಆನಂದದಿಂದ ರುಕ್ಮಿಣಿಯ ಕೈಯಲ್ಲಿ ತನ್ನ ಚಾಮರವನ್ನು ಕೊಟ್ಟು ಆತ್ಮೀಯತೆಯಿಂದ ಕೃಷ್ಣಪರಮಾತ್ಮನು ಸುಧಾಮನನ್ನು ಸ್ವಾಗತಿಸುತ್ತಾನೆ. ಮುಂದೆ ಸುಧಾಮನನ್ನು ವಿಧಿವಿಧಾನದ ಮೂಲಕ ಪೂಜಾಕ್ರಿಯೆಯನ್ನು ಸಲ್ಲಿಸುತ್ತಾನೆ. ಸುಧಾಮನಿಗೆ ಕರೆದುಕೊಂಡು ಹೋಗಿ ತನ್ನ ಅರಮನೆಯನ್ನು ತೋರಿಸುತ್ತಾನೆ. ಆಗ ಹರಿದ ಬಟ್ಟೆಯ ದುರ್ಬಲ ಶರೀರದ ಕುಚೇಲನಿಗೆ ರುಕ್ಮೀಣಿದೇವಿಯು ಚಾಮರವನ್ನು ಬೀಸುತ್ತಾ, ಆತನ ಸೇವೆಯನ್ನು ಮಾಡುತ್ತಾಳೆ. ನಂತರ ಕೃಷ್ಣ ಮತ್ತು ಕುಚೇಲ ತಮ್ಮ ಬಾಲ್ಯದ

ಜೀವನದ ಘಟನೆಗಳನ್ನು ಮೆಲುಕು ಹಾಕುತ್ತಾರೆ. ಸುಧಾಮ ಶ್ರೀಕೃಷ್ಣನಿಂದ ಆದರ ಆತಿಥ್ಯವನ್ನು ಸ್ವೀಕರಿಸಿ ತನ್ನ ಬಾಲ್ಯದ ವಿದ್ಯಾಭ್ಯಾಸ ಒಡನಾಟದ ಜೀವನ ಕುರಿತು ಮಾತುಕತೆಯ ಮೂಲಕ ಪರಸ್ಪರರು ಹಂಚಿಕೊಳ್ಳುತ್ತಾರೆ. ನಂತರ ಶ್ರೀಕೃಷ್ಣ ಸುಧಾಮನು ತಂದ ಮುಷ್ಟಿ ಅವಲಕ್ಕಿಯನ್ನು ಕಸಿದುಕೊಂಡು ತಿನ್ನುತ್ತಾನೆ. ರುಕ್ಮಿಣಿಯು ಸಹಕಾರ್ಯದಲ್ಲಿ ಪಾಲುದಾರಳಾಗುತ್ತಾಳೆ. ಹೀಗೆ ತನ್ನ ಆತ್ಮೀಯ ಗೆಳೆಯನನ್ನು ಮಾತನಾಡಿಸಿಕೊಂಡು ಹೋಗುವ ಮುಂಚೆ ತನ್ನ ಹೆಂಡತಿ ಹೇಳಿದ ಸಂಗತಿಯನ್ನು ಕೃಷ್ಣನ ಮುಂದೆ ಪ್ರಸ್ತಾಪ ಮಾಡುವುದಿಲ್ಲ. ದರ್ಶನಕ್ಕಾಗಿ ಬಂದ ಭಕ್ತರಂತೆ ಕೃಷ್ಣನ ದರ್ಶನವಾದ ನಂತರ ತನ್ನ ಕುಟುಂಬದ ಬಡತನ ಕುರಿತು, ಏನ್ನೊಂದು ಮಾತನಾಡದೆ ಮನೆಯತ್ತ ಹೆಜ್ಜೆ ಹಾಕುತ್ತಾನೆ. ಹಾದಿಯ ಮಧ್ಯ ಸುಧಾಮನಿಗೆ ಚಿಂತೆಯೊಂದು ಕಾಡುತ್ತದೆ. ಹಸಿದ ಹೆಂಡತಿ ಮತ್ತು ಮಕ್ಕಳಿಗೆ ನಾನು ಏನನ್ನೂ ತರಲಿಲ್ಲವಲ್ಲ. ಕೃಷ್ಣನಿಗೆ ಒಂದು ಮಾತು ಹೇಳಿದ್ದರೆ ಕೃಷ್ಣನು ಕೊಡುತ್ತಿದ್ದನು. ಕೃಷ್ಣನಿಗೆ ನನ್ನ ಪರಿಸ್ಥಿತಿಯ ಅರಿವಿದೆಯೂ ಇಲ್ಲವೂ ಎಂಬ ದುಗುಡದಲ್ಲಿ ಸುಧಾಮ ತನ್ನ ಊರನ್ನು ತಲುಪುತ್ತಾನೆ. ಅಲ್ಲಿ ಆಶ್ಚರ್ಯವು ನಡೆದಿರುತ್ತದೆ.

''ದ್ವಾರಕಿಯಂತೆ ಸುಧಾಮ ನಗರಾ |
ನೀರಚಿಸುದು ನಡೆ ಮನಿಯನುಸದರಾ

ಹರಿಯಾಜ್ಞದಂತವ ಬಂದರೆಕ್ಷಣದೀ |
ಪುರನಗರವ ದಿವ್ಯದಿ ರಚಿಸಿರಲಿ

ನಮ್ಮ ಪುರವೋ ಮತ್ತೊಂದು ನಗರವೊ |
ಝುಮ್ಮನೆಯನಗಾಯಿತೋ ದಿಗ್ಭ್ರಮವೋ

ಕೇಳಿದ ಜನರನು ಆರದಿದೆಂದು |
ಹೇಳಿದರವರು ಸುಧಾಮನದೆಂದು ||

ದಾವರಸನೋ ಬಂದು ನಿಂದನೋ ಎನುತಾ |
ತಾ ಒಳಪೊಕ್ಕಾನು ಖೂನ ಹಾದಿಲಿ ತಾ''[೪೬]

ಸುಧಾಮನು ತನ್ನ ನಗರಕ್ಕೆ ಹೋದ ಮೇಲೆ ದ್ವಾರಕಾಪಟ್ಟಣದಂತೆ ಆ ನಗರವು ಶೋಭಾಯಮಾನವಾಗಿ ಶೋಭಿಸುತ್ತಿತ್ತು. ಹಣವಿಲ್ಲದ ಭಕ್ತನು ಸುಧಾಮನು. ಜ್ಞಾನ, ಭಕ್ತಿ, ವೈರಾಗ್ಯದಲ್ಲಿ ಶ್ರೀಮಂತ. ಇಂತಹ ಸಾಧಕನಿಗೆ ಅಪರೋಕ್ಷವಾಗಿ ಧನವನ್ನು ಕೊಟ್ಟರೆ ಗರ್ವ ಬಂದು ಸಾಧನಾಮಾರ್ಗವನ್ನು ಬಿಡಬಹುದು. ಹೀಗಾಗುವುದು ಬೇಡ ಎಂದು ಪರಮಾತ್ಮನು

ಇವನ ಸಾಧನ ಸಂಪತ್ತು ಸ್ಥಿರವಾಗಿ ಇರಲೆಂದು ಹಣವನ್ನು ಕೊಟ್ಟಿರಲಿಲ್ಲ. ಇದು ಆ ದೇವನು ನನ್ನ ಮೇಲೆ ಮಾಡಿದ ಕರುಣೆ. ಬಡತನ ಕೊಟ್ಟಾಗಲೂ ಅದನ್ನು ಸಂತೋಷದಿಂದ ಸ್ವೀಕರಿಸಿ. ಸಂಪತ್ತು ಇಲ್ಲದಿದ್ದಾಗಲೂ ಅವನ ಮೇಲಿನ ಭಕ್ತಿಯನ್ನು ಸ್ವಲ್ಪವೂ ಸಹ ಕಡಿಮೆ ಮಾಡಿರಲಿಲ್ಲ ಎಂಬುದು ಈ ಕಾವ್ಯದ ತಿರುಳು. ಹೀಗೆ ಸುಧಾಮ ತನ್ನ ಮನೆಗೆ ಹೋದಾಗ ಶ್ರೀಕೃಷ್ಣ ಪರಮಾತ್ಮನ ಅನುಗ್ರಹದಿಂದ ಮೂಲ ಗುಡಿಸಲು ಹೋಗಿ ಶೃಂಗಾರದ ಅರಮನೆಯಾಗಿ ನಿಂತಿರುವ ತನ್ನ ಮನೆಯನ್ನು ಕಂಡು ದಿಗಿಲುಬಡಿದು ನಿಲ್ಲುತ್ತಾನೆ. ಆ ಸನ್ನಿವೇಶವನ್ನು ಕೃಷ್ಣದಾಸರು ಈ ರೀತಿಯಲ್ಲಿ ಬಣ್ಣಿಸಿದ್ದಾರೆ.

''ಆರು ಕಟ್ಟಿದರೋ |

ಈ ಮನಿಯನು ಆರು ಕಟ್ಟಿದರೋ ||

ಬಂಗಾರದ ಗೋಡೀ ಮನಿಯಾ ಕಟ್ಟಿದ ನೋಡಿ |

ಶೃಂಗಾರ ಪರಿ ಪರಿ ಆಗಿದೆ ಹರಿ ಹರಿ

ಒಂದರ ಮ್ಯಾಲೊಂದಾ ಉಪ್ಪರಿಗೆಯ ಛಂದಾ |

ಛಂದದಿ ಮಹಾದ್ವಾರಾ ಒಳಗಿನ ವಿಸ್ತಾರಾ

ಆನೆ ಕುದುರೆ ಸಾಲು ಹಿಂಡ್ಹಿಂಡು ಆಕಳು |

ಜನ ಸಂದಣಿಯಿಂದಾ ತೆರಹಿಲ್ಲಾ ಸಿರಿಯಂದಾ ||

ಮೊದಲಿನಾ ಝೋಪಡಿ ಏನಾಯಿತೋ ನೋಡಿ |

ಸುದತಿ ಮಕ್ಕಳನು ತಾ ಹೊರಡಿಸಿದರೋ ಎತ್ತಾ''[೬೭]

ಈ ತೆರನಾಗಿ ಸುಧಾಮನು ತನಗೆ ಒದಗಿ ಬಂದ ಸಿರಿಸಂಪತ್ತು ಭಗವಂತನಿಂದಲೇ ಅನುಗ್ರಹವಾದದ್ದು. ಭಗವಂತನಿಂದ ಬಂದ ಸಂಪತ್ತನ್ನು ಸುಖ ದುಃಖಗಳಲ್ಲಿ ತಾನು ಸಮಾನವಾಗಿ ಆತನ ಭಕ್ತಿ ಮತ್ತು ಪ್ರೀತಿಗೆ ಪಾತ್ರನಾದ ಮಹಾತ್ಮನು ಈ ಕಾವ್ಯದ ನಾಯಕನಾದ ಸುಧಾಮನು. ಕಾವ್ಯದಲ್ಲಿ ಕೃಷ್ಣದಾಸರು ಸುಧಾಮ ಮತ್ತು ಕೃಷ್ಣನ ನಡುವಿನ ಆತ್ಮೀಯತೆ ಮತ್ತು ಭಕ್ತಿಯ ಜೊತೆಗೆ ಭಕ್ತನಿಗೆ ಕಷ್ಟ ಬಂದಾಗ ಶ್ರೀಹರಿಯು ಕಾಯುವ ರೀತಿ ವಿಶಿಷ್ಟವಾದ ತತ್ವವನ್ನು ಬಣ್ಣಿಸಿದ್ದಾರೆ.

೬. ವಾಮನ ಚರಿತ್ರೆ

ವಾಮನ ಚರಿತ್ರೆಯು ೩೩ ಪದ್ಯಗಳಿಂದ ಕೂಡಿದ ಕಾವ್ಯವಾಗಿದೆ. ಕೃಷ್ಣದಾಸರು ಬಲಿಚಕ್ರವರ್ತಿ ಮತ್ತು ವಾಮನನ ನಡುವೆ ನಡೆದ ದಾನದ ಸಂದರ್ಭವನ್ನು ಈ ಕಾವ್ಯದಲ್ಲಿ ಸೋದಾಹರಣವಾಗಿ ನಿರೂಪಿಸಿದ್ದಾರೆ. ಕಾವ್ಯದ ಆರಂಭದಲ್ಲಿ ಚರಿತ್ರೆಯ ಇಷ್ಟಾರ್ಥವನ್ನು ಈ ರೀತಿಯಲ್ಲಿ ಹೇಳಿದ್ದಾರೆ.

''ಹರಿ ನೀನೆ ಗತಿಯೆಂದು ಮೊರೆಪೊಕ್ಕು ತನು ಮನದಿ |
ನಿರಪೇಕ್ಷ ಭಕುತಿಯಲಿ ಭಜಿಸುತ್ತಿಹಾ |
ಶರಣ ಜನ ರಿಣಿಯಾಗಿ ಬಾಗಿಲವ ಕಾಯಿದಿರುವ
ಧರಿಯೊಳಿಷ್ಟಾರ್ಥವನು ಕೊಡುತಿಹ ದಯಾಳು''[೪೮]

ಶ್ರೀ ಹರಿಯು ತನ್ನ ನಿಜಭಕ್ತನಿಗಾಗಿ ಬಾಗಿಲನು ಕಾಯುವ ಮೂಲಕ ಭಕ್ತನನ್ನು ಉದ್ಧರಿಸಿದವನು. ಐಶ್ವರ್ಯದ ನಿಮಿತ್ಯವಾಗಿ ಅದರ ಆಶಯ ಬೆನ್ನುಹತ್ತಿ ದೂರನಾದ ಭಕ್ತನನ್ನು ಸರಿಪಡಿಸಿ ಅನುಗ್ರಹಿಸುವುದು ಮುಖ್ಯವಾಗಿದೆ. ಆತನ ಐಶ್ವರ್ಯವನ್ನು ಕಬಳಿಸುವ ಮೂಲಕ ಆ ಭಕ್ತನ ಉದ್ಧರಿಸುವ ಕಾರ್ಯ ಬಲಿ ಮತ್ತು ವಾಮನರ ಕಥಾ ಸಂದರ್ಭದ ಮುಖ್ಯ ತಿರುಳಾಗಿದೆ.

ಬಲಿಚಕ್ರವರ್ತಿಯು ಶುಕ್ರಾಚಾರ್ಯರ ಶಿಷ್ಯನಾಗಿ ಅವರಿಂದ ಅನೇಕ ವಿದ್ಯೆಯನ್ನು ಪಡೆದುಕೊಂಡು ರಾಜ್ಯಭಾರ ಮಾಡುತ್ತಿದ್ದನು. ಶುಕ್ರಾಚಾರ್ಯರ ಉಪದೇಶದಿಂದ ವಿಶ್ವಜಿತ್‌ಯಾಗವನ್ನು ನೆರವೇರಿಸಿದನು. ಈ ಯಾಗದಿಂದ ಹಸಿರು ಬಣ್ಣದ ಕುದುರೆಗಳನ್ನು ಕಟ್ಟಿದ ಒಂದು ಚಿನ್ನದ ರಥ, ಬಿಲ್ಲು ಬಾಣಗಳನ್ನು ತುಂಬಿದ ಬತ್ತಳಿಕೆ ಹೊಂದಿರುತ್ತಾನೆ. ಇವುಗಳ ಜೊತೆಗೆ ವಜ್ರದ ಕವಚ ಬ್ರಹ್ಮನೇ ಬಲೀಂದ್ರನ ಕೊರಳಿಗೆ ಹೂಗಳ ಹಾರವನ್ನು ಹಾಕುತ್ತಾನೆ. ದೇವೇಂದ್ರನು ಇದರಿಂದ ಹೆದರಿ ಬೃಹಸ್ಪತಿಗಳಿಗೆ ಈ ವಿಷಯವನ್ನು ತಿಳಿಸುತ್ತಾನೆ. ಬೃಹಸ್ಪತಿಯು ಆಗ ಶುಕ್ರಾಚಾರ್ಯರ ತಪಸ್ಸಿನ ಶಕ್ತಿಯು ಅವನನ್ನು ಆವರಿಸಿದೆ. ಸಾಕ್ಷಾತ್ ಶ್ರೀಹರಿಯೇ ಅಲ್ಲದೇ ಯಾರು ಅವನನ್ನು ಸೋಲಿಸಲಾರರು. ದೇವೇಂದ್ರ ಹಾಗೂ ಇತರ ದೇವತೆಗಳು ಸ್ವರ್ಗವನ್ನು ಬಿಟ್ಟು ಓಡಿ ಹೋಗುತ್ತಾರೆ. ಬಲಿಚಕ್ರವರ್ತಿಯೇ ಸ್ವರ್ಗದ ಅಧಿಪತಿ ಆಗುತ್ತಾನೆ.

ಈ ಕಡೆ ದೇವತೆಗಳ ಅಧಿಪತಿಯಾದ ಅದಿತಿ ಮತ್ತು ಕಶ್ಯಪುವಿನ ಉದರದಿಂದ ವಾಮನ ಜನಿಸುತ್ತಾನೆ. ಕೃಷ್ಣದಾಸರು ವಾಮನನ ಜನನದ ಕಾವ್ಯ ಸೌಂದರ್ಯವನ್ನು ಕಣ್ಣಿಗೆ ಕಟ್ಟುವಂತೆ ನಿರೂಪಿಸಿದ್ದಾರೆ.

''ಹರಿ ಅದಿತಿಯ ಉದರದಿ ಬಂದನು |
ಸಿರಿಯೋಗ ಮಾಯದಿ ನಿಂದನು

ಸರಸಿಜಭವತನ್ನ ಸಂತತಿಯಲಿ ಅವ |
ತರಿಸಿದ ಹರಿಯಂದು ಪ್ರೇಮದಲಿ ||
ಸುರ ಜನ ಸಹಿತದಿವ್ಯಾಳ್ಳೆ ನೋಡುತ ಕುಳಿ |
ತಿರೆಜನ ಕಣ್ಣಿಗೆ ಜನಿಸಿದ ಪರಿ''[೪೯]

ವಾಮನ ಮಗುವಾಗಿ ತನ್ನ ದಿವ್ಯ ತೇಜಸ್ಸನ್ನು ತೋರ್ಪಡಿಸುತ್ತಾನೆ. ವಾಮನನು ಅನೇಕ ಸಾಹಸಗಳನ್ನು ಬಾಲಕನಿರುವಾಗಲೇ ಮಾಡುತ್ತಾನೆ. ಇತ್ತ ಬಲಿಚಕ್ರವರ್ತಿಯು ಗುರು ಶುಕ್ರಾಚಾರ್ಯರ ಮಾರ್ಗದರ್ಶನದಲ್ಲಿ ಅಶ್ವಮೇಧಯಾಗವನ್ನು ಮಾಡುತ್ತಾನೆ. ಆಗ ವಾಮನನು ಅವನ ಯಜ್ಞಶಾಲೆಗೆ ಹೋಗುತ್ತಾನೆ. ಆ ಸಂದರ್ಭವನ್ನು ಕೃಷ್ಣದಾಸರು ಮನೋಹರವಾಗಿ ಬಿಂಬಿಸಿದ್ದಾರೆ.

‘‘ವಾಮನಾ ಕೃತಿಯಲಿ ಬಂದಾ ಶ್ರೀ ಗೋವಿಂದ |
ಪ್ರೇಮದಿ ಸುರರಿಗೆ ಕೊಡಲಾನಂದಾ

ಶ್ರೀವಾಮನಾ|| ಲುಟು ಲುಟು ಲುಟು ನಡೆಯುತಾ ರನ್ನಪಾದುಕೇ |
ಥಟ ಪಟ ಧ್ವನಿಯಾ ತೋರುತಾ | ಶೃತಿಯಾ ಸಾರಾ |
ಪುಟು ಪುಟು ನುಡಿಯ ಬೀರುತಾ |
ಮಿಟಿ ಮಿಟಿ ನೋಡುವ ಜನರಿಗೆ ವಿಸ್ಮಯತಾ’’[೫೦]

ವಾಮನನ ದಿವ್ಯಕಾಂತಿಯ ವ್ಯಕ್ತಿತ್ವ ಬಲಿಚಕ್ರವರ್ತಿಗೆ ಬಹಳಷ್ಟು ಸಂತೋಷವಾಗುತ್ತದೆ. ಅವನ ಪಾದಗಳನ್ನು ತೊಳೆದು ನಮಸ್ಕರಿಸಿ, ಇಂದು ಧನ್ಯನಾದೇನು ನಾನು ಯಾವ ಪುಣ್ಯದ ಫಲವು ಒದಗಿತೋ ದೇವಾ, ಬಂದಿರಿ ನಮ್ಮಯ ಮನೆಗೆ ಎನ್ನುತ್ತಾ ವಾಮನನನ್ನು ಕರೆಯುತ್ತಾನೆ. ನಂತರ ತನ್ನ ಪೂರ್ವಜರ ಪುಣ್ಯದ ಫಲದಿಂದ ನಿಮ್ಮಂತಹ ಶ್ರೇಷ್ಠರು ಬಂದಿರಿ ಎಂದು ಹೇಳುತ್ತಾನೆ. ಆ ಬಳಿಕ ತಮ್ಮ ಅಪೇಕ್ಷೆಯನ್ನು ಸಂತೋಷದಿಂದ ಈಡೇರಿಸಿಕೊಡುತ್ತೇನೆ ಎಂದು ಹೇಳುತ್ತಾನೆ. ಆಗ ವಾಮನನು ಬಲೀಂದ್ರ ನೀನು ಧರ್ಮಾತ್ಮ, ಮಹಾದಾನಿ. ನನಗೆ ಹೆಚ್ಚಿನದೇನೂ ಬೇಕಿಲ್ಲ. ಮೂರು ಹೆಜ್ಜೆಯ ನೆಲ ಕೊಟ್ಟರೆ ಸಾಕು ಎನ್ನುತ್ತಾನೆ. ಈ ಮಾತಿಗೆ ಹರ್ಷಗೊಂಡ ಬಲಿಚಕ್ರವರ್ತಿಯು ಇಷ್ಟೇ ಏಕೆ ಇನ್ನೂ ಹೆಚ್ಚಿನ ಭೂಮಿಯನ್ನು ನೀಡುತ್ತೇನೆ ಸ್ವೀಕರಿಸಿ ಎನ್ನುತ್ತಾನೆ. ಇದಕ್ಕೆ ವಾಮನನು ಒಪ್ಪದೆ ನನಗೆ ಕೇವಲ ಮೂರು ಹೆಜ್ಜೆ ನೆಲ ಮಾತ್ರ ಸಾಕು ಎನ್ನುತ್ತಾನೆ. ಬಳಿಕ ಬಲೀಂದ್ರನು ದಾನಪಾತ್ರೆಯನ್ನು ತೆಗೆದುಕೊಂಡು ಬರುತ್ತಿರುವಾಗ ಶುಕ್ರಾಚಾರ್ಯರು ಬಲೀಂದ್ರನಿಗೆ ಮೋಸವಾಗುತ್ತಿದೆ ಇವನು ಸಾಮಾನ್ಯ ವ್ಯಕ್ತಿ ಅಲ್ಲ, ಎನ್ನುವ ಸಂದರ್ಭವನ್ನು ಕೃಷ್ಣದಾಸರು ಈ ರೀತಿಯಲ್ಲಿ ಹೇಳಿದ್ದಾರೆ.

‘‘ಬ್ಯಾಡ ಬ್ಯಾಡಲೊ ನರನಾಥನೆ ಇವನೊಳು ಸ್ನೇಹಸಲ್ಲಾ |
ಮೂಢ ವೇಷದಿ ನಿನ್ನ ಕೆಡಿಸಲು ತಾ ಬಂದ ಸಿರಿನಲ್ಲಾ

ಉದಕವ ತರಿಸುವ ಅರಸನ ಕಾಣುತ ಶುಕ್ರನೆಂದಾ |
ವಿದಿತವ ಭೂಸುರನಲ್ಲಿವ ನೋಡೆಲೋ ತೇಜದಿಂದಾ ||
ಮುದದಲಿ ಮನುಜನಾದರೆ ಬೇಡುವೆನೆ ಮೂರು ಪಾದಾ |
ಇದರೊಳು ನಿನಗಿನ್ನು ತಿಳಿಯಲಿಬಾರದು ಮತಿ ಮಂದಾ’’[೫೧]

ಎಂದು ಹೇಳಿದಾಗ ಬಲಿಚಕ್ರವರ್ತಿಯು ಶುಕ್ರಾಚಾರ್ಯರ ಮಾತನ್ನು ಒಪ್ಪುವುದಿಲ್ಲ. ಕೊಟ್ಟ ಮಾತನ್ನು ಮುರಿಯಲೇ ಎಂದು ಬಲಿಚಕ್ರವರ್ತಿಯು ಶುಕ್ರಾಚಾರ್ಯರಿಗೆ ಹೇಳುತ್ತಾನೆ. ಅವಾಗ ಶುಕ್ರಾಚಾರ್ಯರು ಈ ರೀತಿಯಲ್ಲಿ ವಿವರಿಸುತ್ತಾರೆ.

''ಎಲೈ ರಾಜನೇ ಈ ಗಿಡ್ಡ ಹಾರುವ-ಸಾಮಾನ್ಯ ನರನಲ್ಲ, ಸಾಕ್ಷಾತ್ ವಿಷ್ಣು. ನಿನ್ನ ಕುಲವನ್ನು ನಾಶ ಮಾಡಿದ ವರಾಹ ನೃಸಿಂಹನು. ಇವನಿಗೆ ದಾನ ಕೊಟ್ಟರೆ ನಿನ್ನ ಸರ್ವಸ್ವವನ್ನೇ ಕಳೆದುಕೊಳ್ಳುವೆ. ಇದು ಶಾಸ್ತ್ರ ವಿರುದ್ಧವು, ದ್ರವ್ಯವನ್ನು ದಾನ ಮಾಡಬಹುದು. ಆದರೆ ದ್ರವ್ಯ ಬರುವ ಉಪಾಯವನ್ನೇ ಕೊಡಬಾರದು. ಹಣವನ್ನು ದಾನ ಮಾಡು, ಗಿಡವನ್ನು ಮಾಡಬೇಡ. ಎಲ್ಲವನ್ನು ದಾನ ಮಾಡುವುದು ಸಂಸಾರಿಗಳಿಗೆ ನಿಷಿದ್ಧ, ಧರ್ಮವಿರುದ್ಧ. ಶುಕ್ರಾಚಾರ್ಯರ ಈ ನೀತಿಯು ಆಧ್ಯಾತ್ಮಿಕ ಜೀವನಕ್ಕೆ ವಿರುದ್ಧವಾಗಿದ್ದರೂ ಲೌಕಿಕ ಜೀವನಕ್ಕೆ ಉಚಿತವೇ ಆಗಿದೆ. ಇನ್ನೂ ಅನೇಕ ಜವಾಬ್ದಾರಿಯನ್ನು ಹೊತ್ತಿರುವ ವ್ಯಕ್ತಿಯು ಸರ್ವಸ್ವವನ್ನು ಕಳೆದುಕೊಳ್ಳುವಂತಹ ಉಗ್ರದಾನವನ್ನು ಮಾಡಕೂಡದೆಂದು ಇಲ್ಲಿಯ ಅಭಿಪ್ರಾಯ.''[೫೨] ಆದರೆ ಶುಕ್ರಾಚಾರ್ಯರ ಮಾತುಗಳನ್ನು ತಿರಸ್ಕರಿಸಿ ಬಲಿಚಕ್ರವರ್ತಿಯು ದಾನ ಮಾಡಲು ನಿರ್ಧರಿಸುತ್ತಾನೆ. ಆ ಸಂದರ್ಭವನ್ನು ಕೃಷ್ಣದಾಸರು ಅನೇಕ ದಾರ್ಶನಿಕ ವ್ಯಕ್ತಿಗಳ ಮುಖೇನ ಪುಣ್ಯಕ್ಕೆ ವಿಘ್ನವು ಹೇಗೆ ಕಾಡುತ್ತದೆ, ಎಂಬ ಮಾತುಗಳ ಹಿನ್ನೆಲೆಯಲ್ಲಿ ವಿವರಿಸುತ್ತಾರೆ.

ಮೂರು ಹೆಜ್ಜೆಯ ಭೂಮಿಯ ದಾನದ ಚಿತ್ರನವನ್ನು ಇಲ್ಲ ಮಧುರವಾಗಿ ವ್ಯಾಖ್ಯಾನಿಸಿದ್ದಾರೆ. ದಾನವನ್ನು ಸ್ವೀಕರಿಸಿದ ನಂತರ ವಾಮನನು ತನ್ನ ಬೃಹತ್ತಾದ ದೇಹವನ್ನು ತಾಳಿ ಬೆಳೆಸಲು ಪ್ರಾರಂಭಿಸುತ್ತಾನೆ. ಇಡೀ ವಿಶ್ವವೇ ಆವರಿಸುವಂತೆ ಬೆಳೆದು ನಿಲ್ಲುತ್ತಾನೆ. ಒಂದು ಹೆಜ್ಜೆಯಿಂದ ಭೂಮಿಯನ್ನು ಮತ್ತೊಂದು ಹೆಜ್ಜೆಯಿಂದ ಆಕಾಶವನ್ನು ಅಳೆದು, ನಂತರ ಮೂರನೇ ಹೆಜ್ಜೆಯನ್ನು ಎಲ್ಲಿ ಇಡಲಿ ಎಂದು ಬಲಿಚಕ್ರವರ್ತಿಯನ್ನು ಕೇಳುತ್ತಾನೆ. ಆಗ ಬಲಿಚಕ್ರವರ್ತಿಯು ನಾನು ನನ್ನ ರಾಜ್ಯ ಹೋಯಿತು ಎಂದು ದುಃಖಪಡುವುದಿಲ್ಲ. ಆದರೆ ಮಾತಿಗೆ ತಪ್ಪಿದವನು ಎಂದರೆ ದುಃಖವಾಗುತ್ತದೆ. ಮಹಾಭಕ್ತ ಪ್ರಹ್ಲಾದನ ಮೊಮ್ಮಗನಾದ ನಾನು ದೈವಭಕ್ತಿ ಮತ್ತು ಧರ್ಮ ನಿಷ್ಠೆಯಲ್ಲಿ ಅವನ ಮೊಮ್ಮಗನೇ ಆಗಿರುವೆ ಎಂದು ಹೇಳಿ ಮೂರನೇ ಹೆಜ್ಜೆಯನ್ನು ನನ್ನ ತಲೆಯ ಮೇಲೆ ಇಡು ಎಂದು ಹೇಳುತ್ತಾನೆ. ಆ ಹೊತ್ತಿಗೆ ಭಕ್ತ ಶ್ರೇಷ್ಠ ಪ್ರಹ್ಲಾದನು ಅಲ್ಲಿಗೆ ಬಂದು ಶ್ರೀಹರಿಗೆ ನಮಸ್ಕರಿಸಿ ನೀ ಕೊಟ್ಟ ಸಾಮ್ರಾಜ್ಯ ನೀನೆ ತೆಗೆದುಕೊಳ್ಳುತ್ತಿರುವುದು ನಮಗೆ ದುಃಖವಿಲ್ಲ ಎನ್ನುತ್ತಾನೆ. ಬಲಿಚಕ್ರವರ್ತಿ ಹೆಂಡತಿ ವಿದ್ಯಾವಳಿಯು ಶ್ರೀಹರಿಗೆ ಕೈಮುಗಿದು ಇದೆಲ್ಲವೂ ನಿನ್ನದೆ ಎನ್ನುತ್ತಾಳೆ. ಆಗ ವಾಮನ ರೂಪಿ ಶ್ರೀಹರಿಯು ಬಲಿಂದ್ರನು ನಾನು ಮಾಡಿದ ಪರೀಕ್ಷೆಯಲ್ಲಿ ಗೆದ್ದಿದ್ದಾನೆ. ನಾನು ಯಾರನ್ನಾದರೂ ಉದ್ಧಾರ ಮಾಡಬೇಕೆಂದು ತೀರ್ಮಾನಿಸಿದಾಗ ಅವರಿಂದ ಎಲ್ಲವನ್ನು ಕಿತ್ತುಕೊಳ್ಳುತ್ತೇನೆ. ಹಾಗಾಗಿ ಬಲೀಂದ್ರನಿಂದಲೂ ನಾನು ಎಲ್ಲವನ್ನು ಕಿತ್ತುಕೊಂಡೆ. ನನ್ನ ಈ ಪರೀಕ್ಷೆಯಲ್ಲಿ ಆತನು ಜಯಶಾಲಿಯಾದನು. ಧರ್ಮನಿಷ್ಠನಾದ ಆತನ ಭಕ್ತಿಯು ಪವಿತ್ರತೆಯಿಂದ ಕೂಡಿರುವುದರಿಂದ ಆತನಿಗೆ ನನ್ನ ರಕ್ಷಣೆಯಿದೆ ಎಂದು ಹೇಳಿ ಬಲೀಂದ್ರನನ್ನು ಶ್ರೀಹರಿಯು ಸುತಳ ಲೋಕಕ್ಕೆ ಕಳುಹಿಸುತ್ತಾನೆ.

''ಬಂದು ಹೊಕ್ಕನು ಬಲಿಯು ಮಂದಿರವನು |
ಅಂದಿನ್ವರುಷಕ ಇಂದ್ರ ಪದದ ಸುಖವೇನು

ಕಲಶ ಕನ್ನಡಿ ಲಾಜ ದೂರ್ವಾಕ್ಷತೆಗಳಿಂದಾ |
ಲಲನೆಯರ ದಿವ್ಯಾರತಿಗಳ ಕೈ ಕೊಳ್ಳುತಾ
ನುತ ಪಿತಾಮಹ ಸತಿಸುತರು ಆಪ್ತ ಜನ ಸಹಿತಾ''[೫೩]

ಕೃಷ್ಣದಾಸರು ಬಲಿವರದ ವಾಮನರ ಚರಿತೆಯನ್ನು ಓದುವುದರಿಂದ ಸಾಮಾನ್ಯ ಮನುಷ್ಯನು ಪುಣ್ಯವನ್ನು ಕಟ್ಟಿಕೊಳ್ಳುತ್ತಾನೆ. ವಾಮನ ಅವತಾರದ ಹಲವು ರೋಚಕ ಘಟನೆಗಳು ಪ್ರತಿಯೊಬ್ಬ ಮನುಷ್ಯನಿಗೂ ಎಚ್ಚರಿಕೆ ಗಂಟೆಗಳಾಗಿವೆ. ಈ ಕಾವ್ಯ ಕೃಷ್ಣದಾಸರ ಕವಿತ್ವದಲ್ಲಿ ಅಮೂಲ್ಯವಾಗಿ ಅರಳಿ ನಿಂತಿದೆ. ಶ್ರೀಸಾಮಾನ್ಯರಿಗೆ ಶ್ರೇಷ್ಠ ಭಕ್ತರ ಜೀವನಚರಿತ್ರೆಯನ್ನು ತಿಳಿಯಪಡಿಸುವುದು ಇಲ್ಲಿ ಮುಖ್ಯವಾಗಿದೆ.

೭. ಶ್ರೀಭಾವಾರ್ಥ ಸಪ್ತಕಾಂಡ ರಾಮಾಯಣ

ಕೃಷ್ಣದಾಸರಿಂದ ರಚಿತವಾದ ಶ್ರೀಭಾವಾರ್ಥ ಸಪ್ತಕಾಂಡ ರಾಮಾಯಣವು ಬಾಲ್ಯಕಾಂಡದಿಂದ ಪ್ರಾರಂಭವಾಗಿ, ಅನುಕ್ರಮವಾಗಿ ಅಯೋಧ್ಯಾಕಾಂಡ, ಅರಣ್ಯಕಾಂಡ, ಕಿಷ್ಕಿಂದಕಾಂಡ, ಸುಂದರಕಾಂಡ, ಯುದ್ಧಕಾಂಡ, ಉತ್ತರಕಾಂಡ, ಅಹಿರಾವಣ, ಮಹಿರಾವಣ ಕಥಾ ಮತ್ತು ಶ್ರೀರಾಮನ ಪಟ್ಟಾಭಿಷೇಕ ಮುಂತಾದ ವಸ್ತುವಿಷಯಗಳನ್ನು ಒಳಗೊಂಡಿದೆ. ಈ ಕೃತಿಯು ಕೃಷ್ಣದಾಸರ ವಿದ್ವತ್ತಿಗೆ ಹಿಡಿದ ಕೈಗನ್ನಡಿಯಾಗಿದೆ.

ಶ್ರೀಭಾವಾರ್ಥ ಸಪ್ತಕಾಂಡ ರಾಮಾಯಣವು ಒಟ್ಟು ೧೧೬ ಪದ್ಯಗಳನ್ನು ಒಳಗೊಂಡಿದೆ. ೧೫೮ ಶ್ಲೋಕಗಳು, ೨೩ ಸವಾಯಿ, ೩ ಚಾಮರಿಗಳು, ೩ ಭಾಮಿನಿ ಷಟ್ಪದಿ, ೨ ಪರಿವರ್ಧಿನಿ, ೧ ವಾರ್ಧಕ ಷಟ್ಪದಿ, ೧ ಉಗಾಭೋಗ, ೧ ಮಂಗಳಾಷ್ಟಕ ಹೀಗೆ ಕೀರ್ತನೆಗಳ ವಿವಿಧ ಪ್ರಕಾರಗಳಲ್ಲಿ ಕೃಷ್ಣದಾಸರು ಈ ಕೃತಿಯನ್ನು ರಚಿಸಿದ್ದಾರೆ.

ಶ್ರೀಭಾವಾರ್ಥ ಸಪ್ತಕಾಂಡ ರಾಮಾಯಣ ಕಥೆಯ ಪ್ರಾರಂಭವು ಮಂಗಳಾಚರಣದಿಂದ ಪ್ರಾರಂಭಗೊಳ್ಳುತ್ತದೆ. ಸಂಪ್ರದಾಯದಂತೆ ಗಣಪತಿ, ಸರಸ್ವತಿ, ಹಣಮಂತ ಹಾಗೇ ಶ್ರೀಹರಿಯನ್ನು ಸ್ತುತಿಸುತ್ತ ಭಕ್ತಿಯ ಶಕ್ತಿಯನ್ನು ಕೊಟ್ಟು ರಕ್ಷಿಸೋ ಗುರುವೇ ಎಂದು ಮನದುಂಬಿ ಹಾಡಿಕೊಳ್ಳುತ್ತಾರೆ. ತನ್ನ ಗುರು ಹಾಗೂ ತಂದೆಯಾದ ಮಹಿಪತಿರಾಯರನ್ನು ಭಕ್ತಿಪೂರ್ವಕಾಗಿ ಪ್ರಾರ್ಥಿಸಿ, ಕವಿ ಕೃಷ್ಣದಾಸರು ತಮ್ಮ ನಿವೇದನೆಯನ್ನು ಈ ರೀತಿಯಾಗಿ ಮಾಡಿಕೊಳ್ಳುತ್ತಾರೆ.

''ಅವತಾರಾಗದ ಮುನ್ನೆ ಜ್ಞಾನಮಯದೀ ಶ್ರೀರಾಮಚರಿತ್ರವಾ |
ಅವನೀಲಾವನು ಸಪ್ತ ಕಾಂಡ ರಚಿಸೀ ಹೇಳಿದ ವಿಚಿತ್ರವಾ ||

ಶ್ರವಣ ದ್ವಾರದಿ ಕಾವ್ಯ ಸಾರಸವಿದು ಉದ್ದರಿಸುವದೀ ಜಗಾ |
ಆ ವಾಲ್ಮೀಕನ ಪಾದ ಪದ್ಮ ನಮಿಸೀ ಕೊಂಡಾಡುವೆನು ಸೋಜಿಗಾ

ಶ್ರೀ ವಾಲ್ಮೀಕನ ಉಂಡ ಊಟ ಸುಖದಾ ತತ್ಶೇಷವನು ಕಾಯಿಸಿ |
ಈ ವಸುಧಿಲಿ ಅಲ್ಪ ಬುದ್ಧಿಯವ ಕನ್ನಡ ಭಾಷೆಯಲಿ ನೇಮಿಸಿ ||
ಭಾವಾರ್ಥದಲಿ ಪಾಡಿದನು ಮಹಿಪತಿಜನು ಪದ ಗೌರವ"[೫೪]

ಕೃಷ್ಣದಾಸರು ಹೇಳುವ ಹಾಗೆ ವಾಲ್ಮೀಕಿಯು ರಾಮಾಯಣದ ಅವತಾರ ಆಗುವ ಮುನ್ನವೇ ಈ ಜಗತ್ತನ್ನೇ ಉದ್ಧರಿಸಲು ಸಪ್ತಕಾಂಡ ರಾಮಾಯಣ ಮಹಾಕಾವ್ಯವನ್ನು ರಚಿಸಿದ್ದಾನೆ. ಆ ಕಾವ್ಯದ ಸವಿಮುಖವನ್ನು ಪಡೆದಿದ್ದಾನೆ. ಇಂತಹ ಪುಣ್ಯಶ್ರೇಷ್ಠನಾದ ವಾಲ್ಮೀಕಿಯು ಸವಿದ ಕಾವ್ಯದ ಸುಖದಲ್ಲಿ ಸ್ವಲ್ಪವಾದರೂ ಪಡೆಯಲು ಅಲ್ಪಬುದ್ಧಿಯವನಾದ ನಾನು ಪ್ರಯತ್ನಿಸುತ್ತೇನೆ. ಇದು ಕನ್ನಡ ಭಾಷೆಯಲ್ಲಿ ಆ ರಾಮಾಯಣದ ಭಾವಾರ್ಥರೂಪದಲ್ಲಿ ರಚಿಸುತ್ತಿರುವೆನೆಂದು ಪ್ರಾಂಜಲ ಮನಸ್ಸಿನಿಂದ ಕೇಳಿಕೊಂಡಿದ್ದಾರೆ.

ಬಾಲಕಾಂಡ ಪ್ರಾರಂಭದಲ್ಲಿ ಕೃಷ್ಣದಾಸರು ಸರಳ ಮತ್ತು ಸುಂದರವಾಗಿ ಕಥೆಯನ್ನು ಆರಂಭಿಸುತ್ತಾರೆ. ಒಂದು ದಿನ ವಾಲ್ಮೀಕಿ ಋಷಿಯ ಆಶ್ರಮದಲ್ಲಿ ಇದ್ದ ಬಾಲಕರಾದ ಲವಕುಶರು ವಾಲ್ಮೀಕಿ ಅವರ ಬಳಿಬಂದು ನಮಸ್ಕರಿಸುತ್ತಾರೆ. ತಮ್ಮ ತಂದೆ ಶ್ರೀರಾಮನ ಅಪೂರ್ವವಾದ ಕಥೆಯನ್ನು ಹೇಳಬೇಕೆಂದು ನಿವೇದಿಸಿಕೊಳ್ಳುತ್ತಾರೆ. ಕೃಷ್ಣದಾಸರು ಆರಂಭಿಕ ಪದ್ಯವನ್ನು ರಸವತ್ತಾಗಿ ಸ್ಫುಟವಾಗಿ ಚಾಮರಿ ಪದ್ಯದ ಮೂಲಕ ಹೆಣೆದಿದ್ದಾರೆ.

"ಒಂದು ದೀನದಲೀ | ಭಕುತಿಯಿಂದಲೀ
ಮುನಿಗೆ ವಂದಿಸಿ | ಕುಶನು ಸಂಧಿಸೀ
ತಂದೆ ರಾಘವಾ | ಚರಿತೆ ಮೋಘವಾ
ಕೇಳಿಸುವದು | ಕರುಣಿಸುವದು

ಎಂದು ಕೇಳಲೀ | ಹರುಷದ್ದೇಳಲೀ
ಶಿಷ್ಯ ಬೋಧಕಾ | ಭಿಜ್ಞ ವಾಲ್ಮೀಕಾ
ತಂದು ಸುಂದರಾ | ಹೃದಯ ಮಂದಿರಾ
ಮೂರ್ತಿ ರಾಮನಾ | ವಾಪ್ತ ಕಾಮನಾ"[೫೫]

ಲವಕುಶರ ಆ ಮಾತುಗಳನ್ನು ಕೇಳಿಸಿಕೊಂಡ ವಾಲ್ಮೀಕಿ ಋಷಿಯು ಸಂತೋಷಗೊಳ್ಳುತ್ತಾನೆ. ಶ್ರೀರಾಮನ ಕಥೆಯನ್ನು ತಮ್ಮ ಅಮೃತವಾದ ವಾಣಿಯ ಮೂಲಕ ಹೇಳುತ್ತಾರೆ. ಶ್ರೀರಾಮನ

ಜನನದ ರೋಚಕ ಕಥೆಯನ್ನು ಈ ರೀತಿಯಲ್ಲಿ ನೆನಪಿಸುತ್ತಾರೆ. ದಶರಥ ಮಹಾರಾಜನು ವಶಿಷ್ಠ ಮಹರ್ಷಿಯ ಆಜ್ಞೆಯ ಮೇರೆಗೆ ಪುತ್ರಕಾಮೇಷ್ಟಿಯ ಯಾಗವನ್ನು ಮಾಡುತ್ತಾರೆ. ಆ ಸಮಯದಲ್ಲಿ ಯಜ್ಞಸ್ವರನಿಂದ ಪಾಯಸದ ಪಾತ್ರೆಯನ್ನು ಪಡೆಯುತ್ತಾನೆ. ತನ್ನ ಮೂವರು ಪಟ್ಟದರಸಿಯರಾದ ಕೌಸಲ್ಯಾದೇವಿ, ಸುಮಿತ್ರಾದೇವಿ, ಕೈಕೇಯದೇವಿಯರಿಗೆ ಸೇವಿಸಲು ಪಾಯಸವನ್ನು ಕೊಡುತ್ತಾರೆ. ಆಗ ಸ್ವತಃ ಪರಬ್ರಹ್ಮನಾದ ಶ್ರೀವಿಷ್ಣುವೇ ತನ್ನ ಯೋಗ ಮಾಯದಿಂದ ಕೌಸಲ್ಯಾದೇವಿಯ ಗರ್ಭದಲ್ಲಿ ಹುಟ್ಟುತ್ತಾನೆ.

''ಶುದ್ಧ ಚೈತ್ರದ ಪುನರ್ವಸು ನವಮಿಯಾ |
ಬದ್ಧ ವಾಸರ ಮಧ್ಯದಿ ಚಿನುಮಯಾ ||
ಅದ್ವಿತೀಯ ಪರಾತ್ಪರ ಬ್ರಹ್ಮನೇ
ಮುದ್ದು ರೂಪದಿ ಬಂದನು ಝುಮ್ಮನೇ''[೫೭]

ಶ್ರೀರಾಮನು ಈ ಭೂಮಿಯನ್ನು ಉದ್ಧರಿಸುತ್ತಾನೆ. ನಂತರ ವಿಷ್ಣುವಿನ ಪರ್ಯಂಕವಾದ ಶೇಷದೇವನು ಲಕ್ಷ್ಮಣನಾಗಿ ಸುಮಿತ್ರೆಯ ಗರ್ಭದಿಂದ ಶಂಖ, ಚಕ್ರಗಳ, ಭರತ, ಶತೃಘ್ನರಾಗಿ ಕೈಕೇಯ ಗರ್ಭದಿಂದ ಜನಿಸುತ್ತಾರೆ. ಇಲ್ಲೆಲ್ಲಾ ಕೃಷ್ಣದಾಸರು ಜೋಗುಳ ಪದವನ್ನು, ಶ್ಲೋಕಗಳನ್ನು ರಚಿಸುವ ಮೂಲಕ ಕಾವ್ಯದ ಮಾಧುರ್ಯತೆಯನ್ನು ಹೆಚ್ಚಿಸಿದ್ದಾರೆ. ಕೌಸಲ್ಯಾದೇವಿಯ ಮಗನಿಗೆ ಶ್ರೀರಾಮನೆಂದು ನಾಮಕರಣ ಮಾಡುವ ಹಾಗೂ ಶ್ರೀರಾಮನ ರೂಪದ ವರ್ಣನೆಯನ್ನು ವಿಶಿಷ್ಟವಾಗಿ ಹೆಣೆದಿದ್ದಾರೆ.

''ಹೊಳೆವ ಜಾವಳದ ಕುಂತಳದಿ ಅಳಿ ಕುಲ ಹಳಿವ
ಥಳ ಥಳಿಪ ಮುಕುಟ ಅರಳೆಲೆಯ ಫಣಿಯಾ |
ಢಳ ಢಳಿಪ ನಳಿನ ದಳ ನಯನ ನಾಸಿಕ ಸರಳ
ನಳ ನಳಿಪ ಗಂಡಸ್ಥಳ ಕೂರ್ಮಗೆಣಿಯಾ ||
ಖಳ ಖಳನೆ ನಗುವ ತುಟಿಯೊಳಗೆ ದಂತ
ಝುಳ ಝುಳಿಪ ಕರ್ಣ ಕುಂಡಲದ ಮಣಿಯಾ |
ಚಲುಗದ್ದದ ಕಂಬು ಕೊರಳ ಹೃದಯದಿ ಸರಳ
ಹುಲಿಯುಗುರು ಪದಕ ಭಳ ಭಳನೆ ಭಾಸುವ ಖಣಿಯಾ''[೫೮]

ಹೀಗೆ ಕೃಷ್ಣದಾಸರು ಸಹಜವಾಗಿ ಜೋಗುಳ ಪದ ಮತ್ತು ಉಗಾಭೋಗಳ ಮೂಲಕವಾಗಿ ಶ್ರೀರಾಮನ ವರ್ಣನೆಯನ್ನು ಮನೋಹರವಾಗಿ ಚಿತ್ರಿಸಿದ್ದಾರೆ. ಹಾಗೆಯೇ ಶ್ರೀರಾಮನ ಬಾಲ್ಯ ಲೀಲೆಗಳನ್ನು ಹೇಳುತ್ತಾ ಕಥೆಯನ್ನು ಮುಂದುವರಿಸಿದ್ದಾರೆ.

ಇಲ್ಲಿ ಶ್ರೀರಾಮ, ಲಕ್ಷ್ಮಣರು, ವಿಶ್ವಾಮಿತ್ರ ಋಷಿಯ ಕೂಡ ರಾಕ್ಷಸರಿಂದ ಯಜ್ಞವನ್ನು ರಕ್ಷಿಸಲು ಹೋಗುವ ಕಥೆ ಮುಖ್ಯವಾಗಿ ಕಂಡುಬರುತ್ತದೆ. ರಾಮ ಲಕ್ಷ್ಮಣರ ಪಾದಸ್ಪರ್ಶದಿಂದ ಕಲ್ಲಾದ ಅಹಲ್ಯೆಯ ಉದ್ಧಾರವಾದ ಪ್ರಸಂಗವನ್ನು ಅರ್ಥಪೂರ್ಣವಾಗಿ ಸೆರೆಹಿಡಿದ್ದಿದ್ದಾರೆ. ಗೌತಮ ಋಷಿ ಪತಿಯಿಂದ ಅಹಲ್ಯೆ ಕಲ್ಲಾಗಿ ಹೋದ ಸಂದರ್ಭ ವಿಶಿಷ್ಟವಾಗಿ ಮೂಡಿದೆ. ಆ ಶಾಪ ವಿಮುಕ್ತಿಗಾಗಿ ಶ್ರೀರಾಮನ ಪಾದಸ್ಪರ್ಶದಿಂದ ತಾನು ನಿಜರೂಪ ಪಡೆಯೆಂದು ಹೇಳುವ ಪ್ರಸಂಗವು ಸ್ವಾರಸ್ಯಕರವಾಗಿ ಈ ಕಾವ್ಯದಲ್ಲಿ ಬಿಂಬಿತವಾಗಿದೆ.

ಕವಿಯು ಕಾವ್ಯದಲ್ಲಿ ಅಲ್ಲಲ್ಲಿ ಹಾಸ್ಯ, ಮಧುರ ಮುಂತಾದ ರಸಗಳ ಮೂಲಕ ಸಹೃದಯರಿಗೆ ಬೇಸರವಾಗದಂತೆ ಕಾವ್ಯವನ್ನು ಕಟ್ಟಿಕೊಡುತ್ತಾ ಹೋಗುತ್ತಾರೆ. ಮುಂದೆ ಶ್ರೀರಾಮನು ಶಿವನ ಧನುಸ್ಸನ್ನು ಎತ್ತುವ ಪ್ರಸಂಗದ ಜೊತೆಗೆ ಇಲ್ಲಿ ರಾವಣನ ಗರ್ವಭಂಗ ಸಂದರ್ಭ ಕಾವ್ಯದಲ್ಲಿ ಮಾರ್ಮಿಕವಾಗಿ ಅಭಿವ್ಯಕ್ತಗೊಂಡಿದೆ. ರಾಮ ಮತ್ತು ರಾವಣನ ನಡುವಿನ ಶಕ್ತಿ ಸಾಮರ್ಥ್ಯ ಸಾಧನೆಯ ಹಿನ್ನೋಟ ಮುಂತಾದವುಗಳನ್ನು ಕಾವ್ಯವು ವಿಸ್ತರಿಸುತ್ತದೆ. ರಾವಣನು ಸ್ಪರ್ಶಿಸಿದ ಆ ಬಿಲ್ಲನ್ನು ಎತ್ತಲು ಹಿಂದೇಟು ಹಾಕುತ್ತಿದ್ದರು ಹಾಗೂ ಅಸಹ್ಯ ಪಟ್ಟುಕೊಳ್ಳುತ್ತಿದ್ದರು. ಆಗ ಎಲ್ಲ ರಾಜರನ್ನು ಹಿಂದಿಕ್ಕಿ ಶ್ರೀರಾಮನು ಬಿಲ್ಲನ್ನು ಎತ್ತಿ ಪವಿತ್ರಗೊಳಿಸಿದನು ಎನ್ನುವಲ್ಲಿ ಕೃಷ್ಣದಾಸರ ಕಾವ್ಯ ಸೌಂದರ್ಯದ ಮಾಧುರ್ಯತೆ ತುಂಬಿ ತುಳುಕುತ್ತದೆ. ಆ ನಂತರಜನಕ ರಾಜನು ಶ್ರೀರಾಮನ ತಂದೆಗೆ ಪತ್ರ ಬರೆಯುತ್ತಾನೆ. 'ಸೀತಾಸ್ವಯಂವರದ ವಿಸ್ತೃತ ವರ್ಣನೆಯನ್ನು ಈ ಕಾವ್ಯದಲ್ಲಿ ಮಾಡಿದ್ದಾರೆ. ಈ ತೆರನಾಗಿ ಕಾವ್ಯ ಸ್ಫುಟವಾಗಿ ಕಥೆಯನ್ನು ಚಿತ್ರಿಸುತ್ತದೆ.

ಕೃಷ್ಣದಾಸರು ಈ ಪ್ರಸಂಗದ ನಂತರ ಅದ್ಭುತವಾದ ಮಂಗಳಾಷ್ಟಕ ಪದ್ಯವನ್ನು, ಶ್ರೀರಾಮನ ವಿವಿಧ ಲೀಲೆಗಳನ್ನು ಸಹೃದಯರಿಗೆ ಕಟ್ಟಿಕೊಡುವ ಉದ್ದೇಶದಿಂದ ಅರ್ಥಪೂರ್ಣವಾಗಿ ಬಿಂಬಿಸಿದ್ದಾರೆ. ಹೀಗೆ ಶ್ರೀರಾಮನ ಬಾಲ್ಯಲೀಲೆಯಿಂದ ಹಿಡಿದು ಸೀತೆಯನ್ನು ವರಿಸಿದ ಕಥೆ, ಪಟ್ಟಾಭಿಷೇಕದ ಕಥೆ, ಹೀಗೆ ಸಣ್ಣಪುಟ್ಟ ಘಟನೆಗಳನ್ನು ಸಹಬಿಡದೆ ಸ್ಫುಟವಾಗಿ ಸರಳ ಹಾಗೂ ಸುಂದರ ಶೈಲಿಯ ಮೂಲಕ ವರ್ಣಿಸಿದ್ದಾರೆ. ಬೃಹತ್ತಾದ ರಾಮಾಯಣದ ಕಥೆಯನ್ನು ಪುಟ್ಟ ಗ್ರಂಥದ ಮೂಲಕ ಕಟ್ಟಿಕೊಟ್ಟಿರುವ ಕೃಷ್ಣದಾಸರ ಕವಿತ್ವದ ಶಕ್ತಿ ಹಿರಿದಾಗಿದೆ.

ಈ ಕಾವ್ಯವು ''ಅಲ್ಲಲ್ಲಿ ಸಂದರ್ಭೋಚಿತವಾಗಿ ಕರುಣ, ಗಂಭೀರ, ಶಾಂತ, ಶೃಂಗಾರ, ಹಾಸ್ಯ ಇತ್ಯಾದಿ ರಸಗಳು ಕಥೆಯಲ್ಲಿ ಓತಪ್ರೋತವಾಗಿ ಹರಿದು, ಅಲಂಕಾರ ಪ್ರಸಾದಿಗಳಿಂದ ಕಾವ್ಯಸೃಷ್ಟಿ ಸಾಹಿತ್ಯ ಶ್ರೀಮಂತಿಕೆಯನ್ನು ಹೆಚ್ಚಿಸಿದೆ. ಒಟ್ಟಿನ ಮೇಲೆ ಸಾಮಾನ್ಯ ಜನರಿಗೆ ಮನರಂಜಿಸುವ ಕಥೆ ಎನಿಸಿದರೆ ಅಧ್ಯಾತ್ಮಿಗಳಿಗೆ ಭಕ್ತಿಯ ಭಂಡಾರವಾಗಿದೆ. ಪಂಡಿತರಿಗೆ ಪಠಣಕ್ಕೆ ಯೋಗ್ಯವಾಗಿದೆ. ಸಾಹಿತ್ಯ ಪ್ರೇಮಿಗಳಿಗೆ ರಸಘಟ್ಟವಾಗಿದೆ.''[೫೮] ಹಾಗಾಗಿ ರಾಮನ ವಿವಿಧ ಲೀಲೆಗಳನ್ನು ಹಾಗೂ ಯುದ್ಧದ ನಂತರ ನಡೆಯುವ ಘಟನೆಗಳನ್ನು ಕಾವ್ಯವು ಓದುಗನಿಗೆ ವರ್ಣನಾತ್ಮಕವಾಗಿ, ವಿಸ್ತೃತವಾಗಿ ನೆನಪಿಸಿಕೊಡುತ್ತದೆ. ಮೂಲ ರಾಮಾಯಣದ ಎಷ್ಟೋ ಘಟನೆಗಳನ್ನು ಚಿತ್ರಿಸುವಾಗ ಕೃಷ್ಣದಾಸರು ಕಾವ್ಯದಲ್ಲಿ ಸ್ವಂತಿಕೆಯನ್ನು ಮೆರೆದಿದ್ದಾರೆ.

೮. ಆನಂದಲಹರಿ(ಪರಮಾರ್ಥ ಮುಯ್ಯ)

ಆನಂದ ಲಹರಿಯು ನೂರಾಹದಿನೈದು ತ್ರಿಪದಿ ನುಡಿಗಳಿಂದ ಕೂಡಿದ ನೀಳ್ಗವಿತೆಯಾಗಿದೆ. ಕೃಷ್ಣದಾಸರು ತಮ್ಮ ಖಂಡಕಾವ್ಯಕ್ಕಿಂತಲೂ ಹೊಸ ಬಗೆಯ ಪ್ರಯೋಗದ ಪ್ರಯತ್ನವನ್ನು ಇಲ್ಲಿ ಮಾಡಿದ್ದಾರೆ. ಪಾರಮಾರ್ಥಿಕವಾದ ಬೋಧನೆಯ ಮಾತುಗಳಿಗೆ ತತ್ವದರ್ಶನದ ಪ್ರತಿಮೆಯನ್ನು ಜೋಡಿಸಿದ್ದಾರೆ. ಕಾವ್ಯದ ಆರಂಭದ ಹನ್ನೆರಡು ನುಡಿಗಳು ದೇವತಾಸ್ತುತಿಯಿಂದ ಕೂಡಿದೆ. ಕ್ರಮವಾಗಿ ಗಣಪತಿ, ಸರಸ್ವತಿ, ಅವಧೂತ ಪರಂಪರೆ, ಶ್ರೀಶ, ಶಂಕರ, ಹನುಮಂತ, ಸುಖತೀರ್ಥ ಸಾಧುಸಂತರು, ಮಹಿಪತಿರಾಯರನ್ನು ಮನದುಂಬಿ ಸ್ತುತಿಸಿ ಕಾವ್ಯದ ಆರಂಭವನ್ನು ಮಾಡಿದ್ದಾರೆ. ಸರಸ್ವತಿಯ ಸ್ತುತಿಯನ್ನು ಕೃಷ್ಣದಾಸರು ಸುಂದರವಾಗಿ ಮಾಡಿದ್ದಾರೆ.

''ಸಕಲಾ ಮುಖದೊಳು ಯುಕುತಿಯ ನುಡಿಗಳಾ
ಪ್ರಕಟದಿ ನುಡಿಸುವೆ ಜನನಿ ಸರಸ್ವತಿ
ಭಕುತಿಲಿ ಶರಣೆಂಬೆ ಕಲ್ಯಾಣಿ''[೫೯]

ಎನ್ನುತ ವಿದ್ಯಾದೇವತೆಯನ್ನು ಭಕ್ತಿಯಿಂದ ಭಜಿಸಿದ್ದಾರೆ. ಕೃಷ್ಣದಾಸರು ಆನಂದಲಹರಿ ಕಾವ್ಯವು ಮನಸ್ಸು, ಆತ್ಮ, ದೇಹದ ವಿಷಯವನ್ನು ಪ್ರಸ್ತಾಪಿಸುತ್ತಾ, ಅರಿಷಡ್ವರ್ಗ ಮನುಷ್ಯನನ್ನು ಹೇಗೆ ಹಾಳು ಮಾಡುತ್ತದೆ ಎಂಬುದನ್ನು ಮಾರ್ಮಿಕವಾಗಿ ಚಿತ್ರಿಸುತ್ತದೆ. ಇದನ್ನೇ ಕೃಷ್ಣದಾಸರು ಸಾಂಕೇತಿಕ ಅರ್ಥವನ್ನು ಕಲ್ಪಿಸಿ ಕಾವ್ಯವನ್ನು ಹೆಣದಿದ್ದಾರೆ. ಪದುಮನಾಭನ ಚದುರ ಮುತ್ತೈದೆಯರು, ವಿವೇಕ ಬೋಧಿಯೆಂಬ ಅಕ್ಕ ತಂಗಿಯರು ಕೂಡಿ ಸೋದರಮಾವ ಅಭಿಮಾನಿ, ಅತ್ತೆ ವಿಷಯ ಇವರಲ್ಲಿಗೆ ಮುಯ್ಯಿ ತರುವರು. ಇದರಲ್ಲಿ ಅಭಿಮಾನದ ನಿರಸನವೂ ವಿಷಯದಿಂದ ದೂರ ಉಳಿದ ಭಾವನೆಯನ್ನು, ಕಾಮಕ್ರೋಧಾದಿಗಳು ಹೇಯವೆಂಬ ತಿಳುವಳಿಕೆಯನ್ನು ಹೃದಯಾಂಗಮಯವಾಗಿ ಚಿತ್ರಿಸಿದ್ದಾರೆ. ಈ ಕಾವ್ಯವು ಮದುವೆ ಹಾಗೂ ಮನೆಯ ಇತರ ಶುಭಗಳಿಗೆಯಲ್ಲಿ ಹೆಣ್ಣುಮಕ್ಕಳು ಹಾಡಲು ಉಪಯೋಗಿಸುವಂತಿದೆ.

"ಪಾರಮಾರ್ಥ' ಮುಯ್ಯಿ ಎಂದು ಹೆಸರಿಟ್ಟು ಬರೆದ ಈ ಪದ್ಯಗಳಲ್ಲಿ ದಾಸವರ್ಯರಾದ ಶ್ರೀಕೃಷ್ಣರಾಯರು ದಾಸಸಾಹಿತ್ಯದ ಹಾಡುಗಳ ರೀತಿಯಲ್ಲಿ ಒಂದು ಹೊಸತನವನ್ನು ತೋರಿಸಿದ್ದಾರೆನ್ನಬಹುದು. ಮದುವೆಯ ಸಮಾರಂಭದ ಅವಕಾಶದಲ್ಲಿ ಬೀಗರು ಒಬ್ಬರಿಗೊಬ್ಬರು ಮುಯ್ಯಿತರುವುದು ಮತ್ತು ಒಬ್ಬರಿಗೊಬ್ಬರು 'ಫಜೀತಿ'ಯಾಗುವಂತೆ ಮಾಡಿ ವಿನೋದ ರಸ ಪ್ರಸಂಗವನ್ನು ಉಂಟುಮಾಡುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಹಿನ್ನೆಲೆಯಲ್ಲಿ ಒಂದು ಸಾಂಕೇತಿಕ ರೂಪವನ್ನು ಕಲ್ಪಿಸಿ ಇಲ್ಲಿ ದಾಸವರ್ಯರು 'ವಿವೇಕ-ಬೋಧಿ' ಎಂಬ ಅಕ್ಕತಂಗಿಯರು, ಸೋದರಮಾವ 'ಅಭಿಮಾನಿ', ಅತ್ತೆ 'ವಿಷಯ', ಇವರಲ್ಲಿಗೆ ಮುಯ್ಯಿ ತರುವಂತೆ ಆರಂಭಿಸಿ ಪಾರಮಾರ್ಥ ಸಾಧನೆಗೆ ಯಾವ ಮಾತುಗಳು ಅವಶ್ಯವೆಂಬುದನ್ನು ಮಾರ್ಮಿಕವಾಗಿ ಹೇಳಿದ್ದಾರೆ. ಈ ಮುಯ್ಯಿಗೆ ಪ್ರತಿಯಾಗಿ ಮುಯ್ಯಿ ಇಲ್ಲವೆಂದು ಕೊನೆಗೆ

ಸಾರಿದ್ದಾರೆ. ಇಲ್ಲಿಯ ಹಾಡಿನ ಧಾಟಿ, ನಿತ್ಯ ಮಾತಿನ ಶೈಲಿ, 'ಪುಗಸಾಟೆ' ಮುಂತಾದ ಶಬ್ದಗಳ ಸ್ವಚ್ಛಂದವಾದ ಉಪಯೋಗವು ಆನಂದಲಹರಿಯ ಪರಿಣಾಮಕಾರಿಯಾಗಲು ಸಹಾಯವಾಗಿದೆ."[೬೦]

ಬೀಗರು ತಂದ ಮುಯ್ಯಿ ಹಿನ್ನೆಲೆಯಲ್ಲಿ ಆ ಕುಟುಂಬದ ಚಿತ್ರಣವನ್ನು ಕೃಷ್ಣದಾಸರು ಆಧ್ಯಾತ್ಮಿಕ ಪರಿಧಿಯಲ್ಲಿ ಚಿತ್ರಿಸಿದ್ದಾರೆ. ದೇಹವನ್ನು ಅವರು ಸಾಂಕೇತಿಕವಾಗಿ ಮನೆಗೆ ಹೋಲಿಸಿದ ರೀತಿ ಈ ವಿಶಿಷ್ಟವಾಗಿ ಅಭಿವ್ಯಕ್ತಗೊಂಡಿದೆ.

''ಏಳು ಸುತ್ತಿನ ಗೋಡಿ ಮೇಲಾದ ಮನಿಗಿನ್ನು
ಸಾಲಾದ ಒಂಭತ್ತು ಬಾಗಿಲು ಚಲುವಾದ
ಮ್ಯಾಲಿಹ ಒಂದೊಂದು ಗಿಳಿಗಳು"[೬೧]

ಎಂದು ಹೇಳಿ ಆ ಮನೆಯ ಯಜಮಾನನ ಮಕ್ಕಳನ್ನು ಕೃಷ್ಣದಾಸರು ತುಂಬಾ ವಿಶಿಷ್ಟತೆಯಿಂದ ಪರಿಚಯ ಮಾಡಿಕೊಡುತ್ತಾರೆ. ಅನುಭಾವಿಗಳೇ ಇಲ್ಲದ ಆ ಮನೆಯಲ್ಲಿ ಹರಿನಾಮವನ್ನು ನೆನೆಯುವರು ಯಾರೂ ಇರುವುದಿಲ್ಲ. ಆ ಬಾಂಧವರು ಎಂತಹವರು ಎನ್ನುವುದನ್ನು ಈ ರೀತಿಯಲ್ಲಿ ಹೇಳುತ್ತಾರೆ.

''ಎಷ್ಟು ಉಂಡರ ದಣಿಯಾ ಎಷ್ಟು ಇಟ್ಟರ ದಣಿಯಾ
ಎಷ್ಟು ಉಟ್ಟರ ದಣಿಯಾನು ಕಾಮಣ್ಣ
ಎಷ್ಟು ಕೊಟ್ಟರ ದಣಿಯಾ

ಒಳ್ಳೆವರರಿಯನು ಹೊಲ್ಲವರರಿಯನು
ಕೊಳ್ಳಿಕಾರನಾ ಮತಿಯಂತೆ ಭಾವಯ್ಯ
ನಿಲ್ಲರು ಈತನ ಇದರೀಗೆ"[೬೨]

ಈ ದೇಹ ಬಾಡಿಗೆ ಮನೆ ಇದ್ದಂತೆ. ಇಲ್ಲಿ ಶಾಶ್ವತವಾಗಿ ಇರಲು ಸಾಧ್ಯವಿಲ್ಲ. ಅರಿಷಡ್ವರ್ಗಗಳನ್ನು ಕಳೆದುಕೊಳ್ಳದೇ ಸಾಧ್ಯವಿಲ್ಲ. ಆರು ವರ್ಗದಲ್ಲಿ ಮೊದಲನೆಯವನು ಕಾಮ. ಕಾಮನ ಕುರಿತು ಕೃಷ್ಣದಾಸರು ಹೇಳುತ್ತಾ ಎಷ್ಟು ಕೊಟ್ಟರೂ ಈತ ದಣಿಯದು ಎನ್ನುವಲ್ಲಿ ಆ ಮನಸ್ಸಿಗೆ ಮಿತಿ ಅನ್ನುವುದೇ ಇಲ್ಲ ಎನ್ನುತ್ತಾರೆ. ಮುಂದುವರಿದು ಯಾರು ಒಳ್ಳೆಯವರು, ಯಾರು ಕೆಟ್ಟವರು ಇವನಿಗೆ ಯಾರೂ ಎದುರು ನಿಲ್ಲರು. ಹಾಗಾಗಿ ಮನಸ್ಸೆಂಬ ಕಾಮಕ್ಕೆ ಮಿತಿಯಿಲ್ಲವೆಂದು ಆ ಸಾಂಕೇತಿಕ ವ್ಯಕ್ತಿಯ ಪರಿಚಯವನ್ನು ಕೃಷ್ಣದಾಸರು ಈ ಬಗೆಯಲ್ಲಿ ಬಣ್ಣಿಸುತ್ತಾರೆ.

''ಈತನ ತಮ್ಮನು ಮಾತು ಮಾತಿಗೆ ಬಹಳಾ
ಖ್ಯಾತಿಯ ತಾನು ಪಡೆದಾನು ಕೋಪಣ್ಣ
ಆತನ ಮುಂದಕ ಕರಿಯಾರೆ

ನೆಂಟರ ಅರಿಯನು ಇಷ್ಟರ ಅರಿಯನು
ಬಂಟರಾ ಮೊದಲೇ ಅರಿಯನು ತಪಸಿಗೆ
ಕಂಟಕನಾದಾ ಈತನೇ

ಥರ ಥರ ಕುಣಿವುತ ಘರ ಘರ ಹಲ್ಲು ತಿಂದು
ನೆರೆಮೋರೆ ಕೆಂಪು ಮಾಡುವಾ ಕೋಪಣ್ಣಾ
ಸ್ಮರಣೆಯಾ ತನ್ನ ಮರೆವನು''[೬೩]

ಅರಿಷಡ್ವರ್ಗದಲ್ಲಿ ಮೊದಲನೆಯನಾದ ಕಾಮ ಅವನ ನಂತರದವ ಕ್ರೋಧ. ಕೋಪಣ್ಣಾ ನೆರೆ ಹೊರೆಯವರ ಜೊತೆ ವಿನಾಕಾರಣ ಕಲಹಕ್ಕೆ ಗುರಿಯಾದವನು. ಇವನಿಗೆ ಬಂಧು, ಬಳಗ, ಯಾವುದೂ ಗೊತ್ತಿಲ್ಲದವನು. ಮನಸೋ ಇಚ್ಛೆಯಂತೆ ವರ್ತಿಸಿ ಘರ ಘರ ಹಲ್ಲುತಿನ್ನುತ್ತಾ ಮುಖ ಕೆಂಪು ಮಾಡಿಕೊಂಡು ತಿರುಗುವನು. ಕಂಡವರಿಗೆ ಕೆಂಡದ ಮಾತುಗಳನ್ನಾಡಿ ಖಂಡಿಸಿ ಬಿಡುವ ವ್ಯಕ್ತಿತ್ವ ಉಳ್ಳವನು. ಕೋಪಣ್ಣಾ ತನ್ನ ಬಳಗದವರ ಪ್ರಾಣ ಹಿಂಡುವ ವ್ಯಕ್ತಿ ಎಂದು ಕೃಷ್ಣದಾಸರು ಮನಸ್ಸಿನ ಕ್ರೋಧವನ್ನು ಈ ರೀತಿಯಲ್ಲಿ ವರ್ಣಿಸುತ್ತಾರೆ.

''ತಾನಾರೆ ಉಣ್ಣನು ಜನರಿಗೆ ಇಕ್ಕನು
ಜೇನಿನನೊಣದಾ ಗುಣದಂತೆ ಲೋಭೇಶಾ
ದೀನನ ಮುಂದಕ ಕರಿಯಾರೆ

ಬಿಚ್ಚಾರುವಿಯನು ವೆಚ್ಚಮಾಡೆಂದಿಗೆ
ಬಚ್ಚಿಟ್ಟು ಹೂಳಿನೆಲದೊಳು ಲೋಭೇಶಾ
ಹುಚ್ಚಾಗಿ ಕಾಯ್ದಾ ಫಣಿಯಂತೆ''[೬೪]

ಕಾಮ, ಕ್ರೋಧ, ಅನಂತರದವನು ಲೋಭ. ಈ ವ್ಯಕ್ತಿಯ ಗುಣ ವಿಶೇಷತೆಯನ್ನು ಕೃಷ್ಣದಾಸರು ಮೇಲಿನ ಪದ್ಯದಲ್ಲಿ ಸ್ವಾರಸ್ಯಕರವಾಗಿ ಚಿತ್ರಿಸಿದ್ದಾರೆ. ಇಂತಹ ವ್ಯಕ್ತಿಗಳು ತಾನು ಊಟ ಮಾಡುವುದಿಲ್ಲ. ಬೇರೆಯವರಿಗೆ ಕೊಡುವದಿಲ್ಲ. ಇಂತಹವರು ಜೇನಿನ ನೊಣದ ಗುಣದವರು. ತಾನು ಸಂಗ್ರಹಿಸಿದ ತುಪ್ಪ ತಾನು ತಿನ್ನವುದಿಲ್ಲ. ಬೇರೆಯವರು ತಿನ್ನಲು ಪ್ರಯತ್ನಿಸಿದರೆ ಅವರನ್ನು ಕಚ್ಚದೆ ಬಿಡುವುದಿಲ್ಲ. ಹಾಕಿಕೊಂಡ ಬಟ್ಟೆಯನ್ನು ಬಿಟ್ಟು ಮತ್ತೊಂದು ತರದವನು. ತಾನು ಜೀವನದಲ್ಲಿ ಸಂಪಾದಿಸಿದ ಹಣವನ್ನು ಬೇರೆಯವರು ತೆಗೆದುಕೊಳ್ಳಬಾರದೆಂದು ನೆಲವನ್ನು ಅಗೆದು ಅದರಲ್ಲಿ ಸಂಪತ್ತನ್ನು ಹಾಕುವನು. ಮುಂದೆ ಹುಚ್ಚು ಹಾವಿನ ಹಾಗೇ ಕಾಯುತ್ತಾ ಅದರ ಮೇಲೆ ಒದ್ದಾಡುವ ರಾಜಮಹಾರಾಜರು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುವಾಗ ತನ್ನ ನಿಜಸ್ಥಿತಿ ಅರಿಯದ ಲೋಭೇಶ ಸಿಕ್ಕ ಸಂಪತ್ತನ್ನು ಸೆಳೆಯುವವನು. ಇಂತಹವನನ್ನು ಪುಗಸಾಟೆಯ ವ್ಯಕ್ತಿ ಎಂದು ಕೃಷ್ಣದಾಸರು ಲೋಭದ ಗುಣವನ್ನು ತಮ್ಮದೇ ಆದ ಧಾಟಿಯಲ್ಲಿ ಖಂಡಿಸಿದ್ದಾರೆ.

‘‘ಇವರಿಂದ ಕಿರಿಯನಾ ಹವಣವ ನೋಡೀರೆ
ಅವಗುಣದ ರಾಶಿ ಜಗದೊಳು ಮೋಹಾಂಗಾ
ಅವನಾ ಮುಂದಕ ಕರಿಯಾರೇ
ತಾಯಿ ತಂದೆಗಳ ನ್ಯಾಯನೀತಿಗಳಿಂದ
ಸಾಯಾಸದಿಂದ ಭಕ್ತಿಯ ಮಾಡದೆ
ಮಾಯದಾ ಬಲಿಗೊಳಗಾದಾ’’[೬೫]

ಲೋಭಗುಣದ ನಂತರ ಕೃಷ್ಣದಾಸರು ಮೋಹಗುಣದ ವಿಶೇಷತೆಯನ್ನು ಎತ್ತಿಹೇಳುತ್ತಾರೆ. ಅವಗುಣದ ರಾಶಿಯನ್ನು ಇಟ್ಟುಕೊಂಡವನು ಮೋಹಗುಣದವನು. ತಂದೆ ತಾಯಿಗಳಿಗೆ ನ್ಯಾಯ ನೀತಿಗೆ ಬಗ್ಗದೇ ಮೋಹದ ಬಲೆಗೆ ಬಿದ್ದವನು. ಮಾನಿನಿಯರು ಏನು ಬೇಡಿದರೂ ಸಹ ತಮ್ಮ ಪ್ರಾಣವನ್ನು ಒತ್ತೆಯಿಟ್ಟು ತಂದುಕೊಡುವವರು. ಜೀವನದ ಲೆಕ್ಕ ವ್ಯವಹಾರವನ್ನು ಅರಿಯದೇ ಮಕ್ಕಳಾಟದಂತೆ ಮೋಹದ ಬೆನ್ನಿಗೆ ಬಿದ್ದವರು. ಇಲ್ಲಿ ಬದುಕಿನ ಪರಿವೆ ಇಲ್ಲದ ಜನ ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುವ ರೀತಿಯನ್ನು ಕೃಷ್ಣದಾಸರು ಗುರುತಿಸಿದ್ದಾರೆ. ಬೇರೆ ಬೇರೆಯಾದ ಈ ಜಗತ್ತಿನಲ್ಲಿ ಅನಿವಾರ್ಯಗುಣ ಸ್ವಭಾವಕ್ಕನುಗುಣವಾಗಿ ಒಬ್ಬರಿಂದ ಇನ್ನೊಬ್ಬರಿಗೆ ಆಲೋಚನೆಯ ಕ್ರಮದಲ್ಲಿ, ಇರುವಿಕೆಯಲ್ಲಿ ವ್ಯತ್ಯಾಸವಿದೆ. ಅವುಗಳನ್ನೇ ದಾಸರು ಈ ರೀತಿಯಲ್ಲಿ ಹೇಳುತ್ತಾರೆ.

‘‘ಕಮಲದ ವಾಸನೆಗೆ ಭ್ರಮರವು ಸಿಕ್ಕಿದ
ಕ್ರಮದಿಂದ ನೋಡಿ ಸೆರೆಯಾದಾ ಶ್ರೀವಧು
ರಮಣನ ನಾಮಾ ನೆನಿಯನು

ತರುವಾಯದವನೀತಾ ದುರುಳನ ನೋಡಿರೆ
ಮರುಳು ಬುದ್ಧಿಯಾ ಮದರಾಯಾ ಆತನಾ
ಸರಕು ಮಾಡುವಾ ಕರಿಯಾರೆ’’[೬೬]

ಮೋಹಗುಣದ ತರುವಾಯ ಮದಗುಣದ ವಿಶ್ಲೇಷಣೆ ಈ ಪದ್ಯದಲ್ಲಿ ಕಂಡುಬರುತ್ತದೆ. ಮದಗುಣದ ವ್ಯಕ್ತಿಗಳು ಜೀವನದಲ್ಲಿ ಮರುಬುದ್ಧಿಯ ಉಳ್ಳವರು. ಶರಣರಿಗೆ ನಮಸ್ಕರಿಸದೆ ತಿರಸ್ಕಾರ ಮನೋಭಾವನೆ ಹೊಂದಿದವರು. ಬಗೆಬಗೆಯ ಹಿತವಾದ ಪಗಡೆಯಾಟ ಆಡುತ್ತ ಹಗಲನ್ನು ಕಳೆಯುವರು. ಮತ್ತೆ ರಾತ್ರಿ ರಂಭೆಯರ ಕೂಡ ಸರಸವನ್ನಿಟ್ಟುಕೊಳ್ಳುವರು. ಕಣ್ಣಿಲ್ಲದ ಆನೆಯ ಹಾಗೆ ಚೆನ್ನಾಗಿ ತಿರುಗುತ್ತ ಹಗಲು ಬತ್ತಿದ ಬಾವಿಗೆ ಬೀಳುವರು. ಇಂತವರು ಕಣ್ಣಿದ್ದು ಕುರುಡರಾದವರು. ಶ್ರೀಹರಿ ಸೇವಕರ ಕಂಡು ಗಂಟುಮುಖ ಮಾಡಿ ಅವರ ಪಾದಕ್ಕೆ ನಮಸ್ಕರಿಸದೆ ಒಂಟೆಯ ಹಾಗೆ ಮೇಲಕ್ಕೆ ಮುಖ ಮಾಡುವರು. ಇಂತಹ ವ್ಯಕ್ತಿಗಳಿಗೆ ಏನಾದರೂ ತತ್ವವನ್ನು

ಬೋಧಿಸಿದರೆ ಕೋಣನ ಮುಂದೆ ಕಿನ್ನರಿ ಬಾರಿಸಿದಂತೆಯೇ ಸರಿ ಎಂದು ಕೃಷ್ಣದಾಸರು ಹೇಳುತ್ತಾರೆ. ಇವರು ಪ್ರಾಣಿವರ್ಗದಲ್ಲಿ ಅತ್ಯಂತ ಅಧಮರು ಎಂದು ಈ ಗುಣದ ಜನರನ್ನು ಜರೆಯುತ್ತಾರೆ.

''ಎಲ್ಲರಿಗೆ ಕಿರಿಯನು ಖುಲ್ಲರ ಗೆಳೆಯನು
ಬೆಲ್ಲಾ ಬಾಯೊಳು ಎದೆಯಲಿ ಕತ್ತರಿ
ಖುಳ್ಳ ಮತ್ಸರನಾ ಕರಿಯಾರೆ
. . . .
ಇವರಾ ಮಾತವರಿಗೆ ಅವರಾ ಮಾತಿವರಿಗೆ
ವಿವರಿಸಿ ಹೇಳಿ ಚಾಡಿಯಾ ಇದರಿಂದ
ಕವಡಿಯ ಲಾಭ ತನಗಿಲ್ಲ''[೬೭]

ಕಾಮ, ಕ್ರೋಧ, ಲೋಭ, ಮೋಹ, ಮದ ಗುಣಗಳ ನಂತರ ಮತ್ಸರದ ಜನರನ್ನು ಕುರಿತು ಪ್ರಸ್ತಾಪಿಸುತ್ತಾರೆ. ಎಲ್ಲ ಜನರ ಗುಣದಲ್ಲಿ ಕಿರಿಯವನಾದ ಮತ್ಸರನು ಬೆಲ್ಲದಂತಹ ಮಾತಿನವನು. ಆದರೆ ವಿಷದ ಆಹಾರವನ್ನೇ ಇಕ್ಕುವನು. ಇನ್ನೊಬ್ಬರು ಸುಖದಿಂದ ಇರುವುದನ್ನು ಕಂಡು, ಮತ್ತೊಬ್ಬರಿಗೆ ಇಲ್ಲಸಲ್ಲದ ಆರೋಪ ಮಾಡುವನು. ಇವರ ಮಾತುಗಳನ್ನು ಅವರಿಗೆ ಅವರ ಮಾತುಗಳನ್ನು ಇವರಿಗೆ ಹೇಳಿ ಇಬ್ಬರಲ್ಲಿ ಜಗಳವನ್ನು ತರುವವನು. ಇದರಿಂದ ಈ ಗುಣದ ಜನರಿಗೆ ಯಾವುದೇ ಲಾಭವಿರುವುದಿಲ್ಲ. ಇಂತವರು ಬೆಲ್ಲದೊಳಗಿನ ಕಲ್ಲಿನಂತೆ ಇರುತ್ತಾರೆ. ವಿಷ ಹಾಕಿದ ಊಟವನ್ನು ಇಡೀ ಸಮಾಜಕ್ಕೆ ಉಣಬಡಿಸುವ ಜನರು ಇಂತವರು. ಎಂದು ಈ ಸ್ವಭಾವದ ಜನರ ಕುರಿತು ತಿಳಿಯಪಡಿಸುತ್ತಾರೆ. ಕನಿಷ್ಠ ಬುದ್ಧಿಯ ಜನರು ಮುಯ್ಯನ್ನು ತಂದರೆ ಅಜ್ಞಾನಿ ಗುಣದ ನಾದಿನಿ ತವಕದಿಂದ ಅವರನ್ನು ಆರತಿ ಮಾಡಿಕೊಳ್ಳುತ್ತಾಳೆ. ಈ ಅಜ್ಞಾನಿ ನಾದಿನಿಯನ್ನು ಕೃಷ್ಣದಾಸರು ಸುಂದರವಾಗಿ ಚಿತ್ರಿಸುತ್ತಾರೆ.

''ಮೊದಲೇ ತನಗ ಬುದ್ಧಿ ಒದಗಿಲ್ಲ
ಮುದದಿ ಹೇಳಿದರ ಕೇಳದೆ ದನದಂತೆ
ಉದಯಾಸ್ತ ಮಾನ ಕಳೆವಳು''[೬೮]

ಇಂತಹ ಗುಣವುಳ್ಳ ಜನರು ಸಮಾಜದಲ್ಲಿ ಹಲವರಿದ್ದಾರೆ. ಅಂತವರಿಗೆ ಸನ್ಮಾನಿಸುವ ಜನರು ಅಜ್ಞಾನಿಯ ನಾದಿನಿ ಹಾಗೆ ಇದ್ದಾರೆ. ಅವರಿಗೆ ಮೊದಲು ಬುದ್ಧಿ ಇಲ್ಲ. ಇವರು ಮಾತು ಕೇಳಿದರೆ ದನದ ಸ್ವಭಾವದ ಜನರಾಗುವರು ಎಂದು ಕೃಷ್ಣದಾಸರು ಕಾರವಾಗಿ ನುಡಿಯುತ್ತಾರೆ. ಇವೆಲ್ಲ ಬುದ್ಧಿಯನ್ನು ಹೊತ್ತುಕೊಂಡ ಜನರು ಮನೆಯಲ್ಲಿರುವಾಗ ಆ ಮನೆಯ ಒಡೆಯ ಪ್ರಧಾನಿಗುಣ ಉಳ್ಳವನ ಕುರಿತು ಈ ರೀತಿಯಲ್ಲಿ ವ್ಯಾಖ್ಯಾನಿಸುತ್ತಾರೆ.

''ಕುಂತಲ್ಲೆ ಕೂಡನು ನಿಂತಲ್ಲೆ ನಿಲ್ಲನು

ಭ್ರಾಂತತನದಿ ತಿರುಗುವ ಗಾಳಿಯಂತೆ

ಚಿಂತೀಗೆ ನೋಡಿ ಕಡಿ ಇಲ್ಲಾ''[೧೯]

ಇವರು ಒಂದೇ ಸ್ಥಳದಲ್ಲಿ ಗಟ್ಟಿಯಾಗಿ ನೆಲೆಯೂರದೆ ಭ್ರಾಂತಿಗೆಟ್ಟು ತಿರುಗುವ ಜನರು. ಇವರು ಶ್ರೀಹರಿಯ ಸೇವೆಯ ಮಹತ್ವವು ಏನು ಬಲ್ಲವರು. ಬದುಕಿನಲ್ಲಿ ಆಸೆ-ದುರಾಸೆ-ನಿರಾಸೆಗಳ ಸ್ಥಾನ ಪರಿಚಯಿಸುತ್ತಾ ಮನುಷ್ಯನು ತನ್ನ ಜೀವನದಲ್ಲಿ ಪಡುವ ಕಷ್ಟ-ನಷ್ಟವನ್ನು ಇಂತಹ ದುರ್ಬುದ್ಧಿಯಿಂದಲೇ ಎಂದು ಕೃಷ್ಣದಾಸರು ಅಭಿವ್ಯಕ್ತಗೊಳಿಸಿದ್ದಾರೆ. ಜನಕ್ಕೆ ತಟ್ಟನೆ ಅರ್ಥವಾಗುವ ಹಾಗೇ ನಿತ್ಯಜೀವನದ ಸಂಗತಿಗಳನ್ನು ಬಣ್ಣಿಸುತ್ತಲೇ ಅದಕ್ಕೊಂದು ಪಾರಮಾರ್ಥಿಕ ತಿರುಳನ್ನು ಕೊಟ್ಟಿರುವುದು ಕಾವ್ಯದಲ್ಲಿ ಎದ್ದು ಕಾಣುವ ತಂತ್ರವಾಗಿದೆ. ಮನುಷ್ಯನ ಆಶೆ, ಅತಿಯಾದ ವ್ಯಾಮೋಹ, ಸ್ವಾರ್ಥ ಗುಣಗಳಿಗೆ ಅವನಲ್ಲಿರುವ ಹೆಣ್ಣು, ಹೊನ್ನು, ಮಣ್ಣುಗಳ ಬಗೆಗಿನ ಅತಿಯಾಸೆಯೇ ಕಾರಣವಾಗಿದೆ. ಅವುಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವ ಮರ್ಮವನ್ನು ಕೃಷ್ಣದಾಸರು ಇಲ್ಲಿ ಒತ್ತಿ ಹೇಳಿದ್ದಾರೆ.

''ಪರಧನ ಪರಸತಿ ಪರನಿಂದೆ ಎಂಬುದು

ಶರೀರ ಸ್ವಭಾವಾ ಬಯಸೂದು ಆತನೆ

ಧರೆಯೊಳು ಹುಸಿಯು ಮನಿದೈವ''[೨೦]

ಈ ಆರು ಗುಣದ ಜನರಿಗೆ ಮನಿದೈವ ಸುಳ್ಳು ಮಾತನಾಡುವುದು. ಪರರ ಹಣ, ಪರರ ಸತಿ, ಪರರ ನಿಂದೆ ಮಾಡುವುದೇ ಇವರ ಶರೀರದ ಸ್ವಭಾವವಾಗಿದೆ. ಇಂತಹವರ ಹರಿಕಥೆಯೆಂದರೆ ದೂರಕ್ಕೆ ಸರಿಯುವವರು. ಹರಿದಾಸರ ಸಂಗವನ್ನು ಮೊದಲೇ ಬಿಟ್ಟವರು. ಓದಿ ಹೇಳಿದರೆ ವಾದ ಮಾಡುವ ಬಂಟರು. ತಮ್ಮ ಸಾಧನೆಯ ಹಾದಿಯನ್ನು ಬಿಟ್ಟವರು. ಇಂತಹ ಜನರಿಗೆ ಕೃಷ್ಣದಾಸರು ಕಾವ್ಯದ ಮುಕ್ತಾಯ ಭಾಗದಲ್ಲಿ ಎಚ್ಚರಿಕೆಯ ಮಾತುಗಳನ್ನು ನೀಡಿದ್ದಾರೆ.

''ಧರಣಿಯೊಳಗ ಸರ್ವ ವಿರತಿಯಿಂದ ದುದಿಸಿದ

ಮರೆವ ನಿಷ್ಕಾಮದ ಮುಕುಟವು ಕಾಮಯ್ಯ

ಹರುಷದಿ ಧರಿಸಬೇಕು

ಶಮದಮ ಪ್ಯಾಟಿಯಾ ಅಮಿತ ಸರಕದೊಳು

ವಿಮಲ ಸುಶಾಂತಿಯಾ ಹಚ್ಚಡಾ ಕೋಪಣ್ಣಾ

ನಿಮಗಿದು ತಂದು ಉಡುಗೊರೆ

ಶರಣರಾ ಮನೆಯಿಂದಾದರಿಸಿ ಬಂದಿದೆ ನೋಡು
ಪರಮೋದಾರೆಂಬ ಪದಕವು ಲೋಭೇಶಾ
ಕೊರಳಿಗೆ ಹಾಕಿಕೋಬೇಕು

ಎರವು ಸಕಲವೆಂಬಾ ಅರಹುಪುರದೀ ಬಂದಾ
ಮೆರೆವಾ ನಿರ್ಮಮ ಒಡ್ಯಾಣ ಮೋಹಾಂಗಾ
ಧರಿಸಿಕೊಂಬುದು ಉಚಿತವು

ಎಲ್ಲರಿಗೆ ಕಿರಿದೆಂಬಾ ಬಲ್ಲವರ ಪ್ಯಾಟಿಯ
ಒಳ್ಳೆವರ ಮೆಚ್ಚು ನಮ್ರವು ಮುದ್ರಿಕೆ
ಕೊಳ್ಳುದು ಉಚಿತ ಮದರಾಯ

ಸಕಲವು ಹರಿಸೂತ್ರ ಯುಕುತಿ ಮನೆಯಿಂದಾದಾ
ನಿಖಿಳ ನಿರ್ವೈರಿ ಕಡಗವು ಮತ್ಸರಾ
ಪ್ರಕಟದಿ ಕೊಳ್ಳುದುಚಿತವು"[೭೧]

ಮೇಲಿನ ಆರು ನುಡಿ ಪದ್ಯದಲ್ಲಿ ಕೃಷ್ಣದಾಸರು ಇಂತಹ ಸ್ವಭಾವದ ಜನರಿಗೆ ಶ್ರೀಹರಿಯ ಮುಯ್ಯವನ್ನು ತಂದುಕೊಟ್ಟಿದ್ದಾರೆ. ನೂರಕ್ಕೆ ಒಂದು ಸಾರಿದ ನುಡಿಯಂದು ಇದನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಅದು ನಿಜಸಹಿತವಾಗಿರಬೇಕು. ಆಗ ಶ್ರೀಹರಿಯ ಸೇವೆಗೆ ನೀವು ಸಂಪೂರ್ಣ ಎಂದು ಎಚ್ಚರಿಸಿದ್ದಾರೆ. ಪಾರಮಾರ್ಥಿಕ ಮುಯ್ಯುವನ್ನು(ನುಡಿಯನ್ನು) ಮೆರೆಸುತ್ತ ತಂದೀನಿ ತರಿಸಿ ನೀವು ಕುಡಿದರೆ ಈ ಜಗತ್ತಿನಲ್ಲಿ ನಿಮಗೆ ಶಕ್ತಿ ಸಾಲದು. ಮಾನವ ಜನ್ಮದಲ್ಲಿ ಪಾರಮಾರ್ಥ ಬೋಧೆಯನ್ನು ಯಾರೇ ಹೇಳಿದರೂ ಯಾರೇ ಕೇಳಿದರೂ ಸಹ ಅದು ನಿಜಭಾವದಿಂದ ಧರೆಗೆ ಇಳಿಯಬೇಕು. ಅಂತವರಿಗೆ ಶ್ರೀಹರಿಯ ದಯೆ ಲಭಿಸುತ್ತದೆ. ಹಾಗಾಗಿ ಆನಂದ ಲಹರಿಯು ತಾನಾದ ನಾಮವು ನಿಜಭಾವದಿಂದ ಪಾರಮಾರ್ಥ ಮುಯ್ಯವನ್ನು ಮಾನವರೆಲ್ಲ ತಿಳಿದುಕೊಳ್ಳಬೇಕು. ಅಭಿಮಾನದ ನಿರಸನವೂ ವಿಷಯದಿಂದ ದೂರ ಉಳಿದ ಭಾವನೆಯು ಕಾಮ, ಕ್ರೋಧಾದಿಗಳು ಹೇಯವೆಂಬ ತಿರುಳು ಈ ಆನಂದಲಹರಿಯನ್ನು ಆಸ್ವಾದಿಸುವವರಿಗೆ ಉಂಟಾಗುತ್ತದೆ. ಬುದ್ಧಿ ಮತ್ತು ಮನುಷ್ಯನ ಮನಸ್ಸುಗಳಿಗೆ ಕಾವ್ಯವು ಸಂಸ್ಕಾರವನ್ನು ಕೊಡುತ್ತದೆ. ಪಂಡಿತ, ಪಾಮರರಿಗೆ ಮೋಕ್ಷ ಮಾರ್ಗವನ್ನು ತೋರಿಸುತ್ತದೆ. ಮನುಷ್ಯನಾದವನು ಕಾಯಾ, ವಾಚಾ, ಮನಸ್ಸು, ತನ್ನ ಹಿಡಿತದಲ್ಲಿ ಇಟ್ಟುಕೊಂಡು ಪರಮಾತ್ಮನ ಭಜನೆಯ ಮೂಲಕ ಮುಕ್ತಿಯನ್ನು ಪಡೆಯಬೇಕೆಂಬುದು ಈ ಕಾವ್ಯದ ಸದಾಶಯವಾಗಿದೆ.

ಒಟ್ಟಿನಲ್ಲಿ, ಕೃಷ್ಣದಾಸರು ಖಂಡಕಾವ್ಯಗಳಲ್ಲಿ ಭಕ್ತ, ಶ್ರೇಷ್ಠರಾದ ಭಾಗವತರ ಚರಿತ್ರೆಗಳನ್ನು, ಶ್ರೇಷ್ಠವಾದ ಗಜೇಂದ್ರನ ಕಥೆಯನ್ನು, ಶ್ರೀಹರಿಯ ವಿವಿಧ ರೂಪಗಳ ಚರಿತ್ರೆಗಳನ್ನು ರಚಿಸುವುದರ

ಮೂಲಕ ದಾಸಸಾಹಿತ್ಯದಲ್ಲಿ ತಮ್ಮದೇ ಆದ ಮುದ್ರಿಕೆಯನ್ನು ಒತ್ತಿದ್ದಾರೆ. ಯಾವ ಕಾವ್ಯದಲ್ಲಿಯೂ ಕೃಷ್ಣದಾಸರು ಸುತ್ತುಬಳಸಿಲ್ಲ. ಸಹೃದಯನಿಗೆ ಮನಮುಟ್ಟುವ ಹಾಗೆ ಇತಿಮಿತಿಯಲ್ಲಿ ಕಾವ್ಯದ ಸೌಂದರ್ಯವು ತುಂಬಿ ತುಳುಕುವಂತೆ ರಚಿಸಿದ್ದಾರೆ. ಖಂಡಕಾವ್ಯಗಳಲ್ಲಿ ಕೃಷ್ಣದಾಸರು ತಮ್ಮ ಅನುಭಾವದ ಹಿರಿದಾದ ಆಧ್ಯಾತ್ಮಿಕ ನೆಲೆಯನ್ನು ಗುರುತಿಸುವ ನಿಟ್ಟಿನಲ್ಲಿ ಕಾವ್ಯ ವಿಸ್ತಾರತೆಯನ್ನು ಹೆಚ್ಚಿಸಿದ್ದಾರೆ. ಕೃಷ್ಣದಾಸರ ಆನಂದಲಹರಿ ಲೌಕಿಕ ವಸ್ತುವಿಷಯವನ್ನು ಒಳಗೊಂಡ ನೀಳ್ಗತೆವಾಗಿದೆ. ಉಳಿದ ಖಂಡಕಾವ್ಯಗಳು ಅಲೌಕಿಕ, ಅಧ್ಯಾತ್ಮಿಕತೆಯ ಸುತ್ತ ಹೆಣೆದ ಕಥೆಗಳಾಗಿವೆ. ಲೌಕಿಕ ಮತ್ತು ಅಲೌಕಿಕ ಸಾಹಿತ್ಯದ ನೆಲೆಯು ಕೃಷ್ಣದಾಸರ ಖಂಡಕಾವ್ಯಗಳಲ್ಲಿ ಹೊಸದಾಗಿ ಸೇರಿದ ಅಂಶವಾಗಿದೆ. ಈ ರೀತಿಯಲ್ಲಿ ಕೃಷ್ಣದಾಸರು ತಮ್ಮ ಖಂಡಕಾವ್ಯಗಳ ಅಭಿವ್ಯಕ್ತಿಯ ಹಿನ್ನೆಲೆಯಲ್ಲಿ ಕಾವ್ಯದ ವಿಸ್ತಾರತೆ ಹಾಗೂ ವಿದ್ವತ್ತಿಗೆ ಸಾಕ್ಷಿಯಾದೆ.

ಕೊನೆಟಿಪ್ಪಣಿಗಳು

೧. ಶ್ರೀಗುರು ಮಹಿಪತಿ ಸುತ ಶ್ರೀಕೃಷ್ಣರಾಯರಿಂದ ರಚಿತವಾದ ಸುಂದರಕಾಂಡ, (ಸಂ) ಶ್ರೀ ದೇವಪ್ಪಯ್ಯಾ ಕಾಖಂಡಕಿ, ಶ್ರೀಗುರು ಮಹಿಪತಿ ದಾಸಸಾಹಿತ್ಯ ಪ್ರಚಾರ ಸಮಿತಿ,ವೃಂದಾವನ, ಕಾಖಂಡಕಿ, ೨೨ ನವೆಂಬರ್ ೧೯೮೭, ಪುಟ ೧.

೨. ಅದೇ, ಪುಟ ೭.

೩. ಅದೇ, ಪುಟ ೮.

೪. ಅದೇ, ಪುಟ ೯.

೫. ಅದೇ, ಪುಟ ೧೨.

೬. ಅದೇ, ಪುಟ ೧೨.

೭. ಅದೇ, ಪುಟ ೧೩.

೮. ಅದೇ, ಪುಟ ೧೩.

೯. ಅದೇ, ಪುಟ ೧೩.

೧೦. ಅದೇ, ಪುಟ ೧೫.

೧೧. ಅದೇ, ಪುಟ ೧೫.

೧೨. ಅದೇ, ಪುಟ ೧೬.

೧೩. ಶ್ರೀಗುರು ಮಹಿಪತಿಸುತ ಶ್ರೀಕೃಷ್ಣರಾಯ(ದಾಸ) ಕಾಖಂಡಕಿ, ಇವರಿಂದ ರಚಿತವಾದ ಶ್ರೀಕೃಷ್ಣ ಚರಿತ್ರಾಮೃತ ಕಥಾ, (ಸಂ)ಶ್ರೀದೇವಪ್ಪಯ್ಯಾ ಕಾಖಂಡಕಿ, ಶ್ರೀಗುರು ಮಹಿಪತಿದಾಸ ಸಾಹಿತ್ಯ ಪ್ರಚಾರ ಸಮಿತಿ, ಕಾಖಂಡಕಿ, ೧೦.೧೨.೧೯೮೮, ಪುಟ ೭೬.

೧೪. ಅದೇ, ಪುಟ ೭೬.

೧೫. ಅದೇ, ಪುಟ ೭೬.

೧೬. ಅದೇ, ಪುಟ ೭೭.

೧೭. ಅದೇ, ಪುಟ ೭೮.

೧೮. ಅದೇ, ಪುಟ ೭೯.

೧೯. ಶ್ರೀಗುರು ಮಹಿಪತಿಸುತ ಶ್ರೀಕೃಷ್ಣರಾಯರಿಂದ ವಿರಚಿತ ಭಾಗವತದ ಚರಿತ್ರೆಗಳು, (ಸಂ) ಶ್ರೀದೇವಪ್ಪಯ್ಯಾ ಕಾಖಂಡಕಿ, ಶ್ರೀಗುರು ಮಹಿಪತಿದಾಸ ಸಾಹಿತ್ಯ ಪ್ರಚಾರ ಸಮಿತಿ, ಕಾಖಂಡಕಿ, ೨೬.೦೪.೧೯೯೦, ಪುಟ ೨.

೨೦. ಅದೇ, ಪುಟ ೨.

೨೧. ಅದೇ, ಪುಟ ೨ ಮತ್ತು ೩.

೨೨. ಅದೇ, ಪುಟ ೩.

೨೩. ಅದೇ, ಪುಟ ೪.

೨೪. ಅದೇ, ಪುಟ ೫.

೨೫. ಅದೇ, ಪುಟ ೬ ಮತ್ತು ೭.

೨೬. ಅದೇ, ಪುಟ ೭.

೨೭. ಅದೇ, ಮುನ್ನುಡಿ ಪುಟ III.

೨೮. ಅದೇ, ಪುಟ ೮.

೨೯. ಅದೇ, ಪುಟ ೧೨.

೩೦. ಅದೇ, ಪುಟ ೧೯.

೩೧. ಅದೇ, ಪುಟ ೨೪ ಮತ್ತು ೨೫.

೩೨. ಅದೇ, ಪುಟ ೨೬.

೩೩. ಅದೇ, ಮುನ್ನುಡಿ ಪುಟ VII.

೩೪. ಅದೇ, ಪುಟ ೨೬.

೩೫. ಅದೇ, ಪುಟ ೨೭.

೩೬. ಅದೇ, ಪುಟ ೨೭.

೩೭. ಅದೇ, ಪುಟ ೩೧.

೩೮. ಅದೇ, ಪುಟ ೩೨ ಮತ್ತು ೩೩.

೩೯. ಅದೇ, ಪುಟ ೩೩.

೪೦. ಅದೇ, ಪುಟ ೩೩.

೪೧. ಅದೇ, ಪುಟ ೩೬-೩೭.

೪೨. ಅದೇ, ಪುಟ ೩೭.

೪೩. ಅದೇ, ಪುಟ ೪೧.

೪೪. ಅದೇ, ಪುಟ ೭೨.

೪೫. ಅದೇ, ಪುಟ ೭೪.

೪೬. ಅದೇ, ಪುಟ ೭೭.

೪೭. ಅದೇ, ಪುಟ ೭೭.

೪೮. ಅದೇ, ಪುಟ ೪೪.

೪೯. ಅದೇ, ಪುಟ ೪೭.

೫೦. ಅದೇ, ಪುಟ ೫೧-೫೨.

೫೧. ಅದೇ, ಪುಟ ೫೬.

೫೨. ಅದೇ, ಮುನ್ನುಡಿ ಪುಟ IV.

೫೩. ಅದೇ, ಪುಟ ೬೭-೬೮.

೫೪. ಅದೇ, ಪುಟ ೧-೨.

೫೫. ಅದೇ, ಪುಟ ೨.

೫೬. ಅದೇ, ಪುಟ ೩.

೫೭. ಅದೇ, ಪುಟ ೬.

೫೮. ಅದೇ, ಸಂಪಾದಕರ ನುಡಿ ಪುಟ ೩.

೫೯. ಸಮಗ್ರ ದಾಸಸಾಹಿತ್ಯ ಸಂಪುಟ-೧೧ ಭಾಗ-೨, ಕಾಖಂಡಕಿ ಕೃಷ್ಣದಾಸರ ಕೀತನೆಗಳು, (ಸಂ) ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪುಟ ೨೫೪.

೬೦. ಶ್ರೀಗುರು ಮಹಿಪತಿಸುತ ಶ್ರೀಕೃಷ್ಣರಾಯರಿಂದ ವಿರಚಿತ ಹರಿಪಾದ ಮಹಿಮಾ ಸತ್ಸಂಗ ಪದಗಳು ಹಾಗೂ ಆನಂದಲಹರಿ(ಪರಮಾರ್ಥ ಮುಯ್ಯ), (ಸಂ) ಶ್ರೀದೇವಪ್ಪಯ್ಯ ಕಾಖಂಡಕಿ, ಶ್ರೀಗುರು ಮಹಿಪತಿದಾಸ ಸಾಹಿತ್ಯ ಪ್ರಚಾರ ಸಮಿತಿ, ಕಾಖಂಡಕಿ, ೯.೧೦.೧೯೮೯, ಪುಟ ೮೬.

೬೧. ಸಮಗ್ರ ದಾಸಸಾಹಿತ್ಯ ಸಂಪುಟ-೧೧ ಭಾಗ-೨, ಕಾಖಂಡಕಿ ಕೃಷ್ಣದಾಸರ ಕೀತನೆಗಳು, (ಸಂ) ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪುಟ ೨೫೭.

೬೨. ಅದೇ, ಪುಟ ೨೫೯.

೬೩. ಅದೇ, ಪುಟ ೨೫೯.

೬೪. ಅದೇ, ಪುಟ ೨೬೦.

೬೫. ಅದೇ, ಪುಟ ೨೬೦.

೬೬. ಅದೇ, ಪುಟ ೨೬೧.

೬೭. ಅದೇ, ಪುಟ ೨೬೨.

೬೮. ಅದೇ, ಪುಟ ೨೬೩.

೬೯. ಅದೇ, ಪುಟ ೨೬೩.

೭೦. ಅದೇ, ಪುಟ ೨೬೩.

೭೧. ಅದೇ, ಪುಟ ೨೬೫-೨೬೬.

ಅಧ್ಯಾಯ ಆರು

ಕೃಷ್ಣದಾಸರ ಅನ್ಯಭಾಷೆಯ ಕೀರ್ತನೆಗಳು: ಅಧ್ಯಯನ

ಅಧ್ಯಾಯ ಆರು

ಕೃಷ್ಣದಾಸರ ಅನ್ಯಭಾಷೆಯ ಕೀರ್ತನೆಗಳು: ಅಧ್ಯಯನ

ಕೃಷ್ಣದಾಸರು ದಾಸಸಾಹಿತ್ಯ ಪರಂಪರೆಯಲ್ಲಿ ಹಲವು ವಿಶೇಷತೆಯಿಂದ ಗುರುತಿಸಿಕೊಂಡವರು. ಅವರು ದಾಸಸಾಹಿತ್ಯದ ವಿವಿಧ ಪ್ರಕಾರದಲ್ಲಿ ಸಾಹಿತ್ಯ ರಚನೆ ಮಾಡಿದ್ದಾರೆ. ಅವರ ಗುರು ಮತ್ತು ತಂದೆಯಾದ ಮಹಿಪತಿರಾಯರಂತೆ ಕೃಷ್ಣದಾಸರೂ ಬಹುಭಾಷೆಯನ್ನು ಬಲ್ಲವರು. ಮಾತೃಭಾಷೆ ಕನ್ನಡದ ಜೊತೆಗೆ ದ್ವೈತ ಸಂಪ್ರದಾಯಸ್ಥ ಮನೆತನದಲ್ಲಿದ್ದ ಇವರು ತಮ್ಮ ಪರಂಪರೆಯಂತೆ ಸಂಸ್ಕೃತ ಭಾಷೆಯನ್ನು ಬಲ್ಲವರು. ಸಂಸ್ಕೃತದಲ್ಲಿ ಪ್ರಾಚೀನ ಮಹಾಕಾವ್ಯಗಳನ್ನು ತಲಸ್ಪರ್ಶಿಯಾಗಿ ಅಭ್ಯಸಿಸಿದವರು. ವಿಜಯಪುರ ಪ್ರದೇಶದ ಅಕ್ಕಪಕ್ಕ ಮಹಾರಾಷ್ಟ್ರ ರಾಜ್ಯ ವಿಸ್ತರಣೆಗೊಂಡಿರುವುದರಿಂದ ಸಹಜವೆಂಬಂತೆ ಅಲ್ಲಿಯ ಪ್ರಾದೇಶಿಕ ಜನರು ದ್ವಿಭಾಷಿಕತೆಯನ್ನು ಬಳಸುತ್ತಾರೆ. ಹೀಗಾಗಿ ಎರಡು ಪ್ರದೇಶದ ಜನರಿಗೆ ತಮ್ಮ ಸಾಹಿತ್ಯವನ್ನು ತಿಳಿಸುವ ಮಹದಾಸೆಯಿಂದ ಮರಾಠಿ ಭಾಷೆಯಲ್ಲಿಯೂ ಕೀರ್ತನೆಯನ್ನು ರಚಿಸಿದ್ದಾರೆ. ವಿಜಯಪುರ ಆಳರಸರ ಪ್ರಭಾವಗಳಿಂದ ಉರ್ದು ಭಾಷೆಗಳಲ್ಲಿ ಪರಿಣತರಾಗಿ ಆ ಭಾಷೆಯಲ್ಲಿಯೂ ದಾಸಸಾಹಿತ್ಯವನ್ನು ರಚಿಸಿದ್ದಾರೆ.

ಕೃಷ್ಣದಾಸರು ಕನ್ನಡದಲ್ಲಿ ಮಾತ್ರವಲ್ಲದೆ ತಮ್ಮ ಪರಿಸರದ ಇತರ ಭಾಷೆಗಳಲ್ಲೂ ಕೀರ್ತನೆಗಳನ್ನು ಈ ಕಾರಣದಿಂದಾಗಿ ರಚಿಸಿದ್ದಾರೆ. ಆ ಕಾಲಘಟ್ಟ ಸಮಾಜದಲ್ಲಿಯ ಜನರ ಮನೋಭಿಲಾಷೆಗಳಿಗೆ ಮತ್ತು ಅವರವರ ಅಭಿರುಚಿಗೆ ತಕ್ಕಂತೆ ಸಾಹಿತ್ಯವನ್ನು ಸೃಷ್ಟಿಸಿದ್ದಾರೆ. ಉಳಿದ ಸಮುದಾಯದ ಜನರನ್ನು ದಾಸಸಾಹಿತ್ಯ ಅಧ್ಯಾತ್ಮದ ಕಡೆಗೆ ಸೆಳೆಯಲು ಈ ರೀತಿಯಾದ ಭಾಷಾಪ್ರಯೋಗಗಳನ್ನು ಮಾಡಿದ್ದಾರೆ. ಮೇಲ್ಕಂಡ ಭಾಷೆಗಳಲ್ಲಿ ಸಾಹಿತ್ಯವನ್ನು ರಚನೆ ಮಾಡಿದರೂ ಅವುಗಳಲ್ಲಿ ಕನ್ನಡ ಭಾಷೆಯನ್ನು ಅತ್ಯಂತ ಪ್ರೀತಿಯಿಂದ ಎತ್ತಿ ಹಿಡಿದಿದ್ದಾರೆ. ಭಾಷೆಯ ಸಮನ್ವತೆಯನ್ನು ಹಲವಾರು ಕೀರ್ತನೆಗಳಲ್ಲಿ ಪ್ರಯೋಗಿಸಿದ್ದಾರೆ. ಕೃಷ್ಣದಾಸರ ಅನ್ಯಭಾಷೆಯ ಕೀರ್ತನೆಯಲ್ಲಿ ಹೆಚ್ಚಾಗಿ ಉಪಲಬ್ಧವಾದ ಕೀರ್ತನೆಗಳೆಂದರೆ ಮರಾಠಿ ಭಾಷೆಯ ಕೀರ್ತನೆಗಳು. ಅವುಗಳನ್ನು ಈ ರೀತಿಯಾಗಿ ವಿಶ್ಲೇಷಿಸಲಾಗಿದೆ.

೧. ಮರಾಠಿ ಭಾಷೆಯ ಕೀರ್ತನೆಗಳು

ಪಾರಮಾರ್ಥಿಕ ಸಾಧನೆಯಲ್ಲಿ ತೊಡಗಬೇಕೆಂಬ ಮನುಷ್ಯನ ಮನಸ್ಸಿಗೆ ಸುಜ್ಞಾನದ ಅರಿವನ್ನು ಮೂಡಿಸಿ ಸನ್ಮಾರ್ಗದತ್ತ ನಡೆಸಲು ಸದ್ಗುರುವಿನ ಅವಶ್ಯಕತೆಯಿರುತ್ತದೆ. ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿದ ಮನುಷ್ಯನಿಗೆ ತನ್ನ ಗುರುವಿನ ಅನುಗ್ರಹದಿಂದ ಆತನ ಸಂಗದಿಂದ ಮನಶ್ಶುದ್ಧಿಗೆ ಹಾತೊರೆಯುತ್ತಾನೆ. ಶ್ರೀಹರಿಯ ದರ್ಶನದ ಒಲುಮೆಗೆ ಮನಸ್ಸು ತುಡಿಯುತ್ತದೆ. ಆ ನಿಟ್ಟಿನಲ್ಲಿ ಕೃಷ್ಣದಾಸರು ತಮ್ಮ ಮರಾಠಿ ಭಾಷೆಯ ಕೀರ್ತನೆ ಮುಖೇನ ತನ್ನ ಗುರು ಮತ್ತು ತಂದೆಯಾದ ಮಹಿಪತಿರಾಯರ ಅನನ್ಯ ವ್ಯಕ್ತಿತ್ವ, ಆತನ ಅನುಗ್ರಹ ಮುಂತಾದವುಗಳನ್ನು ಚಿತ್ರಿಸಿದ್ದಾರೆ. ವಿವಿಧ ದೇವರು ಮತ್ತು ದೇವತೆಗಳ ಮೇಲಿರುವ ಭಕ್ತಿ ಪದಗಳನ್ನು ರಚಿಸಿದ್ದಾರೆ. ನಾಮಸ್ಮರಣೆ, ಮನಸ್ಸಿನ ಉಪದೇಶದ ಪದಗಳು ಹೀಗೆ ಕೃಷ್ಣದಾಸರ ಮರಾಠಿ ಕೀರ್ತನೆಯ ರಚನೆಯ ವಿನ್ಯಾಸ ಈ ನಿಟ್ಟಿನಲ್ಲಿ ಚಿತ್ರಿತವಾಗಿದ್ದು ಕಂಡುಬರುತ್ತದೆ.

ಗುರು ಮಹಿಪತಿರಾಯರನ್ನು ಕೃಷ್ಣದಾಸರು ೧೫ಕ್ಕೂ ಹೆಚ್ಚು ಕೀರ್ತನೆಯಲ್ಲಿ ಸ್ಮರಿಸಿದ್ದಾರೆ. ಸದ್ಗುರು ಮಹಿಪತಿರಾಯರು ನನ್ನಲ್ಲಿರುವಾಗ ನನಗೆ ಏತರ ಚಿಂತೆ ಎನ್ನುತ್ತ ತನ್ನ ಗುರುವಿನ ಅನುಗ್ರಹದ ಸಾಧನೆಯನ್ನು ಬಿಂಬಿಸಿದ್ದಾರೆ. ತನಗೆ ಸ್ಫೂರ್ತಿ ನೀಡಿದ ಆತನ ವ್ಯಕ್ತಿತ್ವವನ್ನು ಮನದುಂಬಿ ವರ್ಣಿಸಿದ್ದಾರೆ.

''ತೈಸೇ ಸದ್ಗುರು ನಾಮ ತುಝೆ |
ಹರುಷ ಹೋತಸೇ ಸಹಜರೇ

ರಾತ್ರೀ ಪಾಹತಾ ಚಂದ್ರೋದಯೇ |
ಪ್ರೇಮವರ್ಧಿ ಅಂಬುಧೀಸ್ವಯೇರೆ

ಉದಯೀ ಸೂರ್ಯಾಸೀ ಪಾಹೋನಿ |
ಜೈಸೇ ಸಂತೋಷ ಪದ್ಮಿಣಿ ರೇ

ದೇಖೋನಿಯಾ ಮೇಘ ಡಂಬರ |
ಜೈಸೇ ನೃತ್ಯ ಕರಿ ಮಯೂರಾರೇ

ಧರುನಿ ಮಹಿಪತಿ ತವ ಪಾಯೇ |
ಕೃಷ್ಣ ಜಾಹಲಾ ಆನಂದ ಮಯೇ''[೧]

ಎನ್ನುವ ಈ ಮರಾಠಿ ಪದ್ಯವು, ಸದ್ಗುರುವಿನ ನಾಮದ ಮಹಿಮೆಯ ಮಹತ್ವತೆಯನ್ನು ತಿಳಿಸುತ್ತದೆ. ಗುರುವಿನ ನಾಮವು ಕಿವಿಗೆ ತಾಕಿದರೆ ಸಹಜವಾಗಿ ಕೃಷ್ಣದಾಸರಲ್ಲಿ ಉತ್ಸಾಹ

ತುಂಬುತ್ತದೆ. ತನ್ನ ಗುರುವಿನ ಮಹಿಮೆಯನ್ನು ಅನೇಕ ಸಹಸಂಬಂಧಗಳ ಮುಖೇನ ನಿರ್ಧರಿಸುವ ಪ್ರಯತ್ನವನ್ನು ಮಾಡಿದ್ದಾರೆ. ಇಲ್ಲಿ ರಾತ್ರಿ ಸಮಯದಲ್ಲಿ ಪೂರ್ಣಚಂದ್ರನ ಬೆಳದಿಂಗಳು ಸಮುದ್ರವನ್ನು ಕಂಡಾಗ ತನ್ನ ತೆರೆಗಳನ್ನು ಬಡಿಯುತ್ತ ಆಡುವ ಆಟ ಕಾಣುತ್ತದೆ. ಹಾಗೆಯೇ ಸೂರ್ಯನ ಉದಯದಲ್ಲಿ ಆತನ ಕಿರಣಗಳು ಹೊಂಬೆಳಕನ್ನು ಬಿತ್ತರಿಸುವಾಗ ತಾವರೆ ಅರಳಿ ನಗುತ್ತವೆ. ಆಕಾಶದ ಕರಿಮೋಡದ ತುಂತುರು ಮಳೆ ಹನಿಯು ಉದುರುತ್ತಿರುವಾಗ ನವಿಲು ತನ್ನ ಮೈ ಮರೆತು ಆನಂದದಿಂದ ನೃತ್ಯವನ್ನು ಮಾಡುತ್ತದೆ. ಅದರಂತೆ ಸದ್ಗುರು ಮಹಿಪತಿರಾಯ ನಿಮ್ಮ ಪಾದಕಮಲಗಳ ಅಡಿದಾವರೆಗೆ ವಂದಿಸಿಸುವುರಿಂದ ನಿಮ್ಮ ಸುಪುತ್ರ ಈ ಕೃಷ್ಣನು ಬ್ರಹ್ಮಾನಂದವನ್ನು ಪಡೆದಷ್ಟು ಆನಂದವಾಗುತ್ತದೆ. ಗುರುವಿನ ಭಕ್ತಿಯನ್ನು ಕೃಷ್ಣದಾಸರು ಈ ರೀತಿಯಾಗಿ ಪ್ರಕಟಿಸಿದ್ದಾರೆ. ಮುಂದುವರಿದು ಗುರುವಿನ ಮಹಿಮೆಯನ್ನು ಚಿತ್ರಿಸುತ್ತಾರೆ.

‘‘ತಾರಾವೇ ಮಜ ಗುರುರಾಯಾ |
ಆಲೋ ಶರಣ ಸಜ್ಜನ ಧ್ಯೇಯಾ

ಸಾತ್ವಿಕ ಭಾವ ದೇವುನಿಯಾ |
ವಿವೇಕ ಮಾಗಿ ಲಾವುನಿಯಾ ||

ಅಜ್ಞಾನ ತಮಹೇ ನಿರಸುನಿಯಾ |
ಅಭಯಕರ ಸಿರಿ ಠೇವುನಿಯಾ

ಮಹಿಪತಿ ತವ ಪದ ದಾವುನಿಯಾ |
ನಂದನ ಹೃದಯೀ ರಾಹುನಿಯಾ’’[2]

ಗುರುರಾಯ ನಿನ್ನ ಮಹಿಮೆ ಆಗೋಚರವಾದದ್ದು. ಶರಣ ಸಜ್ಜನರ ಸಂಗವನ್ನು ಸೇರಿಸುವಂತಹದ್ದು. ಗುರು ನಿನ್ನ ನುಡಿ ಸಾತ್ವಿಕತೆಯ ಸಿರಿ. ಗುರು ನಿನ್ನ ಜ್ಞಾನ ವಿವೇಕದ ಕಲಿ. ಆದ್ದರಿಂದ ಸಾಧುಸಜ್ಜನರ ಸಾತ್ವಿಕತೆಯ ಭಾವ ವಿವೇಕತೆಯ ಜ್ಞಾನವನ್ನು ನನಗೆ ಅನುಗ್ರಹಿಸಿದ್ದೀಯಾ. ಅಜ್ಞಾನವನ್ನು ಅಳಿಸಿ ಸುಜ್ಞಾನವನ್ನು ನೀಡಿ ನಿನ್ನ ಕಂದನ ಹೃದಯದಲ್ಲಿ ಸದಾ ನೆಲೆಸು. ಸಂತೋಷವನ್ನು ಹುಟ್ಟಿಸು. ಎಂಬ ಮಾತುಗಳು ತಂದೆ ಮತ್ತು ಮಗನ ಸಂಬಂಧವನ್ನು ಮೀರಿ ಗುರು ಮತ್ತು ಶಿಷ್ಯನ ಅವಿನಾಭಾವ ಸಂಬಂಧದ ಗಾಢತೆಯನ್ನು ಈ ಕೀರ್ತನೆಯು ಸ್ಪಷ್ಟಪಡಿಸುತ್ತದೆ. ಇವರ ಪವಿತ್ರ ಪ್ರೇಮ ಮತ್ತು ಭಕ್ತಿ ಎಷ್ಟು ನಿರ್ಮಲತೆಯಿಂದ ಕೂಡಿದೆಯೆಂಬುದು ಇಂತಹ ಅನೇಕ ಪದ್ಯಗಳಲ್ಲಿ ಕಂಡುಬರುತ್ತವೆ.

ಗುರುವಿನ ಗುರುಭಕ್ತಿಯನ್ನು ಹಾಗೂ ಆತನ ವೃಂದಾವನದ ಮಹಿಮೆಯನ್ನು ಕೃಷ್ಣದಾಸರು ಭಾವಪೂರ್ಣವಾಗಿ ವರ್ಣಿಸಿದ್ದಾರೆ.

''ವೃಂದಾವನೀ ವಾಸ ಕೋಣಾಚಾ ಸಾಂಗ ಮಾಹೇ |
ತೇಥ ಆನಂದ ದುಮದುಮತಾಹೇ |
ಮಹಿಮಾ ವರ್ಣಿತಾ ವಾಚಾ ಜೇಥನಯೇ |
ಭಾವೇ ಪಾಹತಾ ಭಾಸತೀ ಮಹಿಪತಿ ರಾಯೇಗೇ''[೩]

ಕೃಷ್ಣದಾಸರು ಈ ಪದ್ಯದಲ್ಲಿ ಮಹಿಪತಿರಾಯರ ಆಧ್ಯಾತ್ಮಿಕ ಸಾಧನೆಯನ್ನು ವಿವರಿಸುತ್ತಾರೆ. ಅವರ ಇರುವಿಕೆಯನ್ನು ಹಾಗೂ ವೃಂದಾವನಕ್ಕೆ ಭಕ್ತಜನ ನಡೆದುಕೊಳ್ಳುವ ಪರಿಯನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ತನ್ನ ಗುರುವು ಪೂಜೆಗೊಂಡ ಬಗೆಯನ್ನು ಹರಿಭಕ್ತರು ಸ್ತುತಿಸುವ ಪದ್ಯ ಗುರು ಮತ್ತು ಶ್ರೀಹರಿಯನ್ನು ಸಮನ್ವಯೀಕರಿಸಿ ಹೇಳುವಂತಿದೆ. ಕೃಷ್ಣದಾಸರು ಇಂತಹ ಅನೇಕ ಸ್ತೋತ್ರ ಕೀರ್ತನೆಗಳನ್ನು ಮಹಿಪತಿರಾಯರಿಗೆ ಅರ್ಪಿಸಿ ಧನ್ಯರಾಗಿದ್ದಾರೆ. ತಂದೆ ಮಗ ಎಂಬ ಸಂಬಂಧದಾಚೆಯ ನೆಲೆಯನ್ನು ಕಂಡವರಾಗಿದ್ದಾರೆ. ಸುಜ್ಞಾನದ ಆನಂದಾನುಭೂತಿಯನ್ನು ಕಾವ್ಯದ ಮೂಲಕ ಹರಿಸಿ ಪರಮಾನಂದವನ್ನು ಪಡೆದವರು.

''ಗುರುರಾಜಯಾಚಾ ಲಾಗಲಾ ಛಂದ ಬಾಯಿ

ಉಠತಾ ಬಸತಾ ಫಿರತಾ |
ಚತುರ್ವಿಧಾನ್ನ ಸೇವಿತಾ |
ನಿಜನೀಜ ಪೂರ್ಣಘೇತಾ |
ಧ್ಯಾನೀ ಮನೀ ದೀನನಾಥ |
ಆಠವಿತೋ ಗೇ ಮಜಲಾಗಲಾ ಛಂದ ||

ಧರ್ಮಾರ್ಥ ಕಾಮ ಮೋಕ್ಷ |
ನಾಹಿ ತ್ಯಾಚಾ ಅಪೇಕ್ಷಾ |
ರಿದ್ಧಿ ಶಿದ್ಧೀ ಚಾ ಉಪೇಕ್ಷಾ|
ಜಾಹಲಾ ಗುರುದಯ ಕಟಾಕ್ಷ |
ಹೊತಾ ಗೇ ದೇಹೀ ಮಜಲಾಗಲಾ ಛಂದ''[೪]

ಗುರುರಾಯ ನಿನ್ನ ನಾಮವನ್ನು ಏಳುತ್ತ, ನಿಲ್ಲುತ, ಕೂರುತ್ತ, ಮಲಗುತ್ತ ಜಪಿಸುತ್ತಿರುವೆ. ನಿನ್ನ ಅನುಗ್ರಹದಿಂದ ಕಾಮ-ಕ್ರೋಧ-ಮದ-ಮತ್ಸರ–ಲೋಭ ಇವೆಲ್ಲವು ತೊಲಗಿಸಿದವನು ನೀನೆ. ಸಮೃದ್ಧಿ ಸಿದ್ಧಿಯನ್ನು ನೀಡಿ ಆಶೀರ್ವದಿಸಿದ ಗುರುವೇ ನಿನಗೆ ಧನ್ಯವಾದ. ನಿನ್ನ ಚರಣ ಕಮಲಕ್ಕೆ ಶಿರಬಾಗಿ ವಂದಿಸುವೆ ಎನ್ನುತ್ತ ಗುರುಭಕ್ತಿ, ಗುರುಕಾರುಣ್ಯ, ಗುರುವಿನ ಮಹಿಮೆಯ ಅಗಾಧವಾದ ಶಕ್ತಿಯನ್ನು ಗುರು ಸ್ತೋತ್ರದ ಮುಖೇನ ಹಾಡಿಕೊಂಡಾಡಿದ್ದಾರೆ. ತನ್ನ ಗುರು

ಸ್ತುತಿಸುವ ಜನರಿಗೆ ಆಶ್ರಯದಾತನಾಗಿದ್ದಾನೆ. ಬ್ರಹ್ಮಜ್ಞಾನದ ಪ್ರೇಮವುಳ್ಳವನು ನಾಮಸ್ಮರಣೆಯ ಮೂಲಕ ಕರೆದಾಗಲೆಲ್ಲ ನಮ್ಮ ಹತ್ತಿರವೇ ಇರುವನು. ಮಾನವನ ರೂಪದ ಈ ಭೂಮಿಗೆ ಇಳಿದು ಬಂದ ಭಗವಂತನು. ಜನನ-ಮರಣದ ರಹಸ್ಯವನ್ನು ಭೇದಿಸಿ ಅತ್ಯಾನಂದವನ್ನು ಉಂಟುಮಾಡಿದವನು. ನನ್ನ ಮನದ ಅಜ್ಞಾನವನ್ನು ಅಳಿಸಿ ಸುಜ್ಞಾನವನ್ನು ಬೆಳಗಿದವನು. ಇಂತಹ ಸಾತ್ವಿಕ ಗುಣಸಂಪನ್ನನಾದ ಮಹಿಪತಿ ಗುರು ಈ ಪದಗಳನ್ನು ಕೂಡಬಲ್ಲ ಮಹಾಮಹಿಮ. ಕೃಷ್ಣದಾಸರು ತಮ್ಮ ಗುರುಭಕ್ತಿಯನ್ನು ಗುರುಸ್ತೋತ್ರದ ಮುಖೇನ, ಗುರುವಿನ ಅಧ್ಯಾತ್ಮ ಸಾಧನೆಯ ದರ್ಶನವನ್ನು ಮರಾಠಿಯ ಪದ್ಯದಲ್ಲಿ ಬಿತ್ತರಿಸಿದ್ದಾರೆ.

ಕೃಷ್ಣದಾಸರು ತನ್ನ ಗುರುವಿನ ಗುರುಭಕ್ತಿಯಂತೆ ಅನೇಕ ದೇವತೆಗಳನ್ನು, ಅವರ ಮಹಿಮೆಯನ್ನು, ಭಕ್ತಜನರ ಉದ್ಧಾರಕ್ಕಾಗಿ ಮಾಡಿದ ಅವರ ಕಾರ್ಯದ ಅವತಾರವನ್ನು ಬಿಂಬಿಸಿದ್ದಾರೆ. ಶ್ರೀಹರಿ, ರಾಮ, ಕೃಷ್ಣ, ವೆಂಕಟೇಶ, ದತ್ತ, ಮೊದಲಾದ ಅವತಾರಿ ದೇವತೆಗಳನ್ನು ನೆನೆದಿದ್ದಾರೆ. ದೇವತೆಗಳ ಪರಿವಾರದ ಶ್ರೀಮಹಾಲಕ್ಷ್ಮೀ ಹನುಮಂತ, ಸರಸ್ವತಿ, ಪಾರ್ವತಿ, ಗಣಪತಿ ಮುಂತಾದ ದೇವತೆಗಳ ಮೇಲೆ ತಮ್ಮ ಭಕ್ತಿಯ ಸ್ತುತಿ ಕೀರ್ತನೆಗಳನ್ನು ರಚಿಸಿದ್ದಾರೆ.

‘‘ಕೃಷ್ಣದಾಸರು ಕನ್ನಡದಂತೆ ಮರಾಠಿ ಭಾಷೆಯ ಮೇಲೂ ಒಳ್ಳೆಯ ಪ್ರಭುತ್ವವನ್ನು ಸಾಧಿಸಿದ್ದಾರೆ ಎಂಬುದಕ್ಕೆ ಅವರು ಮರಾಠಿ ಭಾಷೆಯಲ್ಲಿ ರಚಿಸಿದ ಅನೇಕ ಪದ್ಯಗಳೇ ಸಾಕ್ಷಿಯಾಗಿವೆ. ಕೃಷ್ಣರಾಯರ ಕಾಲದಲ್ಲಿ ಈ ಭಾಗದಲ್ಲಿ ಕನ್ನಡ ಭಾಷೆಯಂತೆ ಮರಾಠಿ ಭಾಷೆಯು ಬಹಳ ಪ್ರಚಲಿತವಾಗಿತ್ತೆಂದು ಹೇಳಬಹುದು. ಕನ್ನಡದವರು ಮರಾಠಿ ಭಾಷೆಯ ಅನೇಕ ಶಬ್ದಗಳನ್ನು ಹಾಗೂ ಮರಾಠಿ ಭಾಷಿಕರು ಅನೇಕ ಕನ್ನಡ ಶಬ್ದಗಳನ್ನು ತಮ್ಮ ದಿನನಿತ್ಯದ ವ್ಯವಹಾರದಲ್ಲಿ ಬಳಸುತ್ತಿರುವುದು ಸಾಮಾನ್ಯವಾಗಿತ್ತು. ಆದ್ದರಿಂದ ಎಲ್ಲ ಜನರಿಗೂ ತಮ್ಮ ಸದ್ಬೋಧದ ಸವಿಯನ್ನು ಉಣಿಸಲೆಂದೇ ಕೃಷ್ಣದಾಸರು ಮರಾಠಿ ಭಾಷೆಯಲ್ಲಿ ನೂರಾರು ಪದಪದ್ಯಗಳನ್ನು ರಚಿಸಿ, ಮರಾಠಿ ಭಾಷೆಯ ಕಂಪು ಇಂಪನ್ನು ಬೀರುತ್ತ ಮರಾಠಿ ಸಾಹಿತ್ಯಕ್ಕೆ ತಮ್ಮ ವಿಶಿಷ್ಟವಾದ ಕೊಡುಗೆಯನ್ನು ನೀಡಿದ್ದಾರೆ.’’[೫] ಹಾಗಾಗಿ ಕೃಷ್ಣದಾಸರು ತಮ್ಮ ಪ್ರಾದೇಶಿಕತೆ ಹಿನ್ನೆಲೆಯಲ್ಲಿ ಅಂದಿನ ಸಮಾಜ ಅಪೇಕ್ಷಿಸುವಂತಹ ಭಾಷೆಯನ್ನು, ಭಾಷೆಯ ಸಾಮರಸ್ಯವಎನ್ನು ತರುವ ನಿಟ್ಟಿನಲ್ಲಿ ಪ್ರಯತ್ನಿಸಿದ್ದಾರೆ. ತಮ್ಮ ಅಧ್ಯಾತ್ಮ ನಿಲುವಿನ ತತ್ವವನ್ನು ಬಿತ್ತರಿಸುವ ಬಗೆಯಲ್ಲಿ ಈ ಮರಾಠಿ ಭಾಷೆಯನ್ನು ಬಳಸಿಕೊಂಡಿರುವುದು ಕಂಡುಬರುತ್ತದೆ. ವಿಘ್ನನಿವಾರಕ ವಿಘ್ನೇಶ್ವರನ ಮಹಿಮೆಯನ್ನು ಕೃಷ್ಣದಾಸರು ಈ ರೀತಿಯಲ್ಲಿ ಚಿತ್ರಿಸಿದ್ದಾರೆ.

‘‘ಯಾ ಮೋರಯಾಚಾ ನಾಮ |
ಅಧಿ ಸ್ಮರಾರೇ ಆಧಿ ಸ್ಮರಾರೇ ||

ಸಕಳ ಸುರಾಸುರ ವಂದಿತ ಜ್ಯಾಚೇ |
ಚರಣ ಪಂಕಜ ಮನೋಹರರೇ ||

ಸಿದ್ಧಿ ವಿನಾಯಕ ಘನ ಲಂಬೋದರ |
ಸಿಂಧುರ ವದನ ಸುಂದರರೇ ||

ಮಹಿಪತಿಸುತ ಮ್ಹಣೇ ಅಖಿಳ ವಿದ್ಯಾನಿಧಿ|
ಕರುಣಾಸಾಗರ ವಿಘ್ನಹರೇ''[೬]

ಎನ್ನುತ್ತ ಕೃಷ್ಣದಾಸರು ಗಣಪತಿಯ ಮಹಿಮೆಯ ವರ್ಣನೆಯನ್ನು ಆತನ ಕಾರ್ಯಸಿದ್ಧಿಯನ್ನು ವರ್ಣಿಸುತ್ತಾರೆ. ಸಕಲವಿದ್ಯೆಗಳ ನಿಧಿ ನೀನೆ ಆಗಿರುವಿ. ಸಕಲ ದೇವತೆಗಳಿಂದ ಪೂಜೆಗೊಳ್ಳುವ ಸುಂದರ ವರ್ಣದ ಸಿಂಧೂರ ವಾದ್ಯ ಗಜಮುಖ ನಿನಗೆ ವಂದನೆ. ಸರ್ವ ಕಷ್ಟಗಳನ್ನು ನಿವಾರಿಸುವ ವಿಘ್ನೇಶ ನಿನಗೆ ಪ್ರಥಮ ವಂದನೆ. ದಾಸರು ಗಣಪತಿಯನ್ನು ಕುರಿತು ಮೂರು ಮರಾಠಿ ಕೀರ್ತನೆಗಳನ್ನು ರಚಿಸಿದ್ದಾರೆ. ಗಣಪತಿಯ ದೈವಿಕ ಶಕ್ತಿಯನ್ನು ಸಹೃದಯರಿಗೆ ಕಟ್ಟಿಕೊಟ್ಟಿದ್ದಾರೆ. ಮಹಾದೇವ ಸ್ವಾಮಿಯನ್ನು ಕುರಿತು ಕೃಷ್ಣದಾಸರು ಹೀಗೆ ಅಭಿವ್ಯಕ್ತಿಸುತ್ತಾರೆ.

ತೋ ಮಹಾದೇವ ಆ ಮುಚಾಹೋ |
ರವಿ ಚಂದ್ರಾನಳ ಸೇವಿಲಜ್ಯಾಚೇ |
ಧ್ವಜ ವೃಷಭಾ ಚಾಹೋ |
. . . .
. . . .
ಭಕ್ತ ಹೃದ್ವಾರಿರುಹ ಸಂಚಾರೀ ಜೋ, ಹೋ |
ಪಂಕಜ ಶರ ವೈರೀ ಹೋ ||
ಜಗ ಹಿತಕಾರೀ ದುರಿತ ನಿವಾರೀ |
ಮಹಿಪತಿ ಸುತ ಕೈವಾರೀ ಹೋ''[೭]

ಎನ್ನುವಲ್ಲಿ ಮಹಾರುದ್ರ ಸ್ವಾಮಿಯನ್ನು, ಆತನ ಅನನ್ಯ ಮೂರ್ತಿಯನ್ನು ಚಿತ್ರಿಸಿದ್ದಾರೆ. ರವಿ, ಚಂದ್ರ, ಅಗ್ನಿ ಮುಂತಾದ ದೇವತೆಗಳಿಂದ ಒಡಗೂಡಿ ನಂದಿಧ್ವಜ ವಾಹನವನ್ನು ಪಡೆದ ಮಹಾದೇವ ನಿನಗೆ ವಂದನೆ. ಕಷ್ಟದಲ್ಲಿರುವವರ ಕಷ್ಟವನ್ನು ನಿವಾರಿಸಿ, ಈ ಭೂಮಂಡಲಕ್ಕೆ ಹಿತವನ್ನು ನೀಡಿದ ಮಹಾಗುರುವೇ ನಿನಗೆ ವಂದನೆ. ಮಹಿಪತಿಸುತನ ಉದ್ಧಾರಕನಾದ ನಿನಗೆ ಧನ್ಯ, ಗುರುವೇ ನಿನ್ನ ದಯದಿಂದ ಧನ್ಯನಾದೆನು. ಎನ್ನುತ್ತಾ ಕೃಷ್ಣದಾಸರು ಶ್ರೀಮಹಾದೇವ ಸ್ವಾಮಿಯ ಕಾರ್ಯಕ್ಷಮತೆಯನ್ನು ಹದುಳವಾಗಿ ಬಣ್ಣಿಸಿದ್ದಾರೆ. ಇನ್ನು ಶ್ರೀರಾಮನ ಭಕ್ತನಾದ ಆಂಜನೇಯ ಸ್ವಾಮಿಯನ್ನು ಹೀಗೆ ಸ್ತುತಿಸಿದ್ದಾರೆ.

''ಹನುಮಾ ಶುಭಕಾಮಾ ಜಿತಕಾಮಾ ನಿಃಸ್ಸೀಮಾರೇ |

ಮಹಿಮಾ ಅನುಪಮಾ ತುಝಿ ಗರಿಮಾ ನಕಳೇನಾರೇ |
ಮೀರಾ ವಾಯು ಕುಮಾರಾ ಧೀರಾಗುಣ ಗಂಭೀರಾ |
ದೂರ್ವಾದಳ ಶಾಮಾರೇ"[೮]

ಎಂದು ಹೇಳುವ ಮೂರು ನುಡಿಗಳ ಪದ್ಯದಲ್ಲಿ ಹನುಮಂತನ ವಿವಿಧ ಕಾರ್ಯಗಳನ್ನು ಕೃಷ್ಣದಾಸರು ನೆನಪಿಸುತ್ತಾರೆ. ಮುಖ್ಯ ಪ್ರಾಣದೇವರವಾದ ಹನುಮಂತ ಶುಭಕಾರ್ಯಗಳಲ್ಲಿ ಗೆಲುವು ಸಾಧಿಸುವ ಹಂಬಲವನ್ನು ಪೂರ್ಣ ಮಾಡುವುದರಲ್ಲಿ ನಿಸ್ಸೀಮನಾದವನು. ಆತನ ಮಹಿಮೆ ಅನುಪಮವಾದದ್ದು. ಅದನ್ನು ಅರಿಯಲು ಸಾಧ್ಯವಾಗಲಾರದು. ವಾಯುಪುತ್ರನಾದ ಹನುಮ, ಗಂಭೀರ ಗುಣದವನು, ಧೀರನೂ ಆಗಿರುವ ಇಂತಹ ಹನುಮದೇವನನ್ನು ಸ್ಮರಿಸಿ ಕೃಷ್ಣದಾಸರು ಹನುಮಂತನಲ್ಲಿ ನಿವೇದಿಸಿಕೊಳ್ಳುತ್ತಾರೆ. ಗುರು ಮಹಿಪತಿಯ ಸುತನಾದ ನನ್ನನ್ನು ಸನ್ಮಾರ್ಗದತ್ತ ನಡೆಸುವ ಸಾರಥಿಯು ನೀನೆಯಾಗಿರುವೆ. ಆದ್ದರಿಂದ ನಿನ್ನನ್ನು ಸದಾ ಭಜಿಸುತ್ತಲ್ಲಿರುವೆ ಎಂದು ಹನುಮದೇವನ ಮೇಲಿನ ಭಕ್ತಿಯ ಭಾವವನ್ನು ಕೀರ್ತನೆಯ ಮೂಲಕ ತೆರೆದಿಡುವ ಪ್ರಯತ್ನವನ್ನು ಮಾಡಿದ್ದಾರೆ.

ಶ್ರೀಹರಿಯನ್ನು ಕುರಿತು ಕೃಷ್ಣದಾಸರು ಅನೇಕ ಕೀರ್ತನೆಗಳಲ್ಲಿ ಶ್ರೀಹರಿಯ ವಿವಿಧ ಕಾರ್ಯದರ್ಶನ ಹಾಗೂ ಆತನ ವ್ಯಕ್ತಿತ್ವ ಕುರಿತು ಈ ರೀತಿಯಲ್ಲಿ ಅಭಿವ್ಯಕ್ತಿಸಿದ್ದಾರೆ.

''ಸ್ಮರಾರೇ ದೀನನಾಥ ದೇವ ಚಕ್ರಪಾಣಿ ||

ಟಾಳ ದಂಡಿ ಘೇವುನಿ ಹಾತೀ |
ಸಾದು ಸಜ್ಜನ ಸಂಗತಿ |
ನಾನಾ ಛಂದೇ ಬಿರದೇ ಗೀತಿ |
ಪ್ರೇಮಾನಂದೇ ಗಾವೇರೇ ||

ಜೇಥೆ ನಾಮಾಚಾ ಉದ್ಘಟ |
ದುರಿತ ಪಳೇ ಬಾರಾವಾಟಾ |
ಉಘಡೆ ಮುಕ್ತೀಚೆ ವಾಟಾ |
ಭವ ಭಯ ಕೈಚೇರೇ"[೯]

ಶಂಖ, ಚಕ್ರ, ಗದಾಧಾರಿಯಾದ ಶ್ರೀಹರಿಯ ಭಜನೆಯನ್ನು ಸರ್ವಜನರ ದುರಹಂಕಾರ ದುರಭಿಮಾನ ಬಿಟ್ಟು ಸಾಧುಸಜ್ಜನರ ಜೊತೆಗೂಡಿ ಭಜಿಸಬೇಕು. ಕೈಯಲ್ಲಿ ತಾಳ ತಂಬೂರಿ ಹಿಡಿದಿರಬೇಕು. ಭಕ್ತಿ ಭಾವದಿಂದ ನೃತ್ಯ ಮಾಡುತ್ತಿರಬೇಕು. ಧೀನನಾಥನಾದ ಶ್ರೀಹರಿಯ ಮಹಿಮೆ ಕುರಿತು ಆನಂದಾನುಭವದಿಂದ ಹಾಡಿದರೆ ಸಂಸಾರದ ಸಂಕಟಗಳು ನಿವಾರಣೆಯಾಗುತ್ತವೆ. ಭಯವು ದೂರವಾಗಿ ಭವಮುಕ್ತಿಗೆ ಹಾದಿ ಸುಲಭವಾಗುತ್ತದೆ ಎಂದು ಕೃಷ್ಣದಾಸರು ಶ್ರೀಹರಿಯ

ಕುರಿತು ಹೇಳಿದ್ದಾರೆ. ಮತ್ತೆ ಮುಂದುವರಿದು ಹರಿನಾಮದ ಮಹತ್ವವನ್ನು ಈ ರೀತಿಯಲ್ಲಿ ಚಿತ್ರಿಸಿದ್ದಾರೆ.

''ರಸನೆ ಬೋಲ ಬೋಲ ಹರಿನಾಮ ||

ವಿಷಯಾನಂದ ಕ್ಷಣಿಕ ಹೇ ಜಾಣುನಿ |
ಸಾಂಡುನಿ ಸರ್ವಹಿ ಕಾಮ ||

ಅಗಣಿತ ಪಾಪ ವಿದಾರುನಿ ಸತ್ವರ |
ದೇತಸೆ ನಿಜ ಸುಖಧಾಮ ||

ದೀನೋದ್ಧಾರಣ ಭಕ್ತ ಜನಪ್ರಿಯ |
ಗುರು ಮಹಿಪತಿ ಪ್ರಭುರಾಮ''[೧೦]

ಕೃಷ್ಣದಾಸರು ಶ್ರೀಹರಿಯ ಮೇಲಿರುವ ಭಕ್ತಿಯ ಅನನ್ಯತೆಯನ್ನು ಶ್ರೀಹರಿಯ ನಾಮದ ಫಲದ ಮಹತ್ವತೆಯನ್ನು ಕೊಂಡಾಡಿದ್ದಾರೆ. ಸ್ವಾದ ನಾಲಿಗೆಗೆ ಹರಿನಾಮ ಸ್ಮರಣೇಯ ಬೋಧನೆಯನ್ನು ಹೇಳುತ್ತಾರೆ. ಸಂಸಾರ ವಿಷಯಗಳ ಸುಖಗಳ ಕೆಣಕುತ್ತಿರುವುದನ್ನು ಅರಿತು ಅರಿಷಡ್ವರ್ಗಗಳನ್ನು ಕುರಿತು ಚಿಂತನೆಗೆ ಹಚ್ಚಿದ್ದಾರೆ. ಭಕ್ತೋದ್ಧಾರಕನಾದ ಶ್ರೀಹರಿಯ ನಾಮವು ಕಷ್ಟಕಾರ್ಪಣ್ಯದಿಂದ ಮುಕ್ತಿಯನ್ನು ದೊರಕಿಸಿದ್ದಾರೆ. ಶ್ರೀಹರಿಯ ವಿವಿಧ ಅವತಾರದಲ್ಲಿ ಒಂದಾದ ಶ್ರೀರಾಮ ಮತ್ತು ಸೀತೆಯನ್ನು ಕುರಿತು ಹಲವು ಕೀರ್ತನೆಗಳಲ್ಲಿ ಸ್ಮರಣೆಯನ್ನು ಮಾಡಿದ್ದಾರೆ.

''ವದ ಕಾರೇ ವದ ಕಾರೇ ಜನಾ |
ಶ್ರೀರಾಘವಾಚೇ ನಾಮ ವಾಚೇ ||

ಸಕಳ ಸುಖಾಚಾ ವಾರಧಿ |
ಶ್ರೀ ರಾಮಾಚಾ ನಾಮ ಅಧಿ ||

ಜೋ ಸಾರಾಚಾ ನಿಜ ಸಾರೇ |
ಸಂತ ಜನಚಾ ಮಾಹೇರ ||

ಕಲಿಯುಗೀ ಅನ್ಯಸಾಧನ |
ನಾಹೀ ಜಡಜೀವಾ ಉದ್ಧರಣೀ ||
ಗುರು ಮಹಿಪತಿ ಪ್ರಭು |
ಕೀರ್ತನಿ ಹೋಯ ಸುಲ್ಲಭು''[೧೧]

ನಾಲ್ಕು ನುಡಿಯ ಪದ್ಯದಲ್ಲಿ ಶ್ರೀರಾಮನ ನಾಮದ ಮಹಿಮೆಯನ್ನು ಕೃಷ್ಣದಾಸರು ಕೊಂಡಾಡಿದ್ದಾರೆ. ಶ್ರೀರಾಮನ ನಾಮದಿಂದ ಸುಖವುಂಟಾಗುತ್ತದೆ. ಶ್ರೀರಾಮನ ನಾಮವು ಸರ್ವಸುಖದ ಸಮುದ್ರವೇ ಆಗಿದೆ. ಈ ಕಲಿಯುಗದಲ್ಲಿ ಜಡಜೀವ ಉದ್ಧಾರವಾಗಲು ಶ್ರೀರಾಮನಾಮದ ಭಜನೆ ಮುಖ್ಯವಾಗುತ್ತದೆ. ಇದನ್ನು ಬಿಟ್ಟು ಅನ್ಯಸಾಧನೆಗಳೇ ಇಲ್ಲವೆಂದು ರಾಮನ ನಾಮದ ಫಲವನ್ನು ಅಭಿವ್ಯಕ್ತಿಸಿದ್ದಾರೆ. ಹಲವಾರು ಕೀರ್ತನೆಯಲ್ಲಿ ರಾಮನ ಸ್ತುತಿಯನ್ನು ಹಾಗೂ ಅವನ ಅವತಾರವನ್ನು ನೆನೆದಿದ್ದಾರೆ. ಭಕ್ತಜನ ಕಾಪಾಡಿದ ರೀತಿಯನ್ನು ದಾಸರು ತಮ್ಮ ಕೀರ್ತನೆಗಳ ಮುಖೇನ ಸುಂದರವಾಗಿ ಮಾಡಿದ್ದಾರೆ. ಶ್ರೀರಾಮನ ಮತ್ತೊಂದು ಅವತಾರವಾದ ಕೃಷ್ಣನ ಕುರಿತು ಅನೇಕ ಕೀರ್ತನೆಯನ್ನು ರಚಿಸಿದ್ದಾರೆ. ಕೃಷ್ಣನ ಚರಣಕ್ಕೆ ನಮಿಸುವುದರ ಮೂಲಕ ಆತನ ಲೀಲೆಯನ್ನು ಹಾಡಿಹೊಗಳಿದ್ದಾರೆ. ಹೀಗೆ ಕೃಷ್ಣನ ದೈವತ್ವದ ಶಕ್ತಿಯನ್ನು ಕೃಷ್ಣದಾಸರು ಈ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ.

“ಕೃಷ್ಣಯೇಯಿ ಸುಖದೇಯಿ |
ಯೇವುನಿ ಹೃದಯ ರಾಹಿವೋ |
ತುಜವಿಣ ಪಾಹಿ ವಿಶ್ರಾಂತಿ ಕಾಹಿ |
ನಾಹೀ ದೇಹಿ ಗೇಹಿ ||
. . . .
. . . .
ಭಕ್ತ ಪೋಷಣಾ ಲೋಕ ಪೋಷಣಾ |
ಪಾಪ ಪಂಕ ಶೋಷಣಾ ಹೋ |
ಜೀತ ಖರದೊಷಣ ಬಳಿ ವಿಭೀಷಣ |
ವರದ ಹೇಮ ಭೂಷಣಾ ಹೋ”[೧೨]

ಕೃಷ್ಣನನ್ನು ನೆನೆದರೆ ಅದರಿಂದಾಗುವ ಪ್ರಯೋಜನ ಮತ್ತು ಭಕ್ತಜನರನ್ನು ಉದ್ಧರಿಸುವ ಕೃಷ್ಣನ ಪರಿಯನ್ನು ಹೇಳುತ್ತಾರೆ. ಜೀವಕ್ಕೆ ಅಂಟಿದ ಪಾಪಕಷ್ಟವನ್ನು ಪರಿಹರಿಸುವ ಕೃಷ್ಣ ಮಹಾಭಾರತದಲ್ಲಿ ಬರುವ ವಿಭೀಷಣನಿಗೆ ಅಭಯವನ್ನು ನೀಡುತ್ತಾನೆ. ಇಂತಹ ಶ್ರೀಕೃಷ್ಣನ ಕರುಣೆ ಸದಾ ನನ್ನ ಮೇಲಿರಲಿ, ಅನುದಿನವು ಕೃಷ್ಣನನ್ನು ಜಪಿಸುತ್ತಲೇ ಇರಬೇಕು ಎನ್ನುತ್ತಾರೆ. ಹೀಗೆ ಕೃಷ್ಣನ ಕುರಿತು ಆತನ ದರ್ಶನದ ಭಾಗ್ಯ ಹಾಗೂ ಭಕ್ತಜನರ ರಕ್ಷಣೆಗೆ ಒದಗುವ ಪರಿಯನ್ನು ಕೃಷ್ಣದಾಸರು ಅನೇಕ ಪದ್ಯದಲ್ಲಿ ಸೆರೆ ಹಿಡದಿದ್ದಾರೆ.

ಇಲ್ಲಿಯವರೆಗೆ ಕೃಷ್ಣದಾಸರ ಒಟ್ಟು ೬೬ ಮರಾಠಿ ಕೀರ್ತನೆಗಳು ಉಪಲಬ್ಧವಾಗಿವೆ. ಅವುಗಳಲ್ಲಿ ಕೃಷ್ಣದಾಸರು ಆಧ್ಯಾತ್ಮಿಕ ಹಾಗೂ ತಾನು ನಂಬಿರುವ ದೈವವನ್ನು ಸ್ಮರಿಸುವ ಕಾರ್ಯವನ್ನು ಮಾಡಿದ್ದಾರೆ. ಕನ್ನಡ ಭಾಷೆಯ ಕೀರ್ತನೆಗಳಂತೆಯೇ ಅವರ ಮರಾಠಿ ಭಾಷೆಯ

ಕೀರ್ತನೆಗಳು ವಿಜಯಪುರದ ಪ್ರಾದೇಶಿಕ ಭಾಷೆಯ ಸುತ್ತಮುತ್ತಲಿನ ಮರಾಠಿ ಭಾಷಿಕರ ನಾಲಿಗೆಯ ಮೇಲೆ ನಲಿದಾಡುತ್ತವೆ.

೨. ಉರ್ದು ಭಾಷೆಯ ಕೀರ್ತನೆ

ಕೃಷ್ಣದಾಸರು ಕನ್ನಡ ಮರಾಠಿ ಭಾಷೆಯಂತೆ ವಿಜಯಪುರದ ಆಳರಸರ ಮಾತೃಭಾಷೆಯ ಪ್ರಭಾವಕ್ಕೊಳಗಾಗಿದ್ದಾರೆ. ತಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಆ ಕಾಲಘಟ್ಟದ ಮುಸ್ಲಿಂ ಸಮುದಾಯದ ಜನರು ಆ ಪ್ರದೇಶದಲ್ಲಿ ಹೆಚ್ಚು ವಾಸಿಸುತ್ತಿದ್ದರು. ಆ ಸಮುದಾಯದ ಮಾತೃಭಾಷೆಯಾದ ಉರ್ದು ಭಾಷೆಯಲ್ಲಿ ಸಹಜವೆಂಬಂತೆ ತಮ್ಮ ಕೀರ್ತನೆಯ ಸೊಗಡನ್ನು ತರುವ ಪ್ರಯತ್ನವನ್ನು ಮಾಡಿದ್ದಾರೆ. ಕೃಷ್ಣದಾಸರ ಉರ್ದು ಭಾಷೆಯ ಕೀರ್ತನೆಗಳ ಸಂಖ್ಯೆಯನ್ನು ನಿರ್ಧರಿಸುವುದು ಸಾಧ್ಯವಾಗುವುದಿಲ್ಲ. ಒಂದು ಕೀರ್ತನೆಯು ಮಾತ್ರ ನಮಗೆ ಉಪಲಬ್ಧವಾಗಿದೆ. ಇನ್ನು ಅನೇಕ ಉರ್ದು ಭಾಷೆಯನ್ನು ಕೀರ್ತನೆಗಳನ್ನು ಕೃಷ್ಣದಾಸರು ರಚಿಸಿರುವ ಸಾಧ್ಯತೆಯಿದೆ. ಆದರೆ ಕಾಲಾಂತರದಲ್ಲಿ ಉರ್ದು ಭಾಷೆಯ ಕೀರ್ತನೆಗಳು ಕಾಲಗರ್ಭದಲ್ಲಿ ಅಡಗಿಹೋಗಿರುವ ಸಾಧ್ಯತೆಗಳು ಹೆಚ್ಚಾಗಿವೆ. ಕೃಷ್ಣದಾಸರು ರಚಿಸಿರುವ ಈ ಒಂದು ಉರ್ದು ಭಾಷೆಯ ಕೀರ್ತನೆಯ ಅಂತರಂಗವನ್ನು ಇಲ್ಲಿ ಗುರುತಿಸಲಾಗಿದೆ.

''ಅಲಖ ನಿರಂಜನ ಪರಂಜ್ಯೋತಿ | ಬಾಬಾ |
ವ್ಯಾಪಕ ಜೋತ್ರಿಭುವನಜೀ ||
ಜಾಕಿ ಚರಣಕಿ ಸೇವಕ ಬ್ರಹ್ಮಾ |
ಶಂಕರ ಕರೆ ನಿಜ ಧ್ಯಾನಜೀ ||೧||

ಸೋದತ್ತ ದಿಗಂಬರು ಸಾಯಿ ಹಮಾರಾ | ಬಾಬಾ |
ಸ್ಮರನಕರು ದೀನಾನಾಥಕೀ ||
ಬ್ರಹ್ಮಭುವನಕಿ ಹಮ್ ಪರದೇಶಿ |
ಗೋರಖ ಪಂಥ ಕಿ ಜೋಗಿ ||೨||

ಮಾತಾ ಪಿತಾ ಗುರು ಬಂಧು ಹಮಾರಾ | ಬಾಬಾ |
ಬಾಬಾ ಮಹಿಪತಿ ಪ್ರಭುಜೀ ||
ಗುರು ವಚನ ಬಿನ ಔರ ನ ಜಾನೆ |
ಮಂತರ ತಂತರ ಪೂಜಾಜೀ ||೩||

ಗುರುನೇ ಬೋಧ ಪ್ಯಾಲಾ ಮುಝೆ ಪಿಲಾಯಾ |ಬಾಬಾ|
ಮನಮಗನ್ಮೇರಾ ಹುವಾಜೀ ||

ಗುರುಜ್ಞಾನಕೀ ಕಂಥಾ ಬನಾಯಿ |
ಹಾಥೋಮೆ ಭಕ್ತಿ ಝೋಳಗಿ ||೪||

ಗುರು ವಚನಕಾ ಮುದ್ರಾ ಹಮಾರಾ |ಬಾಬಾ|
ಘನ ಕೃಪಾಕರ ಪಾತ್ರಜೀ ||
ಸಾಧು ಸಂಘಕೀ ಬಿಕ್ಷಾಲೋವೊ |
ಇಹಪರಕಿ ನಾಹೀ(ನಹೀ) ಆಶಾಜೀ ||೫||

ಗುರು ದರ್ಬಾರಮೆ ತಕ್ಕಾ ಹಮಾರಾ |
ಜಹಾಂಬಸೆ ಸಾಧು ಸಂತಜಿ |
ದಿವಾನಾ ನಂದನ ಮೈತೊ ಗುರುಕಾ
ಮನಜೋಗಿ ಹುವಾ ಮೆ ರಾಜಿ"[೧೩]

ಎಂದು ಕೃಷ್ಣದಾಸರು ಈ ಪದ್ಯದಲ್ಲಿ ತನ್ನ ತಂದೆ ಮತ್ತು ಗುರು ಮಹಿಪತಿರಾಯರ ಅನನ್ಯ ವ್ಯಕ್ತಿತ್ವದಲ್ಲಿ ಪರಮಾತ್ಮನನ್ನು ಕಾಣುವ ಹಂಬಲವನ್ನು ವ್ಯಕ್ತಪಡಿಸಿದ್ದಾರೆ. ನಿರಾಕಾರ ನಿರಂಜನನಾದ ಪರಮಾತ್ಮನು ಪರಂಜ್ಯೋತಿಯಾಗಿ ಈ ಭವದ ಮೇಲೆ ಇದ್ದಾನೆ. ಇಂತಹ ಪರಂಜ್ಯೋತಿಯಾದ ಪರಮಾತ್ಮನ ಸೇವೆಯನ್ನು ಬ್ರಹ್ಮದೇವನು ಸಹ ನಿರರ್ಗಳವಾಗಿ ಮಾಡುತ್ತಿದ್ದಾನೆ. ಶಿವನು ಈ ಧೀರನಾತನಾದ ಪರಮಾತ್ಮನಲ್ಲಿ ಸದಾ ನಿರತನಾಗಿದ್ದಾನೆ. ಹಾಗಾಗಿ ಇಂತಹ ಪರಂಜ್ಯೋತಿಯ ಪರಮಾತ್ಮನ ಸೇವೆಯನ್ನು ದಿನಂಪ್ರತಿಯಾಗಿ ಮಾಡುತಲಿದ್ದೇನೆ. ಈ ಪ್ರಪಂಚದಲ್ಲಿ ಅನಾಥನಾಗಿರುವ ನಾನು ಸದಾಕಾಲ ಶ್ರೀಹರಿಯ ದಾಸನಾಗಿ ಅವನ ಧ್ಯಾನದಲ್ಲಿ ನಿರತನಾಗಿದ್ದೇನೆ. ಈ ಪೃಥ್ವಿಯ ಒಡೆಯನಾದ ಸದ್ಗುರು ಶ್ರೀಹರಿಯೇ ನನ್ನ ತಂದೆ ತಾಯಿ, ಬಂಧುಬಳಗ. ಈ ಭವಕ್ಕೆ ಗುರು ನೀನೆಯಾಗಿರುವಾಗ ಭವದ ಹಂಗು ನನಗೇಕೆ ಎಂದು ಆತ್ಮೋದ್ಧಾರಕ ಗುರುವಿನ ಅನನ್ಯ ಕಾರುಣ್ಯವನ್ನು ಬಗೆಬಗೆಯಾಗಿ ಚಿತ್ರಿಸಿದ್ದಾರೆ.

ಹೀಗೆ ಕೃಷ್ಣದಾಸರು ತನ್ನ ಗುರುವಾಗಿರುವ ಮಹಿಪತಿರಾಯರನ್ನು ಶ್ರೀಹರಿಯ ಜೊತೆಗೆ ಸಮೀಕರಿಸಿಕೊಂಡಿರುವುದು ಅನನ್ಯ. ಆತನ ವಚನಾಮೃತ ಗುರು ನೀಡಿದ ಸುಜ್ಞಾನದ ಅರಿವನ್ನು ಅಭಿವ್ಯಕ್ತಿಸಿದ್ದಾರೆ. ಆ ಗುರುವಿನಿಂದ ಉತ್ತರೋತ್ತರವಾಗಿ ಭಕ್ತಿಯ ಸಾಧನೆಯನ್ನೇರಿದ ಸಂತೋಷವನ್ನು ಗುರುಕೃಪೆಗೆ ಅರ್ಪಿಸಿದ್ದಾರೆ. ಅಗಾಧ ಶಕ್ತಿಯನ್ನು ತಮಗಾದ ಅನುಭಾವದ ಅಧ್ಯಾತ್ಮಿಕ ಹಿನ್ನೆಲೆಯಲ್ಲಿ ವರ್ಣಿಸಿದ್ದಾರೆ.

೩. ಭಾಷಾ ಸಮನ್ವಯದ ಕೀರ್ತನೆಗಳು

ಕೃಷ್ಣದಾಸರು ಬಹುಭಾಷೆಗಳನ್ನು ಬಲ್ಲವರು. ಮರಾಠಿ, ಉರ್ದು ಭಾಷೆಯ ಜೊತೆಗೆ ಸಂಸ್ಕೃತ ಭಾಷೆಯ ಅಗಾಧ ಅಧ್ಯಯನವನ್ನು ಮಾಡಿದವರು. ಸಂಸ್ಕೃತದಲ್ಲಿ ರಚಿತವಾದ

ಮೂಲಭಾರತ, ರಾಮಾಯಣ ಕಾವ್ಯವನ್ನು ಆಮೂಲಾಗ್ರವಾಗಿ ಅಭ್ಯಸಿಸಿದವರು. ಕನ್ನಡ ಭಾಷೆಯಲ್ಲಿ ತಮ್ಮದೆಯಾದ ಕೀರ್ತನೆಯ ಮೂಲಕ ವಿಭಿನ್ನವಾಗಿ ತೋರಿಸುವ ಪ್ರಯತ್ನ ಮಾಡಿದ್ದಾರೆ. ಸಂಸ್ಕೃತಭೂಯಿಷ್ಠ ಜನರಿಗೆ ಕನ್ನಡ ಭಾಷೆಯ ಸತ್ವವನ್ನು ಪರಿಚಯಿಸುವ ಪ್ರಯತ್ನವನ್ನು ಕೃಷ್ಣದಾಸರು ಮಾಡಿದ್ದಾರೆ. ಆ ಕಾಲಘಟ್ಟದ ಸಂಸ್ಕೃತ ಪಂಡಿತರು ತಾವು ಮಾತ್ರ ಶ್ರೇಷ್ಠ ಎಂದು ಜಂಬ ಕೊಚ್ಚಿಕೊಳ್ಳುತ್ತಿರುವ ಸಂದರ್ಭದಲ್ಲಿ ಕೃಷ್ಣದಾಸರು ಭಾಷಾ ಸಮನ್ವಯತೆಯನ್ನು ಮೆರೆದಿರುವುದು ಮೆಚ್ಚುವಂತದು. ಕನ್ನಡ ಭಾಷೆಯ ಕುರಿತು ಕೃಷ್ಣದಾಸರಿಗಿರುವ ಪ್ರೀತಿ ಅನನ್ಯವಾದದು. ಸಂಸ್ಕೃತ ಭಾಷೆಯ ಪಂಡಿತರಿಗೆ ದಾಸಸಾಹಿತ್ಯದ ಸ್ವರೂಪ ದರ್ಶನ ಕನ್ನಡ ಮಾಧ್ಯಮದಿಂದಲೇಸಾಧ್ಯ ಎನ್ನುವ ನಿಲುವನ್ನು ವ್ಯಕ್ತಪಡಿಸಿದ್ದಾರೆ. ಆ ನಿಲುವು ಈ ರೀತಿಯಲ್ಲಿ ಅಭಿವ್ಯಕ್ತಿಗೊಂಡಿದೆ.

''ಬರೇ ವಾಚಾಭಿಮಾನವಿದೇಕೆ |
ಹರಿ ಲೀಲಾಮೃತ ಸೇವಿಸಲಿಕ್ಕೆ ||

ಸಂಸ್ಕೃತ ವಂದ್ಯ ಪ್ರಾಕೃತ ನಿಂದ್ಯ |
ಸುಕೃತಿಗಳಾಡುದೇ ಕುಂದಾ ||

ಕನ್ನಡ ನುಡಿಯೆಂಧ್ಧಳಿಯ ಬೇಡಿ |
ಕನ್ನಡಿ ದರ್ಪಣವಲ್ಲವೆ ನೋಡಿ ||

ಕರಿದು ಬಿಳಿದು ಅವಾದರೇನು |
ಎರಡಾಗದು ಕ್ಷೀರೆಂದೂ ತಾನು ||

ಗುರುವರ ಮಹಿಪತಿ ಪ್ರಭುಚರಿತಾ |
ಭರಿತಾದುದೇ ಪಾವನ ನುಡಿತಾ''[೧೪]

ಶ್ರೀಹರಿಯ ಮಹಿಮೆಯನ್ನು ಕೊಂಡಾಡಲು ಹಾಗೂ ಶ್ರೀಹರಿಯ ನಾಮವನ್ನು ಭಜಿಸಲು ಯಾವ ಭಾಷೆಯ ಬಂಧನವೂ ಇಲ್ಲ. ಭಾಷೆ ಭಾಷೆಗಳ ದುರಭಿಮಾನವನ್ನು ತಾಳುವ ಜನರಿಗೆ ಪರಮಾತ್ಮ ನಿಜಾನಂದವನ್ನು ಸವಿಯಲು ಸಾಧ್ಯವಾಗುವುದಿಲ್ಲ. ಶ್ರೀಹರಿಯ ಭಕ್ತರಾದವರು ಪರಮಾತ್ಮನ ಬಗ್ಗೆ ಜ್ಞಾನವುಳ್ಳವರು. ಸಂಸ್ಕೃತ ಭಾಷೆ ಮಾತ್ರ ಶ್ರೇಷ್ಠ, ಉಳಿದೆಲ್ಲ ಭಾಷೆಗಳು ಕನಿಷ್ಠವೆಂದು ನಿಂದೆ ಮಾಡುವುದು ಸರಿಯಾದುದಲ್ಲ. ಹಾಗಾಗಿ ಕನ್ನಡ ಭಾಷೆಯನ್ನು ಕನಿಷ್ಠವೆಂದು ನಿಂದೆ ಮಾಡಬೇಡಿರಿ. ಸಂಸ್ಕೃತ ಭಾಷೆಯಲ್ಲಿರುವ ದರ್ಪಣವು ಕನ್ನಡ ಭಾಷೆಯಲ್ಲಿ ಕನ್ನಡಿಯಾಗಿ ನಿಮ್ಮ ಮುಖವನ್ನು ತೋರಿಸಲಿಲ್ಲವೆ ಎಂದು ಪ್ರಶ್ನಿಸುತ್ತಾರೆ. ಕೃಷ್ಣದಾಸರು ಆಕಳು ಕರಿಯಾದರೇನು, ಬಿಳಿಯಾದರೇನು ಆ ಎರಡು ಆಕಳುಗಳು ಬಿಳಿಯ ಹಾಲನ್ನು ಕೊಡುತ್ತವೆ. ಎಂದು ಸಂಸ್ಕೃತ

ಭಾಷೆಯ ಪಂಡಿತರನ್ನು ಪರೋಕ್ಷವಾಗಿ ಟೀಕಿಸುತ್ತಾರೆ. ಶ್ರೀಹರಿಯ ಚರಿತ್ರೆಯ ಸ್ತೋತ್ರವನ್ನು ಯಾವ ಭಾಷೆಯಲ್ಲಿ ನೀಡಿದರೂ ಅದು ಪವಿತ್ರವಾಗಿಯೇ ಇರುತ್ತದೆ. ಹಾಗಾಗಿ ಭಾಷೆಯ ಕುರಿತು ದುರಭಿಮಾನವನ್ನು ತಾಳಿ ಸಮಾಜದ ಶಾಂತಿಯನ್ನು ಕದಡಬೇಡಿ ಎಂದು ಆ ಕಾಲಘಟ್ಟದಲ್ಲಿ ಭಾಷಾಭಿಮಾನ ಮೆರೆದವರು. ಮುಂದುವರಿದು ಕನ್ನಡ ಭಾಷೆಯ ಮೇಲಿರುವ ಪ್ರೀತಿಯನ್ನು ಕೃಷ್ಣದಾಸರು ಹೀಗೆ ಅಭಿವ್ಯಕ್ತಿಸಿದ್ದಾರೆ.

''ಹರುಷದಿ ಗುರು ಮಹಿಪತಿಸುತ ಕನ್ನಡ ಭಾಷೆ ಪದ ರೂಪದೀ |
ನಿರುತ ಪಾಡುವೆ ಕೇಳಿ ಸಾಧು ಜನರು ಗುರುದಯ ಪ್ರತಾಪದಿ''[೧೫]

ಹಲವು ವರ್ಷಗಳ ಹಿಂದೆಯೇ ಕನ್ನಡ ಭಾಷೆಯ ಅಭಿಮಾನವನ್ನು ಎತ್ತಿಹಿಡಿದವರು. ದಾಸಸಾಹಿತ್ಯ ಪರಂಪರೆಯಲ್ಲಿ ಕೃಷ್ಣದಾಸರು ತಮ್ಮ ತಂದೆಯವರ ಬಹುಭಾಷೆಯ ಪಾಂಡಿತ್ಯವನ್ನು ಬಳುವಳಿಯಾಗಿ ಪಡೆದುಕೊಂಡವರು. ಮಹಿಪತಿರಾಯರು ತಮ್ಮ ಸಮಜೋಬಾಯಿ ಎಂಬ ಪದ್ಯವನ್ನು ಐದು ಭಾಷೆಯ ಮಿಶ್ರಣ ಮಾಡಿ ರಚಿಸಿದ್ದಾರೆ. ತಮ್ಮ ಪಾಂಡಿತ್ಯವನ್ನು ಪ್ರದರ್ಶನ ಮಾಡಿರುವುದು ಬಹು ವಿಶೇಷವಾಗಿದೆ. 'ಬಾಟ ಪಕಡೋ ಸೀದಾ' ಇನ್ನೊಂದು ಪದ್ಯವು ಮೂರು ಭಾಷೆಯಲ್ಲಿ ರಚಿತಗೊಂಡಿದೆ. ಈ ಪದ್ಯವನ್ನು ಅನುಲಕ್ಷಿಸಿದಾಗ ಮಹಿಪತಿರಾಯರು ಅನೇಕ ಭಾಷೆಯ ಜ್ಞಾನವನ್ನು ಪಡೆದುಕೊಂಡಿರುವುದು ಎದ್ದುಕಾಣುತ್ತದೆ. ಸಹಜವೆಂಬಂತೆ ಕೃಷ್ಣದಾಸರಿಗೆ ಇವೆಲ್ಲ ಭಾಷೆಯ ಜ್ಞಾನವನ್ನು ಮಹಿಪತಿರಾಯರು ನೀಡಿ ಉದ್ಧರಿಸಿದ್ದಾರೆ. ಹಾಗಾಗಿ ಕೃಷ್ಣದಾಸರು ಸಹ ತಮ್ಮ ತಂದೆಯ ಪರಂಪರೆಯನ್ನು ದಾಸಸಾಹಿತ್ಯ ರಚನೆಯ ಸಂದರ್ಭದಲ್ಲಿ ಸಮರ್ಥವಾಗಿ ಮುಂದುವರಿಸಿಕೊಂಡು ಬಂದಿದ್ದಾರೆ.

ದಾಸಸಾಹಿತ್ಯ ರಚನೆಯ ಹಿನ್ನೆಲೆಯನ್ನು ಗಮನಿಸಿದಾಗ ಈ ತರಹದ ಬಹುಭಾಷೆಯ ಪಾಂಡಿತ್ಯವನ್ನು ಅಷ್ಟಾಗಿ ಇನ್ನುಳಿದ ದಾಸರಲ್ಲಿ ನಾವು ಕಾಣುವುದಿಲ್ಲ. ಹೀಗಾಗಿ ದಾಸಸಾಹಿತ್ಯ ಪರಂಪರೆಯಲ್ಲಿ ಕೃಷ್ಣದಾಸರು ಉಳಿದೆಲ್ಲ ದಾಸರಕ್ಕಿಂತ ಭಿನ್ನವಾಗಿ ನಿಲ್ಲುತ್ತಾರೆ. ಇವರ ಸಾಹಿತ್ಯದ ರಚನೆಯ ಸೊಗಸು ಬೇರೆಯಾಗಿ ನಿಲ್ಲುತ್ತದೆ.

ಕೊನೆಟಿಪ್ಪಣಿಗಳು

೧. ಶ್ರೀಗುರು ಮಹಿಪತಿಸುತ ಶ್ರೀಕೃಷ್ಣರಾಯರಿಂದ ವಿರಚಿತ, ಕನ್ನಡ ಹಾಗೂ ಮರಾಠಿ ಪದಗಳ ಸಂಗ್ರಹ ಪ್ರಕಟನೆ-೩, (ಸಂ) ಶ್ರೀದೇವಪ್ಪಯ್ಯ ಕಾಖಂಡಕಿ, ಶ್ರೀಗುರು ಮಹಿಪತಿ ದಾಸಸಾಹಿತ್ಯ ಪ್ರಚಾರ ಸಮಿತಿ, ಕಾಖಂಡಕಿ, ೮.೯.೧೯೮೮, ಪುಟ ೧೨೦.

೨. ಶ್ರೀಗುರು ಮಹಿಪತಿಸುತ ಶ್ರೀಕೃಷ್ಣರಾಯರಿಂದ ರಚಿತವಾದ, ಕನ್ನಡ, ಮರಾಠಿ ಪದಗಳ ಸಂಗ್ರಹ ಪ್ರಕಟನೆ-೨, (ಸಂ) ಶ್ರೀದೇವಪ್ಪಯ್ಯ ಕಾಖಂಡಕಿ, ಶ್ರೀಗುರು ಮಹಿಪತಿ ದಾಸಸಾಹಿತ್ಯ ಪ್ರಚಾರ ಸಮಿತಿ, ವಿಜಯಪುರ, ೧೯೮೮, ಪುಟ ೬೪.

೩. ಅದೇ, ಪುಟ ೬೫

೪. ಶ್ರೀಗುರು ಮಹಿಪತಿಸುತ ಶ್ರೀಗುರು ಕೃಷ್ಣರಾಯರಿಂದ ವಿರಚಿತ, ಕನ್ನಡ ಹಾಗೂ ಮರಾಠಿ ಪದಗಳ ಸಂಗ್ರಹ ಪ್ರಕಟನೆ-೩, (ಸಂ) ಶ್ರೀದೇವಪ್ಪಯ್ಯ ಕಾಖಂಡಕಿ, ೧೯೮೮ ಪುಟ ೧೧೬-೧೧೭.

೫. ಶ್ರೀಗುರುಭಾಸ್ಕರ ಮಹಿಪತಿ ಜ್ಞಾನ ಗಂಗಾ ವಾಹಿನಿ, ಲೇಖಕರು ಹಾಗೂ ಪ್ರಕಾಶಕರು ರಾಮಯ್ಯ ಗುರಪ್ಪಯ್ಯ ಹರಿದಾಸ ಕಾಖಂಡಕಿ, ೨೦೦೯, ಪುಟ ೧೮೩-೧೮೪.

೬. ಶ್ರೀಗುರು ಮಹಿಪತಿಸುತ ಶ್ರೀಕೃಷ್ಣರಾಯರಿಂದ ರಚಿತವಾದ, ಕನ್ನಡ, ಮರಾಠಿ ಪದಗಳ ಸಂಗ್ರಹ ಪ್ರಕಟನೆ–೨, (ಸಂ) ಶ್ರೀದೇವಪ್ಪಯ್ಯ ಕಾಖಂಡಕಿ, ಶ್ರೀಗುರು ಮಹಿಪತಿ ದಾಸಸಾಹಿತ್ಯ ಪ್ರಚಾರ ಸಮಿತಿ ವಿಜಯಪೂರ, ೧೯೮೮, ಪುಟ ೬೬.

೭. ಶ್ರೀಗುರು ಮಹಿಪತಿಸುತ ಶ್ರೀ ಕೃಷ್ಣರಾಯರಿಂದ ವಿರಚಿತ, ಕನ್ನಡ ಮರಾಠಿ ದೇವತಾಸ್ತೋತ್ರ ಪದಗಳ ಸಂಗ್ರಹ ಪ್ರಕಟನೆ-೯, (ಸಂ) ದೇವಪ್ಪಯ್ಯ ಕಾಖಂಡಕಿ, ಶ್ರೀಗುರು ಮಹಿಪತಿ ದಾಸಸಾಹಿತ್ಯ ಪ್ರಚಾರ ಸಮಿತಿ ಕಾಖಂಡಕಿ, ೧೯೯೨, ಪುಟ ೮೨.

೮. ಅದೇ, ಪುಟ ೮೪.

೯. ಶ್ರೀಗುರು ಮಹಿಪತಿಸುತ ಶ್ರೀಕೃಷ್ಣರಾಯ(ದಾಸ) ಕಾಖಂಡಕಿ ಇವರಿಂದ ರಚಿತವಾದ, ಅಹಂಕಾರ ಖಂಡನೆ ಹಾಗೂ ಮನಸ್ಸಿಗೆ ಉಪದೇಶಪರ ಪದಗಳು ಪ್ರಕಟನೆ-೫ (ಸಂ) ದೇವಪ್ಪಯ್ಯ ಕಾಖಂಡಕಿ, ಶ್ರೀಗುರು ಮಹಿಪತಿ ದಾಸಸಾಹಿತ್ಯ ಪ್ರಚಾರ ಸಮಿತಿ, ಕಾಖಂಡಕಿ, ೧೯೮೯, ಪುಟ ೮೭.

೧೦. ಅದೇ, ಪುಟ ೮೬

೧೧. ಅದೇ, ಪುಟ ೮೬.

೧೨. ಶ್ರೀಗುರು ಮಹಿಪತಿಸುತ ಶ್ರೀಗುರು ಕೃಷ್ಣರಾಯರಿಂದ ವಿರಚಿತ, ಕನ್ನಡ ಹಾಗೂ ಮರಾಠಿ ಪದಗಳ ಸಂಗ್ರಹ ಪ್ರಕಟನೆ-೩, (ಸಂ) ದೇವಪ್ಪಯ್ಯ ಕಾಖಂಡಕಿ, ಶ್ರೀಗುರುಮಹಿಪತಿ ದಾಸಸಾಹಿತ್ಯ ಪ್ರಚಾರ ಸಮಿತಿ, ಕಾಖಂಡಕಿ, ೧೯೮೮, ಪುಟ ೧೨೩.

೧೩. ಶ್ರೀರಾಮಯ್ಯ ಗುರುಪ್ಪಯ್ಯ ಹರಿದಾಸ ಕಾಖಂಡಕಿ, ಇವರ ಬಳಿ ಇವರ ಅಪ್ರಕಟಿತ ಕೈಬರಹ ಹಸ್ತಪ್ರತಿಯಿಂದ ತೆಗೆದುಕೊಳ್ಳಲಾಗಿದೆ.

೧೪. ಸಮಗ್ರ ದಾಸಸಾಹಿತ್ಯ ಸಂಪುಟ-೧೧ ಭಾಗ-೧, (ಸಂ) ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಕರ್ನಾಟಕ ಸರಕಾರ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪುಟ ೩.

೧೫. ಶ್ರೀಗುರು ಮಹಿಪತಿಸುತ ಶ್ರೀಕೃಷ್ಣರಾಯ (ದಾಸ) ಕಾಖಂಡಕಿ, ಇದರಿಂದ ರಚಿತವಾದ ಶ್ರೀಕೃಷ್ಣ ಚರಿತಾಮೃತ ಕಥಾ ಅರ್ಥಾತ್ ಶ್ರೀಮದ್ಭಾಗವತ ದಶಮಸ್ಕಂಧ ಪ್ರಕಟನೆ-೪, (ಸಂ) ದೇವಪ್ಪಯ್ಯ ಕಾಖಂಡಕಿ, ಶ್ರೀಗುರು ಮಹಿಪತಿದಾಸ ಪ್ರಚಾರ ಸಮಿತಿ, ಕಾಖಂಡಕಿ, ೧೯೮೮, ಪುಟ ೨.

ಅಧ್ಯಾಯ ಏಳು

ಕೃಷ್ಣದಾಸರು ಮತ್ತು ಮಹಿಪತಿರಾಯರ ಕೀರ್ತನೆಗಳು: ತೌಲನಿಕ ಅಧ್ಯಯನ

ಅಧ್ಯಾಯ ಏಳು

ಕೃಷ್ಣದಾಸರು ಮತ್ತು ಮಹಿಪತಿರಾಯರ ಕೀರ್ತನೆಗಳು: ತೌಲನಿಕ ಅಧ್ಯಯನ

ದಾಸಸಾಹಿತ್ಯ ಪರಂಪರೆಯಲ್ಲಿ ಒಂದೇ ಮನೆತನಕ್ಕೆ ಸೇರಿದ ದಾಸರು ಕಂಡುಬರುವುದು ತುಂಬಾ ಅಪರೂಪ. ಇಂತಹ ಅಪರೂಪದಲ್ಲಿ ಅಪರೂಪವೆನಿಸಿದ ಕೃಷ್ಣದಾಸರು ಮತ್ತು ಅವರ ತಂದೆ ಹಾಗೂ ಗುರುವಾದ ಮಹಿಪತಿರಾಯರ ಕೀರ್ತನೆಗಳ ಅಂತರ್‌ಸ್ವರೂಪ ಮತ್ತು ಸಂಬಂಧವನ್ನು ಗುರುತಿಸುವುದು ಈ ಅಧ್ಯಾಯದಲ್ಲಿ ಮುಖ್ಯವಾಗಿದೆ. ಗುರು ಮತ್ತು ಶಿಷ್ಯನ ಕೀರ್ತನೆಗಳ ವಿಭಿನ್ನತೆಯನ್ನು ತಂದೆ ಮತ್ತು ಮಗನ ಧಾರ್ಮಿಕ ನಿಲುವನ್ನು ಖಚಿತಪಡಿಸುವುದಾಗಿದೆ. ಅವರ ಸಂಪದ್ಭರಿತ ಸಾಹಿತ್ಯವನ್ನು ತೌಲನಿಕವಾಗಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ. ಮಹಿಪತಿರಾಯರು ಮತ್ತು ಅವರ ಕೀರ್ತನೆಗಳ ಸಂಖ್ಯೆ ಉಳಿದೆಲ್ಲ ದಾಸರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತವೆ. ಇವರ ಸಾಹಿತ್ಯ ರಚನೆಯು ವೈವಿಧ್ಯಮಯವಾಗಿ ಬೆಳೆದು ಬಂದಿದೆ. ಇವರ ಜೊತೆಗೆ ಎಲ್ಲ ಬಗೆಯ ಸಾಮಾಜಿಕ ಅಂತಸ್ತಿನ ಜನರು ಇದ್ದಿರಬೇಕು. ಹಾಗಾಗಿ ಅವರವರ ಅಭಿರುಚಿಗೆ ತಕ್ಕ ಹಾಗೆ ವಿವಿಧ ಸಾಂಸ್ಕೃತಿಕ, ಸಾಮಾಜಿಕ ಮಟ್ಟಗಳಿಗೆ ಸರಿ ಹೊಂದುವಂತೆ ವಿಭಿನ್ನ ಬಗೆಯ ಸಾಹಿತ್ಯ ರಚನೆಯನ್ನು ಮಾಡಿದ್ದಾರೆ.

ನಿರೂಪಿಸುವ ವಿಷಯ ಒಂದೇ ಆಗಿದ್ದರೂ ಸಹ ಅದನ್ನು ಅಭಿವ್ಯಕ್ತಪಡಿಸುವ ರೀತಿ, ರಚಿಸುವ ಶೈಲಿ ಈ ಇಬ್ಬರು ದಾಸರಲ್ಲಿ ಭಿನ್ನತೆಯನ್ನು ಕಾಣುತ್ತೇವೆ. ಭಾಷಿಕ ದೃಷ್ಟಿಕೋನವನ್ನು ಇಟ್ಟು ನೋಡಲಾಗಿ ಇಬ್ಬರು ಬಹುಭಾಷಾ ಬಲ್ಲವರು. ಬೇರೆ ಬೇರೆ ಭಾಷೆಗಳಲ್ಲಿ ಹರಿದಾಸರ ಸಾಹಿತ್ಯವನ್ನು ರಚಿಸಿದ್ದಾರೆ. ಇವರ ಕೀರ್ತನೆಗಳ ಅಂತರ್‌ಸ್ವರೂಪದ ವಿಭಿನ್ನ ನೆಲೆಗಳನ್ನು ತೌಲನಿಕವಾಗಿ ಗುರುತಿಸುವ ನಿಟ್ಟಿನಲ್ಲಿ ಕೀರ್ತನೆಗಳ ಅಧ್ಯಯನವನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಪ್ರಮುಖವಾಗಿ ಇವರ ಸಾಹಿತ್ಯ ರಚನೆಯಲ್ಲಿ ಗುರುನಿಷ್ಠೆ, ದೇವತಾಸ್ತುತಿ, ದ್ವೈತ ದರ್ಶನ, ನಂಬಿದ ದೈವ, ಸಾಹಿತ್ಯಕ ಮನೋಬೋಧೆ, ಸತ್ಸಂಗ, ಸಾಮಾಜಿಕ ಕಳಕಳಿ ಮುಂತಾದವುಗಳನ್ನು ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ.

೧. ಗುರುನಿಷ್ಠೆ

ಕೃಷ್ಣದಾಸರು ಮತ್ತು ಮಹಿಪತಿರಾಯರು ವೈಷ್ಣವ ಸಂಪ್ರದಾಯ ಸದ್‌ಬ್ರಾಹ್ಮಣರ ಮನೆತನದಲ್ಲಿ ಹುಟ್ಟಿ ಬೆಳೆದವರು. ಮಹಿಪತಿರಾಯರು ತಮ್ಮ ತಂದೆ ಕೋನೇರಿರಾಯರ ಅನುಗ್ರಹದಿಂದ ಸಂಸ್ಕೃತ ಅಭ್ಯಾಸವನ್ನು ಮಾಡಿ ಮೂಲಭಾರತದ ಮಹಾಕಾವ್ಯಗಳಾದ, ಮಹಾಭಾರತ, ರಾಮಾಯಣ, ಭಾಗವತ, ಭಗವದ್ಗೀತೆ, ಇವುಗಳ ಜೊತೆ ವೇದಾಧ್ಯಯನವನ್ನು ಶಾಸ್ತ್ರಬದ್ಧವಾಗಿ ಅಭ್ಯಾಸಿಸಿದವರು. ಇವೆಲ್ಲ ಧಾರ್ಮಿಕ ಗ್ರಂಥಗಳ ವ್ಯಾಪಕ ಓದು ಅವರ ಆಧ್ಯಾತ್ಮಿಕ ಚಿಂತನೆಗೆ ಸಹಾಯಕವಾದವುಗಳು. ಈ ಎಲ್ಲ ದಾರ್ಶನಿಕ ಗ್ರಂಥಗಳ ಜ್ಞಾನದ ಬಲದಿಂದ ದ್ವೈತ ಸಿದ್ಧಾಂತದ ಅನುಯಾಯಿಗಳಾದರು. ಜೊತೆಗೆ ಬೆತ್ತಲೆ ಫಕೀರನ ಘಟನಾವಳಿಯ ನಂತರ ಸಾರವಾಡದ ಭಾಸ್ಕರಸ್ವಾಮಿಗಳನ್ನು ಗುರುವಾಗಿ ಸ್ವೀಕರಿಸಿ ಮತ್ತು ತಮ್ಮ ಗುರುನಿಷ್ಠೆಯನ್ನು ಮೆರೆದವರು. ಆ ಗುರುವಿನ ಕುರಿತು ಮಹಿಪತಿರಾಯರು ಈ ರೀತಿಯಾಗಿ ಬಣ್ಣಿಸಿದ್ದಾರೆ.

"ಭಾಸ್ಕರ ಗುರುವರ ಮಗುಟ ವಿಶ್ವದೊಳೊಬ್ಬರು ಪ್ರಗಟ ।
ಭಾಸ್ಕರ ಗುರುದಯನೋಟ ರಸಕಾಯ ಸವಿದುಂಬೂಟ ॥

ಭಾಸ್ಕರ ಗುರು ನಿಜದಯ ಲೇಸುದೋರುವ ವಿಜಯ ।
ಭಾಸ್ಕರ ಗುರು ಅಭಯ ಹಸನಾದ ಪ್ರಣ್ಯೋದಯ ॥

ಭಾಸ್ಕರ ಕರುಣಾಕಟಾಕ್ಷ ಭಾಸುದು ಘನ ಪ್ರತ್ಯಕ್ಷ ।
ಭಾಸ್ಕರ ಗುರು ನಿಜಭಿಕ್ಷ ಹಸನಾಗಿ ಮಾಡುವ ಸಂರಕ್ಷ ॥

ಭಾಸ್ಕರ ಗುರು ನಿಜಬೋಧ ಭಾಸುವ ಘನಸರ್ವದಾ ।
ಭಾಸ್ಕರ ಗುರು ಪ್ರಸಾದ ಸ್ವಸುಖದೋರುವ ಸಂವಿಸ್ತಾದ ॥

ಭಾಸ್ಕರ ಗುರು ಉಪದೇಶ ಭಾಸುವ ಬಲ ಸಂತೋಷ ।
ಭಾಸ್ಕರ ಗುರುವರೇಶ ಈಶನಹುದೊ ಸರ್ವೇಶ ॥

ಭಾಸ್ಕರ ಗುರುಕೃಪೆ ಜ್ಞಾನ ಲೇಸಾಗಿ ತೋರುವದುನ್ಮನ ।
ಭಾಸ್ಕರ ಗುರುದಯ ಕರುಣ ದಾಸ ಮಹಿಪತಿಗಾಭರಣ"[೧]

ಎಂದು ಮಹಿಪತಿರಾಯರು ತನ್ನ ಗುರು ಭಾಸ್ಕರಸ್ವಾಮಿಯ ವ್ಯಕ್ತಿತ್ವ ದರ್ಶವನ್ನು ಗುರುವಿನ ಮಹಿಮೆಯನ್ನು ಕೊಂಡಾಡಿದ್ದಾರೆ. ಭಾಸ್ಕರಸ್ವಾಮಿಯ ದರ್ಶನವೇ ತಮಗೆ ದಿವ್ಯಾಮೃತ. ಆ ಗುರುವಿನಿಂದಲೇ ಈ ಲೋಕದಲ್ಲಿ ಪುಣ್ಯೋದಯವಾಗುತ್ತದೆ. ಆ ಸ್ವಾಮಿಯ ಉಪದೇಶ ಸರ್ವರಿಗೂ ಹಿತವಾಗುತ್ತದೆ. ಇಂತಹ ಗುರುವಿನ ಕೃಪೆಯಿಂದ ಜ್ಞಾನ ಸಮೃದ್ಧಗೊಂಡು

ಮನಸ್ಸು ಪ್ರಸನ್ನವಾಗುತ್ತದೆ ಇತ್ಯಾದಿಯಾಗಿ ತನ್ನ ಗುರುವಿನ ಕೃಪೆಯನ್ನು ಮಹಿಪತಿರಾಯರು ಹಾಡಿ ಹೊಗಳಿದ್ದಾರೆ. ಹಾಗೆಯೇ ಕೃಷ್ಣದಾಸರು ತಮ್ಮ ಬಹಳಷ್ಟು ಕೀರ್ತನೆಯಲ್ಲಿ ಗುರುನಿಷ್ಠೆಗೆ ಮತ್ತು ಗುರುವಿನ ಭಕ್ತಿಗೆ ಹೆಚ್ಚಿನ ಪ್ರಾಧ್ಯಾನತೆ ನೀಡಿದ್ದಾರೆ. ಮಹಿಪತಿರಾಯರು ತಮ್ಮ ಗುರು ಭಾಸ್ಕರಸ್ವಾಮಿಯನ್ನು ಕುರಿತು ೪೦ ಕೀರ್ತನೆಯನ್ನು ರಚಿಸಿದ್ದಾರೆ. ಆದರೆ ಕೃಷ್ಣದಾಸರು ತಮ್ಮ ಗುರು ಮಹಿಪತಿರಾಯರ ಕುರಿತು ೧೫೦ಕ್ಕೂ ಹೆಚ್ಚಿನ ಕೀರ್ತನೆಗಳನ್ನು ರಚಿಸಿದ್ದಾರೆ. ಮಹಿಪತಿರಾಯರಂತೆ ಕೃಷ್ಣದಾಸರು ತಮ್ಮ ಗುರುವಿನ ಮೇಲಿರುವ ಕರುಣೆ, ದೈವಿಶಕ್ತಿ, ಪ್ರೀತಿ, ವಾತ್ಸಲ್ಯ ನೆನೆದು ತಮ್ಮ ಕೀರ್ತನೆಯ ಮೂಲಕ ಸುಂದರವಾಗಿ ಚಿತ್ರಿಸಿದ್ದಾರೆ.

"ಏನೆಂದು ಬಣ್ಣಿಸಲಿ ಗುರುರಾಯನಾ ।
ತಾ ನೆನೆದವರ ಧನ್ಯಗೈಸುವನಾ ಮಹಿಮೆ

ಧರಿಯೊಳಜ್ಞಾನ ತಮಹರಣ ಭಾಸ್ಕರ ನೆನಿಪ ।
ವರ ಮುನಿಯ ಕರ ಕಮಲದಲಿ ಜನಸೀ ।
ವರಮೂಲ ಮಂತ್ರವನೆ ಗುರು ಮಹಿಪತಿಯಂಬಾ ।
ನಿರುತ ಖ್ಯಾತಿಯ ನಾಮ ಧರಿಸಿ ಬಂದನ ಮಹಿಮೆ"[೨]

ಎನ್ನುವಲ್ಲಿ ಕೃಷ್ಣದಾಸರು ತನ್ನ ಗುರು ಮಹಿಪತಿರಾಯರನ್ನು ಕೊಂಡಾಡುತ್ತಾರೆ. ಗುರುಭಾಸ್ಕರ ಸ್ವಾಮಿಯ ದಯದಿಂದ ಜ್ಞಾನದ ಕಾಮಧೇನು ಪಡೆದವರು ಮಹಿಪತಿರಾಯರು. ಆ ಗುರುವಿನಿಂದಲೇ ಸಿದ್ಧಿಪುರುಷರಾದವರು. ಭಾಸ್ಕರಸ್ವಾಮಿಯ ಕೃಪೆಯಿಂದ ಮಹಿಪತಿರಾಯರು ತಮ್ಮ ಜೀವನ ಶೈಲಿಯನು ಬದಲಿಸಿಕೊಂಡ ಬಗೆ ವಿಪರ್ಯಾಸವಾದದ್ದು. ಅವರ ಹಸ್ತ ಮಹಿಪತಿರಾಯರ ಶಿರದ ಮೇಲಿಟ್ಟಾಗ ಮಹಿಪತಿರಾಯರಿಗೆ ಆದ ಅನುಭವವನ್ನು ಅನೇಕ ಕೀರ್ತನೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಇಲ್ಲಿ ಗುರು ಮಹಿಪತಿರಾಯರು ತನ್ನ ಮಗ ಮತ್ತು ಶಿಷ್ಯನಾದ ಕೃಷ್ಣದಾಸರಿಗೂ ಶಿರದ ಮೇಲೆ ಕೈಯಿಟ್ಟು ದೀಕ್ಷೆಯನ್ನು ನೀಡುವ ಸಂದರ್ಭ ಒಂದೇ ಆಗಿದೆ. ತನಗೂ ಭಾಸ್ಕರಸ್ವಾಮಿ ತಮಗೆ ನೀಡಿದ ಗುರುಬೋಧೆಯ ಸಂದರ್ಭಗಳನ್ನು ಇಬ್ಬರು ಹರಿದಾಸರು ನೆನಪಿಸಿಕೊಳ್ಳುತ್ತಾರೆ. ಅದನ್ನು ತಮ್ಮ ಕೀರ್ತನೆಯ ರಚನೆಯಲ್ಲಿ ತೋರ್ಪಡಿಸುತ್ತಾರೆ. ಹಾಗಾಗಿ ಗುರುಭಾಸ್ಕರ ಸ್ವಾಮಿಯಿಂದಾದ ಪರಮಾನಂದ ಬೋಧೆಯನು ಮಹಿಪತಿರಾಯರು ಈ ರೀತಿಯಲ್ಲಿ ಕೊಂಡಾಡಿದ್ದಾರೆ.

"ಹಸ್ತವಿಡಲು ಎನ್ನಮಸ್ತಕ ಮೇಲೆ ।
ಸ್ವಸ್ಥ ಹೊಂದಿತು ಮನ ನಿಶ್ಚಯಲಿ

ವಿಸ್ತಾರ ದೋರುವ ವಸ್ತು ಇದೆ ಎಂದು ।
ವಿಸ್ತರಿಸೆನಗಿನ್ನು ದೋರಿತು ಮಾ ॥

ಸೋಕಲು ಗುರು ಶ್ರೀಪಾದವೆನಗಿನ್ನು ।
ಬೇಕಾದ ಸವಿಸುಖ ಗೊಟ್ಟಿತು ಮಾ ॥

ಸಕಲೋತ್ತಮನಾದ ಏಕಾಕ್ಷರ ಬ್ರಹ್ಮ ।
ಏಕೋಮಯವಾಗಿ ದೋರಿತು ಮಾ"[೩]

ಮಹಿಪತಿರಾಯರಿಗೆ ಭಾಸ್ಕರಸ್ವಾಮಿಯು ತಮ್ಮ ಹಸ್ತವನ್ನು ಮಸ್ತಕದ ಮೇಲೆ ಇಟ್ಟಾಗ ಮನಸ್ಸಿನ ಸಮತೋಲನವನ್ನು ಕಳೆದುಕೊಳ್ಳುತ್ತಾರೆ. ನಿಜ ಪರಮಾತ್ಮನ ದರ್ಶನವೇ ಅವರಿಗೆ ಆಗುತ್ತದೆ. ಅವರ ಪಾದ ಕಮಲಗಳು ಸ್ಪರ್ಶಿಸಿದಾಗ ಬಹ್ಮಾನಂದದ ಸವಿಸುಖವನ್ನು ಅನುಭವಿಸುತ್ತಾರೆ. ಇಂತಹ ಗುರುವಿನಿಂದಲೇ ನಾನು ಶ್ರೀಹರಿಯನ್ನು ಕಂಡಿದ್ದೇನೆ. ಗುರು ನೀಡಿದ ಸುಜ್ಞಾನದಿಂದ ಸಂಸಾರದ ನಿಸ್ಸಾರತೆಯನ್ನು ತೊರೆದನು. ಈ ಜೀವ ಶ್ರೀಹರಿಯ ಚರಣದಲ್ಲಿ ಬೇಡಿಕೊಂಡ ಸಮರಸದಲ್ಲಾದ ಅನುಭವ ಎನಗಾಯಿತೆಂದು ಹೇಳಿಕೊಂಡಿದ್ದಾರೆ. ಮಹಿಪತಿರಾಯರು ಗುರುವಿನ ಹಸ್ತದ ಮಹತ್ವವನ್ನು ತಮ್ಮ ದಿವ್ಯಾನುಭವದ ಮುಖೇನ ಭಾವಪೂರ್ಣವಾಗಿ ಪ್ರಕಟಿಸಿದ್ದಾರೆ.

ಅದೇ ರೀತಿಯಲ್ಲಿ ಕೃಷ್ಣದಾಸರು ತನ್ನ ಗುರು ಮಹಿಪತಿರಾಯರನ್ನು ಕುರಿತು ಆತನ ದೈವಿ ಸ್ವರೂಪವನ್ನು ಕುರಿತು, ಬಹು ವಿಧದಲ್ಲಿ ಹೇಳಿಕೊಂಡಿದ್ದಾರೆ. ಕೃಷ್ಣದಾಸರು ತನ್ನ ಗುರುವಿನ ಹಸ್ತ ಶಿರದ ಮೇಲೆ ಇಟ್ಟಾಗ ತಮ್ಮ ಮನಸ್ಸಿನಲ್ಲಾದ ಅನುಭವವನ್ನು ಈ ರೀತಿಯಲ್ಲಿ ತೋರ್ಪಡಿಸಿದ್ದಾರೆ.

"ಹುಚ್ಚಾದೇನಣ್ಣಾ । ಮುಚ್ಚುಗೊಂಡು ನಾನು

ಕರವಿಟ್ಟ ಸಿರಸದಲ್ಲಿ । ಅರುಹಿದ ಕಿವಿಯಲ್ಲಿ
ಮರಳು ಬೀಜಾಕ್ಷರನು

ಮನದ ಮತಿಯಾ ಕೆಟ್ಟು ಜನದ ಲಜ್ಜೆಯಾ ಬಿಟ್ಟು ।
ಕುಣಿದು ಕೂಗವೆ ಹರಿನಾಮವನು"[೪]

ಎಂದು ಪದ್ಯದಲ್ಲಿ ಕೃಷ್ಣದಾಸರು ತನ್ನ ಗುರು ನೀಡಿದ ದೀಕ್ಷೆಯ ಪರಿಯನ್ನು ಹೇಳುತ್ತಾರೆ. ಶಿರದ ಮೇಲೆ ಹಸ್ತವನ್ನಿಟ್ಟ ಬಗೆಯನ್ನು ಮನದುಂಬಿ ಕೊಂಡಾಡಿದ್ದಾರೆ. ಕಿವಿಯಲ್ಲಿ ಅರುಹಿದ ಬೀಜಾಕ್ಷರ ಮಂತ್ರವನ್ನು ತುಂಬಾ ಮಾರ್ಮಿಕವಾಗಿ ಹೇಳಿಕೊಂಡಿದ್ದಾರೆ. ಮನದ ಮತಿಯನ್ನು ಕೆಟ್ಟು ಜನರ ಲಜ್ಜೆಯನು ಬಿಟ್ಟು ಕುಣಿದು ಕೂಗುವೆ ಕೂಗುತ್ತ ಕರೆಯುವೆ ನಿಜಗುರು ಹರಿನಾಮವನ್ನು ಎಂದು ಹಾಡಿಕೊಂಡಾಡಿದ್ದಾರೆ. ಹೀಗೆ ಕೃಷ್ಣದಾಸರು ಮತ್ತು ಮಹಿಪತಿರಾಯರ ಕೀರ್ತನೆಯಲ್ಲಿ ತಮ್ಮ ಗುರುಪರಂಪರೆಯನ್ನು, ಗುರುನಿಷ್ಠೆಯನ್ನು, ಗುರುಭಕ್ತಿಯನ್ನು ವಿಶಿಷ್ಟವಾಗಿ

ಚಿತ್ರಿಸಿದ್ದಾರೆ. ಇರ್ವರ ಕೀರ್ತನೆಗಳಲ್ಲೂ ಭಕ್ತಿ ಎನ್ನುವುದು ಒಂದೇ ತೆರನಾಗಿ ಹರಿದು ಬಂದಿದೆ. ತಮ್ಮ ಗುರುವಿನ ಮಹತ್ವವನ್ನು ಹೇಳುವಾಗ ತಮಗಾದ ಅನುಭವ ಇವರಲ್ಲಿಯೂ ಒಂದೇ ತೆರನಾಗಿ ಕಂಡುಬಂದಿದೆ. ಗುರು ನಿಷ್ಠೆ ಮತ್ತು ಗುರುಭಕ್ತಿ ಈ ಇಬ್ಬರು ಕೀರ್ತನೆಕಾರರಲ್ಲಿ ಒಂದೇ ಬಗೆಯಾಗಿ ಅಭಿವ್ಯಕ್ತಗೊಂಡಿರುವುದು ವಿಶೇಷವಾಗಿದೆ.

೨. ದೇವತಾಸ್ತುತಿ

ಹರಿದಾಸರು ಸಾಮಾನ್ಯವಾಗಿ ನವವಿಧ ಭಕ್ತಿಯ ಮೂಲಕ ಶ್ರೀಹರಿಯನ್ನು ಸ್ಮರಣೆ ಮಾಡುತ್ತಾರೆ. ಆತನ ಅನುಗ್ರಹಕ್ಕಾಗಿ ಅನೇಕ ಭಕ್ತಿಯ ಮಾರ್ಗವನ್ನು ಹುಡುಕಿಕೊಳ್ಳುತ್ತಾರೆ. ಸಹಜವಾಗಿ ಹರಿದಾಸರ ಪರಂಪರೆಯಲ್ಲಿ ಎಲ್ಲ ಹರಿದಾಸರು ತಮ್ಮದೆಯಾದ ದೇವತೆಗಳ ಸ್ತುತಿ ಮಾಡುವುದು ಪರಂಪರೆಯ ಮುಖೇನವಾಗಿ ಬೆಳೆದುಬಂದಿದೆ. ಆ ಪರಂಪರೆಯು ಮಹಿಪತಿರಾಯರಿಗೂ ಕೃಷ್ಣದಾಸರಿಗೂ ಹೊರತಲ್ಲ. ಇಬ್ಬರೂ ತಾವು ಮೆಚ್ಚಿಕೊಂಡ ದೈವದ ವಿವಿಧ ಮಹಿಮೆಯನ್ನು ಸಹೃದಯರಿಗೆ ಕಟ್ಟಿಕೊಟ್ಟಿದ್ದಾರೆ. ಅವುಗಳನ್ನು ಈ ರೀತಿಯಲ್ಲಿ ಸಂಗ್ರಹಿಸಲಾಗಿದೆ.

ಹರಿಸರ್ವೋತ್ತಮ ತತ್ವವನ್ನು ಪ್ರತಿಪಾದಿಸುವ ನಿಟ್ಟಿನಲ್ಲಿ ಶ್ರೀಹರಿಯ ಅನನ್ಯ ವ್ಯಕ್ತಿತ್ವದ ಅನಾವರಣವನ್ನು ಇಬ್ಬರು ಹರಿದಾಸರು ಮಾಡಿದ್ದಾರೆ. ಭಕ್ತ ಮತ್ತು ಭಗವಂತನ ಸಾಮೀಪ್ಯವನ್ನು ಮತ್ತು ವಾತ್ಸಲ್ಯಭಾವ ಇಲ್ಲಿಯ ಕೀರ್ತನೆಯಲ್ಲಿ ಎದ್ದು ಕಾಣುತ್ತದೆ. ಇವರು ಮಧ್ವಪರಂಪರೆಗೆ ಸೇರಿದ ದಾಸರಾದರೂ ಸಹ ಅನೇಕ ಕೀರ್ತನೆಗಳಲ್ಲಿ ತುಳಿಸಿ, ಭಾಗೀರಥಿ, ಗಣಪತಿ, ಶಿವ-ಪಾರ್ವತಿ, ಹನುಮಂತ, ಸರಸ್ವತಿ, ಲಕ್ಷ್ಮಿ ವೆಂಕಟೇಶ, ಮುಂತಾದ ದೇವಾನುದೇವತೆಗಳನ್ನು ಅವರ ಕಾರ್ಯಕ್ಷೇತ್ರವನ್ನು ಸಹೃದಯರಿಗೆ ತೋರಿಸುವ ಪ್ರಯತ್ನವನ್ನು ಮಾಡಿದ್ದಾರೆ. ಮಹಿಪತಿರಾಯರು ವಿಷ್ಣುಮಂತ್ರವನ್ನು ಜಪಿಸುವ ಶ್ರೀಹರಿಯ ಸಾಕ್ಷಾತ್ಕಾರದಿಂದ ಅಪರೋಕ್ಷ ಜ್ಞಾನಿಗಳಾಗಿದ್ದಾರೆ. ಶ್ರೀಹರಿಯನ್ನು ಗುರುವೆಂದು ಸಂಬೋಧಿಸುತ್ತಾ ಅನೇಕ ಕೀರ್ತನೆಯನ್ನು ರಚಿಸಿದ್ದಾರೆ. ಶ್ರೀಹರಿಯ ನಾಮದ ಬಲದಿಂದ ಸಿಗುವ ಸಂತೃಪ್ತಿಯನು ಈ ರೀತಿಯಾಗಿ ಅಭಿವ್ಯಕ್ತಿಸಿದ್ದಾರೆ.

"ಎಲ್ಲಿ ಶ್ರೀ ಹರಿನಾಮದ ಘೋಷ
ಅಲ್ಲಿ ಸಕಲ ಸುಖ ಸಂತೋಷ
ಸುಲಭದಲ್ಯಾಹುದು ಭವ ಭಯದ ನಾಶ

ಕರೆಸುವದಾನಂದ ಹರುಷ
ಹರಿಸುವದು ಕರಿಮಲಕಲುಷ
ಪರಿಶೋಷಿಸುವದು ಮಹಾಪಾತಕ ದೋಷ

ಸ್ವಹಿತ ಸಾಧನದ ಸು ಉಪದೇಶ
ಬಾಹ್ಯಂತ್ರ ದೋರುವ ಪ್ರಕಾಶ
ಮಹಿಪತಿಗಿದೆ ನಿತ್ಯಾನುಭವದುಲ್ಲಾಸ"[೫]

ಶ್ರೀಹರಿಯ ನಾಮದ ಬಲದಿಂದ ಸುಖ ಸಂತೋಷವುಂಟಾಗುತ್ತದೆ. ಶ್ರೀಹರಿಯಿಂದ ಮಹಾಪಾತಕಗಳು ದೋಷ ಮುಕ್ತಿಯಾಗಿ ಕಲುಷಿತಗೊಂಡ ಜೀವನ ಹರುಷದಿಂದ ಸಾಗುತ್ತದೆ. ಸ್ವಹಿತ ಸಾಧನವು ಹರಿಯ ಉಪದೇಶಾಮೃತದಿಂದ ಮುಂದುವರಿಯುತ್ತದೆ. ಆತ್ಮಶುದ್ಧಿ ಮಾಡಿಕೊಂಡು ಅನುದಿನ ಶ್ರೀಹರಿಯನ್ನು ಭಜಿಸುತ್ತ ನಿತ್ಯಾನಂದವನ್ನು ಪಡೆಯುತ್ತಿರುವೆ. ಮಹಿಪತಿರಾಯರು ಶ್ರೀಹರಿಯ ನಾಮದ ಫಲದಿಂದಾಗುವ ಉಪಯುಕ್ತತೆಯನ್ನು ಇಲ್ಲಿ ಕೊಂಡಾಡಿದ್ದಾರೆ.

ಮುಂದುವರಿದು ಎಲ್ಲಿದ್ದೆಯೋ ಹರಿ ಹೇಳಯ್ಯ ಎಂಬ ಕೀರ್ತನೆಯ ಪದ್ಯದಲ್ಲಿ ಮಹಿಪತಿರಾಯರು ಹರಿಯನ್ನು ಹುಡುಕುತ್ತ ಹೋಗುವ ಪರಿ ಉದಾತ್ತವಾಗಿ ಮೂಡಿಬಂದಿದೆ. ಶ್ರೀಹರಿಯ ಕರುಣೆ, ಅಗಾಧವಾದ ಶಕ್ತಿ ದರ್ಶನವಾದ ನಂತರ ಮಹಿಪತಿರಾಯರು ಈ ರೀತಿಯಲ್ಲಿ ಹೇಳುತ್ತಾರೆ.

"ಭಾವ ಭಕ್ತಿಗೊಲಿವ ತಾಂ ಶ್ರೀಹರಿ
ಕಾವ ಕರುಣದಲಿ ಪರೋಪರಿ

ಕಂದ ಪ್ರಹ್ಲಾದನ ಸದ್ಭಾವಕಾಗಿ
ಸಂಧಿಸೊದಗಿ ಬಂದ ನರಸಿಂಹನಾಗಿ
ತಂದೆ ತಾಯಿ ಬಂಧು ಸಮಸ್ತವಾಗಿ
ಬಂದು ರಕ್ಷಿಸದ ಪ್ರತ್ಯಕ್ಷವಾಗಿ

ಭಾವದಿಂದ ದ್ರೌಪದಿಗಾಗ್ಯಧ್ಯಕ್ಷ
ತಾವ ತಾವಿಲಿ ಕಾಯಿದ ಪ್ರತ್ಯಕ್ಷ
ಭುವನದೊಳಾಗಿ ಪಾಂಡವ ಪಕ್ಷ
ಜೀವ ಪ್ರಾಣಾಗಿ ಮಾಡಿದ ಸಂರಕ್ಷ"[೬]

ಶ್ರೀಹರಿಯನ್ನು ಭಕ್ತಿಭಾವದಿಂದ ನೆನೆದರೆ ಬೇಡಿದವರಿಗೆ ಬೇಡಿದ್ದನ್ನು ನೀಡುವ ಕರುಣಾಮಯಿಯಾಗಿದ್ದಾನೆ. ಅಂತಹ ಶ್ರೀಹರಿಯ ಮಹಿಮೆಯನ್ನು ಮಹಿಪತಿರಾಯರು ಇಲ್ಲಿಯ ಕೀರ್ತನೆಯಲ್ಲಿ ಭಜಿಸಿದ್ದಾರೆ. ಈ ಐದು ನುಡಿಯ ಪದ್ಯದಲ್ಲಿ ಪ್ರಹ್ಲಾದನ ಪ್ರಸಂಗ, ದ್ರೌಪದಿಯ ಪ್ರಸಂಗ ಮುಂತಾದವರ ಕಥೆಗಳನ್ನು ಉದಾಹರಿಸುತ್ತಾರೆ. ಭವಭಾವದ ಸಫಲತೆಯನ್ನು ಶ್ರೀಹರಿಯ

ಶ್ರೀರಕ್ಷೆಯಿಂದಾಗುವ ಕಾರ್ಯವನ್ನು ಸುಂದರವಾಗಿ ಕಟ್ಟಿಕೊಟ್ಟಿದ್ದಾರೆ. ಶರಣ ರಕ್ಷಕ ಶ್ರೀಹರಿಯು ಸಂಕಟದಲ್ಲಿರುವವರನ್ನು ಕಾಪಾಡುವ ಭಕ್ತಿ ದೀನನಾತನು. ಇಂತಹ ಶ್ರೀಹರಿಯ ಲೀಲೆಯನು ಭಾವಪೂರ್ಣವಾಗಿ ಭಕ್ತಿಯ ಉತ್ಕೃಷ್ಟತೆಯಲ್ಲಿ ಮಹಿಪತಿರಾಯರು ಅಭಿವ್ಯಕ್ತಿಸಿದ್ದಾರೆ.

ಮಹಿಪತಿರಾಯರಂತೆ ಕೃಷ್ಣದಾಸರೂ ಸಹ ಶ್ರೀಹರಿಯನ್ನು ಅನೇಕ ರೀತಿಯಲ್ಲಿ ಸ್ತುತಿಸಿದ್ದಾರೆ. ಕೃಷ್ಣದಾಸರು ಶ್ರೀಹರಿಯ ದರ್ಶನದ ಮಹತ್ವವನ್ನು ಕುತೂಹಲದಿಂದ ಮಾಡಿಸುತ್ತಾರೆ. ಶ್ರೀಹರಿಯ ದಶಾವತಾರ ಸ್ತುತಿಯನ್ನು ಮಾಡುವಾಗ ಭವ ಬಂಧನವನ್ನು ಬಿಡಿಸಿಕೊಂಡು ತನ್ಮಯರಾಗಿ ಜ್ಞಾನಿಸುತ್ತಾರೆ. ಶ್ರೀಹರಿಯ ಮೇಲಿರುವ ಭಕ್ತಿ, ಪ್ರೀತಿ, ಮಮತೆ, ವಾತ್ಸಲ್ಯಗಳಿಂದ ತುಂಬಿ ತುಳುಕುತ್ತದೆ. ಶ್ರೀಹರಿಯ ವಿವಿಧ ದರ್ಶನದ ಮಹಿಮೆಯನ್ನು ಕೊಂಡಾಡುತ್ತಾರೆ. ಶ್ರೀಹರಿಯನ್ನು ಎಷ್ಟು ಸ್ತುತಿ ಮಾಡಿದರೂ ಕೃಷ್ಣದಾಸರಿಗೆ ಕಡಿಮೆ ಅನಿಸುತ್ತದೆ. ೬೦ಕ್ಕೂ ಹೆಚ್ಚು ಪದ್ಯಗಳನ್ನು ಶ್ರೀಹರಿಯ ಕುರಿತಾಗಿ ರಚಿಸಿದ್ದಾರೆ.

"ಹರಿ ಹರಿ ಹರೀ ಎನ್ನಿ । ಮನದೊಳು ।
ಸ್ಮರಣೆಗೆ ಕರೆತನ್ನಿ ।

ನಂದನ ಕಂದ ಮುಕುಂದನು ಎನ್ನಿ ।
ಇಂದಿರೆ ರಮಣ ಗೋವಿಂದನು ಎನ್ನಿ

ಅಂಬುಧಿವಾಸ ವಿಶ್ವಂಭರನೆನ್ನಿ ।
ನಂಬಿದ ಸುಜನ ಕುಟುಂಬಿಯೆ ಎನ್ನಿ

ದುರ್ಧರ ದಾನವ ಮರ್ದನ ಎನ್ನಿ ।
ಸ್ವರ್ಧಾಮ ಪತಿಜಯ ವರ್ದನೆ ಎನ್ನಿ
ತೃಪ್ತನು ನಿತ್ಯಹಿ ಸುಪ್ತಮು ಎನ್ನಿ
ಕ್ಷಿಪ್ತನೆನಿಪ ನಿರ್ಲಿಪ್ತನು ಎನ್ನಿ"[೭]

ಎನ್ನುವಲ್ಲಿ ಶ್ರೀಹರಿಯನ್ನು ಮನದೊಳಗೆ ಸ್ಮರಿಸಿ ಕರೆತಂದ ಪರಿಯನ್ನು, ಆತನ ಸ್ವರೂಪ ದರ್ಶನವನ್ನು ಹಿತವಾಗಿ ಕೃಷ್ಣದಾಸರು ಶ್ರೀಹರಿಯ ಜಪದಿಂದ ಪ್ರಹ್ಲಾದ ಸುಖೀಭವ ಆಗಿದ್ದಾನೆ. ವಿಭೀಷಣ, ಪಾಂಡವ ಮುಂತಾದವರ ಕಥೆಗಳನ್ನು ಹೇಳುತ್ತಾ ಶ್ರೀಹರಿಯ ನೆನೆದವರ ದೈವ ಮೂರು ಲೋಕದಲ್ಲಿ ಸಂಪ್ರೀತನಾಗಿರುತ್ತಾನೆ.

"ಹರಿಯೇ ನಮ್ಮ ಪರದೈವಾ ಹರಿಯೇ ತ್ರಿಭುವನ ಕಾವಾ
ಹರಿಯೇ ಇಹಪರ ನೀವಾ ಜಗದೊಳಗೆ

ಬಿಟ್ಟು ತಾಯಿ ತಂದೆಗಳ ನೆಟ್ಟನಡವಿಗೆ ಪೋಗಿ ।
ಮುಟ್ಟಿ ಭಜಿಸಲಾಗಿ ದಯವಿಟ್ಟು ಬಂದನು ।
ವಿಠಲ ನಚಲ ಪದವಿಯ ಕೊಟ್ಟು ಸಲಹಿದಕ ।
ಧಿಟ್ಟ ಧ್ರುವರಾಯ ಸಾಕ್ಷಿ ಅಂಬರದಲಿ”[೮]

ಶ್ರೀಹರಿಯು ಜಗತ್ತಿನ ಆಗುಹೋಗುಗಳನ್ನು ಬಲ್ಲವನು. ಆತನು ಕರುಣಾಮಯಿಯಾಗಿದ್ದಾನೆ. ಆತನನ್ನು ಭಜಿಸಿದವರಿಗೆ ಯಾವುದೇ ಮಾರ್ಗದಲ್ಲಾದರೂ ರಕ್ಷಣೆಯ ಅಭಯಹಸ್ತವನ್ನು ನೀಡುತ್ತಾನೆ. ಅಂತಹ ರಕ್ಷಣೆಯ ವಿವಿಧ ಮುಖದ ಅನಾವರಣವನ್ನು ಈ ಪದ್ಯದಲ್ಲಿ ದಾಸರು ನೆನಪಿಸುತ್ತಾರೆ. ತಂದೆ–ತಾಯಿಗಳನ್ನು ಬಿಟ್ಟು ಅರಣ್ಯದಲ್ಲಿ ಭಜಿಸಿದ ಧ್ರುವನ ಕಥೆಯನ್ನು ಹೇಳುತ್ತಾರೆ. ವಿಭೀಷಣನ ಕಥೆ, ಲಂಕಾದಹನ ಮುಂತಾದ ಘಟನೆಯನ್ನು ನೆನಪಿಸುತ್ತ ಶ್ರೀಹರಿಯ ದಯದಿಂದ ಬಂದ ಕಷ್ಟಗಳು ಪರಿಹರಿಸಿದ ಬಗೆಯನ್ನು ಅಭಿವ್ಯಕ್ತಿಸುತ್ತಾರೆ.

ಇಲ್ಲಿ ಮಹಿಪತಿರಾಯರ ಮತ್ತು ಕೃಷ್ಣದಾಸರ ಹರಿಸ್ತುತಿಯ ಕೀರ್ತನೆಗಳು ಭಾಷಿಕವಾಗಿ ಒಂದೇ ರೀತಿಯಲ್ಲಿ ಸಾಗಿದರೂ ಸಹ ರಚನೆಯಲ್ಲಿ ಹಾಗೂ ವಿಷಯದ ವೈವಿಧ್ಯತೆಯಲ್ಲಿ ಭಿನ್ನತೆಗಳಿವೆ. ಶ್ರೀಹರಿಯ ಒಟ್ಟು ಸ್ವರೂಪವನ್ನು ಇರ್ವರು ಹರಿದಾಸರು ಚಿತ್ರಿಸುವ ಪ್ರಯತ್ನದಲ್ಲಿ ತಮ್ಮದೆಯಾದ ಸಾಹಿತ್ಯಕ ಅನನ್ಯತೆಯನ್ನು ಮೆರೆದಿದ್ದಾರೆ. ಶ್ರೀಹರಿಯ ಅನೇಕ ಅವತಾರದಲ್ಲಿ ಒಂದಾದ ಶ್ರೀರಾಮನ ಅವತಾರವು ಒಂದು. ಶ್ರೀರಾಮನನ್ನು ಕುರಿತು ಮಹಿಪತಿರಾಯರು ಈ ರೀತಿಯಲ್ಲಿ ಸ್ಮರಿಸಿದ್ದಾರೆ.

“ಶ್ರೀರಾಮ ರಾಮನೇ ಸಾರ್ವಭೌಮ
ಪರಮ ಪುರುಷೋತ್ತಮಾನಂತ ಮಹಿಮ
ಹರ ಹೃದಯ ವಿಶ್ರಾಮ ಸುರಜನರಿಗೆ ಪ್ರೇಮ
ಕರುಣಾಸಾಗರ ಸಕಲಾತ್ಮಕರಾಮ

ಸುರಭಿ ಕಲ್ಪದ್ರುಮ ಸಾರ ಸ್ವಹಿತ ನಾಮ
ಖರ ದೂಷಣಕಾರಿ ಪೂರಿತ ಕಾಮ”[೯]

ಶ್ರೀರಾಮನ ಸಾರ್ವಭೌಮತ್ವದ ಮಹಿಮೆಯನ್ನು ಮಹಿಪತಿರಾಯರು ಮನದುಂಬಿ ಹಾಡಿಕೊಂಡಿದ್ದಾರೆ. ನೆನೆದವರ ಹೃದಯದಲ್ಲಿ ಸದಾ ನೆಲೆಸಿರುವಾತ ಶ್ರೀರಾಮ. ಸಕಲ ಜನರ ದುಃಖವನ್ನು ನಿವಾರಿಸುವ ಆನಂದ ಘನಲೋಲ ಶ್ರೀಮನು ಆಗಿದ್ದಾನೆ. ಕಲ್ಪಧ್ರುವನು ದಯಾ, ಗುಣದಿ ನಿಸ್ಸೀಮನಾದ ರಾಮನು ಬಡವರನ್ನು ಕಾಯುವ ಕೃಪಾನಿಧಿಯೂ ಆಗಿರುತ್ತಾನೆ. ಕರುಣಾಮಯಿಯಾದ ರಾಮ ಸರ್ವರ ಹೃದಯದ ವಿಶ್ರಾಂತಧಾಮನಾಗಿರುತ್ತಾನೆ. ಕೃಷ್ಣದಾಸರು

ಸಹ ಶ್ರೀರಾಮನ ಮೇಲಿರುವ ಪ್ರೀತಿ, ವಾತ್ಸಲ್ಯ ಜೊತೆಗೆ ಶ್ರೀರಾಮನ ಸಕಲ ಗುಣಧಾಮನಾದ ಪರಿಯನ್ನು ಮನದುಂಬಿ ವರ್ಣಿಸುತ್ತಾರೆ.

"ರಾಮ ರಸಾಯನವಾ ಬನ್ನಿರಯ್ಯ ಸೇವಿಸುವಾ

ಅವನಿಯಲಿ ನಾನಾವಿಪತ್ತದ ಪಡುವಾ ।
ಭವರೋಗ ಮೂಲ ಛೇದಿಸುವಾ

ಭ್ರಮೆಗೊಂಡು ಮತ್ತೆ ಜನ್ಮಕ್ಕೆ ಬಾರದಿರುವಾ ।
ಅಮರತ್ವವನು ಬ್ಯಾಗ ಪಡೆವಾ

ಗುರು ಮಹಿಪತಿ ಪ್ರಭು ದಾಸರು ಮೆರೆವಾ ।
ವರಸಂಗದಲಿ ಸುಖಿಸುವಾ"[೧೦]

ರಾಮನಾಮದ ಜಪವನ್ನು ಮಾಡಿದರೆ ಭವರೋಗ ಕಳೆದುಹೋಗುತ್ತದೆ. ರಾಮನಾಮದಿಂದ ಭ್ರಮೆಗೊಂಡ ಜನ್ಮಕ್ಕೆ ಅಮರತ್ವ ಸಿಗುತ್ತದೆಂದು ರಾಮನ ಮಹತ್ವವನ್ನು ಸಾರಿದ್ದಾರೆ. ರಾಮನಾಮದ ಜೊತೆಗೆ ಸೀತಾ ಮಾತೆ ಮತ್ತು ಲಕ್ಷ್ಮಣರು ಒಂದುಗೂಡುವ ಪರಿ ಅನನ್ಯವಾದದ್ದು. ವನವಾಸವನ್ನು ಪೂರ್ಣಗೊಳಿಸುವಿಕೆ ಇವರ ಇತರ ಕೀರ್ತನೆಯಲ್ಲಿ ರಸಪೂರ್ಣವಾಗಿ ಧ್ವನಿಸುತ್ತವೆ. ಸಹೃದಯದ ಪ್ರೇಮಕ್ಕೆ ಮನಸೋಲುವ ಶ್ರೀರಾಮನ ದಿವ್ಯದರ್ಶನವನ್ನು ಇವರ ಕೀರ್ತನೆಗಳಲ್ಲಿ ಎದ್ದು ಕಾಣುತ್ತವೆ. ಹಾಗೆಯೇ ಶ್ರೀರಾಮನ ಸಮೂಹದಲ್ಲಿ ಎದ್ದು ಕಾಣುವ ವ್ಯಕ್ತಿತ್ವ ಹನುಮಂತನದು. ಆತನ ಸ್ತುತಿ ಮತ್ತು ಚರಿತ್ರೆ ಗುಣವನ್ನು ಇಬ್ಬರು ಹರಿದಾಸರು ತಮ್ಮ ಕೀರ್ತನೆಗಳಲ್ಲಿ ನಿವೇದಿಸಿದ್ದಾರೆ. ಶ್ರೀಹರಿಯ ಅವತಾರದಲ್ಲಿ ಪ್ರಮುಖವಾದದ್ದು ಕೃಷ್ಣಾವತಾರ. ಶ್ರೀಕೃಷ್ಣನ ಮಹಿಮೆ ಆತನ ಚರಿತ್ರೆ ಸಂಪೂರ್ಣವಾಗಿ ಬಿಂಬಿಸಿದ್ದಾರೆ. ಬಾಲ್ಯದ ತುಂಟಾಟದಿಂದ ಹಿಡಿದು ಮಹಾಭಾರತ ಕಥೆಯಲ್ಲಿ ಶ್ರೀಕೃಷ್ಣನು ನಿರ್ವಹಿಸಿದ ಪಾತ್ರ ಘಟಾನಾವಳಿ ಸಮೇತವಾಗಿ ಇಬ್ಬರು ಹರಿದಾಸರು ವಿವಿಧ ಬಗೆಯಲ್ಲಿ ಚಿತ್ರಿಸುವ ಪ್ರಯತ್ನವನ್ನು ಮಾಡಿದ್ದಾರೆ. ಶ್ರೀಕೃಷ್ಣನ ಅವತಾರ ಈ ರೀತಿಯಲ್ಲಿ ಕಂಡುಬರುತ್ತದೆ.

"ನೀನೆ ದಯಾನಿಧಿಯು ಶ್ರೀಗುರುರಾಯಾ
ನೀನೆ ದಯಾನಿಧಿಯು ।

ಕರುಣದಿ ಕುಂತಿಯ ಪುತ್ರರಿಗೊಲಿದು ।
ಕಾಳಗ ನಿರ್ಮಿಸಿ ಕೌರವರಳಿದು ।

ಉಳಿಯದೆ ಇಳೆಯೊಳು ವಂಶವ ಸವರಿದ
ಶೇಷಶಯನ ಶ್ರೀಕೇಶವ ನೀನೆ"[೧೧]

ಹೀಗೆ ಸಾಗುವ ಈ ಕೀರ್ತನೆಯು ಶ್ರೀಕೃಷ್ಣ ನೀನೊಬ್ಬನೇ ದಯಾನಿಧಿ ಗುರುವಾಗಿರುವೆ. ನಿನ್ನ ಮಹಿಮೆ ಅನಂತಾನಂತ. ಮಹಾಭಾರತದಲ್ಲಿ ಬರುವ ಭಕ್ತರನ್ನುದ್ಧರಿಸಿದ್ದಾತ. ನಿನ್ನ ಅನೇಕ ಮಹಿಮೆಯಲ್ಲಿ ಭಾಗವತ, ರಾಮಾಯಣದಲ್ಲಿ ಬರುವ ಭಕ್ತರನ್ನು ಉದ್ಧರಿಸಿದಾತ. ಕೇಶವದಾತ ಈ ಭವಬಂಧನದ ಮುಕ್ತಿಯಿಂದ ಬಿಡುಗಡೆಗೊಳಿಸುವಾತ ಎನ್ನುತ್ತ ಮಹಿಪತಿರಾಯರು ಕೃಷ್ಣನ ವಿವಿಧ ಕಾರ್ಯವನ್ನು ಪರಿಚಯಿಸಿದ್ದಾರೆ. ಹಾಗೆಯೇ ಕೃಷ್ಣದಾಸರು ಸಹ ಕೃಷ್ಣನ ಕುರಿತು ಶ್ರೀಕೃಷ್ಣ ಚರಿತೆ ಎಂಬ ಖಂಡಕಾವ್ಯವನ್ನು ರಚಿಸಿದ್ದಾರೆ. ಕೀರ್ತನೆ ಪದ್ಯದಲ್ಲಿ ಸಹ ಕೃಷ್ಣನ ತುಂಟಾಟ ಹಾಗೂ ಆತನ ಮಹಿಮೆಯನ್ನು ಕೊಂಡಾಡಿದ್ದಾರೆ. ಕೃಷ್ಣನ ತುಂಟಾಟದ ಬಗೆಯನ್ನು ಕೃಷ್ಣದಾಸರು ಸುಂದರವಾಗಿ ಚಿತ್ರಿಸುತ್ತಾರೆ.

"ಕೃಷ್ಣಾ ಬಿಡು ದಾರಿ ದಾರಿ

ನೀನೊಲಿದೆನ್ನ ಕೂಡ ಸರಸವನಾಡುವರೆ ।

ನಾನೆರೆ ಗಂಡುಳ್ಳ ನಾರಿ ನಾರಿ ನಾರಿ

ಮಾರಲು ಬಂದಿಹ ನೆರೆದ ಗೊಲ್ಲತೆಯರಾ ।

ಗೋರಸ ಮಾಡದಿರು ಸೂರಿ ಸೂರಿ ಸೂರಿ"[೧]

ಎನ್ನುವಲ್ಲಿ ಗೊಲ್ಲತಿಯರ ಹಾಗೂ ಕೃಷ್ಣನ ನಡುವೆ ಬೆಣ್ಣೆಯ ಸಲುವಾಗಿ ನಡೆದ ತುಂಟಾಟದ ಪ್ರಸಂಗ ಸಹೃದಯರಿಗೆ ರಸಾನುಭವ ಉಂಟುಮಾಡುತ್ತದೆ. ಇಲ್ಲಿ ಗೊಲ್ಲತಿಯರ ಮತ್ತು ಕೃಷ್ಣನ ಸಂವಾದ ರೂಪದ ಪದಗಳನ್ನು ಕೃಷ್ಣದಾಸರು ಭಾವಪೂರ್ಣವಾಗಿ ಚಿತ್ರಿಸಿದ್ದಾರೆ. ಕೃಷ್ಣನ ಅನೇಕಾನೇಕ ಮಹಿಮೆಯನ್ನು ಇಬ್ಬರು ಹರಿದಾಸರು ಅಭಿವ್ಯಕ್ತಿಸಿದ್ದಾರೆ. ಆ ಕೀರ್ತನೆಗಳ ಮೂಲಕವಾಗಿ ಕೃಷ್ಣನನ್ನು ಅನೇಕ ಬಗೆಯಲ್ಲಿ ಸ್ತುತಿಸುವ ಪ್ರಯತ್ನವನ್ನು ಇಬ್ಬರು ಹರಿದಾಸರು ಮಾಡಿದ್ದಾರೆ.

ವಿಘ್ನನಿವಾರಕನಾದ ವಿಘ್ನೇಶ್ವರನ ಸ್ತುತಿ ಆತನ ಮಹಿಮೆಯನ್ನು ವಿವಿಧ ತೆರನಾಗಿ ಇಬ್ಬರು ಹರಿದಾಸರು ಮಾಡಿದ್ದಾರೆ. ಗಜಾನನ ಸ್ತುತಿಯನ್ನು ಮಾಡುವಾಗ ಉಳಿದ ಹರಿದಾಸರಿಗಿಂತ ಭಿನ್ನವಾಗಿ ಗಜಾನನ ಕಾರ್ಯವೈಖರಿಯನ್ನು ಕೊಂಡಾಡಿದ್ದಾರೆ. ಭಕ್ತನಿಗೆ ಒಲಿದ ಮಹತ್ವವನ್ನು ಸ್ವಾರಸ್ಯಪೂರ್ಣವಾಗಿ ಚಿತ್ರಿಸಿದ್ದಾರೆ. ಗಣಪತಿಯ ಮಹಿಮೆಯನ್ನು ಹೇಳುತ್ತ ಸಾಂದರ್ಭಿಕವಾಗಿ ಶಿವ-ಪಾರ್ವತಿಯರ ಮಹಿಮೆಯ ಉಲ್ಲೇಖವನ್ನು ಇಬ್ಬರು ಹರಿದಾಸರು ಮಾಡಿದ್ದಾರೆ. ತಮ್ಮ ಕೀರ್ತನೆಯ ಸಾಹಿತ್ಯ ಪ್ರಾರಂಭದಲ್ಲಿ ಇಬ್ಬರು ಗಣಪತಿಯನ್ನು ನೆನೆಸಿಕೊಂಡು ಪ್ರಾರಂಭ ಮಾಡಿದ್ದು ವಿಶೇಷವಾಗಿದೆ.

ಮಹಿಪತಿರಾಯರು ಗಣಪತಿ ಸ್ವಾಮಿಯನ್ನು ಭಕ್ತಿಯ ವಿನಮ್ರತೆಯಲ್ಲಿ ಬೇಡಿಕೊಳ್ಳುತ್ತಾರೆ. ಅನುದಿನವು ನಿನ್ನ ಫಲದಿಂದ ಉದ್ಧರಿಸಿರುವಾತ ನಾನು ಎಂದು ಹೇಳುತ್ತಾರೆ.

"ಗುಣಾತೀತ ಸದ್ಗುರು ಗಣನಾಥ
ಘನಸುಖದಾಯಕ ಸದೋದಿತ

ಅನುದಿನ ಮಾಡುವೆ ಮನೋಹರ
ಅಣುರೇಣುದೊಳು ನೀ ಸಾಕ್ಷಾತ್ಕಾರ
ಮುನಿಜನರಿಗಾಗುವಿ ಸಹಕಾರ
ನೀನಹುದೋಭಕ್ತರ ವಿಘ್ನಹರ

ನಿಮ್ಮ ಬೋಧಗುಣವೆ ಸರಸ್ವತಿ
ಸಮ್ಯಜ್ಞಾನ ಬೀರುವ ನಿಜಸ್ಥಿತಿ
ಬ್ರಹ್ಮಾದಿಗಳೊಂದಿತ ನಿಜಖ್ಯಾತಿ
ಬ್ರಹ್ಮಾನಂದ ದೋರುವ ಫಲಶ್ರುತಿ"[೧೩]

ಮಹಿಪತಿರಾಯರು ಗಣಪತಿಯ ಗಣಸ್ತುತಿಯನ್ನು ಈ ರೀತಿಯಲ್ಲಿ ಉದಾತ್ತವಾಗಿ ಬಣ್ಣಿಸಿದ್ದಾರೆ. ಗುಣಾತೀತವಾದ ಸದ್ಗುರು ನಿನಗೆ ಅನುದಿನವು ಪ್ರಣಾಮಗಳು. ಬಂದಿರುವ ಕಷ್ಟಗಳನ್ನು ಪರಿಹರಿಸುವ ಸಾಕ್ಷಾತ್ಕಾರ ನೀನಿರುವಾಗ ನಿನ್ನ ಸಹಕಾರ ನನಗೆ ನಿತ್ಯ ನಿರಂತರವಾಗಿರಲಿ. ನಿನ್ನ ನಂಬಿದ ಭಕ್ತ ವಿಘ್ನೇಶ್ವರ ನಿನಗೆ ನಿತ್ಯ ನಮನ ಮಾಡುವೆ. ನಿನ್ನ ಅನುಗ್ರಹದಿಂದ ಜ್ಞಾನವನ್ನು ಪಡೆಯುವೆ. ಅಜ್ಞಾನಕ್ಕೆ ನಿಜಸ್ಥಿತಿ ನಿಜಮುಖವನ್ನು ತೋರಿ ಬ್ರಹ್ಮಾನಂದವನ್ನು ನೀಡುವೆ. ಶ್ರೀಗಣಪತಿ ನಿನ್ನನ್ನು ಅನುದಿನವು ಅನುಗ್ರಹಕ್ಕಾಗಿ ಕಾಯುವೆನು.

"ಶರಣು ಶರಣು ಶರಣು ದೇವಾದಿಗಳೊಂದಿತ
ನಹುದು ಸ್ವಾಮಿ ಗಣನಾಥ ಶರಣು

ಅಖಿಳ ಭವನದೊಳು ಪೂಜಿತ
ಭಕುತ ಜನಕೆ ನೀ ಸಾಕ್ಷಾತ
ಸಕಲು ವಿದ್ಯಾವರದಾತ
ಶಕುತನಹುದಯ್ಯ ಪ್ರಖ್ಯಾತ

ಶುದ್ಧ ಬುದ್ಧರ ಸಹಕಾರ
ಬುದ್ಧಿನೀವ ಘನ ಉದಾರ"[೧೪]

ಶರಣು ನಿನಗೆ ಶ್ರೀಗಣಪತಿಯೆ ಶರಣುಸ್ವಾಮಿ. ಅಖಿಲಕೋಟಿ ಭಕ್ತರ ಹೃದಯದಲ್ಲಿ ಪೂಜ್ಯತೆಗೊಂಡು ನಿನ್ನ ಸಾಕ್ಷಾತ್ಕಾರದ ವಿದ್ಯಾವರದಿಂದ ಜಗತ್ತು ಪ್ರಖ್ಯಾತಗೊಂಡಿದೆ. ಶುದ್ಧಬುದ್ಧ

ಸಹಕಾರ ಮೂರ್ತಿ ನೀನು. ಉದ್ಧಾರತೆಯ ಬುದ್ಧಿಯನ್ನು ಕೊಟ್ಟು ಸಲುಹು ಸಿದ್ಧಿ ವಿನಾಯಕ ವಿಘ್ನೇಶ್ವರ. ಜನರ ದೋಷ ನಾಶ ಮಾಡಿ ಅನುದಿನವು ದಿವ್ಯಾಮೃತ ನೀಡಿ ಸಲುಹು ತಂದೆ ಎಂದು ಮಹಿಪತಿರಾಯರು ಗಣಪತಿಗೆ ಶರಣು ಮಾಡಿದ್ದಾರೆ. ಇದೇ ರೀತಿಯಲ್ಲಿ ಕೃಷ್ಣದಾಸರು ಸಹ ತಮ್ಮ ತಂದೆಯ ಹಾಗೆಯೇ ಗಣಪತಿಯ ಸ್ತುತಿಯನ್ನು ಮಾಡಿದ್ದಾರೆ.

"ಗಜಾನನಾ ಗಜಾನನಾ ಸ್ವಾಮಿ ನಿನ್ನವನಾ
ಪಾರ್ವತಿ ನಂದನಪೂರ್ವ ಚರಿತ ಘನ
ನಿರ್ವಿಘ್ನ ದಾಯಕ ಗಜಾನನಾ

ಮೂಷಕವಾಹನ ದೋಷಕರಿಪುಕುಲ
ನಾಶಿಕ ವಿಗ್ರಹಗಜಾನನಾ

ಮದನಾರಿ ಮನೋಭವ ರದಸಾಮಲೇಕದಂತದಯ
ಸದನಾ ಲಂಬೋದರ ಗಜಾನನಾ

ಕರುಣಾಪೂರಿತ ಸರ್ವಾಭರಣಾ ಭೂಷಿತ ಭಯ
ಹರಣಾ ತ್ರಿ ಜಗನುತ ಗಜಾನನಾ"[೧೫]

ಕೃಷ್ಣದಾಸರು ತಮ್ಮ ತಂದೆ ಮತ್ತು ಗುರುವಾದ ಮಹಿಪತಿರಾಯರ ಹಾಗೇ ಶ್ರೀಗಣಪತಿಯ ವಿವಿಧ ಮಹಿಮೆಯನ್ನು ಕೊಂಡಾಡಿದ್ದಾರೆ. ಗಣಪತಿ ಪೂರ್ವಕಥೆಯನ್ನು ಪಾರ್ವತಿ ದೇವಿಯ ಚರಿತೆಯ ಮೂಲಕ ನೆನಪಿಸುವ ಪ್ರಯತ್ನ ಮಾಡಿದ್ದಾರೆ. ಮೂಷಿಕ ವಾಹನವನ್ನು ಇಟ್ಟುಕೊಂಡ ಶ್ರೀಗಣಪತಿ ದೋಷಮುಕ್ತ ಅಭಯವನ್ನು ನೀಡಿರುವ ಶ್ರೀನಿಧಿ ಸರ್ವ ಆಭರಣ ಭೂಷಿತನಾಗಿರುವಿ. ಲಂಬೋದರ ಶ್ರೀಗಣಪ ಕರುಣಾಪೂರಿತನಾಗಿ ನಂಬಿದ ಭಕ್ತರಿಗೆ ವಿದ್ಯೆಗಳನ್ನು ನೀಡುವ ವಿಘ್ನೇಶ್ವರ. ಹೀಗೆ ಮಹಿಪತಿರಾಯರು ಗಣಪತಿ ಸ್ತುತಿಯಲ್ಲಿ ಆತನ ಮಹಿಮೆ, ಆತನ ಪೂರ್ವಚರಿತೆ ಹೇಳಿದ್ದಾರೆ. ಭಕ್ತ ಉದ್ಧಾರಕ ಕಾರ್ಯ ಎಲ್ಲವನ್ನು ಹೇಳಿ ನನ್ನನ್ನು ಉದ್ಧರಿಸು ಶ್ರೀಗುರುವೆ ಎಂದು ಕೃಷ್ಣದಾಸರು ಗಣಪತಿಯಲ್ಲಿ ಬೇಡಿಕೊಳ್ಳುತ್ತಾರೆ.

ವಿಘ್ನೇಶ್ವರನನ್ನು ಎಷ್ಟು ನೆನೆದರೂ ತೃಪ್ತಿಯಿಲ್ಲ. ಹಾಗಾಗಿ ಅನೇಕ ಕೀರ್ತನೆಗಳಲ್ಲಿ ವಿಘ್ನೇಶ್ವರನನ್ನು ನೆನೆಯುತ್ತ ವಿಘ್ನವನ್ನು ದೂರ ಮಾಡು ಸ್ವಾಮಿ ಎಂದು ಕೇಳಿಕೊಳ್ಳುತ್ತಾರೆ.

"ಶರಣೆಂಬೆ ತನುಮನದಿಂದ ಗಣರಾಯಾ
ಕರುಣಿಸೆನಗ ನರಮೃಗ ಕಾಯಾ

ಸುರಾಸುರರ ಕೈಯ್ಯ ಸೇವೆ ಕೊಳುವ ಚರಣವನು
ಮೊರೆಯ ಹೊಕ್ಕನು ಕೇಳಿ ಕೀರುತಿಯಾ

ಕೊಂಡಾಡುವಂತೆ ಪದ ಪದ್ಯದಿ ನಿನ್ನ ಚರಿಯಾ
ಶುಂಡಾಲ ಶುಭ ಮುಖ ಕೊಡುಮತಿಯನಾ

ಎಂದೆಂದು ನೋಡಲು ಅಪರಾಧಿ ನಾ ಮೊದಲು
ಕುಂದನಾರಿ ಸದೇ ನೋಡೆನ್ನ ಮ್ಯಾಲಿನ್ನಾ

ಅಗಜ ನಂದನ ಗುರು ಮಹಿಪತಿ ಸುತ ಸ್ವಾಮಿ
ಭಕುತಿ ರಕ್ಷಕ ಮುನಿಜನ ಪ್ರೇಮೀ"[೧೬]

ಕೃಷ್ಣದಾಸರು ಗಣಪತಿಯನ್ನು ನೆನೆಯುತ್ತ ನರಮೃಗದಂತಿರುವ ಈ ಮನಸ್ಸನ್ನು ಶುಚಿತ್ವಗೊಳಿಸು ಸ್ವಾಮಿ ಎಂದು ಕೇಳಿಕೊಳ್ಳುತ್ತಾರೆ. ಸುರಾಸುರ ಕೈಯಂತಿರುವ ನನ್ನ ದೇಹದ ಸೇವೆಯನ್ನು ಮನ್ನಿಸಿ ನಿನ್ನಲ್ಲಿ ಶರಣು ಹೊಕ್ಕು ಕೇಳಿಕೊಳ್ಳುತ್ತಿದ್ದೇನೆ. ವರವ ನೀಡು ಶ್ರೀಗಣಪ ದಿನನಿತ್ಯ ನಿನ್ನ ಚರಣಕಮಲವನ್ನು ಹಲವು ಪದ್ಯದಲ್ಲಿ ಕೊಂಡಾಡಿದ್ದೇನೆ. ಶುದ್ಧ ಬುದ್ಧಿಯನ್ನು ನೀಡಿ ಕರುಣಿಸು ತಂದೆ, ಯಾವಾಗಲೂ ನಾನು ನಿನ್ನ ನಾಮಸ್ಮರಣೆಯಲ್ಲಿ ಅಪರಾಧಿಯಾಗಿರುವೆ. ನನ್ನ ಅಪರಾಧವನ್ನು ಮನ್ನಿಸಿ ಕರುಣಿಸು ಭಗವಂತ ಎಂದು ನೆನೆಯುತ್ತಾರೆ.

ರನ್ನಮುಕುಟ ದಿವ್ಯಕುಂಡಲಧಾರಿಯಾದ ನೀನು ಪನ್ನಗಭೂಷಣ. ಚತುರ್ಭುಜನೆ ಉನ್ನತ ಮೂಷಿಕ ವಾಹನವನ್ನೇರಿ ಸನ್ನುತ ಭಕ್ತರ ಸಲುಹುವ ಶ್ರೀರಾಯ ನಿನಗೆ ಅನಂತ ನಮನಗಳು. ಇಬ್ಬರ ದಾಸರು ಸಹ ಗಣೇಶಸ್ತುತಿಯನ್ನು ಒಂದೇ ವಿಧದಲ್ಲಿ ಮಾಡಿದರೂ ಸಹ ವಿಷಯ ವ್ಯಾಪ್ತಿ, ರಚನೆಯ ಭಾವಶೈಲಿ, ಗಣಪತಿಯ ದಿವ್ಯದರ್ಶನ ಇವುಗಳು ವಿಭಿನ್ನತೆಯಿಂದ ಕಂಡುಬರುತ್ತವೆ. ಎಲ್ಲ ದೇವತೆಗಳಂತೆ ಗಣಪತಿಗೂ ಸಹ ಅಗ್ರಸ್ಥಾನದ ಭಕ್ತಿಯನ್ನು ಸಲ್ಲಿಸಿದ ಪರಿ ಮಹತ್ವಪೂರ್ಣವಾಗಿ ಕಂಡುಬರುತ್ತದೆ.

ಗಣಪತಿಯ ನಂತರ ಸರಸ್ವತಿಯ ಸ್ತುತಿಯನ್ನು ಮಹಿಪತಿರಾಯ ಮತ್ತು ಕೃಷ್ಣದಾಸರು ಮಾಡಿದ್ದಾರೆ. ಸಾಮಾನ್ಯವಾಗಿ ಗಣಪತಿ ಮತ್ತು ಸರಸ್ವತಿ ಸ್ತುತಿಯು ಪರಂಪರೆಯಿಂದ ನಡೆದುಬಂದಿದೆ. ಕವಿಗಳು ತಮ್ಮ ಸಾಹಿತ್ಯ ಕೃತಿ ಆರಂಭದಲ್ಲಿ ಈ ದಿವ್ಯ ದೇವತೆಗಳ ಅನುಗ್ರಹ ನೆನಪಿಸಿಕೊಂಡು ಕಾವ್ಯಾರಂಭ ಮಾಡುತ್ತಾರೆ. ಇಲ್ಲಿಯೂ ಸಹ ಅನೇಕ ಸಂದರ್ಭಗಳಲ್ಲಿ ಉಳಿದ ದೇವತೆಗಳ ಹಾಗೆ ಸರಸ್ವತಿ ದೇವಿಸ್ತುತಿಯನ್ನು, ಅವಳ ಗುಣಗಾಣವನ್ನು ಮನದುಂಬಿ ಕೊಂಡಾಡಿದ್ದಾರೆ. ಆ ನಿಟ್ಟಿನಲ್ಲಿ ಮಹಿಪತಿರಾಯರ ಈ ಕೀರ್ತನೆಯು ಮಹತ್ವಪೂರ್ಣವಾಗಿದೆ.

"ಜಯ ಜಯ ಸರಸ್ವತಿ ಜಯವರ ಪೂರಣಮತಿ
ತ್ರಯಲೋಕ್ಯದಲ್ಲಿ ಖ್ಯಾತಿ ಜಯ ಸುಕೀರ್ತಿ

ವಿದ್ಯಾವರದಾಯಿನಿ ಸಿದ್ಧಿಗೆ ಶಿಖಾಮಣಿ
ಬುದ್ಧಿ ಪ್ರಕಾಶಿನಿ ಸದ್ಭೂಷಿಣಿ
ಕರಕಮಲದಲಿ ವೀಣೆ ಸುರಸ ಅಮೃತವಾಣಿ
ವರವಿದ್ಯದಲಿ ದಾನಿ ಸುಪ್ರವೀಣೆ
ಪ್ರಸನ್ನವದನಿ ವಿಶ್ವದಲಿ ನೀ ಪೂರ್ಣೆ
ಹಂಸವಾಹಿನಿ ಪೂರ್ಣೆ ಸ್ವಸಿದ್ಧಿಣಿ

ಸದಾ ಸದ್ಗುರುಸ್ತುತಿ ಒದಗುವ್ಹಾಂಗ ಸ್ಫೂರ್ತಿ
ಇದೇ ಮಹಿಪತಿ ಕುರ್ತಿ ಬೋಧಿಸುವ ಮತಿ"[೧೭]

ಸರಸ್ವತಿಯ ದಿವ್ಯ ಚರಣಕ್ಕೆ ಮಹಿಪತಿರಾಯರು ವಿವಿಧ ರೀತಿಯಲ್ಲಿ ಶರಣು ಎನ್ನುತ್ತಾರೆ. ವಿದ್ಯಾಮಾತೆಯಾದ ಸರಸ್ವತಿ ನಂಬಿದವರಿಗೆ ಅವಳಿಂದ ಅಭಯ ಸಿಕ್ಕೇ ಸಿಗುತ್ತದೆ. ನಂಬಿಕೆಯಿಟ್ಟವರು ತ್ರೈಲೋಕದಲ್ಲಿ ತನ್ನದೆಯಾದ ಖ್ಯಾತಿಯನ್ನು ಪಡೆಯುವರು. ವಿದ್ಯಾಮಾತೆ ಸರಸ್ವತಿ ಸಿದ್ಧಿ ಪ್ರಧಾನಕ್ಕೆ ಬುದ್ಧಿಯನ್ನು ಪ್ರಕಾಶಿಸು ಸದ್ಗುಣಿ ಎಂದು ಹಂಬಲಿಸುತ್ತಾರೆ. ನಿನ್ನ ದಿವ್ಯ ಕೈಯಲ್ಲಿ ವೀಣೆ, ಕಂಠದಿಂದ ಸೂಸುವ ಅಮೃತವಾಣಿಯಾಗಿದೆ. ವರವಿದ್ಯೆಯನ್ನು ನೀಡುವ ಸುರಪ್ರವೀಣೆಯಾದ ಸರಸ್ವತಿ ನಿನಗೆ ಅನಂತ ನಮನಗಳು. ಪ್ರಸನ್ನವದನ ನಿನ್ನ ಮೂರ್ತಿಯಾಗಿದೆ. ಹಂಸವಾಹಿನಿಯು ನಿನ್ನ ಪಾದಕಮಲದಲ್ಲಿ ಸದಾ ನಮಿಸುವೆ. ಸದ್ಗತಿಯನ್ನು ದಯಪಾಲಿಸು ಸ್ಫೂರ್ತಿದೇವತೆಯಾದ ಶ್ರೀಸರಸ್ವತಿ ದೇವಿ ನನ್ನ ಮಂದಮತಿಗೆ ಅಂದವಾದ ಜ್ಞಾನ ನೀಡಿ ನನ್ನನ್ನು ಉದ್ಧರಿಸು ತಾಯಿ ಎಂದು ಮಹಿಪತಿರಾಯರು ಸ್ತುತಿಸಿದ್ದಾರೆ. ಆಕೆಯ ವ್ಯಕ್ತಿತ್ವ ದರ್ಶನವನ್ನು ನಂಬಿದ ಭಕ್ತರಿಗೆ ವಿದ್ಯೆಯ ಪ್ರಾಧಾನ್ಯತೆಯನ್ನು ಹದುಳವಾಗಿ ಈ ಕೀರ್ತನೆಯಲ್ಲಿ ಚಿತ್ರಿಸಿದ್ದಾರೆ.

ಕೃಷ್ಣದಾಸರು ಸಹ ತಮ್ಮ ತಂದೆಯ ಹಾಗೇ ಸರಸ್ವತಿಯ ದಿವ್ಯಚರಣವನ್ನು ನೆನೆದಿದ್ದಾರೆ. ಮಹಿಪತಿರಾಯರ ಕೀರ್ತನೆಗಳ ಮಾದರಿಯಲ್ಲಿಯೇ ಸರಸ್ವತಿಯ ಕೀರ್ತನೆಯು ಮುಂದುವರಿದಿದೆ. ಸರಸ್ವತಿಯ ದಿವ್ಯಚರಣದ ಮೂರ್ತಿಯನ್ನು ಭಕ್ತಿಯ ಪ್ರಾಧಾನ್ಯತೆಯ ಹಿನ್ನೆಲೆಯಲ್ಲಿ ವಿಶಿಷ್ಟವಾಗಿ ಕೃಷ್ಣದಾಸರು ಹಾಡಿಕೊಂಡಿದ್ದಾರೆ.

"ಶರಣು ಶಾರದೆ ವಾಣಿ
ಪಡರಮಾನಂದದ ಕೇಣಿ
ಸುರಸಕಲ ಕೀರ್ವಾಣಿ ಕಲ್ಯಾಣಿ
ವಿದಿತ ಸುವಿದ್ಯದಾನಿ
ಸದಮಲ ಸುಪ್ರವೀಣಿ
ಮದಮತ್ತಗಜಗಾಮಿನಿ ಕಲ್ಯಾಣಿ

ಸ್ವಹಿತ ಸುಖಕಾರಿಣೀ

ಸಹಕಾರಿ ನಿರಂಜನ

ಮಹಿಪತಿಸುತ ಸ್ವಾಮಿನೀ ಕಲ್ಯಾಣಿ"[೧೮]

ಕೃಷ್ಣದಾಸರು ಶಾರದಾ ಮಾತೆಗೆ ಶರಣು ಹೇಳುತ್ತಾರೆ. ಅವಳ ಸದ್ಭಕ್ತರಿಗೆ ಒಲಿದು ವಿದ್ಯೆಯನ್ನು ನೀಡಿ ಸಕಲೋದ್ಧಾರಕ ಮಾಡಿದ ಬಗೆ ಅನನ್ಯವಾದದ್ದು. ವಿವಿಧ ಗುಣಗಾಣಗಳ ಮುಖೇನ ಅವಳ ಮಹತ್ವವನ್ನು ಚಿತ್ರಿಸಿದ್ದಾರೆ. ಶಾರದೆ ನೆನಿಸಿಕೊಂಡವರಿಗೆ ಪರಮಾನಂದವನ್ನು ನೀಡುವ ಈ ಲೋಕದ ಜನರನ್ನು ಉದ್ಧರಿಸುವ ಕಲ್ಯಾಣಿಯಾಗಿದ್ದಾಳೆ. ಹಲವು ವಿದ್ಯೆಗಳನ್ನು ನೀಡಿದ ಮಹಾದಾನಿ. ಅವಿವೇಕ ಬುದ್ಧಿಯನ್ನು ಹೋಗಲಾಡಿಸುವ ಕಲ್ಯಾಣಿ. ಸ್ವಹಿತ ಸುಖಕಾರಣಿಯಾದ ಶ್ರೀಸರಸ್ವತಿದೇವಿ ಸಹಕಾರ ಮೂರ್ತಿಯಾಗಿದ್ದಾಳೆ. ಶಾರದಾವಾಣಿಯನ್ನು ಮತ್ತೆ ಸ್ತುತಿಸುತ್ತ ಈ ರೀತಿಯಲ್ಲಿ ಅಭಿವ್ಯಕ್ತಿಸಿದ್ದಾರೆ.

"ಶರಣು ಶಾರದೆ ವಾಣೀ ಸರಸಿ ಜಾಸನ ರಾಣಿ

ಶರಣು ವಿದ್ಯಾಂಬುಧಿಯೆ ಸರ್ವಗುಣಗಣನಿಧಿಯೇ

ಶರಣು ಧೀನೋದ್ಧರಣಿ ಶುಭ್ರಾಂಬರಾವರಣಿ

ಶರಣ ಜನ ಭವ ತಾರಣೀ

ಶರಣೆ ಶೃತಿ ವಿಖ್ಯಾತೆ ಸಲೆ ಜಗತ್ರಯ ಮಾತೆ

ಶರಣು ಶ್ರೀಧವಳಾಂಗೆ ಸುರವರಾರ್ಜಿತ ತುಂಗೆ

ಶರಣು ಮಹಿಪತಿ ಕಂದ ನಾಸ್ಯದಿ ನೆಲಿಸಿಛಂದ

ಸಲಹಮ್ಮ ಕರುಣದಿಂದ"[೧೯]

ಕೃಷ್ಣದಾಸರು ಶಾರದೆಯನ್ನು ನೆನೆಯುತ್ತ ಸಂದರ್ಭಕ್ಕೆ ಅನುಸಾರವಾಗಿ ಸರಸ್ವತಿ ಪತಿಯನ್ನು ನೆನೆಯುತ್ತಾರೆ. ಸರ್ವವಿದ್ಯಾಂಬುಧಿಯಾದ ಸರಸ್ವತಿಯು ಸರ್ವಗುಣಗಳ ನಿಧಿಯಾಗಿದ್ದಾಳೆ. ಭಕ್ತರನ್ನು ಉದ್ಧರಿಸುವ ಶ್ರೀಮಾತೆ ಶುಭ್ರವಸ್ತ್ರವುಳ್ಳವಳು. ಶ್ರುತಿಹಿಡಿದ ವೀಣೆಯ ನಾದಸ್ವರ ಸಕಲ ಜಗತ್ತನ್ನು ತಲ್ಲಣಿಸುತ್ತದೆ. ಸರಸ್ವತಿ ಮಾತೆ ಎನ್ನ ಹೃದಯದಲ್ಲಿ ನೆಲೆಸಿ ಚಂದದ ಅಮೃತವನ್ನು ನೀಡು ಎಂದು ಸರಸ್ವತಿಯನ್ನು ಕೇಳಿಕೊಳ್ಳುತ್ತಾರೆ. ಹೀಗೆ ಕೃಷ್ಣದಾಸರು ಮತ್ತು ಮಹಿಪತಿರಾಯರು ಸರಸ್ವತಿಯ ದಿವ್ಯಸ್ತುತಿಯನ್ನು ನಾದಲಹರಿಯ ಮುಖೇನವಾಗಿ ಕೀರ್ತನೆಯಲ್ಲಿ ಅಭಿವ್ಯಕ್ತಿಸಿದ್ದಾರೆ. ಇಬ್ಬರ ಕೀರ್ತನೆಗಳಲ್ಲಿ ಸಾಮ್ಯತೆ ಹೆಚ್ಚಾಗಿ ಕಂಡುಬರುತ್ತದೆ. ಕೀರ್ತನೆಯ ಉದ್ದಕ್ಕೂ ಧನ್ಯತೆಯ ಭಾವ ಎದ್ದು ಕಾಣುತ್ತದೆ.

ಜ್ಞಾನದ ಅತೃಪ್ತಿಗೋಸ್ಕರ ವಿದ್ಯಾಮಾತೆಯ ಸ್ಮರಿಸುವ ಇಲ್ಲಿಯ ಕೀರ್ತನೆಗಳು ದಿವ್ಯಜ್ಞಾನವನ್ನು ಪಡೆದುಕೊಳ್ಳುವ ಆಶಯವನ್ನು ಅಭಿವ್ಯಕ್ತಿಸುತ್ತವೆ. ಸರಸ್ವತಿಯ ಸ್ತುತಿಯ ನಂತರ ಹೆಚ್ಚಿನ ಪದ್ಯಗಳು ಲಕ್ಷ್ಮಿದೇವಿಯ ಸುತ್ತ ಹೆಣೆದ ಪದ್ಯಗಳಾಗಿವೆ. ಈ ಲಕ್ಷ್ಮಿದೇವಿಯ ಸ್ತುತಿಪದ್ಯದ ಕೀರ್ತನೆಗಳಲ್ಲಿ ಇಬ್ಬರು ಹರಿದಾಸರು ಭಿನ್ನ ಭಿನ್ನವಾಗಿ ವಿವಿಧ ರೂಪಗಳನ್ನು ಬಣ್ಣಿಸಿದ್ದಾರೆ. ಅವಳ ತೇಜಸ್ಸು ವ್ಯಕ್ತಿತ್ವವನ್ನು ಹಲವು ಉಪಕಥೆಗಳ ಮುಖೇನ ನೆನಪಿಸಿದ್ದಾರೆ. ಅಂತಹ ಲಕ್ಷ್ಮಿ ದೇವಿಯ ಸ್ತುತಿಯ ಗುಣಗಾನವನ್ನು ಈ ರೀತಿಯಲ್ಲಿ ಮಹಿಪತಿರಾಯರು ವ್ಯಾಖ್ಯಾನಿಸಿದ್ದಾರೆ.

"ಕಾಯಬೇಕೆನ್ನ ಶ್ರೀ ದೇವಾಧಿದೇವಿಣಿ
ದಯವುಳ್ಳಸ್ವಾಮಿ ಸಹಕಾರಿ ನಾರಾಯಣಿ

ಕರುಣಾನಂದಗುಣ ಶರಣ ಸಂರಕ್ಷಣಿ
ದಾರಿದ್ರ್ಯ ಭಂಜಿನಿ ದುರಿತ ವಿಧ್ವಂಸಿನಿ

ಘನಸುಖದಾಯಿಣಿ ದೀನ ಉದ್ಧಾರಣಿ
ಮುನಿಜನ ಶಿಖಾಮಣಿ ನೀನೆ ಶ್ರೀ ಲಕ್ಷುಮಿಣಿ

ಬಾಹ್ಯಂತ್ರ ವ್ಯಾಪಿಣಿ ಮಹಾಗುರು ಸ್ವರೂಪಿಣಿ
ಸಾಹ್ಯದಲಿ ನೀ ಪೂರ್ಣ ಮಹಿಪತಿಯ ಸ್ವಾಮಿಣಿ"[೨೦]

ಮಹಿಪತಿರಾಯರು ದೇವಾಧಿದೇವತೆ ಶ್ರೀಲಕ್ಷ್ಮಿಯ ವಿವಿಧ ಗುಣಗಾನವನ್ನು ಕೀರ್ತನೆಯಲ್ಲಿ ನೆನೆಪಿಸಿದ್ದಾರೆ. ನಾರಾಯಣಿಯಾದ ಶ್ರೀಲಕ್ಷ್ಮಿಯು ದಯವುಳ್ಳ ಶ್ರೀರಮಣ ಕರುಣಾನಂದ ಗುಣ ಸದ್ಗುರು ಶರಣೆ. ದಾರಿದ್ರ್ಯ ದೂರು ಮಾಡುವ ದೇವಿ ಪರಮ ಸುಖ ನೀಡುವ ದಿವ್ಯ ಉದ್ಧಾರಣಿ. ಮುನಿಜನ ಶಿಖಾಮಣಿ ನೀನೆ ಲಕ್ಷ್ಮಿಣಿ ಎಂದು ಮಹಿಪತಿರಾಯರು ಹೇಳುತ್ತಾ ಕೊನೆಯಲ್ಲಿ ಈ ಲಕ್ಷ್ಮಿಯ ಮಹತ್ವ ಇಡೀ ಜಗತ್ತಿಗೆ ಬಗೆ ಬಗೆಯಲ್ಲಿ ತಿಳಿಸುತ್ತಾರೆ. ಜಗತ್ತಿಗೆ ವ್ಯಾಪಿಸಿ ಮಹಾಗುರುವಿನ ಸ್ವರೂಪಿನಿಯಾಗಿರುವೆ. ಸದ್ಗುರು ವಿನಯದ ಶ್ರೀಲಕ್ಷ್ಮೀ ಪೂರ್ಣಾನುಭವದ ಸುಖ–ಶಾಂತಿ ನೀಡು ಎಂದು ಮಹಿಪತಿರಾಯರು ಅವಳ ಚರಣ ಕಮಲದಲ್ಲಿ ಬೇಡಿಕೊಳ್ಳುತ್ತಾರೆ.

"ನೀನೆ ಪರಮ ಪಾವನಿ ನಿರಂಜನಿ
ನೀನೆ ಪರಮ ಪಾವನಿ

ಆದಿನಾರಾಯಣಿ ಸಾಧುಜನವಂದಿನಿ
ಸದಾನಂದರೂಪಿಣಿ ಸದ್ಗತಿ ಸುಖದಾಯಿಣಿ

ಲಕ್ಷುಮಿ ರೂಪಿಣಿ ಸಾಕ್ಷಾತ್ಕಾರಿಣಿ

ರಕ್ಷರಕ್ಷಾತ್ಮಿಣಿ ಅಕ್ಷಯಪದದಾಯಿಣಿ

ಅನಾಥರಕ್ಷಿಣಿ ದೀನೋದ್ಧಾರನೀ

ಅನಂತಾನಂತಗುಣಿ ಮುನಿಜನ ಭೂಷಣಿ

ದಾರಿದ್ರ್ಯಭಂಜನಿ ದುರತವಿಧ್ವಂಸಿನಿ

ಪರಮಸಂಜೀವಿನಿ ಸುರಮುನಿರಂಜನಿ"[೨೧]

ಮಹಿಪತಿರಾಯರು ಲಕ್ಷ್ಮಿಯ ಸ್ತುತಿಕೀರ್ತನೆಯಲ್ಲಿ ಶ್ರೀದೇವಿಯ ಅನಂತ ಮುಖಗಳನ್ನು ಅನಾವರಣಗೊಳಿಸಿದ್ದಾರೆ. ಪರಮ ಸಾಧನೆಯಾದ ಶ್ರೀಲಕ್ಷ್ಮಿಯು ಸದ್ಗತಿಯನ್ನು ತೋರುವ ಸುಖದಾಯನಿ ಎಂದು ಬಣ್ಣಿಸುತ್ತಾರೆ. ಲಕ್ಷ್ಮಿಯ ರೂಪವು ಸಾಕ್ಷಾತ್ಕಾರವಾಗಿದ್ದು, ರಕ್ಷಾತ್ಮಕ ಅಕ್ಷಯ ಪದದಾಯಣಿಯಿಗಿದ್ದಾಳೆ. ದೀನದಲಿತರ ಅನಾಥಬಂಧುಗಳ ಅನಂತಾಶಯನ ಗುಣಿಮುನಿಜನ ಭೂಷಣ ಶ್ರೀಲಕ್ಷ್ಮೀ. ಪರಮ ಸಂಜೀವಿನಿಯಾದ ಇವಳು ಸುರಮನಿ ರಂಜನಿಯಾಗಿದ್ದಾಳೆ. ಈ ಮಹಿಪತಿರಾಯರಿಗೆ ಬ್ರಹ್ಮಾನಂದ ರೂಪಿಯಾಗಿ ಪರಮ ಪಾವನಿ ಸದ್ಗತಿಯನ್ನು ತೋರಿದ್ದಾಳೆ. ಹೀಗೆ ಲಕ್ಷ್ಮೀದೇವಿಯ ವಿವಿಧಾವಳಿಗಳನ್ನು ಮನದುಂಬಿ ಮಹಿಪತಿರಾಯರು ಕೊಂಡಾಡಿದ್ದಾರೆ.

ಇದೇ ರೀತಿಯಾಗಿ ಕೃಷ್ಣದಾಸರು ಸಹ ಶ್ರೀಮಹಾಲಕ್ಷ್ಮೀ ಸ್ತುತಿಯನ್ನು ಮಾಡಿದ್ದಾರೆ. ಅವರ ತಂದೆಯವರು ಮಾಡಿದ ಕೀರ್ತನೆಯ ಪದ್ಯದ ಸ್ತುತಿಗೂ ಇವರ ಕೀರ್ತನೆಯ ಸ್ತುತಿಗೂ ವ್ಯತ್ಯಾಸವನ್ನು ಕಾಣುತ್ತೇವೆ. ಮಹಿಪತಿರಾಯರು ಲಕ್ಷ್ಮಿಯ ದಿವ್ಯಚರಣದಲ್ಲಿ ಅವಳ ಕಾರ್ಯವೈಖರಿಯನ್ನು ಹೆಚ್ಚಾಗಿ ಬಣ್ಣಿಸಿದ್ದು ಕಂಡುಬರುತ್ತದೆ. ಆದರೆ ಕೃಷ್ಣದಾಸರು ಅವಳ ಕಾರ್ಯವೈಖರಿಯ ಜೊತೆಗೆ ಪರಮಾತ್ಮನೊಡನೆ ಅವಳಾಡಿದ ರತಿಯಾಟವನ್ನು ಬಣ್ಣಿಸುತ್ತಾರೆ. ಶ್ರೀದೇವಿಯ ಸೌಂದರ್ಯದ ಚಲುವಿಕೆಯನ್ನು ಉದಾತ್ತವಾಗಿ ಬಿಂಬಿಸಿದ್ದಾರೆ.

"ಎದ್ದಳೀಗಿದಕೋ ಶ್ರೀರಮಣಿ ॥ ಎದ್ದಳೀಗಿದಕೋ

ಮುದ್ದು ಶ್ರೀ ಹರಿಯಾ ತೋಳ ತೆಕ್ಕೆಯಾನುಸಳಿ ।

ಶುದ್ಧ ರಾತ್ರಿಲಿ ಹರಿ ರತಿಯೊಳು ಮಲಗಿ

ಸರಸಿಜ ಸಖನ ಮುಂಬೆಳಗವ ಹರಿಯಲು ।

ಭರದಲಿ ಹಕ್ಕಿಯು ಕಲಕಲವೆನಲು

ನಾರದ ತುಂಬುರ ಮಾಡುವ ಪಾತ್ರ ।

ಸ್ಮರಣೆಯ ಗಾಯನ ಧ್ವನಿಯನು ಕೇಳಿ"[೨೨]

ಶ್ರೀಲಕ್ಷ್ಮಿಯ ರೂಪ ಲಾವಣ್ಯದ ಸಾಕ್ಷಾತ್ಕಾರವನ್ನು ಶ್ರೀಕೃಷ್ಣದಾಸರು ಶ್ರೀಹರಿಮುಖೇನವಾಗಿ ಹೇಳಿಕೊಂಡಿದ್ದಾರೆ. ಕೃಷ್ಣದಾಸರ ಕೀರ್ತನೆಯು ವಾದಿರಾಜರ 'ಉರುಟಣೆಯ ಕೀರ್ತನೆಯನ್ನು ನೆನಪಿಸುವಂತಿದೆ.' ಇಲ್ಲಿ ಶ್ರೀಲಕ್ಷ್ಮಿದೇವಿ ಒಯ್ಯಾರ ಒನಪನ್ನು ಬಣ್ಣಿಸುತ್ತಾ ಶ್ರೀಹರಿಯ ಜೊತೆಗಿನ ಗಾಢವಾದ ಪ್ರೀತಿ ಸುಂದರವಾಗಿ ಮೂಡಿಬಂದಿದೆ. ನಾರದ ಮುನಿಯ ಇಂಪಾದ ಇಂಚರದ ಶ್ರೀದೇವಿ ಅರೆಗಣ್ಣಿನ ನೋಟದಲ್ಲಿ ತುಂಬಿ ತುಳುಕಿದೆ. ತಾಂಬೂಲವದನ ಪ್ರಿಯಳಾದ ಶ್ರೀದೇವಿಯ ಬೈತಲೆ, ಕೊರಳಾಭರಣ, ಕೈಯಾಭರಣ ಶೋಭಿತಳಾಗಿದ್ದಾಳೆ. ಅವಳ ತುಂಬಿದ ಎದೆ ತನ್ನ ನಂಬಿದ ಜಾಲರ ಕರುಣಿಸುತ್ತಾ ಬೀರುತ್ತ ಬರುವ ಶ್ರೀಲಕ್ಷ್ಮಿಯ ದಿವ್ಯದರ್ಶನ ಕೃಷ್ಣದಾಸರಿಗೆ ವೈಶಿಷ್ಟ್ಯತೆಯಿಂದ ಕಾಣಿಸಿದೆ. ಈ ಕೀರ್ತನೆಯು ಕೃಷ್ಣದಾಸರ ಶೃಂಗಾರ ಕಲ್ಪನೆಗೆ ಬಹುಮುಖ್ಯವಾದ ಭೂಮಿಕೆಯಾಗಿದೆ. ಲಕ್ಷ್ಮೀದೇವಿಯು ಪರಮಾತ್ಮನ ಜೊತೆಯಾಡಿದ ಹಿಂದಿನ ರಾತ್ರಿಯ ರತಿ ಕ್ರೀಡೆಯನ್ನು ಹೇಳುತ್ತಾರೆ. ಲಕ್ಷ್ಮಿಯನ್ನು ನಂಬಿದ ಈ ಜೀವ ಜಗತ್ತು ಉದ್ಧಾರ ಮಾಡುವ ಮಹಾಮಾತೆಯೆಂದು ಶ್ರೀಲಕ್ಷ್ಮಿಯ ದಿವ್ಯಚರಿತೆಯನ್ನು ವಿಶಿಷ್ಟವಾಗಿ ಕೃಷ್ಣದಾಸರು ಕಟ್ಟಿಕೊಟ್ಟಿದ್ದಾರೆ.

ಲಕ್ಷ್ಮೀಸ್ತುತಿಯನ್ನು ಮಾಡಿದ ನಂತರ ಇಬ್ಬರ ಹರಿದಾಸರಲ್ಲಿ ವೆಂಕಟೇಶನ ಸ್ತುತಿಯು ಹೆಚ್ಚಾಗಿ ಕಂಡುಬರುತ್ತದೆ. ವೈಕುಂಠ ಮಂದಿರದ ಪ್ರಮುಖ ಎನಿಸಿಕೊಂಡ ವೆಂಕಟೇಶನ ದರ್ಶನದ ಸೌಭಾಗ್ಯತೆಯನ್ನು ನೆನಪಿಸುತ್ತಾರೆ. ವೆಂಕಟೇಶನ ಜೊತೆಯಿರುವ ಶ್ರೀದೇವಿಯ ಒಡನಾಟ ಹಾಗೂ ಬಿನ್ನೈವಿಸುವ ಪರಿ ಅದ್ಭುತವಾಗಿ ಕಂಡುಬಂದಿದೆ. ಇವರಲ್ಲಿ ಮುಖ್ಯವಾಗಿ ಮಹಿಪತಿರಾಯರು ವೆಂಕಟೇಶ ದೇವರ ಸ್ತುತಿಯನ್ನು ಈ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ.

ನಮೋ ನಮೋ ವೆಂಕಟೇಶ

ವೈಕುಂಠ ಮಂದಿರ ಶೇಷಾಚಲದಲಿ ।

ಬೇಕೆಂದು ಮಾಡಿದೆ ನೆಲೆವಾಸಾ ॥

ಶ್ರೀದೇವಿ ಸಂಗಡ ಸ್ವಾಮಿ ಪುಷ್ಕರಿಣಿ ತೀರದ ।

ಮೋದದಿ ಕ್ರೀಡಿಸುವ ವಿಲಾಸ ॥

ಗುರು ಮಹಿಪತಿ ಪ್ರಭು ಚರಣವ ನಂಬಿದವರ ।

ಧರೆಯೊಳು ಪೂರೈಸೋ ಮನದಾಶಾ"[೨೩]

ವೈಕುಂಠ ಮಂದಿರದಲ್ಲಿ ವಿರಾಜಮಾನರಾಗಿ ನೆಲೆಸಿದ ಶ್ರೀವೆಂಕಟೇಶನ ಚರಣಕ್ಕೆ ವಂದಿಸಿ ವೆಂಕಟೇಶ ಸ್ವಾಮಿಯ ಕಥೆಯನ್ನು ನಿರೂಪಿಸುತ್ತಾರೆ. ಶ್ರೀದೇವಿಯ ಸಂಗಡ ವೆಂಕಟೇಶಸ್ವಾಮಿಯು ಪುಷ್ಕರಿಣಿ ತೀರದಲ್ಲಿ ಮೋದದ ಲಯದಲ್ಲಿ ಜಲಕ್ರೀಡೆಯನ್ನಾಡುವ ಪರಿಯನ್ನು ತುಂಬ ಸುಂದರವಾಗಿ ಚಿತ್ರಿಸಿದ್ದಾರೆ. ಇಂಥ ಮಂದಹಾಸದ ವೆಂಕಟೇಶನಿಗೆ ಮಹಿಪತಿರಾಯರು ಮನದಾಸೆಯನ್ನು ಪೂರ್ಣಗೊಳಿಸು ಸ್ವಾಮಿ ಎಂದು ಬೇಡಿಕೊಳ್ಳುತ್ತಾರೆ. ವೆಂಕಟೇಶಸ್ವಾಮಿಯನ್ನು ಬಹು ವಿಧದಲ್ಲಿ ಮತ್ತೆ ಸ್ತುತಿಸುತ್ತಾರೆ.

ಕರುಣಿಸೊ ಕರುಣಿಸೊ ಗುರುವೆಂಕಟೇಶ ।
ಕರುಣಿಸೆನ್ನ ನೀ ನೋಡೊ ಪರಮ ಪುರುಷ

....

ಶ್ರೀನಾಥ ನೀನಲ್ಲದೆ ನನಗಾರು ಇಲ್ಲ ।
ನೀನೆ ಸಕಲಪೂರ್ಣ ಭಕ್ತವತ್ಸಲ ॥
ಮತಿಹೀನನವಗುಣ ನೋಡದಿರೆನ್ನ
ಕ್ಷಿತಿಯೊಳು ಸದ್ಗೈಸೊ ಪತಿತಪಾವನ

ದೀನನಾಥ ನೀ ಬಂದು ಮನದೊಳು ನಿಂದು ।
ಮನ್ನಿಸಿ ದಯಬೀರೋ ಘನಕೃಪಾಸಿಂಧು ॥
ವಿಶ್ವವ್ಯಾಪಕ ಸಾಧುಹೃದಯನಿವಾಸ
ದಾಸ ಮಹಿಪತಿ ಪ್ರಾಣ ಹೊರಿಯೊ ಪ್ರಾಣೇಶ"[೨೪]

ಗುರು ವೆಂಕಟೇಶ ನೀನು ಪರಮ ಪುರುಷ ಕರುಣಿಸು ಎನ್ನ ಗುರುಬಂಧ ಎಂದು ನಮಿಸುತ್ತಾರೆ. ನನ್ನನ್ನು ಕರುಣದಿಂದ ನೋಡಿ ಉದ್ಧರಿಸು ಪ್ರಭುವೆ. ಅನಂತಕೋಟಿ ಬ್ರಹ್ಮಾಂಡ ನಾಯಕ ನೀನು. ಅನಾಥಬಂಧು ರಕ್ಷಕನಾಗಿರುವೆ. ದೇವತೆಗಳ ಒಡೆಯ ಶ್ರೀಗುರುವೆ ನಿನಗೆ ವಂದನೆಗಳು.

ನನ್ನಾಸೆಯನ್ನು ಪೂರೈಸು ಪ್ರಭು, ವೇದಗಳಿಗೂ ನಿಲುಕದ ಮಹಾಮಹಿಮೆಯ ರೂಪ ನಿನ್ನದು. ತ್ರಿಲೋಕ್ಯವಂದಿತ ಚೆಲುಮೆಯ ರೂಪ ನಿನ್ನದು. ಇಂದಿರಾಪತಿರಾಯ ಸಲುಹು ಎನ್ನ ತಂದೆ. ಎಂದು ವಿವಿಧ ರೀತಿಯಲ್ಲಿ ಬಿನ್ನೈವಿಸಿಕೊಳ್ಳುತ್ತಾರೆ. ವೆಂಕಟೇಶಸ್ವಾಮಿ ನೀ ಇಲ್ಲದೆ ನನಗೆ ಯಾರ ಆಶ್ರಯವಿಲ್ಲ. ಪತಿತ ಪಾವನವಾದ ನೀನು ಮತಿಹೀನ ಗುಣಗಳನ್ನು ನೋಡದೆ ನನ್ನನ್ನು ಉದ್ಧರಿಸು. ದೀನನಾಥನಾದ ನೀನು ನನ್ನ ಮನದ ಮಂದಿರದಲ್ಲಿ ನಿಂತು ನನ್ನ ತಪ್ಪನ್ನು ಕ್ಷಮಿಸು. ವಿಶ್ವವ್ಯಾಪಕವಾದ ನೀನು ಸಾಧು ಸಜ್ಜನರ ಹೃದಯನಿವಾಸಿಯಾಗಿರುವೆ. ಈ

ಮಹಿಪತಿದಾಸನನ್ನು ಪುನೀತನನ್ನಾಗಿ ಮಾಡು ಪ್ರಭುವೇ ಎಂದು ವೆಂಕಟೇಶ ಸ್ವಾಮಿಯ ದಿವ್ಯಚರಣದಲ್ಲಿ ಮತ್ತೆ ಮತ್ತೆ ಸ್ಮರಿಸುತ್ತಾ ಸಾಗಿದ್ದಾರೆ.

ಇದೇ ಮಾದರಿಯಲ್ಲಿ ಕೃಷ್ಣದಾಸರು ಸಹ ತಮ್ಮ ತಂದೆಯ ಹಾಗೆ ವೆಂಕಟೇಶ ಸ್ವಾಮಿಯ ಸ್ತುತಿಯನ್ನು ಕೀರ್ತನೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಮಹಿಪತಿರಾಯರಂತೆ ಕೃಷ್ಣದಾಸರು ವೆಂಕಟೇಶ ಸ್ವಾಮಿಯ ಅನನ್ಯ ವ್ಯಕ್ತಿತ್ವನ್ನು ಭಕ್ತಿಭಾವ ಪೂರ್ಣವಾಗಿ ಕೊಂಡಾಡಿದ್ದಾರೆ.

"ಶರಣು ವೆಂಕಟರಮಣ ಭಕ್ತ ಸಂಕಟ ಹರಣ
ಶರಣು ಶೇಷಾದ್ರೀಶ ಪರಿಹೃತನೆ ಭವಪಾಶ
ಶರಣು ಸರ್ವರಿಗಾದ್ಯ ಅಜಭವಸುರರಾಧ್ಯ
ಶರಣು ವೇದಾಂತ - ವೇದ್ಯ

ಶರಣು ನಿರ್ಜಿತ ದುರಿತ ನಾಮ ವಿಶ್ವಂಭರಿತ
ಶರಣು ಘನಕಾರುಣಿಯೆ ದೇವ ಚೂಡಾಮಣಿಯೆ
ಶರಣು ಮಹಿಪತಿನಂದನೊಡೆಯ ಪರಮಾನಂದ ಶರಣು
ಶ್ರೀಹರಿ ಮುಕುಂದಾ"[೨೫]

ಭಕ್ತರ ಸಂಕಟ ನಿವಾರಿಸು ಪ್ರಭು ನೀನು. ನಿನ್ನನ್ನು ನಂಬಿದ ಭಕ್ತರ ಕಷ್ಟಗಳನ್ನು ಪರಿಹರಿಸುವ ಸ್ವಾಮಿ ನೀನಾಗಿರುವೆ. ಸರ್ವರಿಗೂ ಸುಖ-ಶಾಂತಿಯನ್ನು ನೀಡಿ ವೇದಾಂತ ಘನ ಭೀಮ ಆಗಿರುವೆ. ಏನೂ ಅರಿಯದ ದುರುಳನು ನಾನು. ಚೂಡಾಮಣಿಯ ದೇವನಾದ ನೀನು. ಈ ಮಹಿಪತಿನಂದನ ಬೇಡಿಕೆಗೆ ಸ್ಪಂದಿಸಿ ಪರಮಾನಂದವನ್ನು ನೀಡು ಗುರುವೆಂದು ವೆಂಕಟರಮಣನಲ್ಲಿ ಬೇಡಿಕೊಳ್ಳುತ್ತಾರೆ. ಮತ್ತೆ ವೆಂಕಟೇಶ ಸ್ವಾಮಿಯ ಕೀರ್ತನೆಯನ್ನು ಹಲವು ವಿಧದಲ್ಲಿ ಭಜಿಸುತ್ತಾರೆ.

"ಜಯದೇವ ಜಯದೇವ ಜಯ ವೆಂಕಟೇಶಾ ।
ಶ್ರಯ ಸುಖದಾಯಕ ಸ್ವಾಮಿ ಉರಗಾಚಲವಾಸಾ ॥

ಕರುಣಾಕರ ರತ್ನಾಕರ ಕನ್ಯಾ ಮನೋಹಾರಿ ।
ಸುರವರ್ಧನ ಮುರಮರ್ದನ ಗೋವರ್ಧನಧಾರಿ
ವರಮಂದಿರ ಧೃತಕುಂದರ ಸುಂದರ ಸಹಕಾರಿ
ಕರಿವಾಹನನುತ ಮೋಹನ ಖಗವಾಹನ ಶೌರಿ"[೨೬]

ಈ ಮೂರು ನುಡಿಯ ಕೀರ್ತನೆಯಲ್ಲಿ ವೆಂಕಟೇಶಸ್ವಾಮಿಗೆ ಜಯವಂದನೆಯನ್ನು ಸಲ್ಲಿಸಿದ್ದಾರೆ. ವೆಂಕಟೇಶ ಸ್ವಾಮಿಯ ಹಲವು ಕಾರ್ಯ ವಿಧಾನವನ್ನು ಕೃಷ್ಣದಾಸರು ಈ ಕೀರ್ತನೆಯಲ್ಲಿ ಬಿಂಬಿಸಿದ್ದಾರೆ. ಕರುಣಾಕರ, ರತ್ನಾಕರ, ಸೂರವರ್ಧನ, ಗೋವರ್ಧನಾಧಾರಿಯಾದ ವೆಂಕಟೇಶ ಸ್ವಾಮಿ ಈ ಜನದೋದ್ಧಾರಕನಾಗಿದ್ದಾನೆ. ಸುಖಕರ್ತನು, ದುಃಖಕರ್ತನು ಅವನಾಗಿದ್ದಾನೆ. ಸರಸಿ ನಯನ ರೂಪನು, ಸಕಲ ಕಲಾ ಪರಮಾತ್ಮ ಮನಿಕುಲವರ ಶಯನನಾಗಿದ್ದಾನೆ. ಇಂತಹ ಸ್ವಾಮಿಯನ್ನು ಕೃಷ್ಣದಾಸರು ಮತ್ತೆ ಮತ್ತೆ ಭಕ್ತಿಪೂರ್ವಕವಾಗಿ ಸ್ತುತಿಸುತ್ತಾರೆ. ತಮ್ಮ ನವವಿಧ ಭಕ್ತಿಯ ಶ್ರೇಷ್ಠತೆಯನ್ನು ತೋರ್ಪಡಿಸುತ್ತಾರೆ. ದಯದಿಂದಲೇ ಪಾಲಿಸು ಎನ್ನನು ಜಗದೀಶ ಶ್ರೀವೆಂಕಟೇಶ. ಧರ್ಮಾರ್ಥ ಕಾಮ ಚತುರ್ವಿಧ ಮುಕ್ತಿಗಳು ಧರ್ಮವರಿತ ಸಾಧು ಸಜ್ಜನರಿಗೆ ನೀಡುತ್ತಿರುವೆ. ದಯಾಳು ಶ್ರೀವೆಂಕಟೇಶ ಮಂದಮತಿಯಲ್ಲಿ ಅತಿ ಮಂದ ನಾನು. ಜ್ಞಾನ ಭಕ್ತಿಯನ್ನು ನೀಡಿದ ಮಹಿಪತಿ ಸ್ವಾಮಿ ನಿನ್ನ ರೂಪದಲ್ಲಿ ಉದ್ಧರಿಸು. ಹೀಗೆ ಕೃಷ್ಣದಾಸರು ತನ್ನ ತಂದೆಯ ಜೊತೆಗೆ ಸಾಮೀಪ್ಯಕರಿಸಿಕೊಂಡು ಜ್ಞಾನದ ಸಾಕ್ಷಾತ್ಕಾರವನ್ನು, ಗುರುವಿನ ಮಹತ್ವವನ್ನು, ವೆಂಕಟೇಶ್ವರರನ್ನು ನೆನಪಿಸುತ್ತಾ ಈ ಕೀರ್ತನೆಗಳಲ್ಲಿ ರಚಿಸಿದ್ದಾರೆ.

ವೆಂಕಟೇಶ್ವರಸ್ವಾಮಿ ಸ್ತುತಿಯನ್ನು ಮಾಡಿದ ಬಳಿಕ ಇಬ್ಬರು ಹರಿದಾಸರು ದತ್ತಾತ್ರೇಯ ಸ್ವಾಮಿಯ ಸ್ತುತಿಯನ್ನು ಮಾಡಿದ್ದಾರೆ. ದತ್ತಾತ್ರೇಯ ಸ್ವಾಮಿಯ ವಿವಿಧ ಕಾರ್ಯವೈಖರಿ ಇಲ್ಲಿಯ ಎಲ್ಲ ಕೀರ್ತನೆಗಳಲ್ಲಿ ಬಿಂಬಿಸುತ್ತವೆ. ದತ್ತಾತ್ರೇಯ ಸ್ವಾಮಿಯ ಮಹಿಮೆಯನ್ನು ದಾಸರು ಮನದುಂಬಿ ಕೊಂಡಾಡಿದ್ದಾರೆ. ಅವುಗಳಲ್ಲಿ ಮಹಿಪತಿರಾಯರ ಕೀರ್ತನೆಯು ಬಹುಮುಖ್ಯವಾಗಿ ಮೂಡಿಬಂದಿದೆ.

"ದತ್ತ ದತ್ತೆನ್ನಲು ಹತ್ತಿ ತಾಂ ಬಾಹನು
ಚಿತ್ತದೊಳಾಗುವಾ ಮತ್ತ ಶಾಶ್ವತನು
ದತ್ತ ಉಳ್ಳವನ ಹತ್ತಿಲೇ ಈಹನು
ವೃತ್ತಿ ಒಂದಾದರೆ ಹಸ್ತಗುಡುವನು

ಎತ್ತ ನೋಡಿದರೆ ಮೊತ್ತವಾಗಿಹ ತಾಂ
ಉತ್ತಮೋತ್ತಮತಾನೆತ್ತುತಾ ಈತಾ
ಅತ್ತಲಿತ್ತಾಗದೆ ಹತ್ತಿಲೆ ಸೂಸುತ
ಮುತ್ತಿನಂತಿಹ್ವನು ನೆಲಿಲೆ ಭಾಸುತಾ

ದತ್ತನೆಂದನ್ನಲು ಕತ್ತಲೆಹೊಗುದು
ಮೃತ್ಯು ಅಂಜುತಲಿ ಭೃತ್ಯನಾಗಿಹುದು

ದತ್ತನಿಂದಧಿಕ ಮತ್ತು ತಾಂ ಒಂದು
ಉತ್ತಮರಿಗೆ ತಾ ಸತ್ಯ ಭಾಸುದು"[೨೭]

ಮಹಿಪತಿರಾಯರು ದತ್ತ ಪದದ ಶಕ್ತಿಯನ್ನು ನವಿರಾಗಿ ವರ್ಣಿಸಿದ್ದಾರೆ. ದತ್ತ ಎನ್ನಲು ನಮ್ಮ ಚಿತ್ತದಲ್ಲಿ ಮೂಡಿ ಬರುವ ಶಾಶ್ವತ ಸುಖವ ನೀಡುವ ದತ್ತಾತ್ರೇಯ ಸ್ವಾಮಿಯೇ ಶರಣು ಎನ್ನುತ್ತಾರೆ. ಹರಿದಾಸರು ಎತ್ತ ನೋಡಿದತ್ತ ದತ್ತನ ಮಹಿಮೆಯು ಹರಡಿಕೊಂಡಿರುವುದನ್ನು ಗುರುತಿಸುತ್ತಾರೆ. ಉತ್ತಮರೊಳಗುತ್ತಮ ಈತನು. ಅತ್ತಲ್ಲಿತ್ತ ಹೋಗದವನೆ ದತ್ತ. ದತ್ತ ಎಂದರೆ ಕತ್ತಲೆ ಓಡುವುದು, ಮರಣವು ಸಮೀಪ ಬಾರದು. ದತ್ತನಿಂದಲೇ ಒಳ್ಳೆಯದು ಆಗುವುದು. ಸ್ವಸ್ತಮನಕ್ಕೆ ಸುಖ ನೆಮ್ಮದಿ ನೀಡುವ ದತ್ತನ ಮಹಿಮೆ ಅಪಾರ. ಎನ್ನುತ ದತ್ತ ದತ್ತೆಂದು ಮಹಿಪತಿರಾಯರ ಮನವು ಸ್ಪಂದಿಸುವುದು. ಈ ಲೋಕದಲ್ಲಿ ಸುಖ ವಿಶ್ರಾಂತಿಯು ದತ್ತನ ಮಹಿಮೆಯಿಂದಲೇ ಬರುವುದು ಮಾತ್ರ ಸಾಧ್ಯ. ಹಾಗಾಗಿ ಮಾಯೆಯ ಭ್ರಾಂತಿಯ ಬೆನ್ನತ್ತಿ ಹೋಗುವುದಕ್ಕಿಂತ, ದತ್ತನ ಭಜಿಸುವದು ಲೇಸೆಂದು ಮಹಿಪತಿರಾಯರು ಆಡಿಕೊಳ್ಳುತ್ತಾರೆ. ದತ್ತನನ್ನೇ ಕುರಿತು ಅನೇಕ ಕೀರ್ತನೆಗಳನ್ನು ಮಹಿಪತಿರಾಯರು ರಚಿಸಿದ್ದಾರೆ.

"ದತ್ತ ನಮ್ಮನಿ ದೈವ ಚಿತ್ತಮನದೊಳಗಿಹ್ಯ
ಎತ್ತ ಹೋದರು ನಮ್ಮ ಹತ್ತಲಿಹನೊ

ಸುತ್ತ ಸೂಸುತಲಿಹ್ಯ ನಿತ್ಯ ನಿಜ ಘನವಾಗಿ
ಹೃತ್ಕಮಲದೊಳು ತಾಂ ಮುತ್ತಿನಂತೆ

ಗುತ್ತಳಿದು ಒಳಗ ತಾಂ ಪುತ್ತಳಿಯು ಹೊಳೆವ ಪರಿ
ಮೊತ್ತವಾಗಿಹ್ಯ ಪೂರ್ಣ ನೆತ್ತಿವೊಳಗ

ದತ್ತವುಳ್ಳವನಿಗೆ ಹತ್ತಿಸಂಗಡ ಬಾಹ
ವಿತ್ತ ಒಡಿವ್ಯಾಗೆ ತಾಂ ಕರ್ತುನಮ್ಮ"[೨೮]

ಮಹಿಪತಿರಾಯರು ದತ್ತ ಸ್ವಾಮಿಯ ಮೇಲೆ ಎಲ್ಲಿಲ್ಲದ ಭಕ್ತಿ ಇಟ್ಟುಕೊಂಡವರು. ದತ್ತ ನಮ್ಮ ಮನೆಯ ದೈವ. ಈ ಚಿತ್ತದ ಮನದೊಳಗೆ ಎತ್ತ ಹೋದರೂ ನಮ್ಮ ಬೆನ್ನನ್ನು ಹತ್ತಿದವನು. ಸುತ್ತಮುತ್ತಲೂ ನಿತ್ಯಪರಿಮಳದಂತೆ ಮುತ್ತಿನಂತೆ ಕಂಗೊಳಿಸುವವನು. ಗೊತ್ತಿದ್ದು ಗೊತ್ತಿಲ್ಲದೆ ಹೊಳೆಯುವ ಮೂರ್ತಿಯಾಗಿ ಪೂರ್ಣನಿಧಿಯನ್ನು ನನ್ನ ತಲೆಯ ಮೇಲಿಟ್ಟಿರುವ ಕರುಣಾನಿಧಿ. ದತ್ತನ ಕೃಪೆ ಇರುವುದರಿಂದ ಭಕ್ತ ಸಂಗಡ ಹೆಚ್ಚುವುದು ಮತ್ತು ಈ ಜಗದಲ್ಲಿ ಕಷ್ಟಗಳು ಕಣ್ಮರೆಯಾಗುತ್ತವೆ. ದತ್ತ ಸ್ವಾಮಿಗಿಂತ ಹೆಚ್ಚಿನ ದೈವವನ್ನು ಈ ಜಗತ್ತಿನಲ್ಲಿ ನಾನು

ಕಾಣೆ. ಎಂದು ಮಹಿಪತಿರಾಯರು ದತ್ತನ ಮೇಲಿಟ್ಟಿರುವ ಭಕ್ತಿಯನ್ನು ಪ್ರಕಟಿಸುತ್ತಾರೆ. ದತ್ತ ಶ್ರೀಗುರುವಿನ ಸಾಕ್ಷಾತ್ಕಾರ ಆಗಿದ್ದಾನೆ. ಆತ ನಿರ್ಗುಣಿತ, ನಿಶ್ಚಳ ಗಗನಕಾರ. ಸುಗುಣದಲ್ಲಿ ತಾನೇ ಸಹಕಾರವಾಗಿರುವವನು. ಅಗಣಿತ ಗುಣ ದತ್ತ ಸ್ವಾಮಿಯಲ್ಲಿ ಅಪಾರ. ನಿಗಮ ಗೋಚರ ನಿರುಪಮ ನಿರ್ಧಾರ ದತ್ತ ಸ್ವಾಮಿಯದು. ಹೀಗೆ ದತ್ತಸ್ವಾಮಿಯ ಮಹಿಮೆಯ ಮೂರ್ತಿಯನ್ನು ಮನದುಂಬಿ ಕೊಂಡಾಡಿದ್ದಾರೆ. ಇದೇ ರೀತಿಯಲ್ಲಿ ಕೃಷ್ಣದಾಸರು ತಂದೆಗಿಂತಲೂ ಹೆಚ್ಚಿನ ಭಕ್ತಿ–ಭಾವ ದತ್ತ ಸ್ವಾಮಿಯಲ್ಲಿಟ್ಟುಕೊಂಡು ಇಲ್ಲಿಯ ಕೀರ್ತನೆಯನ್ನು ರಚಿಸಿದ್ದಾರೆ.

"ದತ್ತಾತ್ರೇಯ ಸ್ವಾಮಿ ಕೃಪೆ ಮಾಡೈ ನೀಯನ್ನ ಮ್ಯಾಲ

ಅನಿಮಿಷಮಾನಸ ಸಂಚಾರಾ
ಅನಾಥ ಜನ ಸಂಕಟ ಪರಿಹಾರಾ
ದೀನ ದಯಾಲ ರಮಾವರಾ ನೆನೆವರ ಸಹಕಾರಾ

ಅನಸೂಯಾಕರ ಸಂಪುಟರನ್ನಾ
ಘನತರ ಚರಿತ ಪರಮ ಪಾವನ್ನಾ
ಅನುಪಮ ತ್ರೈಜಗ ಜೀವನ್ನಾ ವನರುಹವದನಾ"[೫]

ಕೃಷ್ಣದಾಸರು ಭಾವಪೂರ್ಣವಾಗಿ ದತ್ತಾತ್ರೇಯನಲ್ಲಿ ಮೊರೆ ಹೋಗುತ್ತಾರೆ. ಇಡೀ ವಿಶ್ವವನ್ನೇ ಸಂಚರಿಸುವವನು ನೀನು. ಅನಾಥ ಜನರ ಸಂಕಟವನ್ನು ಪರಿಹರಿಸಿದವನು. ದೀನ ದಯಾಳು ನೀನೆಯಾಗಿರುವೆ, ಸತ್ಯಸನಾತನೆ ಮುನಿದಿಗಂಬರ ಆಗಿರುವೆ. ಅನಸೂಯಾ ನಂದನ ಯೋಗೀಶ ಭಕ್ತರ ಬದುಕಿಸೋ ಅವಧೂತ ಎಂದು ಹೇಳುತ್ತಾರೆ. ಕೊನೆಗೆ ಕೃಷ್ಣದಾಸರು ಮಂದಮತಿ ಬಾಲನು ನಾನು, ನನ್ನ ಬಿನ್ನಹದ ಸ್ತುತಿಯನ್ನು ಕೇಳಿ ನನಗೆ ಶ್ರೀರಕ್ಷೆಯನ್ನು ನೀಡು ಎಂದು ಹಂಬಲಿಸುತ್ತಾರೆ. ದತ್ತ ಸ್ವಾಮಿಯನ್ನು ಕುರಿತು ೧೫ಕ್ಕೂ ಹೆಚ್ಚು ಕೀರ್ತನೆಗಳನ್ನು ಕೃಷ್ಣದಾಸರು ರಚಿಸಿದ್ದಾರೆ. ಅವುಗಳಲ್ಲಿ ದತ್ತನ ಸಾಮೀಪ್ಯವನ್ನು ಬಯಸುವ ನಿಟ್ಟಿನಲ್ಲಿ ಇಲ್ಲಿಯ ಕೀರ್ತನೆಗಳು ರಚಿತವಾಗಿವೆ. ದತ್ತಾತ್ರೇಯನೆಂದರೆ ವರದಾಯಕ. ಭಕುತಿ ಮಾಡಲು ಮೆಚ್ಚಿ ಅನುಸೂಯೆ ಕರೆದಾಗ ಸುಕುಮಾರ ವೇಷವ ತಾಳಿದವನು ನೀನೆ. ಸರ್ವ ಸಜ್ಜನರಿಗೆ ಮುಕ್ತಿಪಥ ದೊರೆಯಲಿಕ್ಕೆ ಯೋಗ ರೂಪ ಬರೆಸಿದಾತ ಶ್ರೀದತ್ತಾ. ಸಕಲ ಜನರ ಕರುಣಾಮಯಿ ಸ್ವಾಮಿ ಎಂದು ಸ್ತುತಿಸಿದ್ದಾರೆ.

ಮುಂದುವರಿದು ದಾಸರು ಶಿವ–ಪಾರ್ವತಿ ಕುರಿತು ಅನೇಕ ಕೀರ್ತನೆಯನ್ನು ರಚಿಸಿದ್ದಾರೆ. ಕೃಷ್ಣದಾಸರ ವಿಶಿಷ್ಟತೆಗೆ ಈ ಕೀರ್ತನೆಗಳು ಮೆರುಗನ್ನು ಉಂಟುಮಾಡುತ್ತವೆ. ಹೆಚ್ಚಿನ ಹರಿದಾಸರು ಶಿವಸ್ತುತಿ, ಪಾರ್ವತಿಯ ಸ್ತುತಿ ಕಡಿಮೆ ಮಟ್ಟದಲ್ಲಿ ಸ್ತುತಿಸಿದ್ದು ಕಂಡುಬರುತ್ತದೆ. ಆದರೆ ಕೃಷ್ಣದಾಸರಲ್ಲಿ ಶಿವ–ಪಾರ್ವತಿಯರ ಮೇಲಿರುವ ಭಕ್ತಿಯೇ ಅನನ್ಯವಾಗಿದೆ. ಭಕ್ತರ ದಯಾನಿಧಿಯಾಗಿ ಶಿವ–ಪಾರ್ವತಿಯರ ಕುರಿತು ಕೃಷ್ಣದಾಸರು ಹದುಳವಾಗಿ ಬಿಂಬಿಸಿದ್ದಾರೆ.

"ಅಕ್ಕ ಕೇಳೆ ನಿನ್ನ ತಪಸಿಯರೊಳಗೊಬ್ಬ
ಮುಕ್ಕಣ್ಣಗೀವರಂತೆ ।
ಮೂರ್ಖನೋ ಗಿರಿರಾಜ ವಿಗಡ ಮುನಿಯ ಮಾತಾ
ಲೆಕ್ಕಿಸಿ ಮದುವೆಯ ಮಾಡಿಕೊಡುವನಂತೆ

ತಲೆಯೆಲ್ಲಾಜಡೆಯಂತೆ । ಅದರೊಳಗ ಜಲವಂತೆ ।
ತಿಲಕ ಪಣೆಗೆ ಬಾಲಚಂದ್ರನಂತೆ ।
ಹೊಳೆವ ಕಿಡಿಗಣ್ಣಂತೆ । ನಂಜುಗೊರಳನಂತೆ ।
ಸಲೆರುಂಡ ಮಾಲೆಯಾ । ಸರವ ಹಾಕಿಹನಂತೆ ।
ಸಲೆರುಂಡ ಮಾಲೆಯಾ । ಸರವ ಹಾಕಿಹನಂತೆ ॥

ಉರಗಾಭೂಷಣನಂತೆ । ಭಸ್ಮಲೇಪನನಂತೆ ।
ಕರಿಯ ಚರ್ಮಾರಂಬರದುಡಿಗೆಯಂತೆ ।
ತಿರಿದು ತಿಂಬುವನಂತೆ । ಬಿಳಿಯ ಮೈಯವನಂತೆ ।
ನಿರುತ ಡಮರು ಬಾರಿಸುವ ಜೋಗಿಯಂತೆ ॥

ಹಡೆದವಳಿಲ್ಲವಂತೆ । ಎತ್ತನೇರುವನಂತೆ
ಅಡವಿ ಗಿರಿಗಳಲಿ ಇಪ್ಪನಂತೆ ।
ಒಡನೆ ಪುಲಿದೊಗಲದ ಹಾಸಿಗೆ ಇಹುದಂತೆ ।
ನುಡಿಗೊಮ್ಮೆ ರಾಮ ರಾಮಾಯಂಬ ಸ್ಮರಣೆಯಂತೆ"[೩೦]

ಇಲ್ಲಿ ಕನಸಿನ ರೂಪವಾದ ಮಹಿಳೆಯ ಮೂಲಕ ಅಥವಾ ತಪಸ್ಸಿಗೆ ಅಣಿಯಾದ ಪಾರ್ವತಿಯ ಮನೋವೇದನೆಯನ್ನು ಕೃಷ್ಣದಾಸರು ಸೂಚ್ಯವಾಗಿ ವರ್ಣಿಸಿದ್ದಾರೆ. ಶಿವನ ಸಂಪೂರ್ಣ ವ್ಯಕ್ತಿತ್ವ ಈ ಪದ್ಯದಲ್ಲಿ ಅರಳಿ ನಿಂತಿದೆ. ಶಿವನ ದೇಹಸಿರಿಯನ್ನು ವರ್ಣಿಸಿ ಆತನ ಕಾರ್ಯರೂಪವನ್ನು ಬಣ್ಣಿಸಿ ಇಂತವನನ್ನು ಮದುವೆ ಮಾಡಿಕೊಳ್ಳು ಎಂದು ಹೇಳುತ್ತಾರೆ. ಕೃಷ್ಣದಾಸರ ಭಕ್ತಿಯ ಉತ್ಕಟತೆ ಇಲ್ಲಿ ಸುಂದರವಾಗಿ ಅಭಿವ್ಯಕ್ತಗೊಂಡಿದೆ. ಮುಕ್ಕಣ್ಣ ತನ್ನ ತಲೆಯ ಮೇಲೆ ಜಡೆಯನ್ನು ಕಟ್ಟಿಕೊಂಡವನು. ಆ ಜಡೆಯಲ್ಲಿ ಗಂಗಾಮಾತೆಯನ್ನು ಇಟ್ಟುಕೊಂಡವನು. ಹಣೆಯಲ್ಲಿ ಬಾಲ ಚಂದ್ರನನ್ನು ಇಟ್ಟುಕೊಂಡವನು. ಹೊಳೆಯುವ ಕಿಡಿ ಕಣ್ಣುಗಳು, ನಂಜೇರಿದ ಕೊರಳು ಸರ್ಪದಿಂದ ಮಾಲೆಯ ಮಾಡಿಕೊಂಡವ ಶಿವ. ಇಂತಹ ಉರಗಭೂಷಣನಾದ ಶಿವನು ಭಸ್ಮಲೇಪನ ಮಾಡಿಕೊಂಡು ತಿರಿದು ತಿಂಬುವವನಾಗಿದ್ದಾನೆ.

ಡಂಗುರವ ಬಾರಿಸುತ್ತಾ ಜೋಗಿಯಂತೆ ಕಾಣುವನು. ಹಡೆದವ್ವಳು ಇಲ್ಲವಂತೆ ಇವನಿಗೆ. ಅಡವಿಯೊಳಗೆ ಸದಾ ಇರುವವನು. ಈತನು ಹುಲಿಯ ತೊಗಲಿನ ಹಾಸಿಗೆಯನ್ನು ತನ್ನೊಡನೆ ಇಟ್ಟುಕೊಂಡವನು. ಯಾರೂ ಇಲ್ಲದ ಪರದೇಶಿಯಂತೆ ತಾನೊಬ್ಬನೇ ಅಡವಿಯಲ್ಲಿರುವವನು. ತಾರಕ ಶಿವನೆಂದು ಮರೆಯ ಹೋಗಬೇಕೆಂದು ಇಂತಹವನನ್ನು ಮದುವೆಯಾಗಬೇಕು ಎನ್ನುತ ತಪಸ್ಸಿಗೆ ಕುಳಿತ ಅಕ್ಕನ ಮನಸ್ಸಿನ ವೃತ್ತಾಂತವನ್ನು ಕೃಷ್ಣದಾಸರು ಸುಂದರವಾಗಿ ಶಿವನ ಸ್ತುತಿ ಮಾಡುವ ಮುಖೇನವಾಗಿ ಪ್ರಕಟಿಸಿದ್ದಾರೆ. ಜೋಗಿಯ ನೋಡಿರೊ ತಪಸ ಯೋಗಿಯಾ ನೋಡಿರೊ ಎನ್ನತ ಶಿವನ ಸ್ಮರಣೆಯನ್ನು ಮಾಡಿದ್ದಾರೆ. ಇವುಗಳ ಜೊತೆಗೆ ಪಾರ್ವತಿಯ ಘನ ಮಹಿಮೆಯನ್ನು ಸಂದರ್ಭಕ್ಕೆ ತಕ್ಕಂತೆ ಭಜಿಸಿದ್ದಾರೆ. ಕಾಳಿ, ಭವಾನಿ, ಶಿವ ಎನ್ನುತ್ತಾ ಪಾರ್ವತಿಯ ಚರಣಕ್ಕೆ ಶಿರಬಾಗಿದ್ದಾರೆ ಕೃಷ್ಣದಾಸರು.

ಶಿವ–ಪಾರ್ವತಿ ಸ್ತುತಿಯ ನಂತರ ಕೃಷ್ಣದಾಸರು ಹನುಮಂತ ಸ್ವಾಮಿಯನ್ನು ಅನೇಕ ಪದ್ಯಗಳಲ್ಲಿ ಸ್ಮರಿಸುತ್ತಾರೆ. ಅವುಗಳಲ್ಲಿ ಮುಖ್ಯವಾಗಿ ಅವನ ಮೂರು ಅವತಾರಗಳನ್ನು ಕೃಷ್ಣದಾಸರು ಸುಂದರವಾಗಿ ಈ ಕೀರ್ತನೆಯಲ್ಲಿ ಬಣ್ಣಿಸುತ್ತಾರೆ.

"ಈತನೆನೇ ಹನುಮನು ಈತನೆನೇ ನಮ್ಮಗುರು
ಲಂಕೆಯ ಸುಖಗ ನಿಶ್ಶಂಕೆಯಲುಣಿಸಿದಾ
ಕೌರವ ಬಲದ ಕುಠಾರಿಯಂದೆನಿಸಿದಾ
ಮೂರೇಳು ದುರ್ಭಾಷ್ಯ ಹಾರಿಸಿದಾ ಮುನಿ
ಹರಿ ಮತ ಸ್ಥಾಪನ ಬಿರುದಾಂಕ ದೇವನು
ಗುರುಮಹಿಪತಿ ಜನುದ್ಧರಿಸದ ದೇವನು"[೩೧]

ಎಂದು ಕೃಷ್ಣದಾಸರು ಹನುಮಂತನ ಅವತಾರವನ್ನು ವಿಭಿನ್ನವಾಗಿ ಈ ಕೀರ್ತನೆಯಲ್ಲಿ ವಿಶ್ಲೇಷಿಸಿದ್ದಾರೆ. ಅಂಜನೆಯ ಉದರದಲ್ಲಿ ಬಂದವನು ಹನುಮನು. ಶ್ರೀರಾಮನ ಸೇವೆಯಲ್ಲಿ ನಿರತನಾಗಿ ಸೀತಾಮಾತೆಯ ಕಳೆದುಹೋದ ಸುದ್ದಿಯನ್ನು ತಂದವನು. ರಾವಣನ ಸೈನ್ಯವನ್ನು ನಾಶ ಮಾಡಿದವನು ಹನುಮಂತನು. ಇದು ಆತನ ಮೊದಲ ರೂಪ. ಎರಡನೆಯ ರೂಪದಲ್ಲಿ ಕುಂತಿಯ ಉದರದಲ್ಲಿ ಬಂದು ಭೀಮನ ಅವತಾರವನ್ನು ಪ್ರಕಟಿಸಿದವನು. ದುರ್ಯೋಧನನ ಸೈನ್ಯವನ್ನು ನಾಶಪಡಿಸಿದವನು. ಮೂರನೆಯ ಅವತಾರದಲ್ಲಿ ಹರಿಮತ ಬಿರುದಾಂಕಿತ ದೇವರ ದುರ್ಭಾಕ್ಷಿ ಮುನಿಯಾಗಿ ಪರಿಪರಿ ಚರಿತೆಯನ್ನು ಜಗದೊಳಗೆ ರಚಿಸಿ ಹರಿಪ್ರಿಯನಾದವನು ಶ್ರೀಹನುಮನು. ಹನುಮಂತನ ವಿವಿಧ ಅವತಾರ, ಆತನ ಸಾಹಸ ಗಾಥೆ, ವ್ಯಕ್ತಿತ್ವ ದರ್ಶನ ಮುಂತಾದವುಗಳನ್ನು ಕೃಷ್ಣದಾಸರು ಪ್ರಕಟಿಸಿದ್ದಾರೆ. ಆತನ ಸೇವಕತನದ ಭಕ್ತಿಗೆ ಮಾರು ಹೋಗುತ್ತಾರೆ. ಹನುಮಂತನು ಶುಭಕಾರ್ಯ ಕೆಲಸಗಳಿಗೆ ಗೆಲುವು ಸಾಧಿಸಿ, ಮನೋಬಯಕೆಯನ್ನು

ಪೂರ್ಣ ಮಾಡುವಲ್ಲಿ ನಿಸ್ಸೀಮನು. ಆತನ ಮಹಿಮೆಯನ್ನು ಯಾರೂ ಅರಿಯರು. ವಾಯುಕುಮಾರನಾದ ಹನುಮಂತನು ಧೀರನು, ಘನ ಗಂಭೀರನು ಆಗಿರುವನು. ಇಂತಹ ಹನುಮಂತ ದೇವನಲ್ಲಿ ಕೃಷ್ಣದಾಸರು ಸನ್ಮಾರ್ಗದಲ್ಲಿ ನಡೆಯುವ ಸೌಭಾಗ್ಯವನ್ನು ನೀಡಲೆಂದು ಬೇಡಿಕೊಳ್ಳುತ್ತಾರೆ.

ಇಬ್ಬರು ಹರಿದಾಸರು ತಮ್ಮ ಭಕ್ತಿಭಾವ ಪೂರ್ಣವಾಗಿ ದೇವತಾಸ್ತುತಿಯನ್ನು ಬಿಡಿ ಬಿಡಿಯಾಗಿ ಅನೇಕ ಕೀರ್ತನೆಗಳಲ್ಲಿ ಉದಾತ್ತವಾಗಿ ಪ್ರಕಟಿಸಿದ್ದಾರೆ. ದೇವತಾಸ್ತುತಿಯು ಮಹಿಪತಿರಾಯರ ಹನ್ನೊಂದು ನುಡಿಯ ಕೀರ್ತನೆಯಲ್ಲಿ ಎಲ್ಲ ದೇವತೆಗಳನ್ನು ಭಕ್ತಿಭಾವದಿಂದ ಸ್ತುತಿಸುವ ಪದ್ಯವು ಈ ರೀತಿಯಲ್ಲಿದೆ.

"ನಮೋ ನಮೋ ನಾ ಮಾಡುವೆ
ಬ್ರಹ್ಮ ಸುಖದಲ್ಲಿ ನಲಿದಾಡುವೆ ॥

ನಮೋ ಶ್ರೀ ಗಣನಾಯಕನಿಗೆ ನಮೋ ನಮೋ ಶ್ರೀ ಸರಸ್ವತಿಗೆ
ನಮೋ ಶ್ರೀ ಮಾತಾಪಿತರಿಗೆ ನಮೋ ನಮೋ ಸ್ವಹಿತರಿಗೆ
ನಮೋ ನಮೋ ॥

ನಮೋ ಶ್ರೀ ಗುರುವಿಗೆ ನಮೋ ನಮೋ ನಮೋ
ಸದ್ಗುರುವಿಗೆ ನಮೋ
ದೇವಾಧಿದೇವಗೆ ನಮೋ ನಮೋ ನಮೋ
ಶ್ರೀ ಸ್ವಾಮಿಗೆ ನಮೋ ನಮೋ"[೩]

ಮಹಿಪತಿರಾಯರು ಗಣಪತಿ, ಸರಸ್ವತಿ, ತಂದೆ-ತಾಯಿ, ಗುರು, ದೇವಾಧಿದೇವರಿಗೆ, ಋಷಿಕುಲ ದೈವಕ್ಕೆ, ಗಾಯತ್ರಿ ದೇವತೆಗೆ, ಬ್ರಹ್ಮ-ವಿಷ್ಣು-ರುದ್ರನಿಗೆ, ಮಹಾಲಕ್ಷ್ಮೀ ದೇವಿಗೆ, ಸಿದ್ಧ-ಶರಣರಿಗೆ, ಸುಜ್ಞಾನಿಗಳಿಗೆ, ಸತ್ಕವಿಗಳಿಗೆ, ಸಕಲ ಹರಿದಾಸರಿಗೆ, ಬ್ರಹ್ಮಾಂಡ ನಾಯಕರಿಗೆ, ತ್ರೈಲೋಕ್ಯನಾಥರಿಗೆ, ಸರ್ವೋತ್ತಮನಿಗೆ ನಮೋ-ನಮೋ ಎಂದು ಭಕ್ತ ವತ್ಸಲದ ಪ್ರಾರ್ಥನೆಯನ್ನು ಸಲ್ಲಿಸಿದ್ದಾರೆ. ದೇವಾನು ದೇವತೆಗಳಿಗೆ ಸಚ್ಚಿದಾನಂದ ಸ್ವರೂಪಿಯಾದ ಶರಣ ಸದ್ಭಕ್ತ ಚರಣಕ್ಕೆ ಸ್ತುತಿಯ ಮಾಡುವ ಮೂಲಕ ಇಡೀ ದೇವತಾಲೋಕದ ಸ್ತುತಿಯ ವಿಶಿಷ್ಟ ಪರಂಪರೆಯ ಛಾಪನ್ನು ಮಾಡಿರುವುದು ವಿಶಿಷ್ಟವಾಗಿದೆ. ಈ ರೀತಿಯಲ್ಲಿ ಕೃಷ್ಣದಾಸರು ಮತ್ತು ಮಹಿಪತಿರಾಯರು ದೇವತಾಸ್ತುತಿಯ ಪದ್ಯಗಳು ಒಂದೇ ಮಾದರಿಯಲ್ಲಿ ಪ್ರಕಟಗೊಂಡರೂ ಸಹ ಅವುಗಳು ಒಳಗೊಂಡಿರುವ ವಿಷಯ ವೈವಿಧ್ಯತೆ ಭಿನ್ನಭಿನ್ನವಾಗಿ ಕಂಡುಬರುತ್ತದೆ. ಇವು ಆಲೋಚನಾ ತರ್ಕಕ್ಕೆ ಒಯ್ಯುವ ಕೀರ್ತನೆಗಳಾಗಿವೆ. ಅಲ್ಲಲ್ಲಿ ಉಪಕಥೆಗಳು ದೇವತಾಸ್ತುತಿಯಲ್ಲಿ ಸಹೃದಯರ ಗಮನವನ್ನು ಸೆಳೆಯುತ್ತವೆ. ಭಕ್ತ ಮತ್ತು ಭಗವಂತನ ಸಾಮೀಪ್ಯ ಇವರ ಕೀರ್ತನೆಯಲ್ಲಿ

ಪ್ರಕಟಗೊಂಡಿವೆ. ಭಕ್ತಿಯ ಆಧ್ಯಾತ್ಮಿಕ ನೆಲೆಯಲ್ಲಿ ಇವರ ದೇವತಾಸ್ತುತಿಯ ಪದ್ಯಗಳು ಪ್ರಕಟಗೊಂಡಿರುವುದು ಹರಿದಾಸ ಪರಂಪರೆಯಲ್ಲಿ ವೈಶಿಷ್ಟ್ಯವಾಗಿ ಕಂಡುಬರುತ್ತವೆ.

೩. ಮನೋಬೋಧೆ

ಪರಮಾತ್ಮನ ನಾಮಸ್ಮರಣೆಗೆ ಸಂಸಾರದ ಜಂಜಾಟ, ಇಂದ್ರಿಯಗಳ ಸೆಳೆದಾಟ ಇವುಗಳು ಅಡ್ಡಿಯನ್ನು ಉಂಟುಮಾಡುತ್ತವೆ. ಇಂಥ ಸಾಮಾಜಿಕ ಸ್ಥಿತಿಯಲ್ಲಿದ್ದುಕೊಂಡು ಪರಮಾತ್ಮನ ಮೇಲೆದೃಢ ನಿಷ್ಠೆಯನ್ನು ಇಟ್ಟುಕೊಂಡಿರಬೇಕು. ಶಿಥಿಲಗೊಂಡ ಮನಸ್ಸನ್ನು ಶುಚಿತ್ವವಾಗಿ ಸದ್ಗುರುವಿನ ಪಾದಗೇರಿಸಿ ದಿವ್ಯಾನುಭವವನ್ನು ಪಡೆದುಕೊಳ್ಳುವುದು ಮನೋಬೋಧೆಯಲ್ಲಿ ಮುಖ್ಯವಾಗಿದೆ.

ಮಾನವನ ಪಾರಮಾರ್ಥಿಕ ಸಾಧನೆಗೆ ಮನಸ್ಸಿನ ಚಂಚಲತೆ ಅಡ್ಡಿಪಡಿಸುತ್ತದೆ. ಇಂತಹ ಮನಸ್ಸನ್ನು ನಿಗ್ರಹ ಮಾಡಿಕೊಳ್ಳಬೇಕು. ಸದ್ಗುರುವಿನ ಅನುಗ್ರಹ ಮುಖಾಂತರ ಮನಸ್ಸಿನ ಅಸ್ಥಿರತೆಯನ್ನು ಹೋಗಲಾಡಿಸುವುದೇ ನಿಜವಾದ ಆಧ್ಯಾತ್ಮಿಕ ಸಾಧಕನ ಸಾಧನೆಯಾಗುತ್ತದೆ. ಮನಸ್ಸಿನ ತುಮುಲತೆಯನ್ನು ಮತ್ತು ದ್ವಂದ್ವತೆಯನ್ನು ಪಾರಮಾರ್ಥಿಕ ಹಿನ್ನೆಲೆಯಲ್ಲಿ ಇಬ್ಬರು ಹರಿದಾಸರು ಕೀರ್ತನೆಯಲ್ಲಿ ಪ್ರಕಟಿಸಿದ್ದಾರೆ. ಮನಸ್ಸಿನ ಚಂಚಲತೆಯಿಂದ ಕಾರ್ಯಹಾನಿಯಾಗುವ ಬಗೆಯನ್ನು ತಿಳಿಸಿದ್ದಾರೆ. ಏಕಾಗ್ರತೆಗೆ ಭಂಗ ತರುವ ಅಂಶವನ್ನು ಇಲ್ಲಿ ಹರಿದಾಸರು ಪ್ರತಿಪಾದಿಸಿದ್ದಾರೆ. ಅವುಗಳ ಮನಸ್ಸಿನ ವೃತ್ತಾಂತವನ್ನೆ ಈ ಮನುಷ್ಯನಿಗೆ ತಿಳಿಯಪಡಿಸಿದ್ದಾರೆ. ಆ ಮೂಲಕ ಆಧ್ಯಾತ್ಮಿಕ ಸಾಧಕನ ಮನಸ್ಸು ಹೀಗಿರಬೇಕೆಂಬುದನ್ನು ಪ್ರಸ್ತುತ ಕೀರ್ತನೆಯಲ್ಲಿ ಅಭಿವ್ಯಕ್ತಿಸಿದ್ದಾರೆ. ಮಹಿಪತಿರಾಯರು ಈ ಮನಸ್ಸಿನ ಬೋಧೆಯನ್ನು ಕುರಿತು ಸುಮಾರು ೩೦ಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿದ್ದಾರೆ.

"ಮನದಿಂದಲಿ ಮನ ನೋಡಿ
ಮನವರಿತು ಘನ ಕೂಡಿ

ಮನಸಿನಿಂದ ತಾ ನೋಡುವ ಖೂನ
ಮನ ಮರೆಯಲದೆ ನಿಧಾನ
ಮನವರಿಯದೆ ಇರುಹುದ್ಯಾತರ ಜ್ಞಾನ
ಮನವೇ ಸ್ವಹಿತ ಕಾರಣ

ಮನದ ಕೊನಿಯಲಿದೆ ಘನಸುಖದಾಟ
ಅನುದಿನ ನೋಡುದು ನೀಟ
ಸ್ವಾನುಭವದಲಿದು ನೋಡುವ ನೋಟ
ಮುನಿಜನರ ಸುಖದೂಟ"[೩೩]

ಮಹಿಪತಿರಾಯರು ಮನುಷ್ಯ ತನ್ನ ಅಂತರಂಗದ ಒಳಮನಸ್ಸನ್ನು ತೆರೆದು ನೋಡಬೇಕು ಎನ್ನುತ್ತಾರೆ. ಮನಸ್ಸಿನ ಅಂತರಾಳದಿಂದ ನೋಡಿದ ನೋಟ ಅದು ಎಂದಿಗೂ ನಶಿಸಿ ಹೋಗುವುದಿಲ್ಲ. ಒಳ ಅಂತರಂಗದ ಮನಸ್ಸು ಇಲ್ಲದೆ ಜ್ಞಾನವು ಸುಳಿಯುವುದಿಲ್ಲ. ಮನಸ್ಸೇ ಎಲ್ಲದಕ್ಕೂ ಕಾರಣ. ಅದಕ್ಕೆ ಮನುಷ್ಯ ಈ ಮನವೆಂಬ ಮನಸ್ಸನ್ನು ನಿಗ್ರಹದಲ್ಲಿಟ್ಟುಕೊಳ್ಳಲು ಮನಸ್ಸಿನಿಂದಲೇ ಘನ ಸುಖದಾಟ ಉಂಟಾಗುತ್ತದೆ. ಅನುದಿನ ನೋಡುವ ನೋಟ ಇವು ಮನುಷ್ಯನ ಅಂತರಾಳದಲ್ಲಿ ಹುದುಗಿರುತ್ತವೆ. ಮನವೆ ಮರೆ ಮಾಡದೆ ನೆನಪಿಗೆ ತಂದು ತೋರುವ ಹೆಣ್ಣು-ಹೊನ್ನು-ಮಣ್ಣಿನ ಆಸೆಗೆ ಹುಚ್ಚಾಗದೆ ಎಚ್ಚರಗೊಂಡಿರಬೇಕು. ಮನಸ್ಸಿಟ್ಟು ಮಾಡುವ ಭಕ್ತಿಗಳು ಅಲೌಕಿಕ ಜೀವನದ ಸುಖವನ್ನು ತೆರೆದಿಡುತ್ತವೆ. ಅದಕ್ಕಾಗಿ ಮನಸ್ಸಿಲ್ಲದ ಕೆಲಸ ನಿರರ್ಥಕ. ಅದನ್ನೇ ಮಹಿಪತಿರಾಯರು ಈ ರೀತಿಯಲ್ಲಿ ಪ್ರಕಟಿಸಿದ್ದಾರೆ.

"ಮನಮರಿಯಲಿದ್ದವಗೆಲ್ಲಿಹುದು ಆತ್ಮದ ಖೂನ
ತನುಮನನಾಗಿದ್ದವಗೆಲ್ಲಿಹುದು ಜ್ಞಾನ

ನಿಗಮ ಓದಿದರೇನು ಆಗಮ ಹೇಳಿದರೇನು
ಬಗೆ ಬಗೆ ವೇಷ ಜಗದೊಳುದೋರಿದರೇನು

ಮಠವು ಮಾಡಿದರೇನು ಅಡವಿ ಸಾರಿದರೇನು
ಸತೆ ಮಾಡಿ ಸಂಸಾರ ಹಟವಿಡಿದರೇನು

ನಿಗದಿ ಹಾಕಿದರೇನು ಗಗನಕ್ಹಾರಿದರೇನು
ಮಿಗಿಲಾಗಿದೋರಿ ಬಗವಿಯ ಪೊದ್ದರೇನು"[೩೪]

ಮನಸ್ಸಿನ ಅರಿವು ಇಲ್ಲದೆ ಮನುಷ್ಯ ಏನನ್ನೂ ಸಾಧಿಸಲಾರ. ಎಲ್ಲ ಶಾಸ್ತ್ರ ಓದಿದರೂ ಪ್ರಯೋಜನವಿಲ್ಲ. ಪುರಾಣ ಪ್ರವಚನ ಕೇಳಿದರೂ ನಿರರ್ಥಕ. ಬಗೆಬಗೆಯ ವೇಷ ತೊಟ್ಟು ಜಗದಲ್ಲಿದ್ದರೂ ಪ್ರಯೋಜನವಿಲ್ಲ. ಮಠವು ಮಾಡಿದರೇನು ತಪವುಗೈದರೇನು ಫಲ. ಇವು ಮನಕರಗದ ಹೊರತು ಪ್ರಯೋಜನಕ್ಕೆ ಬಾರದವು. ಎಚ್ಚರಿಕೆಯ ಈ ಮನಕ್ಕೆ ಯೋಚಿಸಿ ನೋಡು ಪರಮಾತ್ಮನ ಕುರಿತು ಕಿಂಚಿತ್ತೂ ಯೋಚನೆ ಮಾಡದಿರುವ ಈ ಜನ್ಮ ನಿರರ್ಥಕ. ಮನಸ್ಸು ಆಸೆ-ಆಕಾಂಕ್ಷೆಗಳ ಸ್ವಾರ್ಥದಲ್ಲಿ ಬೀಳಿಸಿ ಈ ಜೀವನವನ್ನು ವ್ಯರ್ಥಗೊಳಿಸುತ್ತದೆ. ವೇದಾಂತ ವಿಷಯಗಳನ್ನು ಓದುವ ಅಭಿಲಾಷೆ ಮೂಡಿಸುತ್ತದೆ. ಅವುಗಳ ನಿಜಾರ್ಥವನ್ನು ತಿಳಿಯದೆ ಹುಚ್ಚರಂತೆ ವಾದವನ್ನು ಬೆಳೆಸುತ್ತದೆ. ಹೀಗಾಗಿ ಪರಮಾತ್ಮನ ನಿಶ್ಚಿತ ಜ್ಞಾನವನ್ನು ಮಾಡಿಕೊಳ್ಳದೆ ಬ್ರಹ್ಮಾನಂದದಲ್ಲಿ ಮುಳುಗಲು ಸಾಧ್ಯವಿಲ್ಲ. ಇಂಥ ಮನಸ್ಸನ್ನು ಗುರುವಿನ ಸನ್ನಿಧಿಯಲ್ಲಿಟ್ಟು ಸುಜ್ಞಾನವನ್ನು ಪಡೆದ ಬಗೆಯನ್ನು ಮಹಿಪತಿರಾಯರು ಈ ರೀತಿಯಲ್ಲಿ ಬಿಂಬಿಸಿದ್ದಾರೆ.

"ಮನವು ಬಿಲ್ಲನೆ ಮಾಡಿ
ತನುವು ಹೆದೆಯನೆ ಕಟ್ಟಿ
ಅನುಭವದ ಅಂಬಿನಲಿ
ಜನನ ಮರಣದ ಗುರಿಯ ಕೆಡಹಿದಾ
ಜ್ಞಾನಸಾಗರ ಗುರುನಾಥನೆಂದು
ಸ್ತುತಿಸಿದಾ ಮಹಿಪತಿಯು"[೩೫]

ಮನವೆಂಬ ಬಿಲ್ಲನೆ ಮಾಡಿ ತನುವೆಂಬ ಹೆದಿಯನ್ನು ಕಟ್ಟಬೇಕು. ಅನುಭವದ ಸಾರದಲ್ಲಿ ಈ ಜಗತ್ತಿನ ಜನನ-ಮರಣದ ಗುರಿಯನ್ನು ಸೃಷ್ಟಿಸಿದ ಜ್ಞಾನಸಾಗರನಾದ ಪರಮಾತ್ಮನ ಸ್ತುತಿಯಿಂದ ಮಾತ್ರ ಈ ಮನಸ್ಸನ್ನು ನಿಯಂತ್ರಿಸಲು ಸಾಧ್ಯ. ನಾಚಿಕೆಯಿಲ್ಲದ ಮನವೆ ಮೋಸ ಮಾಡುವೆ. ಅನೇಕ ಜನ್ಮಜನ್ಮಗಳ ಈ ಸಂಸಾರದ ಭವಣೆಯಲ್ಲಿ ಸಿಲುಕಿ ಎಚ್ಚರ ಪಡೆಯದೆ ಹೋದರೇನು ಫಲ. ಈಗಲಾದರೂ ಸದ್ಗುರುವಿನ ಚರಣಕ್ಕೆ ಶರಣು ಬಾಗಿ ಅಹಂಭಾವವನ್ನು ತೊರೆದು ಗುಣಾತೀತ ಗುಣನಾದ ಪರಮಾತ್ಮನನ್ನು ಸ್ತುತಿಸು ಎಂದು ಹೇಳುತ್ತಾರೆ. ಹಾಗಾಗಿ ಮನಸ್ಸಿನ ಮನಬೋಧೆಯನ್ನು ಮಹಿಪತಿರಾಯರು ಪ್ರತಿಪಾದಿಸಿದ್ದಾರೆ. ಇಂತ ಮನಬೋಧೆ ಪದಗಳು ಸಾಧನ ಮಾರ್ಗದಲ್ಲಿ ನಿರತರಾದವರಿಗೆ ಪರಮಾತ್ಮನ ಒಲುಮೆಯನ್ನು ಗಳಿಸಿಕೊಳ್ಳುವವರಿಗೆ ಉಪಯುಕ್ತವಾಗಿವೆ. ಚಂಚಲಗೊಂಡ ಮನಸ್ಸನ್ನು ನಿಯಂತ್ರಿಸಲು ಸದ್ಗುರುವಿನ ಅನುಗ್ರಹ ಬೇಕೆ ಬೇಕು ಎನ್ನುತ್ತಾರೆ. ಮಹಿಪತಿರಾಯರು ಹೀಗೆ ಭಕ್ತಿಭಾವವನ್ನು ಮನಸ್ಸಿನ ಅಂತರಾಳ ಮುಖೇನವಾಗಿ ತೆರೆದಿಡುವ ಪ್ರಯತ್ನವನ್ನು ಮಾಡಿದ್ದಾರೆ.

ಅದರಂತೆ ಕೃಷ್ಣದಾಸರು ಸಹ ನಾನಾ ವಿಧದಲ್ಲಿ ತಮ್ಮನ್ನು ಕಾಡುತ್ತಿದ್ದ ಮನಸ್ಸಿನ ವ್ಯಥೆಯನ್ನು ಹೊರಹಾಕಿದ್ದಾರೆ. ಗುರುವಿನಲ್ಲಿಟ್ಟಿರುವ ಸದ್ಬೋಧದ ಕ್ರಮವನ್ನು ಅನೇಕ ಕೀರ್ತನೆಗಳಲ್ಲಿ ನೆನೆಯುವ ಪ್ರಯತ್ನವನ್ನು ಮಾಡಿದ್ದಾರೆ. ಮನಸ್ಸಿಗೆ ಎಚ್ಚರಿಕೆಯನ್ನು ನೀಡುತ್ತ ಬೇಗನೆ ಎಚ್ಚರಗೊಂಡು ಜ್ಞಾನಿಗಳನ್ನು ಕೂಡಿಕೊಂಡು ಸನ್ಮಾರ್ಗದತ್ತ ನಡೆಯಲು ಮುಕ್ತನಾಗಬೇಕು. ಹೊಗೆಯಿಂದ ಮುಸುಕಿದ ಅಗ್ನಿಯಂತೆ ಈ ಜಗತ್ತೆಲ್ಲವು ಕೂಡಿದೆ. ದುರ್ಬುದ್ಧಿ, ದುರಹಂಕಾರ, ದುರಭ್ಯಾಸ ದಟ್ಟವಾದ ಮುಸುಕಿದ ಹೊಗೆಯಲ್ಲಿ ದುಃಖ ದುಮ್ಮಾನಗಳು ತುಂಬಿಕೊಂಡಿರುತ್ತವೆ. ಮನವೇ ಈ ದುಃಖದಿಂದ ಪಾರಾಗುವ ಉಪಾಯವನ್ನು ಸದ್ಗುರುವಿನಿಂದ ಬೇಗನೆ ಹುಡುಕಿಸಿಕೊಡು. ಸಾಧನ ಮಾರ್ಗದಲ್ಲಿ ನೆಲೆ ನಿಲ್ಲಲು ಅನುಕೂಲ ಮಾಡಿಕೊಡು ಎಂದು ಕೃಷ್ಣದಾಸರು ಹೇಳಿಕೊಂಡಿದ್ದಾರೆ.

"ಮನವೇ ಮೈ ಮರೆಯಲಿ ಬ್ಯಾಡಾ ।
ನಿನ್ನೊಳು ಘನದೆಚ್ಚರ ಬಲಿ ದೃಡಾ ॥

ಸ್ವಾಪದ ಕನ್ನಡಿ ಮನಿಯಾ ಹೊಕ್ಕು ಬಳಲಿದ ಪರಿಯಾ ।
ಸಿಂಹನು ಕೂಪದಿ ನೆರಳಿಗೆ ಬೀಳಲಿ ಕಾಜಿನ ।
ಸೋಪಾನವ ನೋಡಿ ಗಜವಿಸ್ವಾಪದ ಬಿಟ್ಟದ ಕೇಳಲೀ ॥

ಶಕುನದಲಿ ಕದಲಿ ಬಂದು ಬಿದ್ದಿತು ತಾನಿಂದು । ವಾನ್ನರ
ವಿಕಳದ ಆಸೆಗೆ ಗುರುತಿಸಿ ಕೆಟ್ಟಿತು
ಅಖಳದಿ ಸಲೆಯಾಗಿ । ಈ ಪರಿ ।
ಪ್ರಕಟದಿ ವಿಷಯಕ ಮೋಹಿಸಿ"[೩೬]

ಈ ಮನಸ್ಸು ಮೈಮರೆತರೆ ಅದು ಸದ್ಗುರುವಿನ ಅನುಗ್ರಹಕ್ಕೆ ಅಡ್ಡಿಯನ್ನು ಉಂಟುಮಾಡುತ್ತದೆ. ಹಾಗಾಗಿ ಮನಸ್ಸನ್ನು ಘನ ಎಚ್ಚರದಲ್ಲಿಟ್ಟು ಕೋಪತಾಪವನ್ನು ನಿಗ್ರಹದಲ್ಲಿಟ್ಟುಕೊಂಡು ಗುರುವಿನ ಜ್ಞಾನದಲ್ಲಿ ನಿರತರಾಗಬೇಕು. ಸಂಸಾರ ಎಂಬ ಆಸೆಗೆ ಸಿಲುಕಿಕೊಂಡು ಭವಬಂಧನದಲ್ಲಿ ಬಂದಿಯಾಗಬಾರದು. ವಿಷಯಕ್ಕೆ ಮೋಹಿಸಿ ಪರಮಾತ್ಮನನ್ನು ನಮಿಸದೆ ಈ ಜನ್ಮಸಾರ್ಥಕವಾಗದು. ಈ ಮನಸ್ಸನ್ನು ಕುರಿತು ಕೃಷ್ಣದಾಸರು ಮನಸ್ಸೇ ನಿನ್ನನು ನೀನು ಮರೆಯಬೇಕು. ಸಾಧು-ಸಂತರ ಪಾದಗಳಿಗೆ ಎರಗಿ ಅವರಲ್ಲಿ ಶರಣಾಗತಿಯಾಗಬೇಕು. ಅತ್ತಲಿತ್ತ ಹೋಗದಂತೆ ಜೂಜಾಟದಲ್ಲಿ ಕಳೆಯದೆ, ಒಂದು ದಿನವಾದರೂ ಹರಿಕಥೆಯು ನಡೆಯುವ ಸ್ಥಳದಲ್ಲಿ ನಿಲ್ಲಿಸು. ಅದನ್ನು ಬಿಟ್ಟು ದುಶ್ಚಟದ ದುರ್ವ್ಯಸನಿಯಾಗಿ ಅಧರ್ಮದಲ್ಲಿ ನಡೆಯುವ ಮನಸ್ಸಿಗೆ ಶ್ರೀಹರಿಯ ಭಜನೆಯ ಮಾಡುವುದರ ಮೂಲಕ ವ್ಯರ್ಥ ಕೇಡನ್ನು ನಿಯಂತ್ರಿಸಬೇಕು. ಹಾಗಾಗಿ ಈ ಮನದ ಮನಸ್ಸಿನ ಸಕಲಾರ್ಥವನ್ನು ಈ ಕೀರ್ತನೆಯಲ್ಲಿ ಸೊಗಸಾಗಿ ಬಿಂಬಿಸಿದ್ದಾರೆ.

"ಮನದಲಿ ಸಕಲಾರ್ಥ। ಜಗದೊಳು

ಮನ ನೆಲೆಗೊಂಡರೆ ಮೋಕ್ಷದ ಹಾದೀ ।
ಮನ ಚಲಿಸಲು ಬಾಧೀ ॥

ಮನವೇ ತಾಹದು ನಾನಾಜನ್ಮ ।
ಮನ ಹರಿವುದು ಕರ್ಮಾ॥

ಮನವಶವಾದರೆ ಯೋಗಿ ಮಹಂತಾ ।
ಮನಮೀರಲು ಭ್ರಾಂತ ॥

ಮನ ಉನ್ಮನವಾಗಲು ಭವ ದೂರಾ ।
ಮನದೊಳು ಸಂಸಾರಾ"[೩೭]

ಮನದಲ್ಲಿ ಸಕಲಾರ್ಥ ಸಿರಿ ಇದೆ. ಜಗದೊಳಗೆ ಮನವು ಸ್ಥಿರಗೊಂಡರೆ ಸಾಧನೆಗಳ ಯಶಸ್ಸು ನಮ್ಮದಾಗುತ್ತದೆ. ಮನಸ್ಸು ನೆಲೆಗೊಂಡರೆ ಮೋಕ್ಷದ ಹಾದಿ ಸುಗಮವಾಗುತ್ತದೆ. ಮನಸ್ಸು ಚಂಚಲಗೊಂಡರೆ ಅದು ನಮಗೆ ಹಾನಿಯಾಗುತ್ತದೆ. ಮನಸ್ಸು ನಾನಾ ಜನ್ಮದಲ್ಲಿ ಮನ ಹರಿದು ಮಾಡಿದ ಕರ್ಮ ನಮ್ಮನ್ನು ಬೆಂಬಿಡದೆ ಕಾಡುತ್ತದೆ. ಮನವು ವಶ ಮಾಡಿಕೊಂಡರೆ ಆತನು ನಿಜಯೋಗಿಯಾಗುತ್ತಾನೆ. ಮನಸ್ಸು ಮೀರಿದರೆ ಆತ ಸಂಸಾರದ ವಿರಹಿ. ಮನಸ್ಸು ಉನ್ಮನಗೊಳ್ಳಲು ಪರಮಾತ್ಮನ ಸಾನ್ನಿಧ್ಯ ದೊರೆಯುತ್ತದೆ. ಮನಸ್ಸಿನ ಸ್ಥಿರತೆಯನ್ನು ನೆನೆಯಲು ಸದ್ಗುರುವಿನ ಅನುಗ್ರಹ ಮುಖ್ಯ. ಮನವೇ ನೀ ಬರಿ ಜನ್ಮಜನ್ಮಗಳ ವ್ಯರ್ಥ ಹುಟ್ಟುವಿಕೆಯಲ್ಲಿ ಬಂದಿರುವೆ. ಒಂದು ದಿನವಾದರೂ ಗತಿಮುಕ್ತಿಯಿಂದ ಪರಮಾತ್ಮನನ್ನು ನೆನೆಯುವುದು ಮಾಡಲಿಲ್ಲ. ಮನವೆ ಬರೀ ಚಿಂತಿಸಲು ಬೇಡ ಹರಿಚರಣ ಸ್ಮರಣೆ ಮಾಡಿ ಸುಖಿಯಾಗು. ಹೀಗೆ ಇಬ್ಬರು ಹರಿದಾಸರು ತಮ್ಮ ಮನಬೋಧೆಯನ್ನು ಶ್ರೀಗುರುವಿನ ಚರಣಕ್ಕೆ ಅರ್ಪಿಸುತ್ತಾರೆ. ಸಾಧನೆ ಮಾಡಿಕೊಂಡು ಸದ್ಗತಿಯನ್ನು ಪಡೆಯಲು ಪರಿಪರಿಯಾಗಿ ಬೇಡಿಕೊಳ್ಳುತ್ತಾರೆ. ಶ್ರೀಹರಿಯ ಅನುಗ್ರಹವಿಲ್ಲದೆ ಈ ಮನಸ್ಸು ನಿರ್ದಯವಾಗಿ ಯಾರ ಹತೋಟಿಗೂ ಸಿಗಲಾರದು ಎಂಬುದನ್ನು ಅಭಿವ್ಯಕ್ತಿಸುತ್ತ ಇಬ್ಬರು ಹರಿದಾಸರು ಸದ್ಗುರುವಿನ ಮೊರೆ ಹೊಕ್ಕು ಸೇವೆ ಮಾಡಬೇಕೆಂದು ಹಂಬಲಿಸುತ್ತಾರೆ. ಈ ಚಂಚಲ ಮನಸ್ಸಿನ ಮೇಲಿನ ಹಿಡಿತವನ್ನು ಸಾಧಿಸಿ ಸನ್ಮಾರ್ಗದತ್ತ ಸಾಗಲು ಬೋಧಿಸುತ್ತಾರೆ. ಇಲ್ಲಿಯ ಆತ್ಮದ ಮನಬೋಧೆಯ ಜೊತೆಗೆ ಮಾನವನ ಸಾಮಾಜಿಕ ಚಿಂತನೆಯು ಅಡಗಿಸಿಕೊಂಡಿರುವುದು ಎದ್ದುಕಾಣುತ್ತದೆ.

೪. ಸತ್ಸಂಗ

ಪಾರಮಾರ್ಥಿಕ ಸಾಧನೆಯಲ್ಲಿ ತೊಡಗಬಯಸುವ ಮನಸ್ಸು ಮನಶ್ಶುದ್ಧಿ ಮಾಡಿಕೊಂಡು ಸತ್ಸಂಗದ ಸಾಧನೆಯಲ್ಲಿ ತೊಡಗಬೇಕಾಗುತ್ತದೆ. ಮಾನವನಿಗೆ ಸನ್ಮಾರ್ಗದಲ್ಲಿ ನಡೆಯಲು ದಾರಿಯನ್ನು ತೋರುವರು ಸಾಧು-ಸಂತರು. ಇಂಥ ಸತ್ಸಂಗದ ಸಂತರು ತಮ್ಮ ಸದ್ಬೋಧನೆಯ ಮುಖಾಂತರ ಮನಸ್ಸನ್ನು ಪರಮಾತ್ಮನಲ್ಲಿ ಏಕಾಗ್ರತೆಗೊಳಿಸುವ ವಿವಿಧ ವಿಧಾನವನ್ನು ಮಾರ್ಗದರ್ಶನ ಮಾಡುವರು. ಸಂತರೆಂದರೆ ಅಂತರಂಗ ಮತ್ತು ಬಹಿರಂಗ ಶುದ್ಧಿಯನ್ನು ಇಟ್ಟುಕೊಂಡವರು. ಶ್ರೀಹರಿಯನ್ನು ತಮ್ಮ ಪರಿಶುದ್ಧ ಜ್ಞಾನ, ಭಕ್ತಿ, ವೈರಾಗ್ಯದಿಂದ ಸಾಕ್ಷಾತ್ಕರಿಸಿಕೊಂಡು ತಮ್ಮ ಹೃದಯದಲ್ಲಿ ಪರಮಾತ್ಮನನ್ನು ನಿಲ್ಲಿಸಿಕೊಂಡವರು. ಸಂತರೆಂದರೆ ಸದಾ ಹರಿಯ ನಾಮಸ್ತುತಿಯನ್ನು ಮಾಡುತ್ತ ಭವಬಾಧೆಯನ್ನು ಬಿಡಿಸಿಕೊಂಡವರು. ಸತ್ಸಂಗದಿಂದ ಇಂತಹ ಪರಮಾತ್ಮನ ದರ್ಶನ ಭಾಗ್ಯ ಲಭಿಸುತ್ತದೆ. ಮನುಷ್ಯ ಸ್ನಾನದಿಂದ ಬಾಹ್ಯಶುದ್ಧಿಯನ್ನು ಮಾಡಿಕೊಂಡರೆ ಅವನ ಅಂತರಂಗದ ಶುದ್ಧಿಯನ್ನು ಇಂಥ ಸತ್ಸಂಗದ ಸಂತರು ಮಾಡುತ್ತಾರೆ. ಸತ್ಸಂಗದಿಂದಾಗುವ ಪ್ರಯೋಜನವನ್ನು ಇಬ್ಬರು ಹರಿದಾಸರು ತಮ್ಮ ಕೀರ್ತನೆಯಲ್ಲಿ ಅಭಿವ್ಯಕ್ತಿಸಿದ್ದಾರೆ.

ದಾಸರು ತಮ್ಮ ಜೀವನದ ಅನುಭವದಲ್ಲಿ ಅನುಭವಿಸಿದ್ದಾರೆ. ಅವುಗಳ ಅನುಗ್ರಹದ ಮುಖೇನ ಸುಖಿಗಳಾಗಿದ್ದಾರೆ. ಹಾಗಾಗಿ ಸತ್ಸಂಗದ ಕೀರ್ತನೆಗಳನ್ನು ಹೆಚ್ಚಾಗಿ ಇಬ್ಬರು ಹರಿದಾಸರಲ್ಲಿ

ಕಾಣುತ್ತೇವೆ. ಸಜ್ಜನರ ಸಂಗದ ಸುಖಾನುಭವವನ್ನು ಮಹಿಪತಿರಾಯರು ಈ ರೀತಿಯಲ್ಲಿ ವ್ಯಕ್ತಪಡಿಸುತ್ತಾರೆ.

"ಸಜ್ಜನರ ಸಂಗ ಸ್ವಹಿತಕೆ ಸುಖಸನ್ಮತ
ಹೆಜ್ಜೆಜ್ಜಿಗೆ ದಾರಿಡುತದೆ ಅಮೃತ

ಗಂಗಿಯೊಳು ಮುಳುಗಿ ತಾ ಮಿಂದರ್ಹೋಗದು ಪಾಪ
ಹಾಂಗೆಂದಿಗಲ್ಲ ಸಜ್ಜನರ ಪ್ರತಾಪ
ಕಂಗಳಲಿ ಕಂಡರ್ಹೋಗುವುದು ತಾಪಾಪ
ಸಂಗ ಸುಖದಲಿ ಸರ್ವಪುಣ್ಯ ಮೋಪ"[೩೮]

ಪರಮಾನಂದೋತ್ತರ ಸ್ವಾಗತ ಮಾತುಗಳು ಈ ಕೀರ್ತನೆಯಲ್ಲಿ ಒಳಗೊಂಡಿವೆ. ಪಾರಮಾರ್ಥಿಕ ಜೀವನದ ಇಡೀ ಸಾರವನ್ನೇ ಇಲ್ಲಿ ನೋಡಬಹುದು. ಸಜ್ಜನರ ಜೊತೆ ಅನುದಿನವೂ ಇದ್ದರೆ ಅವರ ಬಾಳು ಹಸನಾಗುತ್ತದೆ. ಸಜ್ಜನರ ಉಪದೇಶ ಸಮಾಜಕ್ಕೊಂದು ಉತ್ತಮ ಸಂದೇಶವಾಗಿರುತ್ತದೆ. ಸಜ್ಜನರು ಕರುಣಾಮಯಿಗಳಾಗಿದ್ದಾರೆ. ಇಂಥ ಸಜ್ಜನರಾದ ಸಾಧುಸಂತ ಪುರುಷರು ಸಾಮೀಪ್ಯದ ಒಡನಾಟದಿಂದ ಸ್ವಹಿತವನ್ನು ಸಾಧಿಸಿ ಸುಖವನ್ನು ಪಡೆಯಲು ಸಾಧ್ಯವಿದೆ. ನೀರು ಕಂಡಲ್ಲಿ ಮುಳುಗಿ ನಮ್ಮ ದೇಹಕ್ಕೆ ಅಂಟಿಕೊಂಡ ಹೊಲಸನ್ನು ಮಾತ್ರ ಹೋಗಲಾಡಿಸಿಕೊಳ್ಳಬಹುದು. ಆದರೆ ಆತ್ಮ ಶುದ್ಧಿ ಮಾಡಿಕೊಳ್ಳಲು ಸಾಧ್ಯವಿಲ್ಲ. ಸಜ್ಜನರ ಸಂಗದಿಂದ ನಮ್ಮ ಭಾವನೆಗಳನ್ನು ಪರಿಶುದ್ಧಪಡಿಸಿಕೊಳ್ಳಬಹುದು. ಅವರ ಸಾಮೀಪ್ಯದಿಂದ ನಮ್ಮ ಕರ್ಮಗಳನ್ನು ಕಳೆದುಕೊಳ್ಳಬಹುದು. ಸಜ್ಜನರಿಂದ ನಿರಂತರವಾಗಿ ಪುಣ್ಯವನ್ನು ಪಡೆದುಕೊಳ್ಳಬಹುದು. ಸಜ್ಜನರು ಚಂದ್ರನ ಹಾಗೆ ಬಾಳ್ವೆಗೆ ಬೆಳದಿಂಗಳ ಬೆಳಕನ್ನು ನೀಡುವರು. ಸಂತರ ಮನಸ್ಸು ಏಕ ಮನಸ್ಸು. ಅವರ ನೆನೆಯುವಿಕೆಯಿಂದ ದುಃಖ ದೂರವಾಗುತ್ತದೆ. ಅಷ್ಟೇ ಅಲ್ಲ ಅವರನ್ನು ವಂದಿಸಿದರೆ ಮೂರು ಲೋಕದ ಪಾಪ ಕಳೆಯುವ ಶಕ್ತಿ ದೊರೆಯುತ್ತದೆ ಕಲ್ಪವೃಕ್ಷ ಬೇಡಿದ ಬಯಕೆಗಳನ್ನು ಮಾತ್ರ ಕೊಡುವುದು. ಆದರೆ ಇಂಥ ಸತ್ಸಂಗದ ಸದ್ಗುರುಗಳನ್ನು ಬೇಡಲಾರದ್ದನ್ನು ಸಹ ಕೊಟ್ಟು ಉದ್ಧರಿಸುವ ಪುಣ್ಯಾತ್ಮರು. ಇಂತಹ ಸಂತರ ಕುರಿತು ಅನೇಕ ಕೀರ್ತನೆಗಳಲ್ಲಿ ಮಹಿಪತಿರಾಯರು ಕೊಂಡಾಡಿ ಧನ್ಯತೆಯಿಂದ ವಂದಿಸಿದ್ದಾರೆ.

"ಸಂತ್ಸಂಗವು ಲೇಸು ಸ್ವಹಿತಕೆ

ನೆರಿಲವರನುದಿನ ಬಾಳುದು ಲೇಸು
ಸರಸ ಸುಮಾತನೆ ಕೇಳುದು ಲೇಸು

ನೋಡಿದವರಾಚರಣೆಯ ಲೇಸು
ಮಾಡಿದವರನು ಸರಣಿಯ ಲೇಸು

ಮಹಿಪತಿಗಿದೆ ಸುಖದೋರಿತು ಲೇಸು
ವಿಹಿತಕ ವಿಹಿತಾಯಿತು ಬಲುಲೇಸು"[೩೯]

ಮನುಷ್ಯನು ಸ್ವಹಿತಕ್ಕೆ ಸಜ್ಜನರ ಸಂಗ ಮುಖ್ಯವಾಗಿದೆ. ಅವರ ನೆರಳಿನಲ್ಲಿ ಅನುದಿನ ಬಾಳುವುದು ಉತ್ತಮ. ಅವರ ಸುಂದರವಾದ ಉಪದೇಶಗಳು ಕರ್ಮವನ್ನು ಕಳೆಯುವ ದಿವ್ಯವಾಣಿಗಳು. ಸಜ್ಜನರು ಅನುಸರಿಸುವ ಮಾರ್ಗವನ್ನು ಕಂಡುಕೊಂಡು ಕರ್ಮಾಚರಣೆಯನ್ನು ಮುಂದುವರಿಸುವುದು ಲೇಸು. ಹೀಗೆ ಸಜ್ಜನರ ಸಂಗವನ್ನು ಅನುಸರಿಸಿಕೊಂಡು ಮಹಿಪತಿರಾಯರು ನಿಜಸುಖದ ಪರಮಾನಂದವನ್ನು ಪಡೆದು ತಮ್ಮ ಜನ್ಮವನ್ನು ಸಾರ್ಥಕ ಪಡಿಸಿಕೊಂಡರು. ಆದುದರಿಂದ ಸ್ವಹಿತ ಮಾಡಿಕೊಳ್ಳಲು ಸಾಧು ಸಜ್ಜನರು ಲೇಸೆಂದು ಹೇಳಿದ್ದಾರೆ.

"ಸಾಧುರ ಮಹಿಮೆಯ ಸಾಧಿಸದೆ ತಿಳಿಯದು
ಭೇದಿಸದಲ್ಲದೆ ಹೊಳೆಯದಿದು

ತೆಂಗಿನ ಫಲದಂತವರ ಸಂಗದಸುಖ
ಹಿಂಗದಂತನುದಿನ ಅನುಭವಿಸುವದಲ್ಲದೆ

ಬಂಡೆಯೊಳಿದ್ದದ ತಾ ಒಡೆದು ಪ್ರಕಾಶಿಸಿದಂತೆ
ಕಡಲೊಳಗಿದ್ದ ರತ್ನ ಮುಳುಗಿ ತೆಗೆದಂತೆ

ಅಂತರಾತ್ಮದ ಸುಖ ಮಹಾತ್ಮರಗಲ್ಲದೆ
ಮೂಢಾತ್ಮರಿಗಿದು ಎಲ್ಲಿಹುದು

ಸಾಧು ಸಂತರ ನಿಜದಾಸ ಮಹಿಪತಿಗಿನ್ನು
ಸಾಧು ಸಂಗತಿಕ ಜೀವನ್ಮುಕ್ತಿಯು"[೪೦]

ಸಾಧು ಸಂತರ ಮಹಿಮೆ ಸತ್ಸಂಗದ ಸಾಧನೆಯಿಂದ ತಿಳಿಯುತ್ತದೆ. ಶರಣು ಮನೋಭಾವ ಇಟ್ಟುಕೊಂಡರೆ ಮಾತ್ರ ನಿಜ ಮಹಿಮೆಯನ್ನು ಭೇದಿಸಲು ಸಾಧ್ಯ. ಸಾಧು ಸಜ್ಜನರು ತೆಂಗಿನ ಫಲದಂತೆ. ಅವರ ಸಂಗದ ಸುಖ ಈ ಬಾಧೆಯನ್ನು ರಕ್ಷಿಸುವ ಕೋಟೆಯಂತೆ ಇರುತ್ತಾರೆ. ಬಂಡೆಗಲ್ಲಿನಲ್ಲಿ ಅವಿತು ಶರಣನಿಗೆ ಬಂಡೆಗಲ್ಲನ್ನು ಒಡೆದು ಪ್ರಕಾಶಿಸುವಂತೆ ಅವರ ನಿಲುವು ಕಠೋರ. ಸಮುದ್ರದಲ್ಲಿ ಮುತ್ತನ್ನು ಹೊರತೆಗೆದಂತೆ ಅವರ ಸತ್ಸಂಗದ ಮಹಿಮೆಯನ್ನು

ಗುರುತಿಸಬೇಕು. ಸಾಧು ಸಜ್ಜನರ ಅಂತರಾತ್ಮದ ನಿಜಸುಖವು ಮಹಾತ್ಮರಿಗಲ್ಲದೆ ಮೂಢರಿಗೆ ದೊರೆಯದು ಎಂಬ ನಿಲುವನ್ನು ಮಹಿಪತಿರಾಯರು ಅಭಿವ್ಯಕ್ತಿಸಿದ್ದಾರೆ.

"ಸಾಧು ಸ್ವರೂಪ ಸಾಧು ಸ್ವರೂಪ
ಸಾಧಿಸಿದವ ಕುಲದೀಪ

ಸ್ವರೂಪ ನಿಜಗೌಪ್ಯ ಸರ್ವರಿಗಿದು ಅಪ್ರಾಪ್ಯ
ನಡಿನುಡಿ ಬಲು ಗೂಢ ಪಡೆದವ ತಾ ಘನ ಪ್ರೌಢ
ದುರ್ಲಭ ದರುಶನ ಸುಲಭದಲ್ಲಾಗದು ಖೂನ
ಸ್ವಹಿತ ಸಾಧು ದಯ ಮಹಿಪತಿಗಾಯಿತು ಉದಯ"[೬೧]

ಮಹಿಪತಿರಾಯರು ಸಾಧು ಸತ್ಸಂಗದ ಮಹಿಮೆಯನ್ನು ಹೇಳುತ್ತಾ ಸಾಧು ಸ್ವರೂಪ ಸಾಧಿಸಿ ನೋಡಿ ವಿವರಿಸಿ ಹೇಳಬೇಕು. ಸಾಧು ಗುಣಗಳಿಂದ ಮಾತ್ರ ಈ ಸ್ವರೂಪವನ್ನು ತಿಳಿದುಕೊಳ್ಳಲು ಸಾಧ್ಯ. ಅವರ ಸ್ವರೂಪವು ಗೌಪ್ಯದ ಜಲಧಾರೆಯಾಗಿರುತ್ತದೆ. ಸರ್ವರಿಗೂ ಈ ನಿಜ ಸ್ವರೂಪದ ಮಹಿಮೆಯನ್ನು ಅರಿಯಲು ಸಾಧ್ಯವಿಲ್ಲ. ಅವರ ನಡೆ ನುಡಿ ನಿಗೂಢವಾಗಿರುತ್ತದೆ. ಅದನ್ನು ಭೇದಿಸುವುದು ಘನ ಪ್ರೌಢ ಶರಣನಿಂದ ಮಾತ್ರ ಸಾಧ್ಯವಾಗುತ್ತದೆ. ದುರ್ಬಲರಿಗೆ ಈ ನಿಗೂಢತೆಯ ದರ್ಶನ ಸುಲಭವಾಗಿ ಗುರುತಿಸಲಾಗದು. ಇಂಥ ಸ್ವಹಿತ ಸಾಧು ದಯದಿಂದಲೇ ಮಹಿಪತಿರಾಯರು ಸತ್ಸಂಗದ ಸನ್ಮಾರ್ಗದಲ್ಲಿ ಮುನ್ನಡೆದಿದ್ದರು. ಮುಂದುವರಿದು ಸತ್ಸಂಗವನ್ನು ಹೀಗೆ ಸಾಧಿಸಬೇಕೆಂದು ಈ ಪದ್ಯದಲ್ಲಿ ಆಡಿಕೊಂಡಿದ್ದಾರೆ.

"ಸಾಯಸದಿಂದ ಸಾಧಿಸಬೇಕು ಸತ್ಸಂಗ
ಮಾಯಿಕಬುದ್ಧಿ ಬಿಟ್ಟು ನೋಡಿ ಅಂತರಂಗ
....
ಹಿಡಿದರೆ ಹಿಡಿಯಬೇಕೊಂದೆ ಸಾಧು ಸಹವಾಸ
ಪಡೆದರೆ ಹಿಡಿಯಬೇಕೊಂದೆ ತಾ ನಿಜಧ್ಯಾಸ
ನಡಿನುಡಿ ಒಂದೆ ಆಗುವುದೆ ಅಪ್ರಯಾಸ
ತಡಿಯದೆ ಮಾಡಬೇಕೊಂದೆ ನಿಜಾಭ್ಯಾಸ"[೬೨]

ಸ್ವಬುದ್ಧಿಯಿಂದ ಸಾಧಿಸಬೇಕು ಸತ್ಸಂಗವನ್ನು, ದುಷ್ಟವಾದ ಬುದ್ಧಿಯನ್ನು ಬಿಟ್ಟು ನೋಡಬೇಕು. ಇದರ ಅಂತರಂಗದ ಸತ್ಸಂಗದಿಂದ ಶ್ರೀರಂಗ ಕಾಣಿಸುತ್ತಾನೆ. ಆತನ ದರ್ಶನದಿಂದ ಭವ ರೋಗಗಳು ಕಳೆದುಕೊಳ್ಳುತ್ತವೆ. ಸಾಧುರಗಳ ಸಂಗವನ್ನು ಹಿಡಿದು ನಿಜಜೀವನದ ಸುಖವನ್ನು

ಪಡೆಯಬೇಕು. ಸಾಧು ಜನರ ಸಹವಾಸ ಪಡೆಯುತ್ತಲೇ ಇರಬೇಕು. ಧ್ಯಾನದಿಂದ ನಡೆನುಡಿ ಒಂದಾಗುತ್ತದೆ. ಇದಕ್ಕೆ ಕಷ್ಟನಷ್ಟವನ್ನು ಬಿಟ್ಟು ಜಪ ಮಾಡಬೇಕು. ಸತ್ಸಂಗದ ಸಂಗದಿಂದ ಪ್ರಯಾಸವಿಲ್ಲದ ನಮ್ಮ ನುಡಿ ಒಂದಾಗುತ್ತವೆ. ಈ ಸಾಧನೆಯನ್ನು ನಾವು ಬಿಡದೆ ಮುಂದುವರಿಸಬೇಕು. ಸತ್ಸಂಗದಿಂದ ಪರಿಪೂರ್ಣತೆ ಪ್ರಾಪ್ತವಾಗುತ್ತದೆ. ಮನದೊಳಗೆ ಸೂರ್ಯನ ಕಿರಣ ಹೊಳೆಯುತ್ತದೆ. ಪರಮಾತ್ಮನ ಮನದಲ್ಲಿ ನೆಲೆ ನಿಲ್ಲುತ್ತಾನೆ. ಹೀಗೆ ಸತ್ಸಂಗದ ಪ್ರಯೋಜನವನ್ನು ಮಹಿಪತಿರಾಯರು ಈ ಮೇಲಿನ ಕೀರ್ತನೆಯಲ್ಲಿ ಅಭಿವ್ಯಕ್ತಿಸಿದ್ದಾರೆ.

ಸಾಧು ಸಂತರ ಕುರಿತು ಹೇಳುವಾಗ ಸಂಗವಿಲ್ಲದೆ ಈ ಜನ್ಮ ಸಾರ್ಥಕವಾಗಲಾರದು. ಸಂತರಿಗೆ ಶರಣು ಹೋಗಬೇಕು. ಸಂತರ ಅನುಗ್ರಹವಿಲ್ಲದೆ ಪರಮಾತ್ಮನನ್ನು ಕಾಣಲು ಸಾಧ್ಯವಿಲ್ಲ. ಎಂದು ಸತ್ಸಂಗದ ಪ್ರಯೋಜನವನ್ನು ಅವರ ಪುಣ್ಯವನ್ನು ಅತ್ಯಂತ ಮಧುರವಾಗಿ ವ್ಯಾಖ್ಯಾನಿಸಿದ್ದಾರೆ.

ಇದೇ ರೀತಿಯಲ್ಲಿ ಕೃಷ್ಣದಾಸರು ಸಹ ಮಹಿಪತಿರಾಯರ ಹಾಗೆ ಅನೇಕ ಸತ್ಸಂಗದ ಕೀರ್ತನೆಗಳನ್ನು ರಚಿಸಿದ್ದಾರೆ. ಮಹಿಪತಿರಾಯರ ಸತ್ಸಂಗದ ಕೀರ್ತನೆಗಳಿಗೂ ಕೃಷ್ಣದಾಸರ ಕೀರ್ತನೆಗಳಲ್ಲಿ ಬಹಳಷ್ಟು ಸಾಮೀಪ್ಯತೆಯನ್ನು ಪಡೆದುಕೊಂಡಿದೆ. ಪಾರಮಾರ್ಥಿಕ ಸಾಧನೆಗೆ ಸತ್ಸಂಗ ಬಹುಮುಖ್ಯವಾಗಿರುತ್ತದೆ. ಸತ್ಸಂಗದ ಶರಣರು ಮಹಾನುಭಾವರು. ಸಾಧು ಸಂತರು ನಡೆದಾಡುವ ದೇವರಾಗಿದ್ದಾರೆ. ಅವರು ಅಚಲವಾದ ದೇವತಾ ಪ್ರತಿಮೆಗಳಾಗಿದ್ದಾರೆ. ಭಾವ ಭಕ್ತಿಯಿಂದ ಸಜ್ಜನರ ಸಂಗದಲ್ಲಿ ನಿರತರಾದೊಡೆ ಮನುಷ್ಯನ ಬಾಳು ಬಂಗಾರವಾಗುತ್ತದೆ. ಸಂತರ ಸಹವಾಸ ಹೇಗೆ ಮಾಡಬೇಕೆಂಬುದನ್ನು ಈ ಮುಂದಿನ ಕೀರ್ತನೆಯಲ್ಲಿ ಅಭಿವ್ಯಕ್ತಿಸಿದ್ದಾರೆ.

"ಸಂತರ ಸಹವಾಸ ಮಾಡು ಮನುಜ ನೀ ।
ಭ್ರಾಂತ ಜನರ ಸಂಗ ವೀಡ್ಯಾಡು ।
ಅಂತರಂಗದಲಿ ಸುಖವ ಸೂರ್ಯಾಡು । ಅ ।
ನಂತನ ನಾಮವ ಕೊಂಡಾಡು"[೪೩]

ಮನುಷ್ಯ ಸಂತರ ಸಹವಾಸ ಮಾಡುವುದರಿಂದ ಅನೇಕ ಪ್ರಯೋಜನೆಗಳು ಉಂಟಾಗುತ್ತವೆ. ದುಷ್ಟ ಜನರಿಂದ ದೂರವಿರುವುದು ಉತ್ತಮ. ಅಂತರಂಗ ಪರಿಶುದ್ಧಿಯನ್ನು ಮಾಡಿಕೊಂಡು ಸದಾ ಶ್ರೀಹರಿಯ ಸ್ತುತಿಯನ್ನು ಮಾಡುತ್ತಿರಬೇಕು. ಯಾವ ಯಾವ ಊರಿನಲ್ಲಿ ಯಾವ ಯಾವ ಧನ-ಧಾನ್ಯ, ಸಿರಿ ಸಂಪತ್ತು, ಜನಸಂದಣಿಯಿಂದ ಕೂಡಿದ ಪ್ರದೇಶವಿರಬಹುದು. ಆ ಊರಿನಲ್ಲಿ ಸಂತರು ಇಲ್ಲದಿದ್ದರೆ ಅಂತಹ ಊರು ವಾಸ ಮಾಡಲಿಕ್ಕೆ ಯೋಗ್ಯವಲ್ಲ. ದೊಡ್ಡ ದೊಡ್ಡ ಪಟ್ಟಣ ಇಲ್ಲದಿರಬಹುದು, ಗುಡಿ-ಗೋಪುರಗಳು ಇಲ್ಲದಿರಬಹುದು, ರಾಜ-ಮಹಾರಾಜ ರಿಲ್ಲದೆ ಇರಬಹುದಾಗಿದೆ. ಅಂತಹ ಊರಿನಲ್ಲಿ ಸತ್ಸಂಗದ ಸಾಧು ಜನ ಸಂತರಿದ್ದರೆ, ಆ ಗ್ರಾಮದಲ್ಲಿ ವಾಸ ಮಾಡು ನಿನಗೆ ಸುಖ ಸಂಪತ್ತಿನ ಸಿರಿ ತನ್ನಷ್ಟಕ್ಕೆ ತಾನೆ ಬರುತ್ತದೆ. ಸಂತರು ನೆಲೆ ನಿಂತ ಕಡೆ ಕಾಶಿ ಪುಣ್ಯಕ್ಷೇತ್ರ ನೆಲೆಸಿರುತ್ತದೆ. ಸಂತರ ನೆರಳಿನಲ್ಲಿ ನಿಂತರೆ ಸ್ವರ್ಗದಂತ

ಸುಖವಿದೆ. ಹಾಗಾಗಿ ಸಂತರ ಸಹವಾಸವನ್ನು ಮಾರ್ಮಿಕವಾಗಿ ಕೃಷ್ಣದಾಸರು ಕೊಂಡಾಡಿದ್ದಾರೆ. ಸತ್ಸಂಗದ ಫಲದ ಪ್ರಯೋಜನವನ್ನು ಈ ರೀತಿಯಲ್ಲಿ ಅಭಿವ್ಯಕ್ತಿಸಿದ್ದಾರೆ.

"ಸತ್ಸಂಗದ ಫಲ ಸದ್ಭಾವಿಯಾದವ ಸೇವಿಸಿಕೊಂಬುವನ್ನೈ ।
ಮತ್ಸರ ಮದದಲಿ ಯಚ್ಚರಗೊಳದಾಧಮ ಬದಿಲಿದ್ದೆ ನೈ
ಕಮಲದ ಸವಿ ಭ್ರಮರವೇ ಕೊಂಬುದು।
ಬದಿಲಿಹ ಮಂಡೂಕಗೇನ್ನೈ
ಶ್ರೀಮಂತರು ಹಾಲವಕರಕೊಂಬರು । ಉಣ್ಣಿಗೆ ಫಲವೇನ್ನೈ"[೪೪]

ಸತ್ಸಂಗವು ಅನೇಕ ಫಲವನ್ನು ನೀಡುತ್ತದೆ. ಸದ್ಭವಿಯಾದವರು ಸದ್ಭಕ್ತಿ–ಸದ್ಭಾವನೆಯಿಂದ ಕೂಡಿದರೆ ಮಾತ್ರ ಸತ್ಸಂಗ ಸತ್ಫಲವನ್ನು ಪಡೆಯಲು ಉತ್ಸುಕನಾಗಿರುತ್ತಾನೆ. ಮನದಲ್ಲಿ ಕೆಟ್ಟ ಗುಣಗಳನ್ನು ಇಟ್ಟುಕೊಂಡು ಸಂತರಿಗೆ ಗೌರವ ನೀಡದೆ ಇರುವವರು ಸತ್ಸಂಗದ ಫಲವನ್ನು ಪಡೆಯಲು ಯೋಗ್ಯರಲ್ಲ. ಕಮಲದ ಪುಷ್ಪದ ಸವಿಯನ್ನು ಹೀರಲು ದುಂಬಿಯು ಮಕರಂದವನ್ನು ಹೀರುತ್ತಿರುತ್ತದೆ. ಆದರೆ ಕಮಲದ ಹತ್ತಿರ ವಟಗುಡುತ್ತಾ ಇದ್ದ ಕಪ್ಪೆ ಆ ಮಕರಂದವನ್ನು ಹೀರಲು ತಿಳಿದುಕೊಳ್ಳುವದಿಲ್ಲ. ಹಾಗಾಗಿ ಮಾನವನು ನಮ್ಮ ಜೊತೆಗಿರುವ ಸತ್ಸಂಗವನ್ನು ಗಮನಿಸಬೇಕು. ಮನುಷ್ಯನು ಆಕಳ ಮೊಲೆಯ ಹಾಲನ್ನು ಹಿಂಡಿ ಹಾಲನ್ನು ಸೇವಿಸುವನು. ಅದೇ ಕೆಚ್ಚಲಿಗೆ ಹತ್ತಿದ ಉಣ್ಣಿಯು ಕೇವಲ ಅಲ್ಲಿಯ ರಕ್ತವನ್ನು ಮಾತ್ರ ಹೀರುತ್ತದೆ ವಿನಹ ಹಾಲನ್ನು ಸೇವಿಸುವುದಿಲ್ಲ. ದಟ್ಟಡವಿಯಲ್ಲಿ ಬೆಳೆದ ಶ್ರೀಗಂಧ ಗಿಡವು ಸುವಾಸನೆಯನ್ನು ಬೀರುತ್ತಾ, ಜನರಿಗೆ ಆನಂದವನ್ನು ಉಂಟುಮಾಡುತ್ತಿರುತ್ತದೆ. ಆದರೆ ಪಕ್ಕದಲ್ಲಿ ಬೆಳೆದ ಬಿದಿರು ಇತರ ಮರಗಳಿಗೆ ಆ ಗಂಧದ ಪರಿಮಳದ ಅರಿವು ಇರುವುದಿಲ್ಲ. ಪರಮಾತ್ಮನು ಸಾಕ್ಷಾತ್ಕಾರಗೊಳಿಸಿಕೊಳ್ಳಲು ಸದ್ಗುಣಿಯಾದವನು ವಿವಿಧ ಶಾಸ್ತ್ರಗಳ ಜ್ಞಾನ ಪಡೆಯುವುದು ಮುಖ್ಯವಾಗಿದೆ. ದುರ್ಬುದ್ಧಿಯುಳ್ಳವರು ಇದರ ಯಾವ ಪರಿಯನ್ನು ಅರಿಯಲು ಸಾಧ್ಯವಿಲ್ಲ. ಸತ್ಸಂಗದ ಫಲವನ್ನು ಸವಿ ಜನರು ಸೇವಿಸಿ ತಮ್ಮ ಜೀವನವನ್ನು ಪಾವನ ಮಾಡಿಕೊಳ್ಳಬೇಕೆಂದು ಕೃಷ್ಣದಾಸರು ತಿಳಿಸುತ್ತಾರೆ. ಸತ್ಸಂಗದಿಂದ ಏನನ್ನು ಸಾಧಿಸಬೇಕೆಂಬುದನ್ನು ಈ ಕೀರ್ತನೆಯಲ್ಲಿ ವ್ಯಾಖ್ಯಾನಿಸುತ್ತಾರೆ.

"ಸತ್ಸಂಗವಿನಾ ಏನಸಾಧಿಸುವದೇನರದು
ರಾಜಸೂಯಾಶ್ವಮೇಧಾ। ಮುಖ್ಯಯಾಗಗಳಿಂದಾ ।
ತ್ಯಾಜ್ಯಾ ಲೋಕಂಗಳ ಪಡೆಯಬಹುದು ॥

ಮೆರೆವ ರಾಜಯೋಗದಿ । ಹಲವುಯೋಗಗಳಿಂದಾ ।
ಪರಿಪರಿ ಸಿದ್ಧಿಯಾ ಪಡಿಯಬಹುದು ॥

ಗುರು ಮಹಿಪತಿ ಸುತಪ್ರಭು। ಮಾರ್ಗವರಿಯದೇ
ನಿರರ್ಥಕ ಸಾಯಸವಾ ಪಡುವುದು"[೪೫]

ಸತ್ಸಂಗದಿಂದ ಅನೇಕ ಫಲಗಳು ದೊರೆಯುತ್ತವೆ. ಲೋಕಕಲ್ಯಾಣಕ್ಕಾಗಿ ರಾಜಸುಯ ಯಾಗವನ್ನು ಮಾಡಬಹುದು. ಅನೇಕ ಯಾಗದ ಫಲವಾಗಿ ಪ್ರಯೋಜನ ಪಡೆಯಬಹುದು. ಇವುಗಳನ್ನು ನಡೆಸಿಕೊಂಡ ರಾಜ ತನ್ನ ರಾಜಯೋಗದಿ ಹಲವು ಸಿದ್ಧಿಯನ್ನು ಪಡೆಯಬಹುದು. ಆದರೆ ಸತ್ಸಂಗದ ಫಲವಿಲ್ಲದೆ ಸದ್ಗುರುವಿನ ಮಾರ್ಗವರಿಯದೆ ಸಾರ್ಥಕವಾದ ಬದುಕು ನಮ್ಮದಾಗುವುದಿಲ್ಲ. ಹಾಗಾಗಿ ಮನುಷ್ಯ ಸತ್ಸಂಗದಲ್ಲಿದ್ದು ಸಾರ್ಥಕತೆಯನ್ನು ಪಡೆದುಕೊಳ್ಳಬೇಕೆಂಬ ಹಂಬಲ ಕೃಷ್ಣದಾಸರದು. ಇಂತಹ ಸತ್ಸಂಗವನ್ನು ಹಿಡಿದು ಸಾರ್ಥಕಗೊಳಿಸುವ ಪರಿಯನ್ನು ಇಲ್ಲಿ ಅಭಿವ್ಯಕ್ತಿಸಿದ್ದಾರೆ.

"ಸತ್ಸಂಗವಿಡಿಯೋ ಮನುಜಾ ।

ಹರಿಕಥಾ ಶ್ರವಣದಿ ಮನ ಜಡಿಯೋ ।
ದುರಿತಾಂಕುರ ಕಡಿಯೋ

ಘನಗುರುರಾಯನ ಕರುಣವ ಪಡಿಯೋ ।
ಅನುಭವಾಮೃತ ಕುಡಿಯೋ
ಮಹಿಪತಿಸುತ ಪ್ರಭು ನಾಮವ ನುಡಿಯೋ ।
ಸ್ವಹಿತದಲಿ ನಡಿಯೋ"[೪೬]

ಕೃಷ್ಣದಾಸರು ಮನುಜನಿಗೆ ಸತ್ಸಂಗದ ಸ್ವಹಿತವನ್ನು ಅರುಹಿದ್ದಾರೆ. ಸತ್ಸಂಗದಿಂದ ಹರಿಕಥಾ ಶ್ರವಣ ಮಾಡಿ ಮನದಲ್ಲಿರುವ ದುರಾಸೆಯನ್ನು ಕಡಿದುಕೊಳ್ಳಬೇಕು. ಅದರಂತೆ ಘನ ಗುರುರಾಯನ ಕೃಪೆಗೆ ಪಾತ್ರರಾಗಿ ಆತನ ಅನುಭಾವಾಮೃತವನ್ನು ಸೇವಿಸಬೇಕು. ಮಹಿಪತಿಸುತನ ನಾಮವ ಹಿಡಿದು ಸ್ವಹಿತದಲ್ಲಿ ನಡೆಯಬೇಕು. ಕೃಷ್ಣದಾಸರು ಸತ್ಸಂಗದಲ್ಲಿದ್ದು ಅದರ ಮಕರಂದವನ್ನು ಸವಿಯಬೇಕೆಂಬುದು ಮನುಜನನ್ನು ಕುರಿತು ಪ್ರತಿಪಾದಿಸಿದ್ದಾರೆ.

ಇಬ್ಬರು ಹರಿದಾಸರು ಸತ್ಸಂಗದ ಫಲದ ಅನೇಕ ವಿಚಾರಗಳನ್ನು ಅಭಿವ್ಯಕ್ತಿಸಿದ್ದಾರೆ. ಆದರೆ ಸತ್ಸಂಗದ ಭಾವತೀವ್ರತೆ ಇಬ್ಬರು ಹರಿದಾಸರಲ್ಲಿ ತನ್ನದೆಯಾದ ವಿಭಿನ್ನತೆಯಿಂದ ಕೂಡಿಕೊಂಡಿವೆ. ಉದಾಹರಿಸುವಲ್ಲಿ ಅನೇಕ ಲೌಕಿಕ ಮತ್ತು ಪಾರಮಾರ್ಥಿಕ ವಿಷಯವನ್ನು ಸಂದರ್ಭಕ್ಕೆ ತಕ್ಕಂತೆ ಭಿನ್ನಭಿನ್ನವಾಗಿ ವ್ಯಾಖ್ಯಾನಿಸಿದ್ದಾರೆ. ಸರ್ವರನ್ನು ಸತ್ಸಂಗದಲ್ಲಿ ನೆಲೆ

ನಿಲ್ಲಿಸುವ ಆಶಯವನ್ನು ಹೊಂದಿದ್ದಾರೆ. ಮನುಷ್ಯನು ತನ್ನ ಪಾರಮಾರ್ಥಿಕ ಪ್ರಪಂಚದಿಂದ ತನಗೆ ಬಂದಂತಹ ಕಷ್ಟವನ್ನು ಪರಿಹರಿಸಿಕೊಳ್ಳಲು ಇಂತಹ ಸತ್ಸಂಗವು ಬಹುಮುಖ್ಯವೆಂದು ಅಭಿವ್ಯಕ್ತಿಸಿದ್ದಾರೆ. ಸತ್ಸಂಗದ ಫಲಿತಗಳನ್ನು ಅನೇಕ ಕೀರ್ತನೆಯಲ್ಲಿ ಅಭಿವ್ಯಕ್ತಿಸಿ ಕೀರ್ತನೆಯ ಸೊಬಗನ್ನು ಹೆಚ್ಚಿಸಿದ್ದಾರೆ.

೫. ಸಾಮಾಜಿಕ ಕಳಕಳಿ

ಸಮಾಜವು ಎಲ್ಲ ಕಾಲದಲ್ಲಿಯೂ ದ್ವೇಷ, ಅಸೂಯೆ, ಸ್ವಾರ್ಥ, ಧರ್ಮಾಂಧತೆ, ಮೇಲು ಕೀಳುಗಳೆಂಬ ಭಾವನೆಗಳನ್ನು ಒಳಗೊಂಡಿದೆ. ಎಲ್ಲ ಕಾಲಘಟ್ಟಗಳಲ್ಲಿ ಇದು ಕಂಡುಬರುತ್ತದೆ. ಇವುಗಳನ್ನು ಸರಿಪಡಿಸುವ ಹಾಗೂ ಸಾಮಾಜಿಕ ಸ್ವಾಸ್ಥ್ಯತೆಯನ್ನು ಎತ್ತಿಹಿಡಿಯುವ ಕಾರ್ಯವನ್ನು ಎಲ್ಲ ಭಕ್ತಿಸಾಹಿತ್ಯ ಪಂಥಗಳು ಮಾಡಿಕೊಂಡು ಬಂದಿವೆ. ಆ ದಿಶೆಯಲ್ಲಿ ಹರಿದಾಸರ ಸಾಹಿತ್ಯದಲ್ಲಿ ವಿಪುಲವಾದ ಸಾಮಾಜಿಕ ಕಳಕಳಿ ತುಂಬಿ ನಿಂತಿದೆ. ಈ ಸಾಮಾಜಿಕ ಕಳಕಳಿ ಉದ್ದೇಶ ಡಾಂಬಿಕತನ, ಸ್ವಾರ್ಥ, ಅಸೂಯೆ, ಅತಿಯಾಗಿ, ನೆಚ್ಚಿಕೊಂಡ ಸಂಸಾರದ ಜಂಜಾಟವನ್ನು, ಅಹಂಕಾರ ಭಾವನೆಯನ್ನು ಕಿತ್ತೊಗೆಯುವುದಾಗಿದೆ. ಜನರಲ್ಲಿ ಸತ್ಸಂಗದ ಸಾತ್ವಿಕತೆಯ ಸಾಧನೆಯ ಶುಚಿತ್ವವನ್ನು ಹೆಚ್ಚಿಸಿ ಜನರ ಅಂತಃಕರಣವನ್ನು ಶುದ್ಧಿಗೊಳಿಸುವುದಾಗಿದೆ. ಸುಜ್ಞಾನದ ಅರಿವನ್ನು ಪಡೆದು ಪರಮಾತ್ಮನ ಸಾಕ್ಷಾತ್ಕಾರಕ್ಕೆ ನಡೆಯುವ ಪ್ರಕ್ರಿಯೆಯು ಈ ಸಾಮಾಜಿಕ ಕಳಕಳಿಯಲ್ಲಿ ಒಳಗೊಂಡಿದೆ.

ಮಹಿಪತಿರಾಯರು ಮತ್ತು ಕೃಷ್ಣದಾಸರು ತಮ್ಮ ಜೀವಿತದ ಅಪಾರವಾದ ಲೋಕ ಸಂಗ್ರಹದ ಜ್ಞಾನವನ್ನು ಪಡೆದುಕೊಂಡಿದ್ದರು. ಅದನ್ನು ಕೀರ್ತನೆಯ ಮುಖೇನವಾಗಿ ಅಭಿವ್ಯಕ್ತಿಸಿದ್ದಾರೆ. ಆ ಮೂಲಕ ಜನಸಾಮಾನ್ಯರಲ್ಲಿ ಅವಿತುಕೊಂಡಿರುವ ಅಜ್ಞಾನವನ್ನು ತೆಗೆದು ಸುಜ್ಞಾನಿಗಳಾಗಿ ಮಾಡುವ ಅಭಿಲಾಷೆ ಹೊಂದಿದ್ದರು. ಈ ಹಿನ್ನೆಲೆಯಲ್ಲಿ ಸಾಮಾಜಿಕ ಕಳಕಳಿಯ ಸದ್ಬೋಧ ಕೀರ್ತನೆಯು ಈ ಇರ್ವರ ಹರಿದಾಸರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತವೆ. ಅವುಗಳಲ್ಲಿ ಮಹಿಪತಿರಾಯರು ಜನರನ್ನು ವಂಚಿಸುವ ದುಷ್ಟ ಜನರನ್ನು ಅನೇಕ ಕೀರ್ತನೆಗಳಲ್ಲಿ ಖಂಡಿಸಿದ್ದಾರೆ. ಅಂತಹ ಜನರಿಗೆ ಆತ್ಮಶುದ್ಧಿಯ ಮಾರ್ಗವನ್ನು ನೀಡಿದ್ದಾರೆ.

"ಎಚ್ಚತ್ತಿರಬೇಕು ಮಾ ।

ಎಚ್ಚತ್ತಿರಬೇಕು ನೆಚ್ಚಿ ನಿಜಘನ

ರಚ್ಚಿಗೆ ಬಾರದೆ ಬಚ್ಚಿಟ್ಟು ನಿಜಘನ

ಕಚ್ಚಿ ಕೈ ಬಾಯಿಲೆ ಹುಚ್ಚಿಟ್ಟು ಹೋಗದೆ

ಕಚ್ಚಿಕಿಡದೆ ನೀನು ಕಾಂಚನದಾಶೆಗೆ

ನೆಚ್ಚಿಕೊಂಡಿರಬ್ಯಾಡಿ ವ್ಯಚ್ಯಾಗು ಬದುಕಿಗೆ

ತುಚ್ಛರ ಮಾತಿಗೆ ನೆಚ್ಚಿ ನಡಿಯದೆ
ಮತ್ಸರಕೆ ನೀವು ಹುಚ್ಚಾಗಿ ಹೋಗದೆ
ಅಚ್ಚಳಿಯದೆ ನೀವು ಅಚ್ಯುತ ಭಕ್ತಿಗೆ
ಸಚ್ಚಿದಾನಂದನ ನಿಶ್ಚಲವರಿಯಲಿಕ್ಕೆ
ಎಚ್ಚರಿಸಿದ ಗುರುಪಾದ ನಿಶ್ಚೈಸಲು
ಸೂಚಿಸಿ ಹೇಳಿದ ಗುರುದಾಸಮಹಿಪತಿ"[೪೭]

ಮೇಲಿನ ಕೀರ್ತನೆಯಲ್ಲಿ ಮಹಿಪತಿರಾಯರ ಸಾಮಾಜಿಕ ಕಳಕಳಿಯ ಮಾತುಗಳು ಮಾರ್ದ್ವನಿಸುತ್ತವೆ. ಈ ಮನುಷ್ಯ ಜನ್ಮಕ್ಕೆ ಎಚ್ಚರಿಕೆಯ ಮಾತುಗಳನ್ನಾಡಿದ್ದಾರೆ. ಕೆಲಸಕ್ಕೆ ಬಾರದ ಮಾತುಗಳನ್ನು ತೊರೆದೊಗೆದು ಕಚ್ಚೆ ಬಾಯಿ, ಕೈ ತನ್ನೊಳಗಿಟ್ಟುಕೊಂಡು ಹಣದಾಸೆಗೆ ಲೋಭ ಪಡಬೇಡ ಮಾನವ ಎಂದು ಹೇಳುತ್ತಾರೆ. ಸಂಸಾರವನ್ನು ಅತಿ ಹೆಚ್ಚು ನಂಬಿಕೊಂಡು ಹಾಳಾಗಬೇಡ. ದುಷ್ಟರ ಮಾತಿಗೆ ನೆಚ್ಚಿ ನಡೆಯಬೇಡ. ಮತ್ಸರವನ್ನು ಎಂದಿಗೂ ಪಡಬೇಡ. ಅಚ್ಚಳಿಯದ ಭಕ್ತಿ ಸದಾಚಾರ ಸದ್ಭಕ್ತಿ ನಿನ್ನಲ್ಲಿದ್ದರೆ, ಸಚ್ಚಿದಾನಂದ ಸ್ವರೂಪಿ ಪರಮಾತ್ಮನು ನಿನ್ನನ್ನು ಅನುಗ್ರಹಿಸುವನು. ಇಲ್ಲದಿದ್ದರೆ ಈ ಮಾನವ ಜನ್ಮ ವ್ಯರ್ಥವಾಗಿ ಹಾಳು ಮಾಡಿಕೊಂಡು ಹೋಗಬೇಕಾಗುತ್ತದೆ ಎಂಬ ಮಾತುಗಳು ಇಲ್ಲಿನ ಕೀರ್ತನೆಗಳಲ್ಲಿ ಅರ್ಥಪೂರ್ಣವಾಗಿ ಕಂಡುಬಂದಿವೆ. ಮನುಷ್ಯನ ಮನಸ್ಸಿಗೆ ಎಚ್ಚರಿಕೆಯನ್ನು ಈ ರೀತಿಯಲ್ಲಿ ನೀಡುತ್ತಾರೆ.

"ಎಚ್ಚರಿಲ್ಲೀ ಮನಕೆ ಯೋಚಿಸಿ ನೋಡದು ಚಿದ್ಘನಕೆ ।

ನುಡಿದವು ಪರಮಾರ್ಥ ನಡೆಯೊಳಗಿಲ್ಲದ ನುಡಿದರ್ಥ
ಹಿಡಿದು ವಿಷಯದ ಸ್ವಾರ್ಥಪಡುವುದು ಶ್ರಮತಾನೆ ವ್ಯರ್ಥ

ಓದುದು ವೇದಾಂತ ಭೇದಿಸಿ ತಿಳಿಯದೆ ಅದರರ್ಥ
ವಾದ ಮಾಡುದು ಭ್ರಾಂತ ಸಾಧಿಸಿ ನೋಡದು ತನ್ನೊಳು ತಾ"[೪೮]

ಮಹಿಪತಿರಾಯರು ಮನುಷ್ಯನ ಮನಸ್ಸಿಗೆ ಎಚ್ಚರಿಕೆಯನ್ನು ನೀಡಿದ್ದಾರೆ. ಬಸವಣ್ಣವರ ಹೇಳಿಕೆಯಂತೆ 'ನುಡಿದರೆ ಮುತ್ತಿನ ಹಾರದಂತಿರಬೇಕೆಂಬ' ವಚನದ ಸಾರವು ಇಲ್ಲಿಯ ಕೀರ್ತನೆಯಲ್ಲಿ ಮಾರ್ದ್ವನಿಸುತ್ತದೆ. ಪಾರಮಾರ್ಥಿಕ ನುಡಿಯು ನಮ್ಮ ನಡೆಯೊಳಗೂ ಇರಬೇಕು. ವಿಷಯದ ಸ್ವಾರ್ಥತತೆಯಿಂದ ಶ್ರಮವನ್ನು ವ್ಯರ್ಥ ಮಾಡಿಕೊಳ್ಳಬಾರದು. ವೇದಾಂತ ಓದಿದರೂ ಅದರ ನಿಜ ಅರ್ಥ ತಿಳಿಯದ ಜನ ಭಂಡವಾದ ಮಾಡಿ ಭ್ರಾಂತಿಯನ್ನು ಹಚ್ಚಿಕೊಳ್ಳುವರು. ಇದರಿಂದ ತನ್ನ ಆಧ್ಯಾತ್ಮಿಕ ಸಾಧನೆಯನ್ನು ಸಾಧಿಸಿದಂತಾಗುತ್ತದೆ. ಜನರಿಗೆ ಬುದ್ಧಿ ಹೇಳುವುದಕ್ಕಿಂತ

ತನ್ನನ್ನು ತಾನು ಮೊದಲು ತಿದ್ದಿಕೊಳ್ಳಬೇಕು. ಅವರ ಇವರ ಸುದ್ದಿ ನಮ್ಮ ಜ್ಞಾನಕ್ಕೆ ಒಳಿತಲ್ಲ. ಹಾಗಾಗಿ ಮನುಷ್ಯ ತನ್ನನ್ನು ತಾನು ತಿದ್ದಿಕೊಂಡು ಪಾರಮಾರ್ಥಿಕ ಸುಖದೆಡೆಗೆ ನಡೆಯಬೇಕೆಂದು ತಿಳಿಸುತ್ತಾರೆ. ತಾನು ತೊಡುವ ವೇಷಭೂಷಣ, ಆಚರಿಸುವ ತತ್ವಭೂಷಣ ಮುಂತಾದವುಗಳನ್ನು ಈ ಕೀರ್ತನೆಯಲ್ಲಿ ವ್ಯಾಖ್ಯಾನಿಸುತ್ತಾರೆ. ಗುರುಜ್ಞಾನದ ಹುಚ್ಚನ್ನು ಪಡೆಯದೆ ಈ ಮನಕ್ಕೆ ಎಚ್ಚರ ಎಂಬುವಗದು ತಿಳಿಯುವುದಿಲ್ಲ. ನಿಜದ ಆನಂದ ಪಡೆಯುವುದು ಸಾಧ್ಯವಾಗುವುದಿಲ್ಲ.

ಮಹಿಪತಿರಾಯರು ಈ ಮುಂದಿನ ಪದ್ಯದಲ್ಲಿ ಜ್ಞಾನ, ಅರ್ಥ, ನೋಟ, ಮುಂತಾದವುಗಳನ್ನು ಸಾಂಕೇತಿಕವಾಗಿ ನೀಡಿದ್ದಾರೆ. ಆ ಮೂಲಕ ಸಮಾಜದ ಜನರಿಗೆ ಅರಿವನ್ನು ನೀಡುವ ನಿಟ್ಟಿನಲ್ಲಿ ಕಂಡುಬಂದಿದೆ.

"ತಿಳಿದುಕೊಳ್ಳಿ ಖೂನ ಬಲ್ತು ನಿಜ ಜ್ಞಾನ

ಹಾದಿ ಅದೆ ಹಿಂದಗಾಧ ಅದೆ ಮುಂದೆ
ಭೇದಿಸಿನ್ನು ತಿಳಿದುಕೊಳ್ಳಿ ಗುರುಕೃಪೆಯಿಂದ

ಲಬ್ಧ ಅದೆ ಹಿಂದೆ ಶಬ್ದ ಅದೆ ಮುಂದೆ
ಲಬ್ಧವಾಗಿ ಕೇಳಿಕೊಳ್ಳಿ ಗುರುದಯದಿಂದ

ಅರ್ಥ ಅದೆ ಹಿಂದೆ ಸ್ವಾರ್ಥ ಅದೆ ಮುಂದೆ
ಅರ್ತು ಇದೆ ಕೇಳಿಕೊಳ್ಳಿ ಗುರು ಜ್ಞಾನದಿಂದೆ"[೪೯]

ಮಹಿಪತಿರಾಯರು ಈ ಪದ್ಯದಲ್ಲಿ ಜ್ಞಾನದ ಅರಿವನ್ನು ಸಾಮಾಜಿಕವಾಗಿ ಜನರಿಗೆ ಸ್ಪಷ್ಟವಾಗಿ ತಿಳಿಸಿದ್ದಾರೆ. ಹಾದಿಯು ಹಿಂದೆಯೂ ಇದೆ, ಮುಂದೆಯೂ ಇದೆ. ಅದನ್ನು ಭೇದಿಸಿ ನಿಜದಾರಿಯನ್ನು ತಿಳಿದುಕೊಳ್ಳಲು ಗುರುವಿನ ಅನುಗ್ರಹ ಮುಖ್ಯವಾಗಿದೆ. ನಿಶ್ಶಬ್ದವಿದೆ, ಮುಂದೆ ಶಬ್ದವು ಇದೆ. ನಿಶ್ಶಬ್ದ, ಶಬ್ದಗಳ ನಡುವೆ ಕೇಳಿಕೊಳ್ಳಬೇಕು ಗುರುವಿನ ದಯೆ. ಅರ್ಥವು ಇದೆ ಜೊತೆಗೆ ಸ್ವಾರ್ಥವು ಇದೆ. ಇವೆರಡನ್ನು ಅರ್ಥಭಾವನೆಯಿಂದ ಕೇಳಿಕೊಂಡು ಗುರುಜ್ಞಾನ ಪಡೆದುಕೊಳ್ಳಬೇಕು. ಹೀಗೆ ಸಾಂಕೇತಿಕ ಅರ್ಥಗಳ ಹಿನ್ನೆಲೆಯಲ್ಲಿ ಇಡೀ ಪದ್ಯ ಜ್ಞಾನದ ಹಸಿವನ್ನು ಹೆಚ್ಚಿಸುವ ಮನೋಭಾವನೆ ಇಲ್ಲಿದೆ.

ಸಮಾಜದ ಅಧೋಗತಿಯನ್ನು ಕಂಡು ಮಹಿಪತಿರಾಯರು ಕಳವಳಗೊಂಡವರು. ನೊಂದ ಜನರಿಗೆ ತಮ್ಮ ಹಿತೋಪದೇಶ ಹೇಳಿದವರು. ದುಷ್ಟರನ್ನು ಸನ್ಮಾರ್ಗದತ್ತ ತರಲು ಹಲವು ಕೀರ್ತನೆಗಳಲ್ಲಿ ಪ್ರೇರೇಪಿಸುವ ಕೆಲಸವನ್ನು ಮಾಡಿದ್ದಾರೆ.

"ಮಾಡಬಾರದು ನೋಡಿ ಕೇಡಿಗರ ಸಂಗ
ಬೇಡಿ ಕಾಡದೆ ಬಾಹುದಭಿಮಾನ ಭಂಗ

ಹೊಟ್ಟೆಯನು ಹೊಕ್ಕು ಕಟ್ಟೆಗೆ ತಂದು ನಿಲಿಸುವರು
ಗುಟ್ಟಿಲೀಹ ಮಾತು ತುಟ್ಟಿಗೆ ತಾಹರು
ಕೊಟ್ಟಿದನೆ ಬಾಯಾರಿ ಬಟ್ಟೆಗಳ ತಾಹರು
ನಟ್ಟಸ್ನೇಹದ ಬಳಕಿ ತುಟ್ಟಿಸುವರು"[೫೦]

ದುಷ್ಟರ ಸಂಗ ಎಂದೆಂದಿಗೂ ನಮ್ಮನ್ನು ಅಪಮಾನಿಸುವಂತದ್ದು. ನಯವಂಚಕರಾಗಿ ಒಳಗಿನ ವಿಷಯಗಳನ್ನು ತಿಳಿದುಕೊಂಡು ಜಗತ್ತಿಗೆ ಸಾರುವಂತವರು. ಅಭಿಮಾನ ಭಂಗ ತರುವಂತವರು. ಕೊಟ್ಟಿದ್ದನ್ನು ಇಟ್ಟುಕೊಂಡು ಮರಳಿ ಕೊಡದೆ ಗೆಳೆತನದ ದುರುಪಯೋಗ ಮಾಡಿಕೊಂಡವರು. ಬೆಲ್ಲದಂತೆ ಮಾತನಾಡಿ ಎಲ್ಲರನ್ನು ಮೋಹಿಸುತ್ತ ತನ್ನ ವಾದವನ್ನೇ ಮಾಡಿಕೊಳ್ಳುವವರು. ಕೆಟ್ಟವರ ಕೈಹಿಡಿದು ಇಲ್ಲದನ್ನೇ ಮಾಡುತ್ತ ಬುದ್ಧಿವಂತರನ್ನು ಭ್ರಮೆಗಿಡಿಸುವ ಮೂರ್ಖರಿವರು. ಇಂತಹವರನ್ನು ಮಹಿಪತಿರಾಯರು ಏನನ್ನಾದರೂ ಕೊಟ್ಟು ಅವರ ಸಂಗವನ್ನು ತ್ಯಾಗ ಮಾಡಬೇಕೆಂದು ತಿಳಿಸುತ್ತಾರೆ. ಇಂತಹ ಜನರಿಗೆ ಸತ್ಯದ ನುಡಿಯ ಕುರಿತು ಜನರಿಗೆ ಹೇಳುತ್ತಾರೆ.

"ಸತ್ಯದ ನಡಿ ಹಿಡಿರೋ ಮನುಜರು
ಸತ್ಯದಾ ನಡಿಗಿನ್ನು ಮತ್ತೊಂದು ಭಯವಿಲ್ಲ

ಸತ್ಯದಾನಡಿಗಿನ್ನು ಸತ್ಯ ನುಡಿಯಲು ಬೇಕು
ಸತ್ಯಂ ಸತ್ಯ ಶರಣರೆಲ್ಲಾ ಎತ್ಯಾಡಿಸುವಂತೆ
ಕೈಯಾರಕೊಂಡಿನ್ನು ಬಾಯಾರಬಾಡಿರೊ
ಮೈಯೊಳಗಿಹ ಕಾವನ್ಯೆಯನ ಮರಿಯಬ್ಯಾಡಿ"[೫೧]

ಸತ್ಯವನ್ನೇ ಎಲ್ಲಾ ಮನುಜರು ಮಾತನಾಡಬೇಕು. ಸತ್ಯಕ್ಕೆ ಯಾವ ಭಯವೂ ಇರುವುದಿಲ್ಲ. ಸತ್ಯವು ಪರಮಾತ್ಮ ಹಾಗೂ ಶರಣರೆಲ್ಲ ಎತ್ತಿ ಆಡಿಸುವಂತೆ ಇರಬೇಕು. ಸತ್ಯದಿಂದ ಸದ್ಗತಿಯನು ಪಡೆಯಬೇಕು. ಸುಳ್ಳನ್ನು ಹೇಳಿ ಮನಸ್ಸಿಗೆ ಕೇಡನ್ನು ಮಾಡಿಕೊಳ್ಳಬೇಡಿರಿ. ದುಶ್ಚಟಗಳಿಗೆ ಮಾರುಹೋಗಿ ದೇಶಾಂತರ ಹೋಗಬೇಡಿರಿ. ಆಶೆಗೆ ನಿರಾಸೆಯನು ತಂದುಕೊಳ್ಳಬೇಡಿರಿ. ಹೀಗೆ ಪರಸತಿ ಪರರ ಸ್ವತ್ತುಗಳಿಗೆ ಆಸೆಪಡದೆ ಅಂತರಂಗದಲ್ಲಿ ಪರಮಾತ್ಮನನ್ನು ನೆನೆದು ಆತ್ಮಸುಖಿಯಾಗು ಮನುಜ ಎಂದು ಮಾರ್ಮಿಕವಾಗಿ ಹೇಳಿದ್ದಾರೆ.

"ಧನಲಂಪಟಗೆ ಎಲ್ಲಿಹುದು ಗುರುಕೃಪೆಯ ಜ್ಞಾನ
ತನುಲಂಪಟಗೆ ಎಲ್ಲಿಹುದು ತನ್ನೊಳು ಖೂನ

ವಿಷಯಲಂಪಟಗೆ ಎಲ್ಲಿಹುದು ತಾ ವಿರಕ್ತಿಯು
ದೆಸೆಗೆಟ್ಟವಗೆ ಎಲ್ಲಿಹುದು ಯುಕ್ತಿಯು
ಮುಸುಕಿದ ಮಾಯದವಗೆಲ್ಲಿಹುದು ಮುಕ್ತಿಯು
ಹುಸಿಯಾಡುವವಗೆಲ್ಲಿಹುದು ಋಷಿಭಕ್ತಿಯು"[೫೭]

ಸದಾ ಆಸೆಯಲ್ಲಿ ಮೈಮರೆತಿರುವ ಜನರಿಗೆ ಗುರುಕೃಪೆ ಸಿಗಲಾರದು. ವಿಷಯ ಭೋಗಗಳಲ್ಲಿ ನಿರತನಾದವನಿಗೆ ಮುಕ್ತಿ ದೊರೆಯಲಾರದು. ನಿರ್ಗತಿಕನಾದ ಮನುಷ್ಯನಿಗೆ ಎಲ್ಲಿಯೂ ಮುಕ್ತಿ ಸಿಗಲಾರದು. ಸಂಸಾರದ ಈ ಜಂಜಾಟದಲ್ಲಿ ಸಿಕ್ಕಿರುವವನಿಗೆ ಮುಕ್ತಿ ದೊರೆಯಲಾರದು. ಹುಸಿ ನುಡಿಯುವನಿಗೆ ಗುರು ಹಿರಿಯರಲ್ಲಿನ ಭಕ್ತಿ ಎಂದಿಗೂ ಬರಲಾರದು. ಅನೇಕ ಸಾಂಕೇತಿಕ ಅರ್ಥವನ್ನು ಹೇಳುತ್ತ ಈ ಮಾನವ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಲು ಇಲ್ಲಿಯ ಉಪದೇಶಗಳು ಉತ್ತಮ ನಿದರ್ಶನಗಳಾಗಿವೆ. ಸಮಾಜದಲ್ಲಿರುವ ಜಾತಿ–ಮತ ಪಂಥಗಳ ದುರಭಿಮಾನವನ್ನು ಕಿತ್ತೊಗೆದು ದೇವರನ್ನು ಕಾಣಬೇಕು. ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಇವರ ನೂರಾರು ಕೀರ್ತನೆಗಳು ಹಿರಿದಾದ ಅರ್ಥವನ್ನು ಅಭಿವ್ಯಕ್ತಿಸುತ್ತವೆ. ಸಾಮಾಜಿಕ ಕಳಕಳಿಯ ಹಿತೋಪದೇಶವನ್ನು ತಮ್ಮ ಲೋಕಸಂಗ್ರಹ ಜ್ಞಾನದ ಮುಖೇನವಾಗಿ ಅಭಿವ್ಯಕ್ತಿಸಿದ್ದಾರೆ.

ಇವರಂತೆಯೇ ಕೃಷ್ಣದಾಸರು ಸಹ ಸಾಮಾಜಿಕ ಕಳಕಳಿಯ ಅನೇಕ ಕೀರ್ತನೆಯ ಪದ್ಯಗಳನ್ನು ರಚಿಸಿದ್ದಾರೆ. ಮನುಷ್ಯನ ಆತ್ಮಸ್ತುತಿ ಪರನಿಂದನೆಯನ್ನು ಕಂಡ ಈ ರೀತಿಯಲ್ಲಿ ಹೇಳುತ್ತಾರೆ.

"ಬಿಡು ಬಿಡು ಆತ್ಮ ಸ್ತುತಿಯನು ಪರನಿಂದೆಯನು

ತನ್ನ ಗುಣವ ತಾನೇ ಹೊಗಳುತಲಿ ।

ಅನ್ಯರ ದೂಷಿಸಲೇನು

ತಾ ಕೋಡಗ ಮರಿ ಬನ ಹಳಿವಂತೆ ।

ವ್ಯಾಕುಳ ಹಿಡಿದರೆ ತಾನು

ಮಹಿಪತಿ ಸುತ ಪ್ರಭು ಬೋಧವ ಕೇಳುತ ।

ಸ್ವಹಿತವ ಪಡಿಯೋ ನೀನು"[೫೮]

ಕೃಷ್ಣದಾಸರು ಮಾನವನ ಆತ್ಮಸ್ತುತಿಯನ್ನು ಸ್ವಾರಸ್ಯಕರವಾಗಿ ಬಣ್ಣಿಸಿದ್ದಾರೆ. ಪರನಿಂದನೆ ಮಾಡುವುದು ಮನುಷ್ಯನಿಗೆ ಶೋಭೆ ತರುವಂತಹದಲ್ಲ. ತನ್ನ ಗುಣವನ್ನು ತಾನು ಬಣ್ಣಿಸುತ್ತಾ ಅನ್ಯರನ್ನು ದೂಷಿಸುವುದು ಒಳಿತಲ್ಲ. ಇದರಿಂದ ಯಾವ ಫಲವೂ ಲಭಿಸುವುದಿಲ್ಲ. ತಾನೆ ಕ್ರೂರಪ್ರಾಣಿಯಾಗಿ ಸಾತ್ವಿಕ ಪ್ರಾಣಿಯನ್ನು ಬೇಟೆಯಾಡಿದರೆ ಏನು ಪ್ರಯೋಜನ. ಶ್ರೀಗುರುವಿನ

ಬೋಧವ ಕೇಳುತ್ತಾ ಸ್ವಹಿತವ ಪಡೆಯಬೇಕೆಂದು ಹೇಳುತ್ತಾರೆ. ಈ ಸಂಸಾರ ಭ್ರಾಂತಿಯನ್ನು ಕುರಿತು ಉದಾತ್ತವಾಗಿ ಈ ರೀತಿಯಲ್ಲಿ ಹೇಳಿದ್ದಾರೆ.

"ಛೀ ಛೀ ಛೀ ಛೀ

ಬಿಟ್ಟು ಕೊಡೋ ನೀ ಸಂಸಾರ ಭ್ರಾಂತಿ ।
ಎಷ್ಟು ಸೋಸುವಿ ದುಃಖದ ಪಂಥಿ ।
ಅಷ್ಟು ಪಾಶದೀ ಬಿಗಿದಿಹ ಗ್ರಂಥಿ ।
ಕಷ್ಟ ಪಟ್ಟಿನ್ನು ಮಾಡುವಿ ಚಿಂತಿ ।"[೫೪]

ಸಂಸಾರದ ಮೋಹಕ್ಕೆ ಸಿಲುಕಿ ಈ ಮಾನವಜನ್ಮ ವ್ಯರ್ಥ ಮಾಡಿಕೊಳ್ಳುವ ಜನರಿಗೆ ಛೀ ಛೀ ಎಂದು ಛೀಮಾರಿ ಹಾಕುತ್ತಾರೆ. ಸಂಸಾರ ಭ್ರಾಂತಿಯು ಅರಿಷಡ್ವರ್ಗಗಳಿಂದ ಸುತ್ತುವರಿದಿದೆ. ಸದಾ ಸುಖ ಭೋಗದಲ್ಲಿ ಸಿಲುಕಿ, ಹೀನಕರ್ಮಗಳಿಂದ ಕೂಡಿದ್ದಾಗಿದೆ. ಸಂಸಾರದಲ್ಲಿ ನಿಜ ಸುಖವಿದೆ ಎಂದು ನಂಬಿದ ಜನರು ಭ್ರಾಂತಿಗೆಟ್ಟು ಚಿಂತೆಯನ್ನು ಮಾಡುತ್ತಿದ್ದಾರೆ. ಈ ಚಿಂತೆಯಿಂದ ಹೊರಬನ್ನಿ ಎಂದು ಕೃಷ್ಣದಾಸರು ಜನರಿಗೆ ತಿಳಿಯಪಡಿಸುತ್ತಾರೆ. ಹೆಂಡತಿ ಮಕ್ಕಳು ನಿನ್ನವರೆಂದು ನಂಬಿದರೆ ಅವರನ್ನು ತೃಪ್ತಿಪಡಿಸಿದಾಗ ಮಾತ್ರ ನಿನ್ನ ಸ್ನೇಹಕ್ಕೆ ಹಾತೊರೆಯುತ್ತಾರೆ. ಯೌವನ ಜಾರಿ ಮುಪ್ಪಾವಸ್ಥೆ ಆವರಿಸಿದಾಗ ನಿನ್ನ ಮಾತಿಗೆ ಬೆಲೆಯಿರುವುದಿಲ್ಲ. ವಯಸ್ಸು ಜಾರಿದಂತೆ ಈ ದೇಹ ಹಳೆಯದಾಗುತ್ತ ಹೋಗುತ್ತದೆ. ಎಲ್ಲ ಬಲವುಳ್ಳ ಇಂದ್ರಿಯಗಳು ಅಶಕ್ತಗೊಳ್ಳುತ್ತವೆ. ರೋಗರುಜಿನಗಳು ನಿನ್ನನ್ನು ಆವರಿಸಿಕೊಳ್ಳುತ್ತವೆ. ಇಂತಹ ಹೇಯ ಸಂಸಾರವನ್ನು ನೆಚ್ಚಿ ಹಾಳಾಗಲು ಹೋಗಬೇಡರಿ. ಆಸೆಗೆ ಮಿತಿಯಿಲ್ಲದ ಈ ಸಂಸಾರವನ್ನು ನಂಬಿ ಹರಿನಾಮವನ್ನು ನೆನೆಯದೇ ಇರುವುದು ಉಚಿತವಲ್ಲ. ಹರಿನಾಮವನ್ನು ಸ್ಮರಿಸಿ ಈ ಜನ್ಮವನ್ನು ಪಾವನ ಮಾಡಿಕೊಳ್ಳುವುದು ಉಚಿತವಾದದ್ದು. ಸಂಸಾರವನ್ನು ಕುರಿತು ಅಭೂತಪೂರ್ವವಾಗಿ ಹೇಳಿದ್ದಾರೆ. ತಮ್ಮ ಕಾಲಜ್ಞಾನ ಕೀರ್ತನೆಯಲ್ಲಿ ಮತ್ತೆ ಈ ರೀತಿಯಾಗಿ ಉಚ್ಚರಿಸುತ್ತಾರೆ.

"ಅರ್ತುಕೊಳ್ಳಿರೋ ಹಿತವಾ ಜನರಿನ್ನು ।
ಮೈಯ್ಯವ ಮರಿಯ ಬ್ಯಾಡಿರೋ ।
ಮರ್ತ್ಯದೊಳಗ ಕಲಿರಾಯ ನರಸುತನ ।
ಪ್ರಬಲವಾಯಿತು ಕೇಳಿರೋ

ಬೀಳು ಬಿದ್ದಾವೋ ಧರ್ಮದಾ ಭೂಮಿಯು ।
ಅಧರ್ಮವೇ ಹೆಚ್ಚೇತು ।

ಹೇಳಲಿನ್ನೇನವಗುಣಿಗಳು ಪ್ರಕಟಿಸಿ। ಕೇಡು ತಂದಾರು ಜಗಕೆ ।

ಖೂಳರ ಹಿರಿತನವು ಒಳ್ಳೆವರಾ । ಮಾನ ಮನ್ನಣೆ ಹೋದಾವು ।

ಕೀಳು ಮಾತುಗಳಾಡಿ ಬಿಸಿ ನೀರು ಚಲ್ಲಿ ।

ಮನೆಯ ಕೊಂಡುಂಬುವರು"[೫೫]

ಈ ಕೀರ್ತನೆಯಲ್ಲಿ ಜನರಿಗೆ ಅನೇಕ ಉದಾಹರಣೆಗಳನ್ನು ಕೊಡುವುದರ ಮೂಲಕ ಅರ್ಥವಂತಿಕೆಯನ್ನು ಉಣಬಡಿಸಿದ್ದಾರೆ. ಮೃತ್ಯುಗಳ ಕಲಿರಾಯ ಮರ್ತ್ಯ ಲೋಕದಲ್ಲಿಯೂ ಸಹ ದುಷ್ಟಜನರ ಸಂಖ್ಯೆ ಹೆಚ್ಚಾಗುತ್ತಿದೆ ಅಂತಹ ಕಾಲಮಾನದ ದಿನವಿದು. ಧರ್ಮವನ್ನು ಹಿಂದಿಕ್ಕಿ ಅಧರ್ಮ ಹೆಚ್ಚುತ್ತ ಹೋಗುತ್ತಿದೆ. ಹೇಳಲಿಕ್ಕೆ ಇನ್ನೇನು ಒಳ್ಳೆಯವರಿಗೆ ಕೇಡು ಬಂದಿತು. ಈ ಜನಕ್ಕೆ ಕೆಟ್ಟವರ ಹಿರಿತನ ಒಳ್ಳೆಯವರ ಮಾನ ಹೋಯಿತು. ಕೀಳು ಮಾತುಗಳಿಂದ ಮನೆಯನ್ನೊಡೆಯುವ ಜನರು ಈ ಕಾಲದವರು.

ಸತಿಯರು ಧರ್ಮ ಬಿಟ್ಟಾರು ಪತಿಸೇವೆಯ ಮರೆತು ನಿಂತಾರೆ. ಮರ್ಯಾದೆ ಬಿಟ್ಟು ದುಷ್ಟಬುದ್ಧಿಯಲ್ಲಿ ಬಾಳುತ ಕುಲಕ್ಕೆ ಅವಮಾನ ಮಾಡಿಯಾರು. ಹೀಗೆ ಸಾಗುವ ಆರು ನುಡಿಗಳ ಪದ್ಯದಲ್ಲಿ ಕೊನೆಗೆ ೨೦೦೦ ವರ್ಷಕ್ಕೆ ದೇವಾಲಯಗಳ ಯಾತ್ರೆ ನಿಲ್ಲುತ್ತವೆ. ೨೫೦೯ ವರ್ಷಕ್ಕೆ ಮತ್ತೆ ಯಾತ್ರೆಗಳು ನಡೆಯುವವು. ಈ ಜಗದಲ್ಲಿ ಇದು ಹುಸಿಯಲ್ಲ, ಮಹಿಪತಿ ಸಾರಿದ ಸದ್ಬೋಧೆ ಎಂದು ಕಾಲಜ್ಞಾನ ವಚನದಲ್ಲಿ ಸ್ವಾರಸ್ಯಕರವಾಗಿ ಖಂಡಿಸಿದ್ದಾರೆ. ಪಾಮರನು ಜ್ಞಾನಿಯಾಗಬಲ್ಲನೆ ಎಂಬ ಪ್ರಶ್ನೆಯನ್ನು ಎತ್ತಿ ಈ ರೀತಿಯಲ್ಲಿ ಹೇಳುತ್ತಾರೆ.

"ಏನು ಹೇಳಿದರೇನು ಪಾಮರ ಜ್ಞಾನಿಯಾಗಬಲ್ಲನೇ।

ದಾನವಾರಿಯ ನಂಬಲರಿಯದೆ ಹೀನ ವೃತ್ತಿಲಿ ನಡೆವ ಮನುಜಗೆ ॥

ಎತ್ತಿಗುತ್ತಮ ಲಿಂಗ ಮುದ್ರೆಯನ್ನೊತ್ತಿದ್ದರೆ ಬಸವನೆಂಬರು ।

ಕತ್ತೆಯನು ಹಿಡಿ ತಂದು ವತ್ತಲು ಕತ್ತೆಯಲ್ಲದೆ ಬಸವನಪ್ಪುದೆ"[೫೬]

ಕೃಷ್ಣದಾಸರು ತಮ್ಮ ಸಾಮಾಜಿಕ ಕಳಕಳಿಯ ಕೀರ್ತನೆಯಲ್ಲಿ ಸದ್ಬೋಧೆಯನ್ನು ನೀಡುತ್ತ ಜನರನ್ನು ಸನ್ಮಾರ್ಗಕ್ಕೆ ತರಲು ಪ್ರಯತ್ನಿಸಿದ್ದಾರೆ. ಇದರಿಂದ ಅನೇಕ ಜನರು ಸಜ್ಜನರಾಗಿ ನಿಜ ಸುಖವ ಪಡೆದಿದ್ದಾರೆ. ಕೆಲವರು ಅಧಮರು ಅಧ್ಯಾತ್ಮದ ಸುಖವನ್ನು ಪಡೆಯದೆ ಇರುವಾಗ ತಮ್ಮ ವೈಚಾರಿಕ ನಿಲುವನ್ನು ಅಭಿವ್ಯಕ್ತಿಸಿದ್ದಾರೆ.

ಏನು ಹೇಳಿದರೂ ಅಜ್ಞಾನಿ ಜ್ಞಾನಿಯಾಗಲಾರನು. ಯಾವಾಗಲೂ ದುಷ್ಟಕಾರ್ಯದಲ್ಲಿ ತೊಡಗಿಕೊಳ್ಳುವ ಜನರು ಬೇರೆಯವರನ್ನು ಕಾಡುವ ಜನರಿಗೆ ಯಾವ ಗುಣಗಳ ಬೋಧೆಯನ್ನು ನೀಡಿದರು ವ್ಯರ್ಥ. ಅವರ ಯಾವ ಗುಣಗಳ ಮೇಲೆಯೂ ಇಂತಹ ಯಾವ ಸತ್ಪರಿಣಾಮಗಳು ಬೀರಲಾರವು. ಒಳ್ಳೆಯ ಸಂಸ್ಕಾರ ಪಡೆಯದೆ ತಮ್ಮ ಜೀವನವನ್ನು ಸಾಗಿಸುವಂತಹವರು.

ಎತ್ತಿಗೆ ಲಿಂಗವನ್ನು ಕಟ್ಟಿದರೆ ಬಸವಣ್ಣನೆಂದು ನಮಸ್ಕರಿಸುವರು. ಕತ್ತೆಗೆ ಲಿಂಗದ ಮುದ್ರೆಯನ್ನು ಕಟ್ಟಿದರೆ ಬಸವಣ್ಣನೆಂದು ಕರೆಯುತ್ತಾರೆಯೇ ಎಂದು ಪ್ರಶ್ನಿಸುತ್ತಾರೆ. ಕತ್ತೆಗೆ ಒಳ್ಳೆಯ ಸಂಸ್ಕಾರ ನೀಡಿದರೂ ಅದನ್ನು ಬಸವಣ್ಣನಾಗಿ ಮಾಡಲು ಸಾಧ್ಯವಿಲ್ಲ. ಹಾಗಾಗಿ ಚಿನ್ನದಲ್ಲಿ ಕಲ್ಮಷ ಕೂಡಿ ಬಂಗಾರ ಬಿಳುಪಾದಾರೆ ಅಕ್ಕಸಾಲಿಗನು ಮೂಸೆಯಲ್ಲಿಟ್ಟು ಚೆನ್ನಾಗಿ ಕಾಯಿಸಬೇಕು. ಕಲ್ಮಷವೆಲ್ಲ ಹೋಗಿ ಚೊಕ್ಕ ಚಿನ್ನವು ಮಾತ್ರ ಉಳಿಯುತ್ತದೆ. ಹಿತ್ತಾಳೆ ಹೇಗೆ ಮಾಡಿದರೂ ಅದು ಹಿತ್ತಾಳೆಯಾಗಿಯೇ ಉಳಿಯುತ್ತದೆ ಹೊರತು ಬಂಗಾರವಾಗುವುದಿಲ್ಲ. ಈ ಕಾಯಿಸುವಿಕೆಯ ಸಂಸ್ಕಾರದಿಂದ ತನ್ನ ಗುಣ ಸ್ವಭಾವವನ್ನು ದುಷ್ಟರು ಬದಲಾವಣೆ ಮಾಡಿಕೊಳ್ಳದೆ ಇರುತ್ತಾರೆ. ಸ್ವಾತಿ ಮಳೆಯಿಂದ ಮುತ್ತುಗಳು ಹುಟ್ಟಿಕೊಳ್ಳುತ್ತವೆ. ಅದೇ ಹನಿಯು ಹುಲ್ಲಿನ ಮೇಲೆ ಬಿದ್ದಾಗ ಮುತ್ತಾಗುವುದಿಲ್ಲ. ಆದ್ದರಿಂದ ಒಳ್ಳೆಯವರು ದುಷ್ಟರ ಜೊತೆಗಿದ್ದರೂ ಸಂಸ್ಕಾರದಿಂದ ಬದಲಾಗಬಹುದು. ಆದರೆ ದುಷ್ಟರು ದುಷ್ಟರಾಗಿಯೇ ಉಳಿದು ಎಂತಹ ಸಂಸ್ಕಾರವನ್ನು ನೀಡಿದರೂ ತಮ್ಮ ಮೂಲ ಸ್ವರೂಪನ್ನು ಬದಲಾಯಿಸಿಕೊಳ್ಳಲು ಆಗುವುದಿಲ್ಲ. ಇಂತಹ ದುಷ್ಟರಿಂದ ಸಂಸ್ಕಾರವಂತರು ಬಿಡುಗಡೆಗೊಂಡು ಸಮಾಜದಲ್ಲಿ ಉನ್ನತ ಪದವಿಯನ್ನು ಗಳಿಸಿಕೊಳ್ಳಬೇಕೆಂಬ ಮಹದಾಸೆಯನ್ನು ಕುರಿತು ಕೃಷ್ಣದಾಸರು ಪ್ರಸ್ತಾಪಿಸಿದ್ದಾರೆ.

ಕೃಷ್ಣದಾಸರು ಮತ್ತು ಮಹಿಪತಿರಾಯರು ತಮ್ಮ ಅನೇಕ ಕೀರ್ತನೆಗಳಲ್ಲಿ ಸಾಮಾಜಿಕ ಕಳಕಳಿಯ ಮಾತುಗಳನ್ನು ಹೇಳುತ್ತಾರೆ. ಆ ದಿಶೆಯಲ್ಲಿ ತಮ್ಮ ಅಪಾರವಾದ ಲೋಕಸಂಗ್ರಹವನ್ನು ಸದ್ಬೋಧೆಯ ಮುಖಾಂತರವಾಗಿ ಜನಸಾಮಾನ್ಯರಿಗೆ ಮುಟ್ಟಿಸಿದ್ದಾರೆ. ಇವರ ಸದ್ಬೋಧೆಯ ಮಹತ್ವದ ಕೀರ್ತನೆಗಳನ್ನು ಆಲಿಸಿದಾಗ ಮಾತ್ರ ಮನದಟ್ಟಾಗುತ್ತದೆ. ಈ ಇಬ್ಬರು ಹರಿದಾಸರ ಸಾಮಾಜಿಕ ಕಳಕಳಿಯಲ್ಲಿ ವಿಭಿನ್ನವಾದ ವಸ್ತುವೈವಿಧ್ಯತೆಗಳು ಸೇರಿಕೊಂಡಿವೆ. ಅಭಿವ್ಯಕ್ತಿಸುವ ವಿಧಾನವೂ ವಿಭಿನ್ನತೆಯಿಂದ ಕೂಡಿದೆ. ಆದರೆ ಅವುಗಳ ತಾತ್ವಿಕ ವಿಷಯ ಮಾತ್ರ ಒಂದೇ ಇದೆ.

ಇವುಗಳಲ್ಲದೆ ಇಬ್ಬರು ಹರಿದಾಸರಲ್ಲಿ ಬಹುಭಾಷಾ ಕೀರ್ತನೆಗಳು ರಚನೆಗೊಂಡಿದ್ದು ಕಂಡುಬರುತ್ತದೆ. ಹಾಗಾಗಿ ಇಬ್ಬರೂ ಬಹುಭಾಷೆಗಳನ್ನು ಬಲ್ಲವರಾಗಿದ್ದರು. ಮಹಿಪತಿರಾಯರು ತಮ್ಮ ಯೋಗಸಾಧನೆಗೆ ಹೆಚ್ಚಿನ ಒತ್ತನ್ನು ನೀಡಿದವರು. ಕೃಷ್ಣದಾಸರಿಗಿಂತ ಮಹಿಪತಿರಾಯರು ದೈವತ್ವಕ್ಕೆ ಹೆಚ್ಚಿನ ಮನ್ನಣೆ ಕೊಟ್ಟಿದ್ದು ಕಂಡುಬರುತ್ತದೆ. ಯೋಗ ಸಾಧನೆಯ ಮುಖೇನವಾಗಿ ಮಹಿಪತಿರಾಯರು ಅಪಾರ ಜ್ಞಾನದ ಖನಿಜವನ್ನು ಪಡೆದುಕೊಂಡವರು. ಜ್ಞಾನ ಮಾರ್ಗದಲ್ಲಿ ಮನಸ್ಸನ್ನು ಏಕಾಗ್ರತೆಗೊಳಿಸುವುದು ಅತ್ಯಂತ ಅವಶ್ಯವಾದದ್ದಾಗಿದೆ. ಗುರು ಭಾಸ್ಕರಸ್ವಾಮಿಗಳ ಕೃಪೆಯಿಂದ ಯೋಗಸಾಧನೆಯ ಮಾರ್ಗವನ್ನು ಹಿಡಿದರು. ಮಹಿಪತಿರಾಯರ ಹಾಗೆಯೇ ಈ ಏಕಾಗ್ರತೆ ಮನಸ್ಸಿನ ಚಂಚಲತೆಯ ನಿಗ್ರಹ ಇವುಗಳು ಕೃಷ್ಣದಾಸರಲ್ಲಿಯೂ ಉತ್ಕಟವಾಗಿ ಮೂಡಿಬಂದಿವೆ. ಇವುಗಳನ್ನು ನಿಗ್ರಹಿಸುವ ಶಕ್ತಿಯನ್ನು ಕರುಣಿಸಿದವರು ಮಹಿಪತಿರಾಯರು. ಆ ಮೂಲಕವಾಗಿ ಈ ಅಧ್ಯಾಯದಲ್ಲಿ ಇಬ್ಬರು ಹರಿದಾಸರ ಭಕ್ತಿಯ ಸಾಹಿತ್ಯ ಒಂದೇ

ತೆರನಾಗಿ ಹರಿದುಬಂದಿದೆ. ಆದರೆ ಅದನ್ನು ಅಭಿವ್ಯಕ್ತಿಸುವ ವಿಧಾನವು ವಿಭಿನ್ನತೆಯಿಂದ ಕೂಡಿದೆ. ಇಬ್ಬರು ಹರಿದಾಸರಲ್ಲಿ ವಿಷಯದ ಗಾಢತೆ ಅಪಾರವಾಗಿದೆ. ಸಹೃದಯರಿಗೆ ಇವರ ಕೀರ್ತನೆಯ ಸಾರ ಪದೇ ಪದೇ ಸವಿಯುವ ಮನಸ್ಸು ಉಂಟಾಗುತ್ತದೆ. ಹೀಗಾಗಿ ಈ ತೌಲನಿಕ ಅಧ್ಯಯನದಲ್ಲಿ ಗುರು ಮತ್ತು ಶಿಷ್ಯ, ತಂದೆ ಮತ್ತು ಮಗ ಈ ಎರಡು ವಿಧದಲ್ಲಿ ಕೀರ್ತನೆಯಲ್ಲಿನ ಸಾಮೀಪ್ಯತೆಯ ಭಿನ್ನತೆಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಕೊನೆಟಿಪ್ಪಣಿಗಳು

೧. ಮಹಿಪತಿದಾಸರ ಹಾಡುಗಳು, (ಸಂ) ಕಾವ್ಯಪ್ರೇಮಿ, ಸಮಾಜ ಪುಸ್ತಕಾಲಯ, ಧಾರವಾಡ, ಪು. ೩೨.

೨. ಸಮಗ್ರದಾಸ ಸಾಹಿತ್ಯ ಸಂಪುಟ ೧೧, ಭಾಗ ೨, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು, (ಸಂ) ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪು. ೨೩.

೩. ಶ್ರೀಗುರುಭಾಸ್ಕರ ಮಹಿಪತಿ ಜ್ಞಾನ ಗಂಗಾವಾಹಿನಿ, ರಾಮಯ್ಯ ಗುರುಪಯ್ಯ ಹರಿದಾಸ ಕಾಖಂಡಕಿ, ಲೇಖಕರು ಮತ್ತು ಪ್ರಕಾಶಕರು, ೨೦೦೯, ಪು. ೫೨.

೪. ಸಮಗ್ರದಾಸ ಸಾಹಿತ್ಯ ಸಂಪುಟ ೧೧, ಭಾಗ ೨, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು, (ಸಂ) ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪು. ೫೯.

೫. ಮಹಿಪತಿದಾಸ, ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ(ಮುತ್ತಿನಹಾರ ಮಾಲಿಕೆ), ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೬, ಪು. ೧೫.

೬. ಅದೇ, ಪು. ೩೫-೩೬.

೭. ಸಮಗ್ರದಾಸ ಸಾಹಿತ್ಯ ಸಂಪುಟ ೧೧, ಭಾಗ ೧, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು, (ಸಂ) ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪು. ೨೭೩.

೮. ಅದೇ, ಪು. ೨೬೬.

೯. ಮಹಿಪತಿದಾಸ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ(ಮುತ್ತಿನಹಾರ ಮಾಲಿಕೆ), ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೯೬, ಪು. ೪೭.

೧೦. ಸಮಗ್ರದಾಸ ಸಾಹಿತ್ಯ ಸಂಪುಟ-೧೧, ಭಾಗ-೧, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು, (ಸಂ) ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪು. ೨೨೫-೨೨೬.

೧೧. ಶ್ರೀಗುರುಭಾಸ್ಕರ ಮಹಿಪತಿ ಜ್ಞಾನ ಗಂಗಾವಾಹಿನಿ, ರಾಮಯ್ಯ ಗುರುಪಯ್ಯ ಹರಿದಾಸ ಕಾಖಂಡಕಿ, ಲೇಖಕರು ಮತ್ತು ಪ್ರಕಾಶಕರು, ೨೦೦೯, ಪು. ೫೭.

೧೨. ಸಮಗ್ರದಾಸ ಸಾಹಿತ್ಯ ಸಂಪುಟ ೧೧, ಭಾಗ ೧, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು, (ಸಂ) ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪು. ೧೪೦.

೧೩. ಸಮಗ್ರದಾಸ ಸಾಹಿತ್ಯ ಸಂಪುಟ ೦೬, ಭಾಗ ೧, ಕಾಖಂಡಕಿ ಶ್ರೀಮಹಿಪತಿರಾಯರ ಕೀರ್ತನೆಗಳು, (ಸಂ) ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪು. ೦೯.

೧೪. ಅದೇ, ಪು. ೯–೧೦.

೧೫. ಸಮಗ್ರದಾಸ ಸಾಹಿತ್ಯ ಸಂಪುಟ ೧೧, ಭಾಗ ೧, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು, (ಸಂ) ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪು. ೧೮.

೧೬. ಅದೇ, ಪು. ೨೦.

೧೭. ಸಮಗ್ರದಾಸ ಸಾಹಿತ್ಯ ಸಂಪುಟ ೦೬, ಭಾಗ ೧, ಕಾಖಂಡಕಿ ಶ್ರೀಮಹಿಪತಿರಾಯರ ಕೀರ್ತನೆಗಳು, (ಸಂ) ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪು. ೧೦.

೧೮. ಸಮಗ್ರದಾಸ ಸಾಹಿತ್ಯ ಸಂಪುಟ ೧೧, ಭಾಗ ೧, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು, (ಸಂ) ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪು. ೫೨.

೧೯. ಅದೇ, ಪು. ೫೩.

೨೦. ಸಮಗ್ರದಾಸ ಸಾಹಿತ್ಯ ಸಂಪುಟ ೦೬, ಭಾಗ ೧, ಕಾಖಂಡಕಿ ಶ್ರೀಮಹಿಪತಿರಾಯರ ಕೀರ್ತನೆಗಳು, (ಸಂ) ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪು. ೧೧.

೨೧. ಅದೇ, ಪು. ೧೨.

೨೨. ಸಮಗ್ರದಾಸ ಸಾಹಿತ್ಯ ಸಂಪುಟ ೧೧, ಭಾಗ ೧, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು, (ಸಂ) ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪು. ೫೩.

೨೩. ಶ್ರೀಗುರುಭಾಸ್ಕರ ಮಹಿಪತಿ ಕೃಷ್ಣಭಜನಾಮೃತವಾಹಿನಿ, (ಸಂ) ಹಾಗೂ ಪ್ರಕಾಶಕರು ಶ್ರೀರಾಮಯ್ಯ ಗುರುಪ್ಪಯ್ಯ ಹರಿದಾಸ ಶ್ರೀಮತಿ ಜಾನಕಿ ರಾಮಯ್ಯ ಹರಿದಾಸ ಕಾಖಂಡಕಿ, ೨೦೧೦, ಪು. ೯೩–೯೪.

೨೪. ಸಮಗ್ರದಾಸ ಸಾಹಿತ್ಯ ಸಂಪುಟ ೬, ಭಾಗ ೧, ಕಾಖಂಡಕಿ ಶ್ರೀಮಹಿಪತಿರಾಯರ ಕೀರ್ತನೆಗಳು, (ಸಂ) ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪು. ೨೩೪.

೨೫. ಸಮಗ್ರದಾಸ ಸಾಹಿತ್ಯ ಸಂಪುಟ ೧೧, ಭಾಗ ೧, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು, (ಸಂ) ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪು. ೨೩೪.

೨೬. ಅದೇ, ಪು. ೨೮೦.

೨೭. ಸಮಗ್ರದಾಸ ಸಾಹಿತ್ಯ ಸಂಪುಟ ೬, ಭಾಗ ೨, ಕಾಖಂಡಕಿ ಶ್ರೀಮಹಿಪತಿರಾಯರ ಕೀರ್ತನೆಗಳು, (ಸಂ) ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪು. ೮೬-೮೭.

೨೮. ಅದೇ, ಪು. ೮೭.

೨೯. ಸಮಗ್ರದಾಸ ಸಾಹಿತ್ಯ ಸಂಪುಟ-೧೧, ಭಾಗ-೨, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು, (ಸಂ) ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪು. ೧೦.

೩೦. ಸಮಗ್ರದಾಸ ಸಾಹಿತ್ಯ ಸಂಪುಟ-೧೧, ಭಾಗ-೧, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು, (ಸಂ) ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪು. ೨೧-೨೨.

೩೧. ಅದೇ, ಪು. ೪೪.

೩೨. ಸಮಗ್ರದಾಸ ಸಾಹಿತ್ಯ ಸಂಪುಟ-೬, ಭಾಗ-೧, ಕಾಖಂಡಕಿ ಶ್ರೀಮಹಿಪತಿದಾಸರ ಕೀರ್ತನೆಗಳು, (ಸಂ) ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪು. ೭.

೩೩. ಅದೇ, ಪು. ೨೦೬.

೩೪. ಅದೇ, ಪು. ೨೦೭.

೩೫. ಅದೇ, ಸಂಪುಟ ೬, ಭಾಗ-೨, ಪು. ೧೭೯.

೩೬. ಸಮಗ್ರದಾಸ ಸಾಹಿತ್ಯ ಸಂಪುಟ-೧೧, ಭಾಗ ೨, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು, (ಸಂ) ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪು. ೧೭೨.

೩೭. ಅದೇ, ಪು. ೧೬೮-೧೬೯.

೩೮. ಸಮಗ್ರದಾಸ ಸಾಹಿತ್ಯ ಸಂಪುಟ–೬, ಭಾಗ–೧, ಕಾಖಂಡಕಿ ಶ್ರೀಮಹಿಪತಿರಾಯರ ಕೀರ್ತನೆಗಳು, (ಸಂ) ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪು. ೨೨೪.

೩೯. ಅದೇ, ಪು. ೨೨೫.

೪೦. ಅದೇ, ಪು. ೨೩೩.

೪೧. ಅದೇ, ಪು. ೨೩೪.

೪೨. ಅದೇ, ಪು. ೨೩೪–೨೩೫.

೪೩. ಸಮಗ್ರದಾಸ ಸಾಹಿತ್ಯ ಸಂಪುಟ ೧೧, ಭಾಗ ೨, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು (ಸಂ) ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪು. ೨೦೮.

೪೪. ಅದೇ, ಪು. ೧೯೩.

೪೫. ಅದೇ, ಪು. ೧೯೪.

೪೬. ಅದೇ, ಪು. ೧೯೪.

೪೭. ಸಮಗ್ರದಾಸ ಸಾಹಿತ್ಯ ಸಂಪುಟ ೬, ಭಾಗ ೧, ಕಾಖಂಡಕಿ ಶ್ರೀಮಹಿಪತಿರಾಯರ ಕೀರ್ತನೆಗಳು, (ಸಂ) ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪು. ೧೬೦.

೪೮. ಅದೇ, ಪು. ೧೬೧.

೪೯. ಅದೇ, ಪು. ೧೮೩–೧೮೪.

೫೦. ಅದೇ, ಪು. ೨೧೦.

೫೧. ಅದೇ, ಪು. ೨೨೭.

೫೨. ಅದೇ, ಪು. ೧೯೨.

೫೩. ಸಮಗ್ರದಾಸ ಸಾಹಿತ್ಯ ಸಂಪುಟ ೧೧, ಭಾಗ ೨, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು, (ಸಂ) ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪು. ೧೫೯.

೫೪. ಅದೇ, ಪು. ೧೨೬.

೫೫. ಅದೇ, ಪು. ೨೫೦.

೫೬. ಅದೇ, ಪು. ೮೧.

ಅಧ್ಯಾಯ ಎಂಟು

ಕೃಷ್ಣದಾಸರ ಕೀರ್ತನೆಗಳ ಭಾಷೆ

ಅಧ್ಯಾಯ ಎಂಟು

ಕೃಷ್ಣದಾಸರ ಕೀರ್ತನೆಗಳ ಭಾಷೆ

ಕನ್ನಡ ಸಾಹಿತ್ಯಕ್ಕೆ ಹರಿದಾಸರ ಕೊಡುಗೆ ಅನನ್ಯವಾಗಿದೆ. ಹರಿದಾಸರು ವಚನಕಾರರಂತೆ ಜನಪದರ ಸಾಮಾಜಕ ಚಿಂತನೆಯ ಧ್ವನಿಯನ್ನು ತಮ್ಮ ಸಾಹಿತ್ಯದ ಮುಖ್ಯ ಆಶಯವನ್ನಾಗಿಟ್ಟು ಕೊಂಡವರು. ಸಮಾಜ ಚಿಂತನೆ, ಭಗವಂತನ ಸಾಕ್ಷಾತ್ಕಾರಕ್ಕೆ ಹಂಬಲಿಸುವಿಕೆ ಮುಂತಾದವುಗಳು ಹರಿದಾಸರ ಅನುಭವ ವಿವಿಧ ಪ್ರಕಾರಗಳಲ್ಲಿ ಹರಿದುಬಂದಿವೆ. ಹರಿದಾಸರದು ಭಾವವೈವಿಧ್ಯತೆಯುಳ್ಳ ವಿಚಾರವಾಗಿದೆ. ವೈವಿಧ್ಯತೆ ಹಾಗೂ ಭಾಷಾ ಪ್ರಯೋಗಶೀಲತೆಯಿಂದ ಛಂದೋರೂಪವಾಗಿ ಪ್ರಕಟಗೊಂಡಿವೆ.

"ದಾಸರ ಅಭಿವ್ಯಕ್ತಿಯ ಮಾಧ್ಯಮದಲ್ಲಿ ಭಾಷೆಯೂ ಒಂದಾಗಿದೆ. ಅವರು ಹಾಡು, ಕುಣಿತ, ಸಂಗೀತದೊಂದಿಗೆ ಪ್ರಾದೇಶಿಕ ಭಾಷೆಯನ್ನು ಹಾಡುವಿಕೆಯಲ್ಲಿ ಸಮ್ಮಿಳನ ಮಾಡಲು ಹಾತೊರೆಯುತ್ತಾರೆ. ಇದು ಕೇಳುಗರ ಕುತೂಹಲ, ಆಸಕ್ತಿ ಕೆರಳಿಸಿ ಸಹೃದಯರನ್ನು ಆಕರ್ಷಿಸುತ್ತದೆ. ಈ ಪ್ರಕ್ರಿಯೆಯು ಭಾಷೆಯ ಸೃಜನಶೀಲತೆಯ ನೆಲೆಯಲ್ಲಿಯೇ ನಡೆಯುತ್ತದೆ. ಅಂತಹ ಸಂದರ್ಭದಲ್ಲಿ ಅವರು ಬಳಸುವ ಭಾಷಾಪ್ರಯೋಗ ಮತ್ತು ಸಂಗೀತವು ಶಿಥಿಲತೆಯ ಹಾದಿ ತುಳಿಯುತ್ತಿದೆ. ಆಗ ಹೊಸ ಪದಗಳ ಸೃಷ್ಟಿಯಾಗುವುದು ಹಾಗೂ ಹಳೆಯ ಪದಗಳಿಗೆ ಸ್ಥಾಪಿತ ಅರ್ಥಗಳು ಬಿದ್ದು ಹೋಗಿ ಹೊಸ ಅರ್ಥ ಬರುವ ಪ್ರಕ್ರಿಯೆ ನಡೆಯುತ್ತದೆ. ಹೊಸ ವಾಕ್ಯ ರಚನೆಗಳು ಸಿದ್ಧವಾಗುವ ಈ ಪ್ರಕ್ರಿಯೆಯೂ ನಡೆಯುತ್ತದೆ."[೧] ದಾಸರ ಕೀರ್ತನೆಗಳಲ್ಲಿ ಪುಟ್ಟ ಪುಟ್ಟ ವಾಕ್ಯಗಳು, ಪ್ರಾದೇಶಿಕ ನುಡಿಗಳು ಸರಳವಾಗಿ ಮೂಡಿಬಂದಿವೆ. ಭಾಷೆಯ ದೃಷ್ಟಿಯಿಂದ ಇಲ್ಲಿಯ ಕೀರ್ತನೆಯನ್ನು ಬಳಸಿಕೊಂಡ ರೀತಿಯನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ದಾಸರು ತಮ್ಮ ಸಾಮಾಜಿಕ, ಧಾರ್ಮಿಕ ನಿಲುವನ್ನು ಶ್ರೀಸಾಮಾನ್ಯನ ಜೊತೆಗೆ ಸಂವಹನಗೊಳಿಸಲು ಈ ಭಾಷೆಯು ಪ್ರಮುಖವಾಗಿದೆ.

ಕೃಷ್ಣದಾಸರು ತಮ್ಮ ಕಾಲಘಟ್ಟದ ವ್ಯಾವಹಾರಿಕ ಭಾಷೆಯನ್ನು ಪ್ರಮುಖವಾಗಿ ಬಳಸಿಕೊಂಡು

ಸಾಹಿತ್ಯ ರಚಿಸಿದ್ದಾರೆ. ಭಾಷೆಯಲ್ಲಿ ಸಂದರ್ಭಾನುಸಾರವಾಗಿ ಮುರಿದು ಕಟ್ಟುವ ಪ್ರಕ್ರಿಯೆ ಇಂತಹ ರಚನೆಗಳಲ್ಲಿದೆ. ಪ್ರಾಸ, ಛಂದಸ್ಸು, ಅಲಂಕಾರ ಮುಂತಾದವುಗಳು ಈ ಸಾಹಿತ್ಯದ ಅಭಿವ್ಯಕ್ತಿಯ ಶಕ್ತಿಯನ್ನು ಹೆಚ್ಚಿಸುತ್ತದೆ. ದಾಸರ ಆರಾಧನೆಯು ವೈವಿಧ್ಯತೆಯ ಕಾಲಾಂಶಕ್ಕೆ ಒಂದು ಬಗೆಯ ಅಡಕತನವಾಗಿರುತ್ತವೆ. ಅಂದರೆ ಪ್ರತಿಯೊಬ್ಬ ದಾಸರಲ್ಲಿ ತಮ್ಮದೆಯಾದ ಶೈಲಿಯ ಮುಖ್ಯ ತುಡಿತವಿರುತ್ತದೆ. ಅವರು ಬಳಸುವ ಕೀರ್ತನೆಯ ವಿಧಾನವನ್ನು, ಸಂದರ್ಭವನ್ನು, ಅನುಭವವನ್ನು ಒಂದೆಡೆಯಲ್ಲಿ ಸೇರಿಸುವ ಪ್ರಯತ್ನ ಶೈಲಿಯಲ್ಲಿ ಕಾಣುತ್ತೇವೆ.

ಪ್ರತಿಭೆ ಮತ್ತು ವಸ್ತುವಿನ ಪ್ರತಿರೂಪ ಇವುಗಳಲ್ಲಿ ಭಾಷೆ ತನ್ನದೆಯಾದ ಅರ್ಥವನ್ನು ಇಟ್ಟುಕೊಂಡಿರುತ್ತದೆ. ಪದ, ವಾಕ್ಯ, ವಿನ್ಯಾಸ, ಸ್ವರಭಾವಗಳ ಸಂಯೋಜನೆ ಮುಂತಾದವುಗಳು ಪ್ರತಿಯೊಬ್ಬ ಹರಿದಾಸರಲ್ಲಿ ತಮ್ಮದೆಯಾದ ಮಾದರಿಯಲ್ಲಿ ಕಂಡುಬರುತ್ತವೆ. ಕೃಷ್ಣದಾಸರ ಕೀರ್ತನೆಗಳು ಇವುಗಳಿಂದ ಹೊರತಲ್ಲ. ಕೃಷ್ಣದಾಸರು "ಓದುಬರಹ ಬಲ್ಲವರಾದರೂ ಶಿಷ್ಟಕವಿಗಳಂತೆ ಇವರು ಸಾಕಷ್ಟು ಸಮಯವನ್ನು ತೆಗೆದುಕೊಂಡು ಕಾವ್ಯರಚಿಸಿದವರಲ್ಲ. ಇವರ ಕೀರ್ತನೆಗಳು ಆಶುರಚನೆಗಳು. ಇವು ವಾಕ್‌ಪರಂಪರೆಯ ಕಾವ್ಯಲಕ್ಷಣಗಳನ್ನು ಹೊಂದಿವೆ. ತಮ್ಮ ಕೀರ್ತನೆಗಳಿಗೆ ಅದಾಗಲೇ ಪ್ರಸಿದ್ಧಿಯಲ್ಲಿದ್ದ ಪುರಾಣ ಕಾವ್ಯಗಳನ್ನೇ ವಸ್ತುವಾಗಿಸಿಕೊಳ್ಳುವುದರ ಜೊತೆಗೆ ತಮ್ಮ ಅನುಭವಕ್ಕೆ ತತ್‌ಕ್ಷಣದಲ್ಲಿ ಬಂದ ವಸ್ತುವನ್ನು ಕೂಡ ದಾಸರು ಕಾವ್ಯದಲ್ಲಿ ಬಳಸಿದ್ದಾರೆ. ಒಂದೇ ರೀತಿಯ ಅರ್ಥವನ್ನು ಕೊಡುವ ಅನೇಕ ಸಾಲುಗಳನ್ನು ಅವರ ಹಲವಾರು ರಚನೆಗಳಲ್ಲಿ ಕಾಣುತ್ತೇವೆ. ಇದಲ್ಲದೆ ಒಂದೇ ವಸ್ತು ಕೂಡ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಪದಗುಚ್ಛಗಳಿಂದ ಕಟ್ಟಲ್ಪಟ್ಟಿದೆ."[೨]

ಕೃಷ್ಣದಾಸರು ಮೂಲಪುರಾಣಗಳನ್ನು ತಮ್ಮದೆಯಾದ ಮಾದರಿಯಲ್ಲಿ ರಚಿಸಿದ್ದಾರೆ. ಮೂಲಕಾವ್ಯದ ಆಶಯಕ್ಕೆ ಭಂಗ ಬಾರದ ಹಾಗೆ ಸಂದರ್ಭೋಚಿತವಾಗಿ ತಮಗೆ ಬೇಕಾದ ಭಾಗವನ್ನು ಬಳಸಿಕೊಂಡಿದ್ದಾರೆ. ಕಥೆಯನ್ನು ಎಲ್ಲರಿಗೂ ತಿಳಿಸುವ ನಿಟ್ಟಿನಲ್ಲಿ ಇಲ್ಲಿಯ ರಚನೆಗಳು ಅಭಿವ್ಯಕ್ತಗೊಂಡಿದೆ. ಸಿದ್ಧಪುರಾಣ ಕಾವ್ಯಗಳ ಸಾಲುಗಳನ್ನು ನೇರವಾಗಿ ಬಳಸದೆ ತಮ್ಮ ರಚನೆಗೆ ತಕ್ಕಂತೆ ನಿರೂಪಿಸಿದ್ದಾರೆ. ಅವುಗಳ ಜೊತೆಗೆ ಪಾತ್ರವನ್ನು ಉಲ್ಲೇಖಿಸುವುದು ಕಂಡುಬರುತ್ತದೆ. ಕೃಷ್ಣದಾಸರ ರಚನೆಯಲ್ಲಿ ಪ್ರಮುಖವಾಗಿ ಕಥೆ-ಕಥನ ವ್ಯಾಖ್ಯಾನ ಈ ಮೂರು ಅಂಶಗಳು ಕಂಡುಬರುತ್ತವೆ. ಕೀರ್ತನಕಾರರಲ್ಲೂ ಹಾಡುಗಾರನಿದ್ದಾನೆ. ಪ್ರದರ್ಶಕನಾಗಿ, ಕವಿಯಾಗಿ ತನ್ನ ಕೀರ್ತನೆಯ ಸೃಷ್ಟಿಯನ್ನು ಮಾಡಿಕೊಂಡಿದ್ದು ಕಂಡುಬರುತ್ತದೆ. ಕೃಷ್ಣದಾಸರು ಅನೇಕ ಕೀರ್ತನೆಯಲ್ಲಿ ಸಂವಾದದ ಧಾಟಿಯನ್ನುಳ್ಳವುಗಳಾಗಿವೆ. ಕಾಯುವಿಕೆ, ಭಗವಂತನಿಗೆ ಸಮರ್ಪಿಸುವಿಕೆ, ಶ್ರೀಸಾಮಾನ್ಯ ಭಕ್ತ ಮುಂತಾದ ರೀತಿಯಲ್ಲಿ ಪದಗಳ ಪ್ರಯೋಗ ಇಲ್ಲಿಯ ಕೀರ್ತನೆಗಳ ಚಹರೆಯನ್ನು ಪ್ರಚುರಪಡಿಸಿವೆ. ಈ ಅಧ್ಯಾಯದಲ್ಲಿ ಅವರ ಭಾಷೆಯ ಬಳಕೆಯನ್ನು ಕುರಿತು ಚರ್ಚೆಯನ್ನು ಬೆಳೆಸಲಾಗಿದೆ.

ಪ್ರಮಾಣ ಕನ್ನಡ ನಾಮಪದ ಅಂತ್ಯದ ಅ> ಆ ಆಗಿ ಪರಿವರ್ತನೆಯಾಗಿದೆ.

ಅಭಿಮಾನ > ಅಭಿಮಾನಾ

ಉಲ್ಲಾಸ > ಉಲ್ಲಾಸಾ

ಕಣ್ಣಿಲ್ಲದ > ಕಣ್ಣಿಲ್ಲದಾ

ಫಲವ > ಫಲವಾ

ಬತ್ತಿದ > ಬತ್ತಿದಾ

ಭಕುತರ > ಭುಕುತರಾ

ಮದ > ಮದಾ

ಸಂಹಾರ > ಸಂಹಾರಾ

ಜ್ಞಾನ > ಜ್ಞಾನಾ

ಪ್ರಮಾಣ ಕನ್ನಡ ನಾಮಪದ ಅಂತ್ಯದ ಎ>ಇ ಆಗಿ ಪರಿವರ್ತನೆಯಾಗಿದೆ.

ಆನೆ > ಆನಿ

ದೊರೆ > ದೊರಿ

ನಡತೆ > ನಡತಿ

ಮನೆ > ಮನಿ

ಹೊಣೆ > ಹೊಣಿ

ಪ್ರಮಾಣ ಕನ್ನಡ ನಾಮಪದ ಆರಂಭ ಎ>ಆ್ಯ ಆಗಿ ಪರಿವರ್ತನೆಯಾಗಿದೆ.

ಬೇಡ > ಬ್ಯಾಡ

ಬೇರೆ > ಬ್ಯಾರೆ

ಬೇಸರ > ಬ್ಯಾಸರ

ವೇಳೆ > ವ್ಯಾಳೆ

ಮೇಲೆ > ಮ್ಯಾಲೆ

ಅಲ್ಪಪ್ರಾಣ ಬದಲಾಗಿ ಮಹಾಪ್ರಾಣ ಬಳಕೆ

ಕುಳ್ಳ > ಖುಳ್ಳ

ಚಂದ > ಛಂದ

ಅನುಸ್ವರ ಲೋಪವಾಗಿರುವ ಪದಗಳ ಬಳಕೆ

ಒಡಲಂ	>	ಒಡಲ
ಕಡಲಂ	>	ಕಡಲ
ಕದನಂ	>	ಕದನ
ಕಮಲಂ	>	ಕಮಲ
ಕಿರಣಂ	>	ಕಿರಣ
ತರಳಂ	>	ತರಳ
ದುರುಳಂ	>	ದುರುಳ
ಪರಿಯಂ	>	ಪರಿಯ
ಪಿತನಂ	>	ಪಿತನ
ಬರಿಯಂ	>	ಬರಿಯ
ಮರಳಂ	>	ಮರಳ
ಶರಣಂ	>	ಶರಣ
ಸದನಂ	>	ಸದನ
ಸಿರಿಯಂ	>	ಸಿರಿಯ
ಸುಜನಂ	>	ಸುಜನ
ಸ್ಮರಣಂ	>	ಸ್ಮರಣ

ಪ್ರಾದೇಶಿಕ ಭಾಷೆಯ ಪದಗಳು

ಕೃಷ್ಣದಾಸರ ಕೀರ್ತನೆಗಳಲ್ಲಿ ವಿಜಯಪುರದ ಪ್ರದೇಶದ ಪ್ರಾದೇಶಿಕ ಭಾಷೆಯ ಪದಗಳು ಹೇರಳವಾಗಿ ದೊರೆಯುತ್ತವೆ. ಅವುಗಳ ವೈವಿಧ್ಯತೆಯನ್ನು ಈ ರೀತಿಯಲ್ಲಿ ನೋಡಲಾಗಿದೆ.

ಅಡ್ಡದಾರಿ	–	ಅಡದಾರಿ
ಇಕ್ಕಾನು	–	ನೀಡದವ
ಉಣ್ಣಾನು	–	ಊಟಮಾಡದವನು
ಕಕ್ಕುಲಾತಿ	–	ಪ್ರೀತಿ
ಕಪಾಟ	–	ಗೋಡೆಗೆ ಕಟ್ಟಿಗೆಯಿಂದ ಮಾಡಿದ ಪೆಟ್ಟಿಗೆ
ಖೂನ	–	ಗುರುತು
ಗುಂಜಿ	–	ಗುಲಗಂಜಿಯಗಿಡ
ನಿರಯಾ	–	ಸೀರೆಯ ನೆರಿಗೆ

ನಿರುತ – ನಿತ್ಯ

ಪಿತಾಂಬರ – ವಸ್ತ್ರ

ಪುಕ್ಕಟೆ – ಉಚಿತವಾಗಿ

ಪುಗಡಿ – ಆಭರಣ

ಪುಗಸಾಟೆ – ಉಚಿತವಾದ

ಪ್ಯಾಟಿ – ಪೇಟೆ

ಬ್ಯಾಸರ – ಬೇಸರ

ಮುಯ್ಯ – ಉಡುಗೊರೆ

ಯಸಳು – ಎಸಳು

ವಡ್ಯಾಣ – ನಡಪಟ್ಟಿ

ವಾಲಗ – ಓಲಗ

ವ್ಯಾಳೆ – ವೇಳೆ

ತತ್ಸಮ–ತದ್ಭವ

ತತ್ಸಮ ಪದಗಳಿಗೆ ತದ್ಭವ ಪದಗಳ ಪ್ರಯೋಗಗಳನ್ನು ಕೃಷ್ಣದಾಸರು ತಮ್ಮ ಕೀರ್ತನೆಯಲ್ಲಿ ಹೆಚ್ಚಾಗಿ ಪ್ರಯೋಗಿಸಿದ್ದು ಕಂಡುಬರುತ್ತದೆ.

ಋಣ > ರಿಣ

ಗೋ > ಗೋವು

ತಪಸ > ತಪಸ್ಸು

ಚರಿತ್ರೆ > ಚರಿತೆ

ಪ್ರಾಣ > ಹರಣ

ಭಕ್ತರ > ಭಕುತರ

ಭಕ್ತಿ > ಭಕುತಿ

ಮುಕ್ತಿ > ಮುಕುತಿ

ಯಾತ್ರೆ > ಜಾತ್ರೆ

ಯುಕ್ತಿ > ಯುಕುತಿ

ಯೋಗಿ > ಜೋಗಿ

ವೇಗ > ಬೇಗ

ಶಶಿ > ಸಸಿ

ಶೃಂಗಾರ > ಸಿಂಗಾರ

ಶ್ರೀ > ಸಿರಿ

ಸರಸ್ವತಿ > ಸರಸತಿ

ಅನುಕರಣವಾಚಕಗಳು

ಅನುಕರಣವಾಚಕಗಳು ಸಾಮಾನ್ಯವಾಗಿ ಅರ್ಥಕ್ಕೆ ಒತ್ತನ್ನು ನೀಡುವುದಿಲ್ಲ. ಧ್ವನಿ ವಿಶೇಷಣಗಳನ್ನು ಕೇಳಿ ಪುನಃ ಅನುಕರಣಮಾಡಿ ಹೇಳುವ ಪದಗಳಾಗಿವೆ. ಇವು ಒಂದು ನಿರ್ಧಿಷ್ಟವಾದ ಸನ್ನಿವೇಶದಲ್ಲಿ ಪ್ರತಿಕ್ರಿಯೆಸುವುಗಳಾಗಿವೆ. ಅವುಗಳನ್ನು ಕೃಷ್ಣದಾಸರ ಕೀರ್ತನೆಗಳಲ್ಲಿ ಈ ರೀತಿಯಲ್ಲಿ ಗುರುತಿಸಲಾಗಿದೆ.

ಗರಗರ

ಗುಡುಗುಡು

ಘಲಘಲ

ಚಟಚಟ

ಝುಣಝುಣ

ತಟತಟ

ಥರಥರ

ಥಳಥಳ

ದುಡುದುಡು

ದುಮುದುಮು

ಧಡಧಡ

ಪಟಪಟ

ಪುಟುಪುಟು

ಫಳಫಳ

ಬುಡಬುಡ

ಭಳಭಳ

ಮಟಮಟ

ಲುಟುಲುಟು

ದ್ವಿರುಕ್ತಿಗಳು

ಸಾಮಾನ್ಯವಾಗಿ ದ್ವಿರುಕ್ತಿಯು ವಿಶೇಷಾರ್ಥವನ್ನು ವ್ಯಕ್ತಪಡಿಸುವುದಕ್ಕಾಗಿ ಒಂದು ಪದವು ಬಿಡುವಿಲ್ಲದೆ ಎರಡು ಸಲ ಪ್ರಯೋಗಿಸುವುದಾಗಿದೆ. ಇವು ಕಾರ್ಯದ ಭಾವ ತೀವ್ರತೆಯನ್ನು ಹೆಚ್ಚಿಸಲು ತುಂಬ ಸಹಾಯಕವಾಗುತ್ತವೆ. ಈ ರೀತಿಯ ಪದ ಪ್ರಯೋಗಗಳನ್ನು ಕೃಷ್ಣದಾಸರ ಕೀರ್ತನೆಗಳ ರಚನೆಯಲ್ಲಿ ಹೇರಳವಾಗಿ ಬಳಕೆಯಾಗಿವೆ.

ಇಂಬುಇಂಬು
ಉಧೋಉಧೋ
ಕೇಳುಕೇಳು
ಗುರುಗುರು
ಜಡಿಜಡಿ
ಜಯಜಯ
ತಾಳಿತಾಳಿ
ದಾರಿದಾರಿ
ಧನ್ಯಧನ್ಯ
ನಡಿನಡಿ
ನಂಬಿನಂಬಿ
ನೀಗುನೀಗು
ನೀಡಿನೀಡಿ
ನುಡಿನುಡಿ
ನೋಡುನೋಡು
ಪರಿಪರಿ
ಪಾಡಿಪಾಡಿ
ಬಾಗುಬಾಗು
ಬಾಳುಬಾಳು
ಬಿಡುಬಿಡು
ಬೇಡಿಬೇಡಿ
ರಾಜ್ಯರಾಜ್ಯ
ಶರಣುಶರಣು
ಸುಡುಸುಡು
ಹರಿಹರಿ

ಬೈಗುಳಗಳು

ಕೃಷ್ಣದಾಸರು ಸಮಾಜ ವಿಮರ್ಶೆಮಾಡುವಾಗ ತಮ್ಮ ಕೀರ್ತನೆಗಳಲ್ಲಿ ಹೆಚ್ಚಾಗಿ ಬೈಗುಳಗಳನ್ನು ಬಳಸುತ್ತಾರೆ. ಬೈಗುಳಗಳಿಗೆ ಭಾಷಾ ಸಮುದಾಯದ ಸುಧಾರಣೆಯ ಗುಣವಿದೆ. ಅದಕ್ಕಾಗಿ ಇಂತಹ ಪದಗಳನ್ನು ಬಳಸುತ್ತಾರೆ.

'**ಕಪಟ** ವೇಷವ ತೊಟ್ಟವ'

'ಕಾಲೂರಿ ನಿಲ್ಲದು **ಮತಿಗೇಡಿ**'

'**ಕುಲಘಾತಕನು** ಇವನು'

'**ಕುಹಕು** ಬುದ್ಧಿಯಿಂದಲೇ ಬಾಳದು'

'**ಖುಳ್ಳ** ಮತ್ಸರನಾ ಕರಿಯಾರೆ'

'**ಕೊಳ್ಳಿಕಾರನಾ** ಮತಿಯಂತೆ ಭಾವಯ್ಯ'

'**ಕೋಡಗನಾ** ಗುಣದಂತೆ ಭಾವಯ್ಯ'

'ಖಳ್ಳೆದೆಯೊಳು ಮನದಲ್ಲಿ **ಕಪಟವು**'

'**ಜೇನಿನಗುಣದವನು**'

'ಛೀ ಯಾತರ ಜನ್ಮ **ನಾಯಿಗಿಂತ್ತಾಧಮ**'

'**ಜೊಂಡು** ಗಡ್ಡವ ಬಿಟ್ಟವ'

'**ತುಚ್ಚರ** ದೂರ ಝಾಡಿಸಿ ಬರುತ್ತೇವು'

'**ದುರ್ಜನ** ಸಂಗವಳಿದು'

'**ದುರ್ಗುಣವನ್ನು** ತುಂಬಿಕೊಂಡಿರುವ'

'**ದುರುಳ** ವಾಜಿಯನೇರಿಪನೋ ನೀನು'

'ಧರೆಯೊಳು ಹೆಮ್ಮಿಗೆ ಬಿದ್ದನು **ಹುಚ್ಚಾ**'

'**ನೀಚ** ಬುದ್ಧಿಯ ಬಿಡು'

'**ಭಂಡ** ಮಾತನ್ನು ಆಡುವವ'

'**ಮರುಳಾ** ನಿಜಸ್ಥಿತಿಯನ್ನು ಅರಿತಿಕೋ'

'**ಮೂರ್ಖರ** ವಡಂಬಡಿಸಲಾಗವದೆಂದೆಂದು'

'**ವ್ಯಭಿಚಾರಿಗಳಾದರೂ** ಜಗದೊಳು'

'**ಹುಚ್ಚರಂಗ** ನೀ ತಿರುಗತಿ ಯಾಕೆ'

'**ಹುಲ್ಲಮನುಜ** ನೀನು'

'ಹೇಸನು ಎಂದು **ಮತಿಗೇಡಿ**'

ಜೋಡುನುಡಿಗಳು

ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸುವಾಗ ಕೀರ್ತನೆಗಳಲ್ಲಿ ಒಂದು ಪದದ ಜೊತೆಗೆ ಅದೇ ಅರ್ಥಛಾಯೆಯುಳ್ಳ ಅಥವಾ ಅದಕ್ಕೆ ಪೂರಕ ಅರ್ಥದ ಮತ್ತೊಂದು ಪದವನ್ನು ಜೊತೆಗೂಡಿಸಿ ಬಳಸುವುದರಿಂದ, ಕೀರ್ತನೆಗಳು ಸಹೃದಯರಿಗೆ ಆಪ್ತವಾಗಿ ಬಿಡುತ್ತವೆ. ಕೃಷ್ಣದಾಸರ ಕೀರ್ತನೆಗಳಲ್ಲಿ ಅವುಗಳು ಈ ಬಗೆಯಲ್ಲಿ ಕಂಡುಬರುತ್ತವೆ.

ಆಶಾಪಾಶಾ

ಕೂಡಿಪಾಡಿ

ಖಟಪಟ

ಥಟಪಟ

ಗಾದೆಮಾತುಗಳು

ಗಾದೆಮಾತುಗಳು ಆಡುನುಡಿಯ ಜೀವಂತ ಪ್ರತೀಕರಗಳಾಗಿವೆ. ಗಾದೆ ವೇದಕ್ಕೆ ಸಮಾನ. ವೇದಸುಳ್ಳಾದರು ಗಾದೆಗಳು. ಸುಳ್ಳಾಗಲಾರದು ಎಂಬುದು ಜನರ ನಂಬಿಕೆಯಾಗಿದೆ. ಗಾದೆ ಚಿಕ್ಕವುಗಳಾಗಿದ್ದು, ಹಿರಿದಾದ ಅರ್ಥವನ್ನು ತುಂಬಿಕೊಂಡಿರುತ್ತದೆ. ಗಾದೆಗಳಿಗೆ ಸಾರ್ವತ್ರಿಕ ಮುದ್ರೆ ಬಿದ್ದಿರುತ್ತದೆ. ಇಂತಹ ಗಾದೆಮಾತುಗಳನ್ನು ಕೃಷ್ಣದಾಸರು ತಮ್ಮ ಕೀರ್ತನೆಗಳಲ್ಲಿ ಬಳಸಿದ್ದಾರೆ. ಇವುಗಳ ಕೀರ್ತನೆಗಳ ಅರ್ಥವಂತಿಕೆಯನ್ನು ಹೆಚ್ಚಿಸುತ್ತವೆ.

'ಕಂಭಸೂತ್ರದೊಳಿಹ ಬೊಂಬೆಯು ಕುಣಿದಂತೆ'

'ಕಡ್ಡಿವಿಡಿದು ಗುಡ್ಡಮಾಡಿ'

'ಕಣ್ಣಿಲ್ಲದಾ ಆನೆಯು ಚನ್ನಾಗಿ ತಿರುಗುತ

'ಮುನ್ನ ಬತ್ತಿದಾ ಬಾವಿಯ ಬೀಳ್ವಂತೆ'

'ಕಳ್ಳನ ಹೆಜ್ಜೆಯನು ಜಗದೊಳು ಕಳ್ಳನೇ ತಾ ಬಲ್ಲ'

'ಕೋಣನ ಮುಂದೆ ತಾವೀಗೆ ಬಾರಿಸಿದಂತೆ'

'ಕೊಳ್ಳೆ ಹೋದ ಬಳಿಕ ಕೂಗುವ ಪರಿಯಲಿ'

'ಗುರಿಯಿಲ್ಲದ ಅಂಬು ತಾನು ಎರಗದೆ ಗುರಿಯಾ ಸ್ಥಳವನು'

'ತಾನಾರೆ ಉಣ್ಣಾನು ಜನರಿಗೆ ಇಕ್ಕಾನು'

'ಪರಿಮಳಕ್ಕಾಗಿ ಬ್ರಮರ ಸೆರೆಬಿದ್ದಂತೆ'

'ಬೂದಿಯೊಳಗ ಹೋಮಮಾಡಿದಂತೆ'

'ರಸವನ್ನುಂಡು ಕಬ್ಬ ಹಿಪ್ಪಿಯುಗುಳವಂತೆ'

'ಹಳ್ಳಕೊಳ್ಳ ಬಂದು ಕೂಡಿ ಗಂಗೆಯಾಗುವಂತೆ ಎಲ್ಲ ವೃಕ್ಷವು ಸಂಗದಿಂ ಚಂದನಾಗುದು'

'ಹುಟ್ಟಿಸಿದಾ ದೇವನು ಹುಲ್ಲು ಮೇಯಿಸುವನೇನು'

ಹೀಗೆ, ಕೃಷ್ಣದಾಸರು ವಿಜಯಪುರದ ಪ್ರಾದೇಶಿಕ ಭಾಷೆಯನ್ನು ಪರಿಣಾಮಕಾರಿಯಾಗಿ ಕೀರ್ತನೆಗಳಲ್ಲಿ ಬಳಸಿಕೊಂಡಿದ್ದಾರೆ. ಇವರ ಭಾಷಾ ಚಮತ್ಕಾರ ರಚನೆಯನ್ನು ಈ ಮುಂದಿನಂತೆ ಮುಂದುವರೆಸಲಾಗಿದೆ.

೧ ಕೀರ್ತನಕಾರ ಮತ್ತು ಭಗವಂತ

ಕೃಷ್ಣದಾಸರು ಭಕ್ತ ಮತ್ತು ಭಗವಂತನ ನಡುವಿನ ಅವಿನಾಭವ ಸಂಬಂಧವನ್ನು ಹಲವು ರಚನೆಗಳಲ್ಲಿ ಹೇಳಿದ್ದಾರೆ. ಭಕ್ತನು ತನ್ನಿಷ್ಟ ದೈವವನ್ನು ನೆನೆಯುವ, ಆತನಿಗಾಗಿ ಕಾಯುವ, ಮೊರೆ ಹೋಗುವ, ಪ್ರಶ್ನಿಸುವ, ವಿಡಂಬನೆ ಮಾಡುವ, ವಿಮರ್ಶಿಸುವ ಮುಂತಾದ ಪ್ರಕ್ರಿಯೆಗಳಲ್ಲಿ ಅಭಿವ್ಯಕ್ತಿಗೊಂಡಿವೆ. ಇಂತಹ ವಿಶಿಷ್ಟ ಕೀರ್ತನೆಗಳ ರಚನೆಯಿಂದ ಭಕ್ತ ಭಗವಂತನ ನಡುವಿನ ಅವಿನಾಭವ ಸಂಬಂಧವನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ಇಲ್ಲಿಯ ರಚನೆಗಳ ಭಾಷೆ ವಿಶಿಷ್ಟವಾಗಿದ್ದು, ಶಬ್ದ ಚಮತ್ಕಾರದಿಂದ ಒಳಗೊಂಡಿವೆ. ಕೃಷ್ಣದಾಸರ ದೇವತಾಸ್ತುತಿಗಳ ವೈಶಿಷ್ಟ್ಯ ಅರ್ಥಪೂಣವಾಗಿವೆ. ಪ್ರಾಸ, ಅನುಪ್ರಾಸ ಇವುಗಳ ಜೊತೆಗೆ ಪೌರಾಣಿಕ ಕಥೆಗಳ ಘಟನೆಗಳ ಉಲ್ಲೇಖ ಶ್ರೇಷ್ಠ ಪುರಾಣಗಳ ಚಿಕ್ಕ ಪಾತ್ರವು ಕೃಷ್ಣದಾಸರ ರಚನೆಯಲ್ಲಿ ಕಂಗೊಳಿಸುತ್ತವೆ. ಇಂತಹ ಒಂದು ರಚನೆಯು ಈ ರೀತಿಯಲ್ಲಿದೆ.

"ನಕ್ಷತ್ರ ರಮಣ ನಯ್ಯನಿನೊಲಿದು ಶರವನ್ನಿತ್ತೆ ।
ನಕ್ಷತ್ರ ದೊಲ್ಲಭನ ತಮ್ಮನ ಸುತನ ಸುಟ್ಟೆ ।
ನಕ್ಷತ್ರ ಇಲ್ಲದವನ ವೈರಿಗಮನನ ತಾತ ।
ನಕ್ಷತ್ರ ಕಾಂತಧರನೇ ॥
ನಕ್ಷತ್ರ ಜಾತ-ನಗ್ರಜನ ಮಸ್ತಕವ ತರಿದೇ ।
ನಕ್ಷತ್ರ ಸಹಸ್ರ ಉಳ್ಳವನ ದ್ವಾರವನು ಕಾಯ್ದೆ ।
ನಕ್ಷತ್ರ ನೀನೇ ಇಂದ್ರಾದಿ ದೇವತೆಗಳಿಗೆ ಗುರುಮಹಿಪತಿ ಸ್ವಾಮಿ
ನಕ್ಷತ್ರ ಭೂಷಸಲಹೋ"[೨]

ಈ ಆರು ಸಾಲಿನ ಪದ್ಯವು ಶಿವನ ವಿವಿಧ ಲೀಲೆಗಳನ್ನು ಹೇಳುತ್ತದೆ. ಇಲ್ಲಿ ಕೃಷ್ಣದಾಸರು ಭಾಷಾಚಮತ್ಕಾರವನ್ನು ಮಾಡಿದ್ದಾರೆ. ಪ್ರತಿಯೊಂದು ಸಾಲು ಒಂದೊಂದು ಪುರಾಣದ ಘಟನೆಯನ್ನು ಹೇಳುತ್ತದೆ. ಸಾಮಾನ್ಯವಾಗಿ ಇಲ್ಲಿಯ ನಕ್ಷತ್ರವೆಂಬ ಶಬ್ದವು ೨೭ ನಕ್ಷತ್ರಗಳಲ್ಲಿ ಒಂದಾಗಿವೆ. ಸಾಂಕೇತಿಕವಾಗಿ ಆ ನಕ್ಷತ್ರಗಳ ಹೆಸರನ್ನೇ ಉಲ್ಲೇಖಿಸಿ ಮಹಾಭಾರತ ಭಾಗವತಾದಿಗಳಲ್ಲಿ ನಡೆದ ಘಟನೆಗಳ ಕಥೆಗಳನ್ನು ನೆನಪಿಸುತ್ತದೆ. ಈ ಆರು ಸಾಲಿನ ಪದ್ಯದಲ್ಲಿ ಅರ್ಥಪೂರ್ಣವಾದ ತಮ್ಮ ಕಾವ್ಯದ ಸೊಬಗನ್ನು ಹೆಚ್ಚಿಸಿದ್ದಾರೆ.

ಮೊದಲನೆಯ ಸಾಲು ನಕ್ಷತ್ರ ರಮಣಯ್ಯನಿಗೆ ಒಲಿದು ಶರವನ್ನಿತ್ತೆ ಎಂದಾಗ ಉತ್ತರೆ ನಕ್ಷತ್ರವಾಗುತ್ತದೆ. ಉತ್ತರೆ ಗಂಡ ಅಭಿಮನ್ಯು. ಅಭಿಮನ್ಯುವಿನ ತಂದೆ ಅರ್ಜುನ. ಅರ್ಜುನನಿಗೆ ಒಲಿದು ಪಾಶುಪತಾಸ್ತ್ರವನ್ನು ನೀಡಿದವ ಶಿವ. ಹಾಗಾಗಿ ಶಿವನನ್ನು ಸ್ತುತಿಸುವ ಈ ಸಾಲು ಮಹಾಭಾರತದಲ್ಲಿ ಬರುವ ಉಪಕಥೆಗಳನ್ನು ನೆನಪಿಸುತ್ತದೆ.

ಎರಡನೆಯ ಸಾಲು ನಕ್ಷತ್ರದ ವಲ್ಲಭನ ಸುತನ ಸುಟ್ಟೆ ಎನ್ನುವಾಗ ರೇವತಿ ನಕ್ಷತ್ರವಾಗುತ್ತದೆ. ರೇವತಿಯ ಗಂಡ ಬಲರಾಮ. ಬಲರಾಮನ ತಮ್ಮ ಕೃಷ್ಣ. ಕೃಷ್ಣನ ಮಗ ಮನ್ಮಥ. ಈ ಮನ್ಮಥನನ್ನು ಸುಟ್ಟವ ಶಿವ. ಹಾಗಾಗಿ ಶಿವನ ಸ್ತುತಿಸುವ ಈ ಸಾಲು ಅರ್ಥಪೂರ್ಣವಾಗಿ ಮೂಡಿಬಂದಿದೆ. ಮೂರನೆಯ ಸಾಲು ನಕ್ಷತ್ರ ಇಲ್ಲದವನ ವೈರಿಗ ಮನನ ತಾತ ನಕ್ಷತ್ರ ಕಾಂತಧರನೆ ಎಂದಿದ್ದಾರೆ. ಇಲ್ಲಿ ನಕ್ಷತ್ರ ಶ್ರವಣ(ಕಿವಿ) ಇಲ್ಲದವನು (ಕಿವಿಯಿಲ್ಲದ ಪ್ರಾಣಿ) ಹಾವು. ಹಾವಿನ ವೈರಿ ನವಿಲು. ನವಿಲನ್ನು ವಾಹನ ಮಾಡಿಕೊಂಡವ ಷಣ್ಮುಖ. ಈತನ ತಾತ ಅಂದರೆ ಅಪ್ಪ ಶಿವ. ನಕ್ಷತ್ರ ಕಾಂತಧರ ಎಂದರೆ ಚುಕ್ಕೆ ಮತ್ತು ಚಂದ್ರನನ್ನು ತನ್ನ ಜಡೆಯ ಮೇಲಿಟ್ಟುಕೊಂಡವ ಶಿವ. ಹಾಗಾಗಿ ಈ ಸಾಲು ವಿಶಿಷ್ಟವಾಗಿ ಶಿವನನ್ನು ಸ್ತುತಿಸುವ ಸಾಲಾಗಿದೆ.

ನಾಲ್ಕನೆಯ ಸಾಲಿನ ನಕ್ಷತ್ರ ಚಿತ್ತ ನಕ್ಷತ್ರಜ ಎಂದರೆ ಮನ್ಮಥ. ಇವನ ಅಣ್ಣ ಬ್ರಹ್ಮ. ಬ್ರಹ್ಮನ ಮಸ್ತಕವನ್ನು ತೆರೆದವ ಶಿವ ಎಂದಾಗುತ್ತದೆ. ಹಾಗಾಗಿ ಈ ಸಾಲು ಸಹಿತ ಶಿವನ ವಿವಿಧ ಲೀಲೆಗಳನ್ನು ಬಣ್ಣಿಸುತ್ತದೆ. ಐದನೆಯ ಸಾಲಿನ ನಕ್ಷತ್ರ ಸಹಸ್ರದ್ವಾರ ಕಾಯಲು ಇಲ್ಲಿಯ ನಕ್ಷತ್ರ ಹಸ್ತ. ಅಂದರೆ ಕೈ ಸಾವಿರ ಕೈಗಳನ್ನು ಉಳ್ಳವನು ಬಾಣಾಸುರನು. ಅವನ ಬಾಗಿಲನ್ನು ಕಾಯ್ದವ ಶಿವ. ಆರನೆಯ ಸಾಲಿನ ನಕ್ಷತ್ರ ನೀನೆ ಇಂದ್ರಾದಿ ದೇವತೆಗಳಿಗೆ ಗುರು. ಅಂದರೆ ಇಲ್ಲಿ ನಕ್ಷತ್ರ ನೀನೇ ಎಂದರೆ ಜ್ಯೇಷ್ಠ ನಕ್ಷತ್ರ. ಇಂದ್ರಾದಿ ದೇವತೆಗಳಿಗೆ ಜ್ಯೇಷ್ಠನಾದವನು ಶಿವನು. ಹಾಗಾಗಿ ಇಲ್ಲಿಯೂ ಶಿವನ ಮಹಿಮೆಯನ್ನು ಅರಿಯುವ ಪ್ರಯತ್ನ ಈ ಸಾಲಿನಲ್ಲಿ ಕಂಡುಬರುತ್ತದೆ. ಕೊನೆಯಲ್ಲಿ ಮಹಿಪತಿಕ ನಕ್ಷತ್ರ ಭೂಷ ಸಲುಹು ಎನ್ನುವಲ್ಲಿ ನಕ್ಷತ್ರ ಭೂಷಣ ಎಂದರೆ ಆಶ್ಲೇಷ(ಸರ್ಪವನ್ನು ಕೊರಳಲ್ಲಿ ಭೂಷಣವಾಗಿಟ್ಟುಕೊಂಡವ ಶಿವ.) ಶಿವನನ್ನು ಆರಾಧಿಸುವ ಈ ಕೀರ್ತನೆಯು ಭಾಷಾಪ್ರಯೋಗದ ಚಮತ್ಕಾರಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಇಲ್ಲಿ ಮಹಾಭಾರತದ ಕಥೆಯ ಘಟನೆಯನ್ನು ನೆನಪಿಸುತ್ತಾರೆ. ಭಾಗವತ ಪುರಾಣದ ಅನೇಕ ಘಟನೆಗಳು ಇಲ್ಲಿ ಹಾಸುಹೊಕ್ಕಾಗಿವೆ. ಕೃಷ್ಣದಾಸರ ಈ ಭಾಷಾಚಮತ್ಕಾರವನ್ನು ನೋಡಿದರೆ ಅವರಲ್ಲಿರುವ ಪುರಾಣಪ್ರಜ್ಞೆ, ಪಾತ್ರಗಳ ನೆನಪಿನ ಆಳ, ಸಂಯೋಜಿಸುವ ಶಕ್ತಿ ಇಲ್ಲೆಲ್ಲ ಎದ್ದು ಕಾಣುತ್ತದೆ. ಕೃಷ್ಣದಾಸರು ಶಿವನ ಮೇಲಿನ ಇನ್ನೊಂದು ಪದ್ಯದಲ್ಲಿ ಈ ಭಾಷಾ ಚಮತ್ಕಾರವನ್ನು ಮುಂದುವರೆಸಿದ್ದಾರೆ.

"ಅದ್ರಿಧರ ಪ್ರಿಯ ಅದ್ರಿ ಕೃತಾಲಯ ।
ಅದ್ರಿಜಾಮಾತಾದ್ರಿ ರಿಪುನುತ ।

ಅದ್ರಿಜೆ ಪತಿ ಪಾಪದ್ರಿ ಕುಲಿಶಕನ ।

ಕಾದ್ರಿಶರಾಸನ ಮುದ್ರಿತ ಪಾಣೇ"[೪]

ಈ ಪದ್ಯವು ಶಿವನ ಕಾರ್ಯವನ್ನು ನೆನೆಯುತ್ತದೆ. ಆತನ ಅನುಗ್ರಹಕ್ಕೆ ಹಾತೊರೆಯುವ ರಚನೆ ಇಲ್ಲಿದೆ. ಈ ಮೊದಲನೆಯ ಸಾಲಿನಲ್ಲಿ ಅದ್ರಿಧರ ಎಂದರೆ ಕೃಷ್ಣ. ಕೃಷ್ಣನಿಗೆ ಪ್ರಿಯನಾಗಿರುವವನು ಶಿವ ಎಂದಾಗುತ್ತದೆ. ಅದ್ರಿಕೃತರು ಅಂದರೆ ಪರ್ವತ. ಪರ್ವತವನ್ನೇ ಮನೆಮಾಡಿಕೊಂಡವ ಶಿವ. ಅದ್ರಿಜಾಮಾತಾದ್ರಿ ರಿಪುನುತ ಅದ್ರಿಮಾತಾ ಎಂದರೆ ಪರ್ವತ. ಪರ್ವತ ರಾಜನ ಅಳಿಯ ಶಿವ. ಅದ್ರಿರಿಪುನುತ ಅಂದರೆ ಇಂದ್ರನಿಂದ ಸ್ತುತಿಸಿಕೊಳ್ಳುವ ಶಿವ ಅದ್ರಿಜೆ ಪತಿ. ಅಂದರೆ ಪರ್ವತನ ರಾಜನ ಮಗಳು ಪಾರ್ವತಿ. ಪಾರ್ವತಿಯ ಗಂಡ ಶಿವ. ಇಲ್ಲಿ ಶಿವನಿಗೆ ಸಂಬಂಧಿಸಿದ ಘಟನೆಗಳನ್ನು ಕೃಷ್ಣದಾಸರು ಅರ್ಥಪೂರ್ಣವಾದ ನೆಲೆಯಲ್ಲಿ ತಿಳಿಸುವ ಪ್ರಯತ್ನವನ್ನು ಮಾಡಿದ್ದಾರೆ.

ಇಲ್ಲಿ ಕೃಷ್ಣದಾಸರು ಬಳಸುವ ಭಾಷಾತಂತ್ರಗಾರಿಕೆ ನೆಚ್ಚುವಂಥದ್ದು. ಕಥೆಯನ್ನು ನಿರೂಪಿಸುವಾಗ ಸೊಗಸಾಗಿ ಮೂಡಿ ಇವು ಅವರ ಭಾಷಾಶೈಲಿಗೆ ಹಿಡಿದ ಕೈಗನ್ನಡಿಯಾಗಿವೆ. ಮುಂದುವರಿದು ಶ್ರೀಹರಿಯನ್ನು ನೆನೆಯುತ್ತ ಆತನ ವಿವಿಧ ಲೀಲೆಗಳನ್ನು ವರ್ಣಿಸುತ್ತಾರೆ. ಭಕ್ತ ಶ್ರೀಹರಿಯ ಅನುಗ್ರಹಕ್ಕಾಗಿ ಆತನ ಸಾನ್ನಿಧ್ಯಕ್ಕಾಗಿ ತುಡಿಯುವ ಭಾವ ಕೃಷ್ಣದಾಸರಲ್ಲಿ ಅಭಿವ್ಯಕ್ತಿತಗೊಂಡಿದೆ.

"ಹರಿ ಪೂರ್ಣಾಂಶದಿ ಜನಸಿ ಹರಿ ಕುಲೋದ್ಭವ ನೆನಿಸಿ

ಹರಿಯತುಡಕಿ ಬಂದು ಹರಿತೇಜದಿ ನಿಂದು

ಹರಿಸೆ ಧನುಜ ಮೃಗವಾ

ಹರಿರೂಪದಲಿ ನಿಂದೆಹರಿಮಂದಿರದಲಿ ನಲಿದೆ

ಹರಿಬರಲು ನಮಿಸಿ ಹರಿದಶ್ವಜ ಗೊಲಿಸಿ

ಹರಿಹಯಜಗ ಮುನಿದೇ"[೫]

ಶರಣೆಂಬೆ ಗುರುರಾಯ ಎಂಬ ಈ ಪದ್ಯವು ಶ್ರೀಹರಿಯ ವ್ಯಕ್ತಿತ್ವವನ್ನು ಅನಾವರಣಗೊಳಿಸುತ್ತದೆ. ಹರಿಯು ವಾಯುದೇವನ ಪೂರ್ಣಾಂಶದಿಂದ ಜನಿಸಿದನು. ಕಪಿಲಕುಲದಲ್ಲಿ ಹುಟ್ಟಿದವನು. ಸೂರ್ಯದೇವನನ್ನು ಹಿಡಿಯಲು ಹರಿದವನು. ವಾಯುವೇಗದಿಂದ ಬಂದು ಭಕ್ತರನ್ನು ಉದ್ಧರಿಸಿ ಸುಗ್ರೀವನ ಮನೆಯಲ್ಲಿ ನಲಿದಾಡಿದವನು. ಹೀಗೆ ಹರಿಯ ಮಹಿಮೆಯು ಈ ಭೂಮಿಯ ಮೇಲೆ ಹನುಮ, ಭೀಮ, ಮಧ್ವರೆಂಬ ಮೂರು ಅವತಾರಗಳನ್ನು ವರ್ಣಿಸಿದ್ದಾರೆ. ಇಲ್ಲಿ ಹರಿಯೆಂಬ ಶಬ್ದವು ಪ್ರತಿಸಾರಿ ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತಾ ಅದರರದೆಯಾದ ಹೊಸ ಹೊಸ ಶಬ್ದಗಳನ್ನು ಸೃಷ್ಟಿಸುತ್ತದೆ. ಆ ಶಬ್ದಗಳಿಗೆ ವಿಶೇಷ ಅರ್ಥ

ಮತ್ತು ನಾಮವು ಒಳಗೊಂಡಿದೆ. ಆದಿಪ್ರಾಸವನ್ನು ಪ್ರಧಾನವಾಗಿಟ್ಟುಕೊಂಡು ರಚಿಸಿದ ಈ ಪದ್ಯವು ಇಡೀ ಶ್ರೀಹರಿಯ ಲೀಲೆಯನ್ನು ನೆನಪಿಸುತ್ತದೆ. ಇಲ್ಲಿ ಕೃಷ್ಣದಾಸರ ಭಾಷಾತಂತ್ರಗಾರಿಕೆ ವಿಭಿನ್ನವಾಗಿ ಗೋಚರಿಸುತ್ತದೆ.

ಇದೇ ರೀತಿಯಾದ ಕಥೆಯನ್ನು ಹೇಳುವ ಇನ್ನೊಂದು ಪದ್ಯ ಬಲವಂತರೊಳಗೆ ಬಲವಂತ ಹನುಮ ಎಂಬ ಪದ್ಯದಲ್ಲಿ ಹನುಮನ ಲೀಲೆಯನ್ನು ಕಟ್ಟಿಕೊಡುತ್ತದೆ. ರಾಮಾಯಣದಲ್ಲಿ ಆತನು ಮಾಡಿದ ಸಾಧನೆಯನ್ನು ವರ್ಣಿಸುತ್ತದೆ. ಹನುಮನ ಎರಡನೇ ಅವತಾರ ಭೀಮ. ಭೀಮನು ಮಹಾಭಾರತದ ಕಥೆಯಲ್ಲಿ ಕಷ್ಟವಾದ ಸ್ಥಳಕ್ಕೆ ಹೋಗಿ, ಸೌಗಂಧಿಕಾ ಪುಷ್ಪವನ್ನು ತಂದು ದ್ರೌಪದಿಗೆ ನೀಡಿದ ಕಥೆ ನೆನಪಿಸುತ್ತದೆ.

ವೇದಾಂತವೆಂಬ ಸಾಗರದಲ್ಲಿ ದುರ್ವ್ಯಸನಿಗಳೆಂಬ ಜಲಚರ ಪ್ರಾಣಿಗಳ ಬಾಯಿ ಮುಚ್ಚಿಸಿದ ಮಧ್ವಾಚಾರ್ಯರ ದ್ವೈತಸಿದ್ಧಾಂತ ಮತ್ತು ಮಧ್ವಾಚಾರ್ಯರ ಕುರಿತು ವಿಶಿಷ್ಟವಾಗಿ ಗೋಚರಿಸುತ್ತದೆ. ಈ ಹಿನ್ನೆಲೆಯಲ್ಲಿ ಮನುಷ್ಯ ಮತ್ತು ದೇವರ ನಡುವಿನ ಸಂಬಂಧ ತುಂಬಾ ಭಿನ್ನವಾದವುಗಳು. ಕೃಷ್ಣದಾಸರ ಕೀರ್ತನೆಗಳಲ್ಲೆಲ್ಲಾ ಭಕ್ತನ ಗಾಢವಾದ ಪ್ರೀತಿ, ಉತ್ಕಟವಾಗಿ ಹರಿಯುತ್ತದೆ. ಭಕ್ತ ಮತ್ತು ದೇವರ ನಂಬಿಕೆಯು ಗಾಢವಾದದ್ದು, ಭಕ್ತನಿಲ್ಲದೆ ದೇವನ ಅಸ್ತಿತ್ವವಿಲ್ಲ. ದೇವರಿಲ್ಲದೆ ಭಕ್ತಿ ಅರ್ಥಹೀನವಾಗುತ್ತದೆ. ಇಲ್ಲೆಲ್ಲ ಭಕ್ತ ಮತ್ತು ಭಗವಂತನ, ಭಕ್ತ ಮತ್ತು ಭಕ್ತಿ, ಭಗವಂತ ಮತ್ತು ಭಕ್ತಿ, ಈ ರೀತಿಯಲ್ಲಿ ಸಂಬಂಧಗಳ ಹೆಣಿಕೆ ಕಂಡುಬರುತ್ತದೆ. ಪದಗಳ ಪ್ರಯೋಗಶೀಲತೆ ತುಂಬಾ ವಿಶಿಷ್ಟವಾಗಿ ತನ್ನ ಚಹರೆಯನ್ನು ಬದಲಿಸಿಕೊಂಡು ಬಂದಿರುವುದು ಕಂಡುಬರುತ್ತದೆ.

ಸಮಾಜಮುಖಿಯಾದ ಹರಿದಾಸರು ತಮ್ಮದೆಯಾದ ಚೌಕಟ್ಟಿನಲ್ಲಿ ಪ್ರಾತಿನಿಧಿಕವಾಗಿ ಭಕ್ತ ಮತ್ತು ಭಗವಂತನ ಅವಿನಾಭಾವ ಸಂಬಂಧವನ್ನು ವಿಶಿಷ್ಟತೆಯಲ್ಲಿ ಹೆಣೆಯುತ್ತಾರೆ. ಭಗವಂತನನ್ನು ಒಲಿಸಿಕೊಳ್ಳುವ ಸಾಧನಾಮಾರ್ಗದಲ್ಲಿ ಇಂಥ ಕೀರ್ತನೆಗಳು ಗಾಯನದ ಮುಖೇನವಾಗಿ ಸ್ತುತಿಸುತ್ತವೆ. ಕೀರ್ತನೆಗಳ ರಚನೆಯ ಹಿಂದೆ ಸಂಗೀತದ ಲಯಗಾರಿಕೆ ಇರುವುದರಿಂದ ದಾಸರ ಪದಗಳು ಭಾವಗೀತೆಗಳಾಗಿ ಕೇಳುಗನ ಕಿವಿಯನ್ನು ತಣಿಸುತ್ತವೆ.

೨. ಕೀರ್ತನಕಾರ ಮತ್ತು ಸ್ವವಿಮರ್ಶೆ

ಕೃಷ್ಣದಾಸರು ಭಕ್ತ ಮತ್ತು ಭಗವಂತನ ಸಾಮೀಪ್ಯ ಕುರಿತು ಹಲವು ಕೀರ್ತನೆಗಳನ್ನು ರಚಿಸಿದ್ದಾರೆ. ಅಲ್ಲಿ ಉತ್ಕಟತೆ ಹೆಚ್ಚಿರುತ್ತದೆ. ಆದರೆ ಸ್ವವಿಮರ್ಶೆಯ ಕೀರ್ತನೆಗಳು ದೇವರ ಕೀರ್ತನೆಗಳ ಬಳಕೆಯ ಭಾಷೆಗಿಂತ ಭಿನ್ನ ನೆಲೆಯಲ್ಲಿ ಕಂಡುಬರುತ್ತವೆ. ಕೃಷ್ಣದಾಸರು ತಮ್ಮನು ತಾವು ಸ್ವವಿಮರ್ಶೆಗೆ ಒಳಪಡಿಸಿಕೊಳ್ಳುವಾಗ ಅನೇಕ ಪ್ರಾಣಿಯ ರೂಪಕಗಳನ್ನು ಬಳಸುತ್ತಾರೆ. ಈ ಪ್ರಾಣಿರೂಪಕಗಳ ಬಳಕೆಯ ಹಿಂದೆ ಮನುಷ್ಯನ ಮನಸ್ಸಿನ ಜಾಗೃತಿಯ ಧ್ವನಿ ಅಡಗಿರುತ್ತದೆ. ಪ್ರಾಣಿರೂಪಕದ ಜೊತೆಗೆ ಇಂದ್ರಿಯನಿಗ್ರಹವನ್ನು ಮಾಡಿಕೊಳ್ಳುವ ಮಾತುಗಳು ಇಲ್ಲಿಯ ಕೀರ್ತನೆಯಲ್ಲಿ ಅಡಗಿರುತ್ತವೆ. ಮನುಷ್ಯನ ಈ ಶರೀರವು ಸಾಧನೆಯ ಶರೀರವಾಗಬೇಕು. ಈ

ಶರೀರ ದೇವರ ಕೊಟ್ಟ ಕೊಡುಗೆ. ಇದನ್ನು ಸಾರ್ಥಕಪಡಿಸಿಕೊಳ್ಳಲು ಸದ್ಭಕ್ತಿ, ಸದಾಚಾರ, ಸದ್ಗುಣಗಳನ್ನು ಇಟ್ಟುಕೊಳ್ಳಬೇಕು. ಇಂದ್ರಿಯಗಳ ಬೆನ್ನುಹತ್ತಿ ಶ್ರೀಹರಿಯ ಸೇವೆಯಿಂದ ವಂಚಿತವಾಗುತ್ತಿರುವ ಸಂದರ್ಭಗಳನ್ನು ನೆನೆದು ಸ್ವವಿಮರ್ಶೆಯ ಕೀರ್ತನೆಗಳು ರಚಿತಗೊಂಡಿವೆ.

ಇಂದ್ರಿಯ ವಲಯದಲ್ಲಿಯೇ ಬದುಕನ್ನು ಸಾಗಿಸುವ ಪ್ರಾಣಿಗಳು ತಮ್ಮ ಗುಣ ಸ್ವಭಾವಕ್ಕೆ ತಕ್ಕಂತೆ ಒಂದೊಂದು ಸಂಕೇತಗಳಾಗಿವೆ. ಆಯಾ ಗುಣಗಳು ಇಂಥ ಸಾಹಿತ್ಯದಲ್ಲಿ ಕಾಣಿಸಿ ಕೊಳ್ಳುತ್ತವೆ. ಆ ಮೂಲಕ ಮನುಷ್ಯನ ಗುಣಸ್ವಭಾವ ಮತ್ತು ಪ್ರಾಣಿಗಳ ಗುಣ ಸ್ವಭಾವ ಹೋಲಿಕೆ ಮಾಡಿ ಕೃಷ್ಣದಾಸರು ತಮ್ಮ ಸ್ವವಿಮರ್ಶಾ ಕೀರ್ತನೆಗಳನ್ನು ರಚಿಸಿದ್ದಾರೆ.

"ಡಂಭಕ ಹರಿದೂರ ಪ್ರಾಣೀ

ಅಂಬುಜನಾಭನ ಇಂಬನ ಪಡಿಯದೇ ।
ಡೊಂಬನ ಪರಿಯಾಚಾರ ಪ್ರಾಣೀ
ಅಬ್ಧಿಶಯನ ಸಿರಿನಾಥನ ಒಲುಮೆಯ ।
ಲಬ್ಧ ದೊರೆಯದೆ ವಿಚಾರಾ ॥
ಲಬ್ಧನಾಗಿ ಧನ ಮಾನಕಬಿಟ್ಟನೀ
ಶಬ್ದದಂಗಡಿ ಪ್ರಸರಾ । ಪ್ರಾಣೀ"[೬]

ಕೃಷ್ಣದಾಸರು ಈ ಪದ್ಯದಲ್ಲಿ ಮನಸ್ಸನ್ನು ಪ್ರಾಣಿಗೆ ಹೋಲಿಸಿಕೊಂಡಿದ್ದಾರೆ. ಡಾಂಭಿಕತೆ ಒಣ ಹೆಮ್ಮೆ ತೊರೆದೊಗೆದು ಶ್ರೀಹರಿಯ ಅನುಗ್ರಹಕ್ಕೆ ಪಾತ್ರರಾಗಬೇಕು. ಅಬ್ಧಿಶಯನನಾದ ವಿಷ್ಣುವಿನ ಒಲುಮೆಯನ್ನು ಪಡೆಯದೆ ದಡ್ಡನಾಗಿ ಧನಕನಕಗಳ ಬೆನ್ನುಹತ್ತಿ ಈ ಜನ್ಮವನು ಹಾಳುಮಾಡಿಕೊಂಡಿದೆ. ಶ್ರೀಹರಿಯ ನೆನೆಯದ ಈ ಮನಸ್ಸಿಗೆ ಪ್ರಾಣಿ ಎಂದು ಸಂಬೋಧಿಸಿದ್ದಾರೆ. ಅಹಂಕಾರ ನಿಗ್ರಹ ಹಾಗೂ ಮನಸ್ಸಿಗೆ ಉಪದೇಶಾತ್ಮಕವಾದ ಮಾತುಗಳನ್ನಾಡಿದ್ದಾರೆ. ಕ್ರಿಮಿ, ಕೀಟಗಳಿಗೆ ಈ ಮನಸ್ಸನ್ನು ಹೋಲಿಸಿಕೊಂಡು ಅಭಿವ್ಯಕ್ತಿಸುತ್ತಾರೆ.

"ಸಾಧುರಾ ಸಂಗ ಜರಿದು ಕುಜನರ ನೆರೆವಿಡಿದು ।
ಮೇದಿನಿಯೊಳು ನಿನ್ನ ನೀ ಮರೆದು

ಇರಲು ಮುಳ್ಳಿನಾಗ್ರದಲಿ ಹೀನ ಕೀಟಕಾವಳಿ ।
ಪೂರೆವಾನಿತ್ತು ಆಹಾರದಯಲೀ"[೭]

ದಾಸರು ಮನಸ್ಸನ್ನು ಕುರಿತು ನೀನು ಏಕೆ ಚಿಂತಿಸಿ ಬಳಲುತ್ತಿರುವೆ ಎಂದು ಪ್ರಶ್ನೆ ಮಾಡುತ್ತಾರೆ. ಶ್ರೀಗುರುವಿನ ಸಾನ್ನಿಧ್ಯಕ್ಕೆ ಸಾಗದೆ ಸಾಧುಸಂತರನ್ನು ಅಪಮಾನಿಸಿ, ದುಷ್ಟರ

ಜೊತೆಗೂಡಿ ಮೆರೆಯುತ್ತಿರುವೆ. ಕತ್ತಲು ತುಂಬಿದ ದಟ್ಟವಾದ ಕಾಡಿನಲ್ಲಿ ಹೀನ ಕೀಟ ಹಾವಳಿಯಾಗಿ ಹೋಗುತ್ತಿರುವೆ. ಹೀಗೆ ಅನೇಕ ಮನುಷ್ಯ ಬದುಕಿನ ತಲ್ಲಣಗಳಿಗೆ ಅಗಾಧವಾದ ತತ್ವನುಡಿಗಳನ್ನು ಕೃಷ್ಣದಾಸರು ಹೆಣೆದಿದ್ದಾರೆ. ಏನು ಹೇಳಿದರೂ ಮನಸ್ಸು ತನ್ನ ಹತೋಟಿಗೆ ಬಾರದೆ ಇರುವಾಗ ಮನಸ್ಸಿನ ಹತೋಟಿಯ ಜಾಗೃತಿಯನ್ನು ಮಾಡಿದ್ದಾರೆ.

"ಏನು ಹೇಳಿದರೇನು ಹೀನ ಮನಕ ।
ತಾನು ಎಚ್ಚರ ಹಿಡಿಯ ದನಕಾ

ಬೂದಿಯೊಳಗ ಹೋಮ ಮಾಡಿದಂತೆ ।
ಬೋಧಾನುಗ್ರಹ ಕಳವದು ಮರೆತಕೆ

ಹರಿ ಕೀರ್ತನೆ ಇರಲಿಲ್ಲಾ ।
ಬರಡು ಮಾತಿಗೆ ಸುಖ ಪಡುದಲ್ಲಾ"[೮]

ಇಲ್ಲಿ ತಮ್ಮ ಮನಸ್ಸನ್ನು ತೀರಾ ಕೆಳಮಟ್ಟದಲ್ಲಿ ಸಂಬೋಧಿಸಿಕೊಂಡಿದ್ದಾರೆ. ಬೂದಿಯೊಳಗೆ ಹೋಮ ಮಾಡಿದರೆ ಏನು ಪ್ರಯೋಜನವೆಂಬುದನ್ನು ಕೃಷ್ಣದಾಸರು ಪ್ರಶ್ನಿಸುತ್ತಾರೆ. ಮನಸ್ಸನ್ನು ಟೀಕಿಸುತ್ತಾ ಅದರ ತಪ್ಪನ್ನು ಎತ್ತಿ ಹೇಳುತ್ತಾರೆ. ವಿಡಂಬನೆ ಮಾಡುವ ಮೂಲಕ ಮನಸ್ಸನ್ನು ಹತೋಟಿಗೆ ತರಲು ಪ್ರಯತ್ನಿಸುತ್ತಾರೆ. ಹಾಗೆಯೇ ಮಾನವ ಜನ್ಮದ ಬದುಕಿನ ಹೊಣೆಗಾರಿಕೆಯನ್ನು ತಿಳಿಸುತ್ತಾರೆ. ಇಲ್ಲಿಯ ಪದ್ಯಗಳಲ್ಲಿ ಭಗವಂತನ ಒಲುಮೆ, ಅಧೀನತೆ, ಸೇವೆ, ಸ್ನೇಹ, ಪ್ರೀತಿ, ಈ ನೆಲಗಳು ಮುಖ್ಯವಾಗಿ ಬಂದು ಸ್ವತಂತ್ರ ಮನೋಭೂಮಿಕೆಯಲ್ಲಿ ಅಭಿವ್ಯಕ್ತವಾಗಿವೆ. ಮನಸ್ಸನ್ನು ತಾನು ಜರಿಯುವುದು, ಆ ಮನಸ್ಸನ್ನು ಒಂದು ಕೇಂದ್ರೀಕೃತವಾದ ಭಕ್ತಿಯ ವ್ಯವಸ್ಥೆಗೆ ಒಳಪಡಿಸುವುದು ಪ್ರಮುಖವಾಗಿದೆ. ಹೀಗೆ ಇಲ್ಲಿಯ ಭಾಷಾಪ್ರಯೋಗ ವಿಶಿಷ್ಟ ತೆರನಾಗಿ ಕಂಡುಬರುತ್ತದೆ.

೩. ಕೀರ್ತನಕಾರ ಮತ್ತು ಸಾಮಾನ್ಯ ಮನುಷ್ಯ

ಕೀರ್ತನಕಾರ ಮತ್ತು ಸಾಮಾನ್ಯ ಮನುಷ್ಯನ ನಡುವೆ ಇರುವ ಭಾಷಾಬಳಕೆ ಇನ್ನುಳಿದ ನೆಲೆಗಿಂತ ಭಿನ್ನವಾಗಿ ಕಂಡುಬರುತ್ತದೆ. ಕೀರ್ತನಕಾರ ಮನುಷ್ಯನನ್ನು ಉದ್ದೇಶಿಸಿ ತನ್ನ ತತ್ವ ನಿರೂಪಿಸುವಾಗ ಭಾಷಾಭಿವ್ಯಕ್ತಿ ಕೆಲವು ಸಾರಿ ಟೀಕಿಸುತ್ತ ಮುಂದುವರಿಯುತ್ತದೆ. ಬೈಗುಳನ್ನು ತರುವ ಮೂಲಕ ಸಂದರ್ಭಕ್ಕೆ ತಕ್ಕಂತೆ ಮನುಷ್ಯನ ನಡವಳಿಗಳನ್ನು ಹಾಗೂ ಮನೋಧರ್ಮವನ್ನು ತಿದ್ದುವ ಕಾರ್ಯ ತೀವ್ರತರವಾಗಿ ಇಲ್ಲಿ ನಡೆಯುತ್ತದೆ. ಕೀರ್ತನಕಾರ ತನ್ನ ಸ್ವವಿಮರ್ಶೆಯಲ್ಲಿ ಪ್ರಾಣಿ, ಕೀಟ ಮುಂತಾದ ರೂಪಕಗಳನ್ನು ಬಳಸಿದಂತೆ ಇಲ್ಲಿ ನೇರವಾಗಿ ವ್ಯಕ್ತಿಯನ್ನು ತನ್ನದೆಯಾದ ಚಾಟಿಯ ಧಾಟಿಯಲ್ಲಿ ಟೀಕಿಸಿದ್ದಾರೆ. ಉದ್ದೇಶಾತ್ಮಕ ನಿರೂಪಣೆಯ ಕೀರ್ತನೆಗಳು

ಆದೇಶದ ಪರಿಯ ಮೂಲಕ ಮುನ್ನಡೆಯುತ್ತದೆ. ಕೆಟ್ಟು ಹೋಗುತ್ತಿರುವ ಮನುಷ್ಯನನ್ನು ಎಚ್ಚರಿಸುವ ಧ್ವನಿ ಇಲ್ಲಿ ಅಡಗಿದೆ. ಜನರ ತಪ್ಪುಗಳನ್ನು ಎತ್ತಿತೋರಿಸಿ ಅವರ ದುರ್ಬುದ್ಧಿಯನ್ನು ದೂರ ಮಾಡಿ ಅವರನ್ನು ಸನ್ಮಾರ್ಗದತ್ತ ಮುನ್ನಡಿಸುವ ಯೋಜನೆಯ ಭಾಷಾತಂತ್ರ ಇಲ್ಲಿದೆ. ಸಾಮಾನ್ಯವಾಗಿ ವ್ಯಕ್ತಿಯನ್ನು ಸಂಬೋಧಿಸುವಾಗ, ಖೋಡಿ, ಮೂರ್ಖ, ಮುಂತಾದ ಬೈಗುಳ ಬಳಕೆಗೊಂಡಿರುತ್ತವೆ. ಛೀ, ತೂ ಎಂಬ ಶಬ್ದಗಳು ಇಂದ್ರಿಯ ಆಶಯವನ್ನು ನಿಗ್ರಹಿಸುವಂತೆ ಮಾಡುತ್ತವೆ. ಕೀರ್ತನಕಾರ ಮತ್ತು ಮನುಷ್ಯನ ನಡುವೆ ನೇರವಾಗಿ ಸಂಬೋಧನೆ ಧಾಟಿಯ ಜನಪದರ ಭಾಷೆಯ ಪ್ರಯೋಗಕ್ಕೆ ಒಳಪಟ್ಟಿದೆ.

"ಛೀ ಛೀ ಛೀ ಛೀ

ಬಿಟ್ಟು ಕೊಡೋ ನೀ ಸಂಸಾರ ಭ್ರಾಂತಿ ।
ಎಷ್ಟು ಸೋಸುವಿ ದುಃಖದ ಪಂಥಿ ।
ಅಷ್ಟು ಪಾಶದೀ ಬಿಗಿದಿಹ ಗ್ರಂಥಿ ।
ಕಷ್ಟ ಪಟ್ಟಿನ್ನು ಮಾಡುವಿ ಚಿಂತೆ"[೯]

ಛೀ ಛೀ ಛೀ ಎಂಬ ಪದಗಳು ಸನ್ನಡತೆಯ ಮನುಷ್ಯನ ವ್ಯಕ್ತಿತ್ವವನ್ನು ಸಂಬೋಧಿಸುವಾಗ ಕೃಷ್ಣದಾಸರು ಬಳಸುತ್ತಾರೆ. ಆದಿ, ಅಂತ್ಯ ಪ್ರಾಸ ಹೀಗೆ ವಿಶಿಷ್ಟತೆಯಿಂದ ಪ್ರಯೋಗವಾದ ಕೀರ್ತನೆಗಳು ಮನುಷ್ಯನ ಸಂಸಾರ ಭ್ರಾಂತಿ, ದುಃಖ ದುಮ್ಮಾನಗಳಿಗೆ ಕಾರಣವಾದ ಅಂಶಗಳನ್ನು ಪರಿಚಯಿಸುತ್ತದೆ. ಇಂದ್ರಿಯ ಬಲೆಗೆ ಬಿದ್ದ ಮನುಷ್ಯ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವಂತೆ ಆತನನ್ನು ಕುರಿತು ಕೃಷ್ಣದಾಸರು ಜರಿಯುತ್ತಾರೆ. ಇಲ್ಲಿ ಮನಮೆಚ್ಚಿನ ಸತಿ-ಸುತರೆಲ್ಲ ಇದ್ದಾರೆ. ಅವರೆಲ್ಲ ಧನ-ಯೌವನ, ಪ್ರೀತಿ ಇರುವವರೆಗೆ ಮಾತ್ರ, ಹಣ ಮತ್ತು ಯೌವನ ಜಾರಿದಾಗ ಮನುಷ್ಯನನ್ನು ತೃಣಸಮಾನ ಮಾಡಿ ಬಿಡುತ್ತಾರೆ. ಕೃಷ್ಣದಾಸರು ಸಾಮಾನ್ಯ ವ್ಯಕ್ತಿಯನ್ನು ಸಂಬೋಧಿಸುವಾಗ ಇಂಥ ಪರಿಣಾಮಕಾರಿ ಭಾಷಾಪ್ರಯೋಗವನ್ನು ಮಾಡಿದ್ದಾರೆ.

ಈ ಮಾನವ ಜನ್ಮವನ್ನು ನಾಯಿಗಿಂತ ಕಡಿಮೆ ಎಂದು ಸಂಬೋಧಿಸುವ ಪದ್ಯ ಸಾಮಾನ್ಯ ಜನರ ಸಂಬೋಧನೆಯ ಧಾಟಿಯ ವಿವಿಧತೆಯನ್ನು ಅನಾವರಣಗೊಳಿಸುತ್ತದೆ.

"ಛೀ ಯಾತರ ಜನ್ಮಾ ।
ನಾಯಿಗಿಂತ್ತಾಧಮ
ಬಾಯಿ ಬಡಕನಾಗಿ
ಮಯ್ಯ ಮರೆವರೇ ನಿಮ್ಮಾ"[೧೦]

ಇಲ್ಲಿಯ ಕೀರ್ತನೆಯ ಸಾಲುಗಳ ಶಬ್ದಭಾವ ಹರಿತವಾಗಿ ಮೂಡಿಬಂದಿವೆ. ಬೈಗುಳಗಳ ಬಳಕೆ ತನ್ನ ಸ್ವರೂಪವನ್ನು ಪ್ರದರ್ಶಿಸಿಕೊಂಡಿವೆ. ಸಮಾಜದ ಅನಾಚಾರದ ಪ್ರತಿಬಿಂಬ ಇಲ್ಲಿ ಗೋಚರಿಸಿದೆ. ವ್ಯಕ್ತಿಯ ನಡವಳಿಕೆಯನ್ನು ತಿದ್ದುವ ಕೀರ್ತನೆ ಇದಾಗಿದೆ. ಹೆಣ್ಣು, ಹೊನ್ನು, ಮಣ್ಣು, ಮೋಸ, ಕಪಟ, ಮಾನವೀಯ ಮೌಲ್ಯ ಮುಂತಾದವುಗಳು ಈ ಕೀರ್ತನೆಗಳಲ್ಲಿ ಅಭಿವ್ಯಕ್ತಗೊಂಡಿವೆ. ನ್ಯಾಯಯುತವಾದ ಮಾತುಗಳು ಛೀ, ತೂ, ಎಂಬ ಶಬ್ದನಾದವನ್ನು ಝೇಂಕರಿಸುತ್ತಾ ಪರಿಣಾಮಕಾರಿಯಾಗಿ ಜನರ ಸ್ವಭಾವವನ್ನು ವಿಮರ್ಶೆಗೆ ಒಳಪಡಿಸಿರುವುದು ಕಂಡುಬರುತ್ತವೆ. ಹೀಗೆ ಕೀರ್ತನೆಗಳು ಈ ಮೂರು ವಿಧದಲ್ಲಿ ತನ್ನ ಭಾಷಾಸ್ವರೂಪವನ್ನು ಸೃಷ್ಟಿಸಿಕೊಂಡಿರುವುದು ಎದ್ದು ಕಾಣುತ್ತದೆ.

ದಾಸಸಾಹಿತ್ಯದಲ್ಲಿ ಕೃಷ್ಣದಾಸರು ಈ ತರಹದ ವಿಶಿಷ್ಟವಾದ ಪದಗಳ ರಚನೆಯನ್ನು ಮಾಡಿದ್ದಾರೆ. ಆ ಮೂಲಕ ವರ್ಣಿಸಲು ಬಳಸಿದ ಭಾಷಾದೃಶ್ಯವನ್ನು ಸಂಸ್ಕೃತಭೂಯಿಷ್ಠತೆಯ ಅಂಶವನ್ನು ದೇಶೀಯ ಭಾಷೆಯ ಸೊಗಡಿನಲ್ಲಿ ತೋರಿಸುವ ಪ್ರಯತ್ನವನ್ನು ಮಾಡಿದ್ದಾರೆ. ಕೃಷ್ಣದಾಸರ ಕೀರ್ತನೆಯ ಭಾಷೆ ಶಾಸ್ತ್ರಭಾಷೆಗಿಂತ ಭಿನ್ನವಾಗಿರುತ್ತದೆ. ಕೀರ್ತನೆಯ ಭಾಷೆಯ ಉದ್ದೇಶ ಸಹೃದಯ ಕಿವಿಗೆ ಇಂಪನ್ನು ಕೊಡುವುದರ ಜೊತೆಗೆ ಪದಗಳ ವಿನ್ಯಾಸಗಳ ಮೂಲಕ ಪ್ರತೀತವಾಗುವ ಅರ್ಥಸ್ವಾರಸ್ಯವನ್ನು ಹೊಂದಿರುತ್ತವೆ.

"ಅನುಭಾವಿಗಳಿಗೆ ಲೋಕದ ಹಾಗೆ, ದೇಹದ ಹಾಗೆ ಭಾಷೆ ಕೂಡ ಬಹುಮುಖ್ಯವಾದ ಸವಾಲು. ಭಾಷೆ ಕುರಿತಾದ ಆತಂಕ, ಅನಿವಾರ್ಯತೆ ಮತ್ತು ಬೆಡಗು ಇವುಗಳನ್ನು ಕನ್ನಡದ ವಚನ ಪರಂಪರೆ ಚೂಲಮೂಲವಾಗಿ ಚರ್ಚಿಸಿದೆ. ದೇವರೊಡನೆ, ಲೋಕದೊಡನೆ, ತನ್ನೊಡನೆ ತಾನೆ ಸಂವಾದಿಸಲು ಅನುಭಾವಿಯಾದವನು ಹುಡುಕುವ ಭಾಷಿಕ ರೂಪಗಳ ಅಧ್ಯಯನವು ಕುತೂಹಲಕಾರಿಯಾದ ಸಂಗತಿಗಳನ್ನು ಹೊರಗೆಡವಬಲ್ಲದು. ಅನುಭಾವ ಅಥವಾ ಅಧ್ಯಾತ್ಮದ ನಡಿಗೆಗೆ ಇರುವ ಸಂಕಟಗಳಲ್ಲಿ ತಾನು ಹಾದುಬರುತ್ತಿರುವ ಕೊಂಡಗಳ ಅನುಭವವನ್ನು ಮಾತಿನಲ್ಲಿ, ಲೋಕದ ಜೊತೆ ಹಂಚಿಕೊಳ್ಳುವಲ್ಲಿ ತಲೆದೋರುವ ಸಮಸ್ಯೆಯಾಗಿದೆ. ಮಾತು ಅಥವಾ ಪದ ಎನ್ನುವುದು ಕೇವಲ ಶಬ್ದ ಮಾತ್ರ, ಅರ್ಥವೇನಿದ್ದರೂ ಲೋಕ ಕಟ್ಟಿಕೊಂಡ ತಿಳಿವು. ಆದ್ದರಿಂದಲೇ ಅದು ಮೈಲಿಗೆ ಎಂದು ಶ್ರವಣ ಪರಂಪರೆಗಳು ನಂಬಿರುವುದು. ಪ್ರತಿಯೊಬ್ಬ ಸಂತ–ದಾಸ–ಫಕೀರರು ಈ ಮಾತಿನ ಮೈಲಿಗೆಯನ್ನು ಕಳೆಯಲು ಉಗ್ರಹಠದಿಂದ ಪ್ರಯತ್ನ ಪಟ್ಟಿರುವುದನ್ನು ಅವರ ಕೃತಿಗಳು ಮನಗಾಣಿಸುತ್ತವೆ."[೧೧] ಕೃಷ್ಣದಾಸರ ಕೀರ್ತನೆಗಳ ಭಾಷೆಯ ಪ್ರಯೋಗದಲ್ಲಿ ಇಂತಹ ಭಾಷಿಕ ಆಯಾಮಗಳನ್ನು ಉದಾಹರಣೆಗಳ ಮೂಲಕವಾಗಿ ಗುರುತಿಸಲಾಗಿದೆ.

ದಾಸರು ತಮ್ಮ ಕೀರ್ತನೆಯಲ್ಲಿ ವರ್ಣನೆ, ಉಪಮೆ, ಪ್ರತಿಮೆ, ವಿಡಂಬನೆ ಹೀಗೆ ಅನೇಕ ರೀತಿಯ ಭಾಷಾ ಚಮತ್ಕಾರವನ್ನು ಮಾಡಿ ತಮ್ಮ ತತ್ವವನ್ನು ಸ್ಪಷ್ಟಪಡಿಸಿದ್ದಾರೆ. ದಾಸರು

ಕೀರ್ತನೆಯ ರಚನೆಯಲ್ಲಿ ಜನಸಾಮಾನ್ಯರ ಪದಪ್ರಯೋಗಗಳನ್ನು ಬಳಸಿದ್ದಾರೆ. ಈ ದಾಸರು ಹರಿದಾಸ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಕರಗತ ಮಾಡಿಕೊಂಡು ತಮ್ಮ ಬೌದ್ಧಿಕ ಪ್ರೌಢಿಮೆಯಿಂದ ಕೀರ್ತನೆಗಳನ್ನು ರಚಿಸಿದ್ದಾರೆ. ದೇವತೆಗಳ ಸ್ತುತಿ, ವೇದಾಂತ ನಿರೂಪಣೆ, ಮನಸ್ಸಿನ ಉಪದೇಶ, ಸ್ಥಳಗಳ ವರ್ಣನೆ ಮುಂತಾಗಿ ವಸ್ತುವೈವಿಧ್ಯತೆ ಇವರ ಕೀರ್ತನೆಯಲ್ಲಿವೆ. ತಮ್ಮ ಖಂಡಕಾವ್ಯಗಳಲ್ಲಿ ಅನೇಕ ಮಹಾನ್ ಪುರುಷರ ಚರಿತ್ರೆ ಹೆಣೆಯುವುದರ ಮೂಲಕ ವಿವಿಧ ರಸಗಳ ನಿರೂಪಣೆಯ ವರ್ಣನೆಗಳನ್ನು ಕಾಣುತ್ತೇವೆ.

ದಾಸಸಾಹಿತ್ಯದ ಭಾಷೆ ಸಾಂಪ್ರದಾಯಿಕ ನೆಲೆಯಲ್ಲಿ ಅರಳಿದರೂ ಸಹ ಕೃಷ್ಣದಾಸರಿಗೆ ಅವರದೆಯಾದ ರಚನೆಯ ಶೈಲಿ ಒಳಗೊಂಡಿದೆ. ಭಾಷೆಯ ಪ್ರಯೋಗಶೀಲತೆ, ಪದಗಳನ್ನು ಬಳಸುವಲ್ಲಿರುವ ಲಾಲಿತ್ಯ ಮುಂತಾದವುಗಳು ಅವರ ಕೀರ್ತನೆಯ ಭಾಷಾವೈವಿಧ್ಯತೆಗೆ ಹಿಡಿದ ಕನ್ನಡಿಯಾಗಿದೆ.

ಕೊನೆಟಿಪ್ಪಣಿಗಳು

೧. ದಾಸಸಾಹಿತ್ಯ ಶಬ್ದಶಿಲ್ಪ, ಡಾ.ಎಸ್.ಎಸ್.ಅಂಗಡಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫, ಪುಟ ೯.

೨. ದಾಸಸಾಹಿತ್ಯದಲ್ಲಿ ಜನಪದ ಅಂಶಗಳು ಒಂದು ಅಧ್ಯಯನ, ಡಾ.ಆರ್.ಸುನಂದಮ್ಮ, ತಿರುಪತಿ ದೇವಸ್ಥಾನದ ಪ್ರಕಟಣೆ, ೧೯೯೪, ಪುಟ ೨೦೭.

೩. ಸಮಗ್ರದಾಸ ಸಾಹಿತ್ಯ ಸಂಪುಟ ೧೧, ಭಾಗ ೧, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು, (ಸಂ) ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩, ಪುಟ ೨೭.

೪. ಅದೇ, ಪುಟ ೨೯.

೫. ಅದೇ, ಪುಟ ೪೮.

೬. ಅದೇ, ಪುಟ ೧೪೫-೧೪೬.

೭. ಅದೇ, ಸಂಪುಟ-೧೧, ಭಾಗ-೨, ಪುಟ ೧೪೯.

೮. ಅದೇ, ಪುಟ ೧೧೮-೧೧೯.

೯. ಅದೇ, ಪುಟ ೧೨೬.

೧೦. ಅದೇ, ಪುಟ ೧೨೭.

೧೧. ಹೊಸತು(ಮಾಸಪತ್ರಿಕೆ) ಮೇ ೨೦೧೫, ಕನಕದಾಸ ಕೀರ್ತನೆಗಳಲ್ಲಿ ಅನುಭಾವ ದರ್ಶನ, ಲೇ, ಕೆ.ವೈ.ನಾರಾಣಸ್ವಾಮಿ, (ಸಂ), ಸಿದ್ದನಗೌಡ ಪಾಟೀಲ, ನವಕರ್ನಾಟಕ ಪ್ರಕಾಶನ, ಬೆಂಗಳೂರು ಪುಟ ೨೮-೨೯.

ಅಧ್ಯಾಯ ಒಂಬತ್ತು

ಸಮಾರೋಪ

ಅಧ್ಯಾಯ ಒಂಬತ್ತು

ಸಮಾರೋಪ

ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ದಾಸಸಾಹಿತ್ಯವು ಅಪಾರ ಕೊಡುಗೆಯನ್ನು ನೀಡಿದೆ. ಶಿವಶರಣರ ವಚನದ ಪ್ರೇರಣೆ ಪಡೆದು ಹರಿದಾಸರು ಕೀರ್ತನೆಗಳನ್ನು ರಚಿಸಿದ್ದಾರೆ. ಇವೆರಡು ಭಕ್ತಿಪಂಥಗಳಲ್ಲಿ ತನ್ನದೇಯಾದ ತಾತ್ವಿಕ ಆಲೋಚನೆಗಳು ಒಳಗೊಂಡಿವೆ. ಮಧ್ಯಕಾಲೀನ ಸಾಹಿತ್ಯಕ ಧೋರಣೆಯು ಭಕ್ತಿಯನ್ನೇ ಪ್ರಧಾನವಾಗಿಟ್ಟುಕೊಂಡು ರಚಿತವಾಗಿರವುದರಿಂದ ದಾಸಸಾಹಿತ್ಯ ತನ್ನ ಜನಪ್ರಿಯತೆಯನ್ನು ಹೆಚ್ಚಿಸಿಕೊಂಡಿತು. ದಾಸಸಾಹಿತ್ಯವು ಜನಪ್ರಿಯವಾಗಲು ಪ್ರಮುಖವಾದ ಅಂಶವೆಂದರೆ ಜನರಲ್ಲಿದ್ದ ಅಪನಂಬಿಕೆಗಳನ್ನು ಅಲ್ಲಗಳೆದು, ಜನಪದ ಸಾಹಿತ್ಯದ ತಂತ್ರವನ್ನು ಕಾವ್ಯಕ್ಕೆ ಅಳವಡಿಸಿಕೊಂಡಿರುವುದಾಗಿದೆ. ಹರಿದಾಸರ ಕೀರ್ತನೆಗಳು ಸಂಗೀತದ ಲಯಗಾರಿಕೆ ಮುಖೇನ ರಚಿಸಿರುವುದರಿಂದ ಗೇಯತೆಗೆ ಮತ್ತು ತತ್ವಬೋಧನೆಗೆ ಜನರ ಮನಸ್ಸನ್ನು ಆಕರ್ಷಿಸಲು ಕಾರಣವಾಗಿದೆ.

ಹರಿದಾಸ ಸಾಹಿತ್ಯದ ಉಗಮವನ್ನು ಮಧ್ವಾಚಾರ್ಯರಿಂದಲೇ ಗುರುತಿಸಲಾಗುತ್ತದೆ. ಅಂದಿನಿಂದ ಇಂದಿನವರೆಗೆ ಈ ಸಾಹಿತ್ಯವು ವ್ಯಾಪಕವಾಗಿ ಬೆಳೆಯುತ್ತ ಮುನ್ನಡೆದಿದೆ. ಈ ಸುದೀರ್ಘವಾದ ಇತಿಹಾಸದಲ್ಲಿ ವಿಶೇಷ ಪ್ರತಿಭೆ, ಪ್ರೌಢಿಮೆಯಿಂದ ಗುರುತಿಸಿಕೊಂಡವರು ಕೆಲವು ಹರಿದಾಸರು ಮಾತ್ರ. ಅವರಲ್ಲಿ ಪ್ರಮುಖರಾದವರು ಶ್ರೀಪಾದರಾಯರು, ವ್ಯಾಸರಾಯರು, ವಾದಿರಾಜರು, ಪುರಂದರದಾಸರು, ಕನಕದಾಸರು, ಮಹಿಪತಿರಾಯರು, ಪ್ರಸನ್ನವೆಂಕಟದಾಸರು ಮುಂತಾದವರು. ಹರಿದಾಸ ಸಾಹಿತ್ಯ ಭಕ್ತಿ ಪ್ರಚಾರ ಮತ್ತು ಧಾರ್ಮಿಕ ಪ್ರಚಾರಕ್ಕಾಗಿ ಹುಟ್ಟಿಕೊಂಡ ಸಾಹಿತ್ಯ. ಇಲ್ಲಿಯ ವಸ್ತು ವಿಷಯ, ಭಾಷೆ, ಛಂದಸ್ಸು, ಸಂಗೀತದ ಲಯಗಾರಿಕೆಯಿಂದ ಕಾವ್ಯ ಎನಿಸಿಕೊಂಡಿದೆ. ದಾಸಸಾಹಿತ್ಯದ ಎರಡನೆಯ ಕಾಲಘಟ್ಟದ ಕೊನೆಯಲ್ಲಿ ಕಾಖಂಡಕಿ ಕೃಷ್ಣದಾಸರು ಪ್ರಮುಖರಾಗಿ ಕಂಡುಬರುತ್ತಾರೆ.

ಕೃಷ್ಣದಾಸರು ತಮ್ಮ ಕಾಲಘಟ್ಟಕ್ಕೆ ಅನುಗುಣವಾಗಿ ದಾಸಸಾಹಿತ್ಯ ರಚನೆ ಮಾಡಿರುವುದು ವಿಶೇಷವಾಗಿದೆ. ದಾಸರು ಸಮಕಾಲೀನ ಸಾಮಾಜಿಕ ಸ್ಥಿತಿ, ಜನರ ಬದುಕಿನ ಚಿತ್ರಣ ಹಾಗೂ

ಮಾನವೀಯ ಮೌಲ್ಯಗಳನ್ನು ತಮ್ಮ ಸಾಹಿತ್ಯದ ಮೂಲಕ ಕಟ್ಟಿಕೊಟ್ಟಿದ್ದಾರೆ. ವಿಶೇಷವಾಗಿ ಸಾಮಾನ್ಯ ಜನರಲ್ಲಿ ಬೇರೂರಿದ ಅನಿಷ್ಟತೆಯನ್ನು ಹೋಗಲಾಡಿಸುವ ಪ್ರಯತ್ನವನ್ನು ಮಾಡಿದ್ದಾರೆ. ಅನಾಚಾರ, ಅಪನಂಬಿಕೆ ಇವುಗಳನ್ನು ಟೀಕಿಸಿದ್ದಾರೆ. ಹರಿಸ್ಮರಣೆ, ಕ್ಷೇತ್ರದರ್ಶನ, ದೀಕ್ಷೆ, ಗುರುವಿನ ಭಕ್ತಿ ಇವು ಕೃಷ್ಣದಾಸರು ಪ್ರತಿಪಾದಿಸಿದ ಪ್ರಮುಖ ಸಂಪ್ರದಾಯಗಳಾಗಿವೆ.

ಹರಿದಾಸ ಸಾಹಿತ್ಯದ ವಾಹಿನಿಯಲ್ಲಿ ಕೃಷ್ಣದಾಸರು ತಮ್ಮದೇಯಾದ ವೈಶಿಷ್ಟ್ಯತೆಯನ್ನು ಉಳಿಸಿಕೊಂಡವರು. ತಮ್ಮ ತಂದೆ ಮತ್ತು ಗುರುವಾದ ಮಹಿಪತಿರಾಯರಿಂದ ದೀಕ್ಷೆ ಪಡೆದು ಮಧ್ವಸಿದ್ಧಾಂತವನ್ನು ಮುಂದಿನ ಜನಾಂಗಕ್ಕೆ ತಲುಪಿಸುವ ನಿಟ್ಟಿನಲ್ಲಿ ಶ್ರಮಿಸಿದರು. ಸಾಮಾನ್ಯ ಜನರ ಒಟ್ಟು ಬದುಕನ್ನು ಶುದ್ಧಿಗೊಳಿಸಲು ಹಾತೊರೆದವರು. ಇದು ಹರಿಭಕ್ತಿ, ಗುರುವಿನ ಕರುಣೆಯಿಂದ ಮಾತ್ರ ಸಾಧ್ಯವೆಂದು ಮನಗಂಡವರು. ಗುರುಭಕ್ತಿ, ದೇವತಾಸ್ತುತಿ, ಆತ್ಮನಿವೇದನೆ, ಪಾರಮಾರ್ಥಿಕ ನಿಲುವು ಇವುಗಳನ್ನು ಕೀರ್ತನೆಯಲ್ಲಿ ಪ್ರಚುರಪಡಿಸಿದವರು. ಕೃಷ್ಣದಾಸರು ಕನ್ನಡ ಭಾಷೆಯ ಜೊತೆಗೆ ಮರಾಠಿ, ಉರ್ದು ಭಾಷೆಗಳಲ್ಲಿ ಕೀರ್ತನೆಗಳನ್ನು ರಚಿಸಿ ಪ್ರಖ್ಯಾತಿಯನ್ನು ಹೊಂದಿದವರು. ತನ್ನ ತಂದೆ ಮಹಿಪತಿರಾಯರ ದಾಸಸಾಹಿತ್ಯ ಮಾರ್ಗವನ್ನು ಯಶಸ್ವಿಯಾಗಿ ಮುನ್ನಡೆಸಿದವರು. ದಾಸಸಾಹಿತ್ಯ ಪರಂಪರೆಯಲ್ಲಿ ಒಂದೇ ಮನೆತನಕ್ಕೆ ಸೇರಿದ ದಾಸರುಗಳು ಕಂಡುಬರುವುದು ಅಪರೂಪ. ಇಂತಹ ಅಪರೂಪದಲ್ಲಿ ಅಪರೂಪವೆನಿಸಿದ ಕೃಷ್ಣದಾಸರು ಮತ್ತು ಅವರ ತಂದೆ ಮಹಿಪತಿರಾಯರು ಪ್ರಮುಖರಾದವರು. ಇವರಿಬ್ಬರ ಸಾಹಿತ್ಯ ಸೊಗಡು, ಅವುಗಳ ಅಂತರ ಸ್ವರೂಪ ಮತ್ತು ಸಂಬಂಧವನ್ನು ಮುಖ್ಯವಾಗಿ ಗುರುತಿಸಲಾಗಿದೆ. ಗುರು ಮತ್ತು ಶಿಷ್ಯನ ಕೀರ್ತನೆಯ ವಿಭಿನ್ನತೆಯನ್ನು ತಂದೆ ಮತ್ತು ಮಗನ ಧಾರ್ಮಿಕ ನಿಲುವನ್ನು ಗುರುತಿಸಲಾಗಿದೆ. ಜೊತೆಗೆ ಅವರ ಸಂಪದ್ಭರಿತ ಸಾಹಿತ್ಯದ ತೌಲನಿಕವಾಗಿ ವಿಶ್ಲೇಷಣೆಯನ್ನು ಈ ಮಹಾಪ್ರಬಂಧದಲ್ಲಿ ಮಾಡಲಾಗಿದೆ.

ಕೃಷ್ಣದಾಸರು ದಾಸಸಾಹಿತ್ಯ ಪರಂಪರೆಯಲ್ಲಿ ಕೆಲವು ಅಂಶಗಳಲ್ಲಿ ಭಿನ್ನರಾಗಿ ಕಾಣಿಸುತ್ತಾರೆ. ದಾಸಶ್ರೇಷ್ಠರಾದ ಪುರಂದರದಾಸರನ್ನು ಮತ್ತು ಕನಕದಾಸರನ್ನು ಇವರು ಯಾವ ಕೀರ್ತನೆಗಳಲ್ಲಿಯೂ ಸ್ತುತಿಸಿಲ್ಲ. ಇವರು ತಮ್ಮದೆಯಾದ ತತ್ವನಿಷ್ಠೆಯನ್ನು ಅಳವಡಿಸಿಕೊಂಡು ಈ ಪರಂಪರೆಯನ್ನು ಮುಂದುವರಿಸಿಕೊಂಡು ಬಂದವರು. ಈ ಎಲ್ಲ ಅಂಶಗಳನ್ನು ಈ ಅಧ್ಯಯನದಲ್ಲಿ ನೋಡಲಾಗಿದೆ. ಅಧ್ಯಯನದ ಒಟ್ಟು ಫಲಿತವನ್ನು ಈ ರೀತಿಯಲ್ಲಿ ಕಲೆಹಾಕಲಾಗಿದೆ.

೧. ಕೃಷ್ಣದಾಸರ ಕೀರ್ತನೆಗಳಲ್ಲಿ ನೆರೆಯ ಮಹಾರಾಷ್ಟ್ರದ ಅನುಭಾವ, ಭಾಗವತ ಮತ್ತು ಅವಧೂತ ಸಂಪ್ರದಾಯಗಳು ಹಾಸುಹೊಕ್ಕಾಗಿವೆ. ಆ ಕಾಲದ ಮುಸ್ಲಿಂರಿಂದ ಪ್ರಚಲಿತವಿದ್ದ ಸೂಫಿ ಸಂಪ್ರದಾಯ, ಕರ್ನಾಟಕದ ವೀರಶೈವ ಶರಣರ ವಚನ ಸಾಹಿತ್ಯ ಇವುಗಳ ಅಪಾರವಾದ ಸಾಹಿತ್ಯಕ ಪರಿಚಯ ಕೃಷ್ಣದಾಸರಲ್ಲಿತ್ತು. ಆದುದರಿಂದ ಇವರ ಅನೇಕ ಕೀರ್ತನೆಗಳಲ್ಲಿ ಎಲ್ಲ ಸಂಪ್ರದಾಯಗಳ ಪಾರಿಭಾಷಿಕ ಶಬ್ದಗಳು ಕಂಡುಬರುತ್ತವೆ. ಸಮನ್ವಯತೆಯ ನುಡಿಗಳು ಇವರ ಕೀರ್ತನೆಯಲ್ಲಿ ಅಡಗಿರುವುದು ಮುಖ್ಯವಾಗಿದೆ.

೨. ಕೃಷ್ಣದಾಸರು ತಮ್ಮ ಕೀರ್ತನೆಗಳಲ್ಲಿ ಧಾರ್ಮಿಕ ತತ್ವಗಳನ್ನು ಹೇಳುವಾಗ ಜನಪದ ಧಾಟಿಯ ಲಯಗಾರಿಕೆಯನ್ನು ಬಳಸಿಕೊಂಡಿರುವಗದು ಕುತೂಹಲಕಾರಿಯಾಗಿದೆ. ಅದರಲ್ಲಿ ಶ್ರೀಹರಿಯ ದಶಾವತಾರದ ವರ್ಣನೆಗಳು ಮತ್ತು ಕಥನಕವನಗಳಲ್ಲಿ ಮುಖ್ಯವಾಗಿ ಈ ಧಾಟಿಯ ತಂತ್ರಗಾರಿಕೆ ಎದ್ದು ಕಾಣುತ್ತದೆ. ಸಾಮಾಜಿಕ ಜನಜೀವನದ ವಿಡಂಬನೆ, ಸಂಸಾರದ ನಿಸ್ಸಾರತೆ, ಆತ್ಮನಿವೇದನೆ, ನವವಿಧಭಕ್ತಿ ಇವರ ರಚನೆಯ ಬಹುಮುಖ್ಯ ಅಂಶಗಳು. ಆಧ್ಯಾತ್ಮಿಕ ಮತ್ತು ಪ್ರಾಪಂಚಿಕ ಬದುಕಿನ ಸಾಮರಸ್ಯವನ್ನು ಪ್ರಸ್ತಾಪಿಸುವಲ್ಲಿ ಜನಪದ ಮಟ್ಟುಗಳ ಧಾಟಿಯನ್ನು ಅನುಕರಿಸಿದ್ದಾರೆ.

೩. ಕೃಷ್ಣದಾಸರ ಕಾಲಘಟ್ಟ ಮತ್ತು ಜೀವನದ ವಿಚಾರದ ಇತಿವೃತ್ತ ಕುರಿತು ಮೊದಲಬಾರಿಗೆ ಶೋಧಿಸಲಾಗಿದೆ. ವಿಜಯಪುರದ ಆದಿಲ್‌ಶಾಹಿಗಳ ಧರ್ಮ ಸಮನ್ವಯತೆ, ರಾಜಕೀಯ ಬೆಳವಣಿಗೆ, ಆ ಕಾಲಘಟ್ಟದ ಸೌಹಾರ್ದತೆಯನ್ನು ಪ್ರಮುಖವಾಗಿ ಗಮನಿಸಲಾಗಿದೆ. ಆದಿಲ್‌ಶಾಹಿಗಳ ಚರಿತ್ರೆ ಪುನರ್ ರಚಿಸುವಲ್ಲಿ ಇವರ ಕೀರ್ತನೆಗಳು ಸಹಾಯಕವಾಗುತ್ತವೆ.

೪. ಕೃಷ್ಣದಾಸರು ಬಹುಭಾಷೆಗಳನ್ನು ಬಲ್ಲವರು. ಕನ್ನಡ, ಮರಾಠಿ, ಉರ್ದು ಭಾಷೆಯ ಜೊತೆಗೆ ಸಂಸ್ಕೃತ ಭಾಷೆಯನ್ನು ಅಗಾಧವಾಗಿ ಅಧ್ಯಯನವನ್ನು ಮಾಡಿದ್ದರು. ಸಂಸ್ಕೃತ ಭಾಷೆಯಲ್ಲಿ ರಚಿತವಾದ ರಾಮಾಯಣ ಕಾವ್ಯವನ್ನು ಆಮೂಲಾಗ್ರವಾಗಿ ಅಭ್ಯಸಿಸಿ ತಮ್ಮ ಖಂಡಕಾವ್ಯಗಳ ಮೂಲಕ ಕನ್ನಡ ಭಾಷೆಯಲ್ಲಿ ತೋರಿಸುವ ಪ್ರಯತ್ನ ಮಾಡಿದ್ದಾರೆ. ಆ ಕಾಲಘಟ್ಟ ಸಮಾಜದ ಜನರ ಮನೋಭಿಲಾಷಿಗಳಿಗೆ ಅವರವರ ಭಾಷೆಯಲ್ಲಿ ಉರ್ದು, ಮರಾಠಿ ಭಾಷೆಯ ಕೀರ್ತನೆಗಳನ್ನು ರಚಿಸಿದ್ದಾರೆ. ದಾಸರು ಬೇರೆ ಬೇರೆ ಸಮುದಾಯದ ಜನರನ್ನು ದಾಸಸಾಹಿತ್ಯದ ಅಧ್ಯಾತ್ಮದ ಕಡೆಗೆ ಸೆಳೆಯಲು ಈ ಭಾಷಾ ತಂತ್ರದ ಪ್ರಯೋಗ ಮಾಡಿರುವುದು ಗುರುತಿಸಲಾಗಿದೆ.

೫. ಕೃಷ್ಣದಾಸರ ಗುರು ಮತ್ತು ತಂದೆಯಾದ ಮಹಿಪತಿರಾಯರು ಯೋಗ ಸಾಧನೆಗೆ ಹೆಚ್ಚಿನ ಒತ್ತನ್ನು ನೀಡಿದರು. ತಮ್ಮ ತಂದೆಗಿಂತಲೂ ಭಿನ್ನವಾಗಿ ಜ್ಞಾನಮಾರ್ಗದ ಏಕಾಗ್ರತೆಯನ್ನು ಪಡೆದುಕೊಂಡವರು. ಇವರಿಬ್ಬರು ಹರಿದಾಸರಲ್ಲಿ ವಿಷಯದ ವೈವಿಧ್ಯತೆ ಅಪಾರವಾಗಿದೆ. ಗುರು ಮತ್ತು ಶಿಷ್ಯ ತಂದೆ ಮತ್ತು ಮಗ ಈ ಎರಡು ವಿಧದಲ್ಲಿ ತೌಲನಿಕವಾಗಿ ಇರ್ವರ ಕೀರ್ತನೆಗಳ ಸಾಮೀಪ್ಯತೆಯನ್ನು ಹಾಗೂ ವಿಭಿನ್ನತೆಯನ್ನು ಗುರುತಿಸಲಾಗಿದೆ.

೬. ಕೃಷ್ಣದಾಸರ ಕೀರ್ತನೆಗಳ ಭಾಷೆ ಸಾಂಪ್ರದಾಯಿಕ ನೆಲೆಯಲ್ಲಿ ಅರಳಿ ವೈಚಾರಿಕತೆಯನ್ನು ಮೂಡಿಸುತ್ತದೆ. ಜನಪದರ ಗ್ರಾಮೀಣ ಭಾಷೆಯ ಶೈಲಿ ಇವರ ಕೀರ್ತನೆಯ ಅಂತಸತ್ವನ್ನು ಹೆಚ್ಚಿಸಿದೆ.

೭. ಕೃಷ್ಣದಾಸರು ಖಂಡಕಾವ್ಯಗಳಲ್ಲಿ ಭಕ್ತ ಶ್ರೇಷ್ಠರಾದ ಭಾಗವತರ ಚರಿತ್ರೆಗಳನ್ನು ರಚಿಸಿದ್ದಾರೆ. ಶ್ರೀಹರಿಯ ವಿವಿಧ ರೂಪಗಳ ಚರಿತ್ರೆಗಳನ್ನು ರಚಿಸುವುದರ ಮೂಲಕ ತಮ್ಮದೆಯಾದ

ಮುದ್ರೆಯನ್ನೊತ್ತಿದ್ದಾರೆ. ಖಂಡಕಾವ್ಯದಲ್ಲಿ ಎಲ್ಲಿಯೂ ಸುತ್ತು ಬಳಸಿಲ್ಲ. ಸಹೃದಯನಿಗೆ ಮನಮುಟ್ಟುವ ಹಾಗೆ ಕಾವ್ಯ ಸೌಂದರ್ಯವಿದೆ. ಇವರ ಕಾವ್ಯವು ಅನುಭಾವದ ಹಿರಿದಾದ ಆಧ್ಯಾತ್ಮಿಕ ನೆಲೆಯನ್ನು ಅವುಗಳ ವಿಸ್ತಾರತೆಯನ್ನು ವಿಶ್ಲೇಷಿಸುತ್ತವೆ. ಇವರ ಖಂಡಕಾವ್ಯ ರಚನೆಯ ವೈಶಿಷ್ಟ್ಯತೆ ಕುರಿತು ಮೊದಲಬಾರಿಗೆ ಅಧ್ಯಯನದಲ್ಲಿ ಚರ್ಚೆಯನ್ನು ಮಾಡಲಾಗಿದೆ.

೮. ಕೃಷ್ಣದಾಸರ ಕೀರ್ತನೆಗಳು ಅನುಭಾವಗಳ ಅಭಿವ್ಯಕ್ತಿಗೆ ಜೀವಂತಿಕೆಯನ್ನು ತುಂಬಿವೆ. ಇವರ ಕಾವ್ಯಗಳಲ್ಲಿಯ ಪಾತ್ರಗಳು, ಸನ್ನಿವೇಶಗಳು, ಪರಿಣಾಮಕಾರಿಯಾಗಿ ರಚನೆಗೊಂಡಿವೆ. ಕಾವ್ಯಪ್ರತಿಮೆ, ಕಾವ್ಯಸೌಂದರ್ಯ, ಧ್ವನಿಶಕ್ತಿ ಮುಂತಾದವುಗಳು ಇವರ ಕೀರ್ತನೆಯ ವೈಚಾರಿಕತೆಯಲ್ಲಿ ಕಂಡುಬರುತ್ತದೆ. ವಿಜಯಪುರದ ಆದಿಲ್‌ಶಾಹಿಗಳ ಕಾಲಘಟ್ಟದ ಸಾಮಾಜಿಕ, ಸಾಂಸ್ಕೃತಿಕ ಪಲ್ಲಟಗಳು ಭಾಷಿಕವಾಗಿ ಕೀರ್ತನೆಗಳಲ್ಲಿ ಅಭಿವ್ಯಕ್ತಿಗೊಂಡಿವೆ. ಸಮತಾವಾದ, ಮಾನವೀಯತೆ ನೆಲೆಯ ವಸ್ತುಸ್ಥಿತಿಯ ಅರಿವು ಇಲ್ಲಿಯ ಕೀರ್ತನೆಗಳಲ್ಲಿ ಧ್ವನಿಸುತ್ತವೆ.

೯. ಕೃಷ್ಣದಾಸರ ಕೀರ್ತನೆಗಳನ್ನು ಇಲ್ಲಿಯವರೆಗೆ ಅರ್ಥೈಸಿಕೊಂಡಿದ್ದು, ದೈವದ ಲೀಲಾವಿಲಾಸಗಳ ಅನುಸಂಧಾನದ ನಿರೂಪಣೆಯಾಗಿ ನೋಡಲಾಗಿದೆ. ಆದರೆ ಭಕ್ತನ ಆತ್ಮನಿವೇದನೆ, ಸಮಾಜವಿಮರ್ಶೆ ಮುಂತಾದ ಆಯಾಮಗಳಲ್ಲಿ ವಿಶ್ಲೇಷಿಸುವ ಪ್ರಯತ್ನವನ್ನು ಈ ಮಹಾಪ್ರಬಂಧದಲ್ಲಿ ಮಾಡಲಾಗಿದೆ.

ಒಟ್ಟಿನಲ್ಲಿ, ಕೃಷ್ಣದಾಸರ ಕೀರ್ತನೆಗಳು ಜನಸಾಮಾನ್ಯರ ಮನಸ್ಸಿನ ಮೇಲೆ ಬಹಳಷ್ಟು ಪ್ರಭಾವ ಬೀರಿವೆ. ದಾಸರು ತಮ್ಮ ಬದುಕಿನ ಹಲವು ಸಂದರ್ಭಗಳಲ್ಲಿ ಇಲ್ಲಿಯ ರಚನೆಗಳನ್ನು ಉದ್ಧರಿಸಿರುವುದು ಕಂಡುಬರುತ್ತದೆ. ಇವರ ರಚನೆಗಳ ಧಾಟಿ ಮತ್ತು ಸ್ವರೂಪ ಈ ಹಿನ್ನೆಲೆಯಲ್ಲಿ ಜನಸಾಮಾನ್ಯರಿಗೆ ಹತ್ತಿರವಾಗಿವೆ. ಕೃಷ್ಣದಾಸರ ಕೃತಿಗಳು ಶ್ರೀಹರಿಯನ್ನು ಕುರಿತು ಸಲ್ಲಿಸಿದ ಸಮರ್ಪಣಾ ಮನೋಭಾವದ ಆಶಯದ ಹಿನ್ನೆಲೆಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಭಕ್ತಿ ಕಾಣದ ಹೃದಯಲ್ಲಿ ಅಧ್ಯಾತ್ಮಿಕ ಭಕ್ತಿಯ ಜ್ಯೋತಿಯನ್ನು ಹಚ್ಚಿದವರು ಕೃಷ್ಣದಾಸರು.

ಲೌಕಿಕ ಪ್ರಪಂಚದ ಜೀವನದ ಅನಿಷ್ಟವನ್ನು ತಿದ್ದುವ ಆಶಯ ವಿನ್ಯಾಸವು ಇವರ ಕೀರ್ತನೆಗಳಲ್ಲಿ ಅಧಿಕವಾಗಿದೆ. ಒಂದು ಕೀರ್ತನೆಯಲ್ಲಿ ಪ್ರತಿಪಾದಿತವಾಗುವ ವಿಚಾರ ಎಷ್ಟು ಮುಖ್ಯವೋ, ಆ ವಿಚಾರವನ್ನು ಅನನ್ಯತೆಯಲ್ಲಿ ಹೇಳುವ ರಚನಾ ಪ್ರತಿಭೆಯೂ ಅಷ್ಟೇ ಮುಖ್ಯವಾಗಿದೆ. ಅನುಭವದ ವಸ್ತುವಿನ ಪ್ರತಿರೂಪ ಕೃಷ್ಣದಾಸರು ಬಳಸಿದ ಭಾಷೆಯಲ್ಲಿ ಪಾಕಗೊಂಡಿರುತ್ತದೆ. ಈ ಎಲ್ಲ ದೃಷ್ಟಿಕೋನಗಳಿಂದಾಗಿ ಕೃಷ್ಣದಾಸರು ದಾಸಸಾಹಿತ್ಯ ಪರಂಪರೆಯಲ್ಲಿ ಮಾತ್ರವಲ್ಲದೆ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟರಾಗಿ ಕಾಣುತ್ತಾರೆ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ.

ಅನುಬಂಧಗಳು

ಅನುಬಂಧ-೧

ಉರ್ದು ಭಾಷೆಯ ಅಪ್ರಕಟಿತ ಕೀರ್ತನೆ

ಅಲಖ ನಿರಂಜನ

ಅಲಖ ನಿರಂಜನ ಪರಂಜ್ಯೋತಿ। ಬಾಬಾ।
ವ್ಯಾಪಕ ಜೋತ್ರಿಭುವನಜೀ॥
ಜಾಕಿ ಚರಣಕಿ ಸೇವಕ ಬ್ರಹ್ಮಾ।
ಶಂಕರ ಕರೆ (ಕಿಯಾ) ನಿಜ ಧ್ಯಾನಜೀ॥೧॥

ಸೋದತ್ತ ದಿಗಂಬರು ಸಾಯಿ (ಸಾಯಾ) ಹಮಾರಾ। ಬಾಬಾ।
ಸ್ಮರನಕರು ದೀನಾನಾಥಕಿ॥
ಬ್ರಹ್ಮ ಭುವನಕಿ (ಕೆ) ಹಮ್ ಪರದೇಶಿ।
ಗೋರಖ ಪಂಥ ಕಿ (ಕಾ) ಜೋಗಿ ॥೨॥

ಮಾತಾ ಪಿತಾ ಗುರು ಬಂಧು ಹಮಾರ (ಹಮಾರೆ) । ಬಾಬಾ।
ಬಾಬಾ ಮಹಿಪತಿ ಪ್ರಭುಜೀ॥
ಗುರು ವಚನ ಬಿನ ಔರ ನ ಜಾನೆ।
ಮಂತರ ತಂತರ ಪೂಜಾಜೀ ॥೩॥

ಗುರುನೇ ಬೋಧ ಪ್ಯಾಲಾ ಮುಝೆ ಪಿಲಾಯಾ। ಬಾಬಾ।
ಮನ ಮಗನ್ಮೇರಾ (ಮಗನ್ ಮೇರಾ) ಹುವಾಜೀ ॥
ಗುರು ಜ್ಞಾನಕೀ ಕಂಥಾ ಬನಾಯಿ।
ಹಾಥೋಮೆ ಭಕ್ತಿ ಝೋಳಗಿ ॥೪॥

ಗುರು ವಚನಕಾ ಮುದ್ರಾ ಹಮಾರಾ। ಬಾಬಾ।
ಘನ ಕೃಪಾಕರ ಪಾತ್ರಜೀ॥
ಸಾಧು ಸಂಘಕೀ ಭಿಕ್ಷಾಲೋವೊ।
ಇಹಪರಕಿ (ಯಹಾಂಪರಕಿ) ನಾಹೀ (ನಹೀ) ಆಶಾಜೀ ॥೫॥

ಗುರು ದರ್ಬಾರಮೆ ತಕ್ಕಾ (ತಾಕಾ) ಹಮಾರಾ।ಬಾಬಾ।
ಜಹಾಂಬಸೆ ಸಾಧು ಸಂತಜೀ॥

ದಿವಾನಾ ನಂದನ ಮೈತೊ ಗುರುಕಾ
ಮನಜೋಗಿ ಹುವಾ ಮೆ (ಮ್ಯೆ) ರಾಜೀ ॥೬

ಕೃಪೆ: ಶ್ರೀರಾಮಯ್ಯ ಗುರುಪ್ಪಯ್ಯ ಹರಿದಾಸ ಸಾ॥ಕಾಖಂಡಕಿ ಇವರ ಬಳಿ ಇರುವ ಕೈಬರಹದ ಹಸ್ತಪ್ರತಿಯಿಂದ ಪಡೆದುಕೊಳ್ಳಲಾಗಿದೆ.

ಅನುಬಂಧ-೨

ಕೃಷ್ಣದಾಸರ ವಂಶವೃಕ್ಷ

ಶ್ರೀಕೃಷ್ಣದಾಸರ ಮನೆತನದ ವಿವರಗಳು

ಕುಲದೇವರು	:	ಶ್ರೀಕ್ಷೇತ್ರ ತಿರುಪತಿ ಶ್ರೀವೆಂಕಟರಮಣ
ಕುಲದೇವತೆ	:	ಶ್ರೀಕ್ಷೇತ್ರ ಕೊಲ್ಹಾಪುರ ಶ್ರೀಮಹಾಲಕ್ಷ್ಮೀ
ಮನೆತನ ವಿವರ	:	ಋಗ್ವೇದಿಯ ಅಶ್ವಲಾಯನ ಸೂತ್ರ ಶಾಖಲ್ಯ ಶಾಖೆಯ ಮೌನಭಾರ್ಗವ ಗೋತ್ರ.
ಸಂಪ್ರದಾಯ	:	ದ್ವೈತ ಮತದ ವೈಷ್ಣವ ಸಂಪ್ರದಾಯ
ಮಠ	:	ಶ್ರೀಮದುತ್ತರಾದಿ ಮಠ
ಶ್ರೀಮಹಿಪತಿರಾಯರ ಸ್ವರೂಪೋದ್ಧಾರಕ ಗುರುಗಳು	:	ಶ್ರೀರುದ್ರಾಂಶ ಸಂಭೂತರಾದ ಸಾರವಾಡದ ಶ್ರೀಭಾಸ್ಕರ ಸ್ವಾಮಿಗಳು

ಶ್ರೀಕೃಷ್ಣದಾಸರ ವಂಶವೃಕ್ಷ

ಶ್ರೀತಿರುಮಲರಾಯರು(ಮೂಲಪುರುಷರು)

ಶ್ರೀಕೋನೇರಿರಾಯರು

ಶ್ರೀಮಹಿಪತಿರಾಯರು

ಶ್ರೀ ದೇವರಾಯರು (ಜಾಲವಾದಿ ದೇಸಾಯರ ಮೂಲ ಪುರುಷರು)


ಶ್ರೀಕೃಷ್ಣದಾಸರು (ಕಾಖಂಡಕಿ ಹರಿದಾಸರ ಮೂಲ ಪುರುಷರು)

ಶ್ರೀದೇವರಾಯರ ಹಾಗೂ ಕೃಷ್ಣರಾಯರ ವಂಶಾವಳಿಯನ್ನು
ಮುಂದಿನ ಪುಟದಲ್ಲಿ ಕೊಡಲಾಗಿದೆ.


ಕೃಪೆ

ವೈ.ನಾ. ನರಸಪ್ಪಯ್ಯ ವೆಂಕಪ್ಪಯ್ಯ ಹರಿದಾಸ
ಇವರ ಹಸ್ತಪ್ರತಿಯಿಂದ ಮುಂದುವರಿಸಲಾಗಿದೆ.


ಶ್ರೀದೇವರಾಯರ ಮೊದಲನೇ ಪುತ್ರ ಧರ್ಮರಾಯರ ವಂಶಾವಳಿ




ಶ್ರೀದೇವರಾಯರ ಎರಡನೇ ಪುತ್ರ ಧರ್ಮರಾಯರ ವಂಶಾವಳಿ



ಶ್ರೀದೇವರಾಯರ ಮೂರನೇ ಪುತ್ರ ಮಧ್ವರಾಯರ ವಂಶಾವಳಿ



ಶ್ರೀದೇವರಾಯರ ನಾಲ್ಕನೆಯ ಪುತ್ರ ವೆಂಕಟರಾಯರ ವಂಶಾವಳಿ




ಶ್ರೀ ಮಹಿಪತಿರಾಯರ ಎರಡನೆಯ ಪುತ್ರ ಕೃಷ್ಣದಾಸರ ವಂಶಾವಳಿ

ಶ್ರೀಕೃಷ್ಣದಾಸರು(ಕಾಖಂಡಕಿ ಹರಿದಾಸರ ಮೂಲ ಪುರುಷರು)


ರಾಮಪ್ಪಯ್ಯ	ಯಾದಪ್ಪಯ್ಯ	ಗುರುಪ್ಪಯ್ಯ	ಯತ್ತೆಪ್ಪಯ್ಯ	ಶ್ರೀಪತಯ್ಯ	ಗಿರೆಪ್ಪಯ್ಯ	ದೇವಪ್ಪಯ್ಯ

ಇವರ ವಂಶಾವಳಿಯನ್ನು ಮುಂದಿನ ಪುಟದಲ್ಲಿ ಕೊಡಲಾಗಿದೆ.


ಶ್ರೀ ಕೃಷ್ಣದಾಸರ ಮೊದಲನೆಯ ಪುತ್ರ ರಾಮಪ್ಪನವರ ವಂಶಾವಳಿ




ಶ್ರೀಕೃಷ್ಣದಾಸರ ಎರಡನೆಯ ಪುತ್ರ ಯಾದಪ್ಪಯ್ಯನವರ ವಂಶಾವಳಿ




ಶ್ರೀ ಕೃಷ್ಣದಾಸರ ಮೂರನೆಯ ಪುತ್ರ ಗುರುಪ್ಪಯ್ಯನವರ ವಂಶಾವಳಿ




ಶ್ರೀ ಕೃಷ್ಣದಾಸರ ನಾಲ್ಕನೆಯ ಪುತ್ರ ಯತ್ತೆಪ್ಪಯ್ಯನವರ ವಂಶಾವಳಿ




ಶ್ರೀಕೃಷ್ಣದಾಸರ ಐದನೆಯ ಪುತ್ರ ಶ್ರೀಪತಯ್ಯನವರ ವಂಶಾವಳಿ



ಶ್ರೀಕೃಷ್ಣದಾಸರ ಆರನೆಯ ಪುತ್ರ ಗಿರೆಪ್ಪಯ್ಯನವರ ವಂಶಾವಳಿ



ಶ್ರೀಕೃಷ್ಣದಾಸರ ಏಳನೆಯ ಪುತ್ರ ದೇವಪ್ಪಯ್ಯನವರ ವಂಶಾವಳಿ



ಅನುಬಂಧ-೩

ಆಕರ ಗ್ರಂಥಗಳು

೧. ಅಂಗಡಿ ಎಸ್.ಎಸ್., ೨೦೦೫, ದಾಸಸಾಹಿತ್ಯ ಶಬ್ದಶಿಲ್ಪ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಅನಸೂಯ ದೇವಿ, ೨೦೧೦, ವ್ಯಾಸಕೂಟ ಮತ್ತು ದಾಸಕೂಟ, ಸೃಷ್ಟಿ ಪಬ್ಲಿಕೇಷನ್ಸ್, ವಿಜಯನಗರ, ಬೆಂಗಳೂರು.

೩. ಅಮರೇಶ ನುಗಡೋಣಿ(ಸಂ) ೨೦೧೧, ಪುರಂದರ ಸಾಹಿತ್ಯ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಉಷಾರಾಣಿ, ಹೆಳವನಕಟ್ಟೆ ಗಿರಿಯಮ್ಮನ ಜೀವನ ಮತ್ತು ಕೃತಿಗಳು, ೨೦೧೦ ಪಿಎಚ್.ಡಿ. ಅಪ್ರಕಟಿತ ಪ್ರಬಂಧ, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ಕಾವ್ಯಪ್ರೇಮಿ(ಸಂ), ೨೦೦೦, ಮಹಿಪತಿದಾಸರ ಹಾಡುಗಳು, ಸಮಾಜ ಪುಸ್ತಕಾಲಯ, ಧಾರವಾಡ.

೬. ಕುಲಕರ್ಣಿ ಕೃಷ್ಣ ಕೊಲ್ಹಾರ, ೨೦೦೨, ಕಾಖಂಡಕಿ ಶ್ರೀಮಹಿಪತಿರಾಯರು (ಚರಿತ್ರೆ), ಅಧ್ಯಕ್ಷರು ಶ್ರೀಮಹಿಪತಿದಾಸ ಸಾಹಿತ್ಯ ಪ್ರಚಾರ ಸಮಿತಿ, ಕಾಖಂಡಕಿ(ತಾಲ್ಲೂಕು ಜಿಲ್ಲೆ, ಬಿಜಾಪೂರ)

೭. ಕುಲಕರ್ಣಿ ಕೃಷ್ಣ ಕೊಲ್ಹಾರ, ೧೯೯೬, ಮಹಿಪತಿದಾಸ, ಕರ್ನಾಟಕ ಸಾಹಿತ್ಯ ಅಕಾಡೆಮಿ ನೃಪತುಂಗ ರಸ್ತೆ, ಬೆಂಗಳೂರು.

೮. ಕುಲಕರ್ಣಿ ಕೃಷ್ಣ ಕೊಲ್ಹಾರ ೨೦೦೩(ಸಂ), ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು ಸಮಗ್ರ ದಾಸಸಾಹಿತ್ಯ ಸಂಪುಟ-೧೧, ಭಾಗ-೧ ಮತ್ತು ಭಾಗ-೨, ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೯. ಕುಲಕರ್ಣಿ ಕೃಷ್ಣ ಕೊಲ್ಹಾರ, (ಸಂ), ೨೦೦೩ ಕಾಖಂಡಕಿ ಶ್ರೀಮಹಿಪತಿರಾಯರ ಕೀರ್ತನೆಗಳು ಸಮಗ್ರ ದಾಸಸಾಹಿತ್ಯ ಸಂಪುಟ-೬, ಭಾಗ-೧ ಮತ್ತು ಭಾಗ-೧೨, ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೦. ಕುಲಕರ್ಣಿ ಕೃಷ್ಣ ಕೊಲ್ಹಾರ, ೨೦೦೬, ಮಾಧ್ವಮತಗಳು, ಭಾಗ್ಯಲಕ್ಷ್ಮೀ ಪ್ರಕಾಶನ, ಬೆಂಗಳೂರು.

೧೧. ಕೇಶವದಾಸರು, ೨೦೦೫, ಬೇಲೂರು ಶ್ರೀಹರಿದಾಸ ಸಾಹಿತ್ಯ ಒಂದು: ಅಧ್ಯಯನ, ಭಾರತಿ ಪ್ರಕಾಶನ ಸರಸ್ವತಿಪುರಂ, ಮೈಸೂರು.

೧೨. ಗೀತಾಚಾರ್ಯ ನಾ, ೨೦೦೭, ಶ್ರೀವೈಷ್ಣವ ಹರಿದಾಸ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು.

೧೩. ಗೀತಾಚಾರ್ಯ ನಾ, ೨೦೦೯, ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಎಂ.ವಿ.ಸೀ. ಸಂಶೋಧನ ಕೇಂದ್ರ, ಬೆಂಗಳೂರು.

೧೪. ಗೀತಾಚಾರ್ಯ ನಾ, ೨೦೦೮, ಹರಿದಾಸ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫. ಜಯಸಿಂಹ, ೨೦೦೮, ಕನ್ನಡ ನಾಡಿನ ಹರಿದಾಸ ಸಂಪದ, ವಸಂತ ಪ್ರಕಾಶನ, ಜಯನಗರ ಬೆಂಗಳೂರು.

೧೬. ತಿಪ್ಪೇಸ್ವಾಮಿ ಜಿ.ಆರ್. ದಾಸಸಾಹಿತ್ಯ ಮತ್ತು ಜಾನಪದ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು-೧೯೯೭

೧೭. ದೇವಪ್ಪಯ್ಯ ಕಾಖಂಡಕಿ ೧೯೮೭(ಸಂ) ಶ್ರೀಗುರು ಮಹಿಪತಿ ಸುತ ಶ್ರೀಕೃಷ್ಣರಾಯರಿಂದ ರಚಿತವಾದ; ಸುಂದರಕಾಂಡ, ಪ್ರಕಟನೆ-೧, ಶ್ರೀಗುರುಮಹಿಪತಿದಾಸ ಸಾಹಿತ್ಯ ಪ್ರಚಾರ ಸಮಿತಿ, ಕಾಖಂಡಕಿ.

೧೮. ದೇವಪ್ಪಯ್ಯ ಕಾಖಂಡಕಿ ೧೯೮೮(ಸಂ) ಶ್ರೀಗುರು ಮಹಿಪತಿಸುತ ಶ್ರೀಕೃಷ್ಣರಾಯರಿಂದ ವಿರಚಿತವಾದ, ಕನ್ನಡ ಮರಾಠಿ ಪದಗಳ ಸಂಗ್ರಹ, ಪ್ರಕಟನೆ-೨, ಶ್ರೀಗುರು ಮಹಿಪತಿದಾಸ ಸಾಹಿತ್ಯ ಪ್ರಚಾರ ಸಮಿತಿ, ಕಾಖಂಡಕಿ.

೧೯. ದೇವಪ್ಪಯ್ಯ ಕಾಖಂಡಕಿ ೧೯೮೮(ಸಂ) ಶ್ರೀಗುರು ಮಹಿಪತಿಸುತ ಶ್ರೀಗುರುಕೃಷ್ಣ ರಾಯರಿಂದ ವಿರಚಿತ, ಕನ್ನಡ ಹಾಗೂ ಮರಾಠಿ ಪದಗಳ ಸಂಗ್ರಹ, ಪ್ರಕಟನೆ-೩, ಶ್ರೀಗುರು ಮಹಿಪತಿದಾಸ ಸಾಹಿತ್ಯ ಪ್ರಚಾರ ಸಮಿತಿ, ಕಾಖಂಡಕಿ.

೨೦. ದೇವಪ್ಪಯ್ಯ ಕಾಖಂಡಕಿ ೧೯೮೮(ಸಂ) ಶ್ರೀಗುರು ಮಹಿಪತಿಸುತ ಶ್ರೀಕೃಷ್ಣರಾಯರಿಂದ ರಚಿತವಾದ; ಶ್ರೀಕೃಷ್ಣಚರಿತಾಮೃತ ಕಥಾ, ಪ್ರಕಟನೆ-೪, ಶ್ರೀಗುರುಮಹಿಪತಿದಾಸ ಸಾಹಿತ್ಯ ಪ್ರಚಾರ ಸಮಿತಿ, ಕಾಖಂಡಕಿ.

೨೧. ದೇವಪ್ಪಯ್ಯ ಕಾಖಂಡಕಿ ೧೯೮೯(ಸಂ) ಶ್ರೀಗುರು ಮಹಿಪತಿಸುತ ಶ್ರೀಕೃಷ್ಣರಾಯ ಕಾಖಂಡಕಿ ಇವರಿಂದ ರಚಿತವಾದ; ಅಹಂಕಾರ ಖಂಡನೆ ಹಾಗೂ ಮನಸ್ಸಿಗೆ ಉಪದೇಶ ಪರ ಪದಗಳು ಪ್ರಕಟನೆ-೫, ಶ್ರೀಗುರು ಮಹಿಪತಿದಾಸ ಸಾಹಿತ್ಯ ಪ್ರಚಾರ ಸಮಿತಿ, ಕಾಖಂಡಕಿ.

೨೨ ದೇವಪ್ಪಯ್ಯ ಕಾಖಂಡಕಿ ೧೯೮೯(ಸಂ), ಶ್ರೀಗುರು ಮಹಿಪತಿಸುತ ಶ್ರೀಕೃಷ್ಣರಾಯರಿಂದ ವಿರಚಿತವಾದ; ಹರಿಪಾದ ಮಹಿಮಾ, ಸತ್ಸಂಗ ಪದಗಳು ಹಾಗೂ ಆನಂದ ಲಹರಿ, ಪ್ರಕಟನೆ-೬, ಶ್ರೀಗುರು ಮಹಿಪತಿದಾಸ ಸಾಹಿತ್ಯ ಪ್ರಚಾರ ಸಮಿತಿ, ಕಾಖಂಡಕಿ.

೨೩. ದೇವಪ್ಪಯ್ಯ ಕಾಖಂಡಕಿ ೧೯೯೦(ಸಂ), ಶ್ರೀಗುರು ಮಹಿಪತಿಸುತ ಶ್ರೀಕೃಷ್ಣರಾಯರಿಂದ ವಿರಚಿತ, ಭಾಗವತರ ಚರಿತ್ರೆಗಳು, ಪ್ರಕಟನೆ–೭, ಶ್ರೀಗುರು ಮಹಿಪತಿದಾಸ ಸಾಹಿತ್ಯ ಪ್ರಚಾರ ಸಮಿತಿ, ಕಾಖಂಡಕಿ.

೨೪. ದೇವಪ್ಪಯ್ಯ ಕಾಖಂಡಕಿ ೧೯೯೦(ಸಂ), ಶ್ರೀಗುರು ಮಹಿಪತಿಸುತ ಶ್ರೀಕೃಷ್ಣರಾಯರಿಂದ ವಿರಚಿತ; ವಿರಹ ಭಿನ್ನಹ ಅರ್ಥಬೆಡಗಿನ ಹಾಗೂ ಇತರ ಪದಗಳು ಪ್ರಕಟನೆ–೮, ಶ್ರೀಗುರುಮಹಿಪತಿದಾಸ ಸಾಹಿತ್ಯ ಪ್ರಚಾರ ಸಮಿತಿ, ಕಾಖಂಡಕಿ.

೨೫. ದೇವಪ್ಪಯ್ಯ ಕಾಖಂಡಕಿ ೧೯೯೨(ಸಂ), ಶ್ರೀಗುರು ಮಹಿಪತಿಸುತ ಶ್ರೀಕೃಷ್ಣರಾಯರಿಂದ ವಿರಚಿತ; ಕನ್ನಡ ಮರಾಠಿ ದೇವತಾಸ್ತೋತ್ರ ಪದಗಳ ಸಂಗ್ರಹ, ಪ್ರಕಟನೆ–೯, ಶ್ರೀಗುರು ಮಹಿಪತಿದಾಸ ಸಾಹಿತ್ಯ ಪ್ರಚಾರ ಸಮಿತಿ, ಕಾಖಂಡಕಿ.

೨೬. ದೇವಪ್ಪಯ್ಯ ಕಾಖಂಡಕಿ ೧೯೯೭(ಸಂ), ಶ್ರೀಗುರು ಮಹಿಪತಿಸುತ ಶ್ರೀಕೃಷ್ಣರಾಯರಿಂದ ವಿರಚಿತ; ಶ್ರೀಭಾವಾರ್ಥ ಸಪ್ತಕಾಂಡ ರಾಮಾಯಣ, ಪ್ರಕಟನೆ–೧೦, ಶ್ರೀಗುರು ಮಹಿಪತಿದಾಸ ಸಾಹಿತ್ಯ ಪ್ರಚಾರ ಸಮಿತಿ, ಕಾಖಂಡಕಿ.

೨೭. ನಗುವನಹಳ್ಳಿ ಪಿ ರತ್ನ, ೧೯೯೩, ಹೆಳವನಕಟ್ಟೆ ಗಿರಿಯಮ್ಮ, ಪ್ರಸಾರಾಂಗ ಮಾನಸ ಗಂಗೋತ್ರಿ, ಮೈಸೂರು.

೨೮. ನದಾಫ್ ಹಜರತ್‌ಸಾಬ್‌ಹುಂ, ೨೦೦೭, ಕನಕದಾಸರ ಕೃತಿಗಳು:ಜಾನಪದೀಯ ಅಧ್ಯಯನ, ಕೆ.ಎಸ್.ಆರ್.ಟಿ.ಸಿ. ಬಡಾವಣೆ, ಹನುಮಂತನಗರ ಬನ್ನಿ ಮಂಟಪ, ಮೈಸೂರು.

೨೯. ನಾಗರಾಜಾಚಾರ್ಯ, ೨೦೧೨, ಹ.ರಾ.ದಾಸಸಾಹಿತ್ಯ ಸಾಗರ, ಶ್ರೀಹರಿದಾಸ ಸಂಘ ನಂ. ೨೨೬ ಶ್ರೀವಿನಾಯಕ ನಗರ, ದೇವಸಂದ್ರ ಕೃಷ್ಣರಾಜಪುರ, ಬೆಂಗಳೂರು.

೩೦. ನಾಗರಹಳ್ಳಿ ಸುಪ್ರಿಯಾ, ೨೦೧೦, ಪುರಂದರದಾಸರ ಪ್ರತಿಮಾಲೋಕ, ಪಿ.ಎಚ್‌ಡಿ. ಅಪ್ರಕಟಿತ ಪ್ರಬಂಧ, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೧. ನಾಗರತ್ನ ಟಿ.ಎನ್, ೨೦೧೦, ಹರಿದಾಸ ಭಕ್ತಿಸ್ವರೂಪ, ಶ್ರೀಸುಶಮೀಂದ್ರ ಸೇವಾ ಪ್ರತಿಷ್ಠಾನ ನಂಜನಗೂಡು.

೩೨. ನಾಗರತ್ನ ಟಿ.ಎನ್, ೨೦೧೦, ಕನ್ನಡ ಕೀರ್ತನೆ: ಸಾಹಿತ್ಯ ಸಂಗೀತ, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕ.ರಾ.ಮು.ವಿ., ಮಾನಸಗಂಗೋತ್ರಿ, ಮೈಸೂರು.

೩೩. ನಾವಡ ಎ.ವಿ., ೨೦೦೫, ವಾದಿರಾಜರ ಶ್ರೀಕೃಷ್ಣಬಾಲಲೀಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೪. ಪದ್ಮ ಟಿ.ಎಸ್, ೧೯೯೮, ಶ್ರೀತ್ಯಾಗರಾಜರ ಕೃತಿಗಳಲ್ಲಿ ಸಂಗೀತ ಮತ್ತು ಭಕ್ತಿ, ಸುವಿದ್ಯಾ ಪ್ರಕಾಶನ, ಒಂದನೇ ಅಡ್ಡರಸ್ತೆ, ರಾಮಕೃಷ್ಣ ಬಡಾವಣೆ, ಕೆಂಪೇಗೌಡ ನಗರ, ಬೆಂಗಳೂರು.

೩೫. ಮಾನಕರಿ ಶ್ರೀನಿವಾಸಾಚಾರ್ಯ ೨೦೦೫, ಹರಿದಾಸ ಸಾಹಿತ್ಯ ಶ್ರೀಮದ್ಭಾಗವತ ಋಣ ಮತ್ತು ವೃದ್ಧಿ, ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ್ ಶ್ರೀರಾಘವೇಂದ್ರ ಸ್ವಾಮಿಗಳವರ ಮಠ, ಮಂತ್ರಾಲಯ(ಆಂಧ್ರಪ್ರದೇಶ).

೩೬. ಮುರಳೀಧರ ಎಚ್.ಎನ್, ೨೦೧೦, ಈ ಪರಿಯ ಸೊಬಗು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೭. ರಾನಡೆ ಆರ್.ಡಿ, (ಮೂಲ) ದೇಶಪಾಂಡೆ ಎಂ.ಎಸ್, (ಕನ್ನಡ ಅನುವಾದಕರು) ೨೦೧೦, ಕನ್ನಡ ಸಂತರ ಪರಮಾರ್ಥಪಥ, ಧರ್ಮದರ್ಶನಗಳ ತೌಲನಿಕ ಅಧ್ಯಯನ ಪೀಠ, ಶ್ರೀಗುರುದೇವ ಡಾ.ಆರ್.ಡಿ.ರಾನಡೆ ಮಂದಿರ ಹಿಂದವಾಡಿ, ಬೆಳಗಾವಿ.

೩೮. ರಾಮಶೇಷನ್ ಎನ್.ಕೆ, ೧೯೯೬, ವಿಜಯದಾಸರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.

೩೯. ಲಕ್ಷ್ಮಣ್ ತೆಲಗಾವಿ, ೨೦೦೯, ವಿಜಯನಗರ ಕಾಲದ ರಾಮಾನುಜಕೂಟಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೦. ಲೋಕೂರು ಹಯವದನ ಗುಂಡೇರಾವ, ೨೦೦೮, ಹತ್ತು ಹಿರಿಯ ಹರಿದಾಸರು, ಸರಸ್ವತಿ ಪ್ರಕಾಶನ, ಶೇರಿ ಬೀದಿ, ಬೆಳಗಾವಿ.

೪೧. ವಸಂತ ಕುಷ್ಟಗಿ, ೨೦೦೨, ವಿಜಯನಗರ ಸಾಮ್ರಾಜ್ಯದ ಪತನಾನಂತರದ ಹರಿದಾಸ ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೨. ವೆಂಕಟೇಶ್ ಜಿ, ೨೦೧೦, ದಾಸಸಾಹಿತ್ಯ ಕೋಶ, ಪ್ರಿಸಮ್ ಬುಕ್ಸ್ ಪ್ರೈ. ಲಿ. ಬೆಂಗಳೂರು.

೪೩. ಶೇಷಗಿರಿರಾವ್ ಎಲ್.ಎಸ್., ೨೦೧೦, ಕಿರಿಯರ ಭಾಗವತ, ವಸಂತ ಪ್ರಕಾಶನ, ನಂ. ೩೬೦, ೧೦ನೇ ಬಿ, ಮುಖ್ಯರಸ್ತೆ, ೩ನೇ ಬ್ಲಾಕ್ ಜಯನಗರ, ಬೆಂಗಳೂರು.

೪೪. ಶ್ರೀಧರ ಪಿಸ್ಸೆ, ೨೦೦೬, ಮಧ್ಯಕಾಲೀನ ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಪರಿಸರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೫. ಶ್ರೀಧರ ಪಿಸ್ಸೆ, ೨೦೦೮, ಕನ್ನಡ ದಾಸಸಾಹಿತ್ಯ ಮತ್ತು ಸಾಂಸ್ಕೃತಿಕ ಪಲ್ಲಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೪೬. ಶ್ರೀವತ್ಸ, ದಾಸ ಶರಣ ಸಾಹಿತ್ಯದಲ್ಲಿ ವೈದ್ಯಕೀಯ ದರ್ಶನ, ೨೦೧೧, ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

೪೭. ಸಬರದ ಬಸವರಾಜ, ೨೦೦೩, ಶರಣರ ದಾಸರ ಸಾಹಿತ್ಯ ರೂಪಗಳು, ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬುರ್ಗಾ.

೪೮. ಸಿದ್ದನಗೌಡ ಪಾಟೀಲ(ಸಂ), ಹೊಸತು(ಮಾಸಪತ್ರಿಕೆ) ನವಕರ್ನಾಟಕ ಪ್ರಕಾಶನ, ಬೆಂಗಳೂರು, ಮೇ ೨೦೧೫.

೪೯. ಸೀತಾರಾಮಯ್ಯ ಎಂ.ವಿ, ೧೯೮೮, ಉತ್ತರೋತ್ತರಕಾಲೀನ ಹರಿದಾಸರು ಮತ್ತು ಅನುಭಾವ ಕವಿಗಳು, ರಾಘವ ಪ್ರಕಾಶನ, ಬೆಂಗಳೂರು.

೫೦. ಸೀತಾರಾಮಯ್ಯ ಎಂ.ವಿ. ೨೦೧೨, ವೆಂಕಟಸುಬ್ಬಯ್ಯ ಜಿ.(ಸಂ), ದಾಸಸಾಹಿತ್ಯ, ಸಪ್ನ ಬುಕ್ ಹೌಸ್, ೩ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು.

೫೧. ಸುನಂದಮ್ಮ ಆರ್, ೧೯೯೪, ದಾಸಸಾಹಿತ್ಯದಲ್ಲಿ ಜಾನಪದ ಅಂಶಗಳು ಒಂದು: ಅಧ್ಯಯನ, ತಿರುಪತಿ ದೇವಸ್ಥಾನದವರ ಪ್ರಕಟಣೆ.

೫೨. ಹರಿದಾಸ ರಾಮಯ್ಯ ಗುರುಪ್ಪಯ್ಯ ಮತ್ತು ಹರಿದಾಸ ಜಾನಕಿ ರಾಮಯ್ಯ(ಸಂ), ೨೦೧೦, ಶ್ರೀಗುರುಭಾಸ್ಕರ ಮಹಿಪತಿಕೃಷ್ಣ ಭಜನಾಮೃತ ವಾಹಿನಿ, ಪ್ರಕಾಶಕರು: ಶ್ರೀರಾಮಯ್ಯ ಗುರುಪ್ಪಯ್ಯ ಹರಿದಾಸ, ಶ್ರೀಮತಿ ಜಾನಕಿರಾಮಯ್ಯ ಹರಿದಾಸ, ಕಾಖಂಡಕಿ.

೫೩. ಹರಿದಾಸ ಶ್ರೀಪತಯ್ಯ(ಸಂ), ೧೯೮೩, ಸೇವಾ ತತ್ತ್ವ, ಶ್ರೀಗುರು ಮಹಿಪತಿ ರಾಜ ಸೇವಾ ಸಮಿತಿ ಶ್ರೀಕಾಖಂಡಕಿ ಕ್ಷೇತ್ರ (ಬಿಜಾಪೂರ).

೫೪. ಹರಿದಾಸ ರಾಮಯ್ಯ ಗುರುಪಯ್ಯ, ೨೦೦೯, ಶ್ರೀಗುರುಭಾಸ್ಕರ ಮಹಿಪತಿ ಜ್ಞಾನಗಂಗಾ ವಾಹಿನಿ, ಪ್ರಕಾಶಕರು, ರಾಮಯ್ಯ ಗುರುಪಯ್ಯ ಹರಿದಾಸ, ಕಾಖಂಡಿಕಿ.

೫೫. WWW. Geocities. Com/haridasaru, Haridasas of Karnataka, Shri. Kakhandiki Krishnadas: Life and Works, Prof. D.V.Potdar.

ಅನುಬಂಧ - ೪
ಛಾಯಾಚಿತ್ರಗಳು



ಶ್ರೀ ಮಹಿಪತಿರಾಯರ ಮತ್ತು ಶ್ರೀ ಕೃಷ್ಣದಾಸರ
ದೇವಸ್ಥಾನ ಕಾಖಂಡಕಿ, ತಾ.ಜಿ: ವಿಜಯಪುರ



ಮಹಿಪತಿರಾಯರ ವೃಂದಾವನ ಕಾಖಂಡಕಿ.

ಈ ವೃಂದಾವನವು ಪೂರ್ವದಿಕ್ಕಿಗೆ ಮುಖ ಮಾಡಿನಿಂತಿದೆ. ಇದನ್ನು ಕಟ್ಟಿಸಿದವರು ಕೃಷ್ಣದಾಸರು.



ಮಹಿಪತಿರಾಯರ ಪಾದುಕೆಗಳು.



ಕೃಷ್ಣದಾಸರ ವೃಂದಾವನ ಕಾಖಂಡಕಿ.
ಈ ವೃಂದಾವನವು ಪೂರ್ವದಿಕ್ಕಿಗೆ ಇದೆ.



ಕೃಷ್ಣದಾಸರ ಪಾದುಕೆಗಳು.



ಕೃಷ್ಣದಾಸರ ಸಹೋದರ ದೇವರಾಯರ ವೃಂದಾವನ ಜಾಲವಾದಿ.

ತಾ: ಸಿಂದಗಿ, ಜಿ: ವಿಜಯಪುರ.



ದೇವರಾಯರ ಪಾದುಕೆಗಳು.



ಕೃಷ್ಣದಾಸರು ಸ್ಥಾಪಿಸಿದ ಶ್ರೀ ರಾಮೇಶ್ವರಲಿಂಗ ಕಾಖಂಡಕಿ.



ಕೃಷ್ಣದಾಸರು ವಾಸಮಾಡಿದ ಮನೆ ಕಾಖಂಡಕಿ.



ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳನ್ನು ಸಂಪಾದಿಸಿದ ಡಾ. ಕೃಷ್ಣ ಕೋಲ್ಹಾರ ಕುಲಕರ್ಣಿ ಅವರ ಸಂದರ್ಶನ.



ಕೃಷ್ಣದಾಸರ ನಾಲ್ಕನೆಯ ಪುತ್ರ ಯತ್ತೆಪ್ಪಯ್ಯವರ ಮರಿಮಕ್ಕಳಾದ ರಾಮಯ್ಯ ಹರಿದಾಸ, ದೇವಪ್ಪ ಹರಿದಾಸ, ಶ್ರೀಧರ ಹರಿದಾಸರ ಅವರ ಸಂದರ್ಶನ.

ಹಸ್ತಪ್ರತಿಶಾಸ್ತ್ರ ವಿಭಾಗ